ಭಾನುವಾರ, ನವೆಂಬರ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 313 | ಪುಟ 20
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬಂಜಾರರು ಆಚರಿಸುವ 'ದವಾಳಿ' ಹಬ್ಬದ ವಿಶೇಷತೆ ಹಲವು



ದೆಹಲಿಯಲ್ಲಿ ತಗ್ಗಿದ ಮಾಲಿನ್ಯ 8
ಮಧ್ಯಪ್ರದೇಶ ವಿಧಾನಸಭಾ ಚುನಾವಣೆ: ಬಿಜೆಪಿ ಪ್ರಣಾಳಿಕೆ ಬಿಡುಗಡೆ
ನದಿ ಜೋಡಣೆ ಹೆಸರಿನಲ್ಲಿ ಮತಕ್ಕೆ 'ಗಾಳ' 7
₹450ಕ್ಕೆ ಎಲ್‌ಪಿಜಿ ಸಿಲಿಂಡರ್, ಉಚಿತ ಶಿಕ್ಷಣ 7

ಎಗ್ಗಿಲ್ಲದೆ ನಡೆಯುತ್ತಿದೆ ಬಳಕೆ; ಬದಲಾಗಬೇಕಿದೆ ಮನೋಭಾವ: ಬೇಕಿದೆ ಇಚ್ಛಾಶಕ್ತಿ

ಪ್ಲಾಸ್ಟಿಕ್ ನಿರ್ಮೂಲನೆಗಿಲ್ಲ ಆಸಕ್ತಿ

ಅಸಮರ್ಪಕ ತ್ಯಾಜ್ಯ ನಿರ್ವಹಣಾ ಸೂಚ್ಯಂಕದಲ್ಲಿ (ಎಂಡಬ್ಲ್ಯುಐ) ಮೊದಲ ನಾಲ್ಕು ಸ್ಥಾನದಲ್ಲಿರುವ ದೇಶಗಳು			
99.8% ಮೊಜಾಂಬಿಕ್	99.4% ನೈಜೀರಿಯಾ	98.9% ಕೀನ್ಯಾ	98.55% ಭಾರತ

● ಜಿ.ಶಿವಕುಮಾರ

ದಾವಣಗೆರೆ: ಆ ಕೆಫೆಯಲ್ಲಿ ಯಾರು ಬೇಕಾದರೂ ಹೊಟ್ಟೆ ಬಿರಿಯುವಷ್ಟು ಊಟ ಮಾಡಿದರೂ ಅದಕ್ಕಾಗಿ ಹಣ ನೀಡಬೇಕಿಲ್ಲ. ಬದಲಾಗಿ 1 ಕೆ.ಜಿ. ಪ್ಲಾಸ್ಟಿಕ್ ತ್ಯಾಜ್ಯ ಕೊಟ್ಟರೆ ಸಾಕು!

ಈ ಅಪರೂಪದ ಕೆಫೆ ಇರುವುದು ಛತ್ತೀಸಗಢದ ಅಂಬಿಕಾಪುರದಲ್ಲಿ. ದೇಶದ ಮೊದಲ 'ಗಾರ್ಬೇಜ್ ಕೆಫೆ' ಎಂಬ ಹೆಗ್ಗಳಿಕೆ ಇದರದ್ದು.

ಅಂಬಿಕಾಪುರ ನಗರಸಭೆಯು 2019ರಲ್ಲಿ ಆರಂಭಿಸಿದ್ದ ಈ ಕೆಫೆ, ನಿರ್ಗತಿಕರು ಹಾಗೂ ಚಿಂದಿ ಆಯುವವರ ಹಸಿವು ನೀಗಿಸುತ್ತಿದೆ. ಇನ್ನಷ್ಟು ಪ್ಲಾಸ್ಟಿಕ್ ತ್ಯಾಜ್ಯ ಹೆಕ್ಕಿ ತರುವುದಕ್ಕೆ ಅವರಿಗೆ ಪ್ರೇರಣೆಯನ್ನೂ ನೀಡಿದೆ. ಇದರಿಂದಾಗಿ ಪ್ಲಾಸ್ಟಿಕ್ ಮುಕ್ತ ನಗರದ ಕನಸನ್ನೂ ನನಸಾಗಿಸಿದೆ. ದೇಶದ ಸ್ವಚ್ಛ ನಗರಿಗಳ ಪಟ್ಟಿಯಲ್ಲಿ ನಾಲ್ಕು ವರ್ಷಗಳ ಹಿಂದೆ 40ನೇ ಸ್ಥಾನದಲ್ಲಿದ್ದ ಅಂಬಿಕಾಪುರ ಈಗ ನಾಲ್ಕನೇ ಸ್ಥಾನಕ್ಕೇರಿದೆ.

ಅಸ್ಸಾಂನ ರಾಜಧಾನಿ ಗುವಾಹಟಿಯ 'ಅಕ್ಷರ' ಶಾಲೆಯದ್ದೂ ಇಂತಹದ್ದೇ ಒಂದು ಕೌತುಕದ ಕಥೆ ಇದೆ. ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸದುದ್ದೇಶದಿಂದ ಶುರುವಾಗಿರುವ ಈ ಶಾಲೆಯಲ್ಲಿ ಪ್ರವೇಶ ಪಡೆಯಲು ಬರುವ ವಿದ್ಯಾರ್ಥಿಗಳಿಂದ ಶುಲ್ಕದ ರೂಪದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸ್ವೀಕರಿಸಲಾಗುತ್ತದೆ!

ಮೈಸೂರು ಮಹಾನಗರ ಪಾಲಿಕೆ ಕೂಡ ವಿಶಿಷ್ಟ ಪ್ರಯತ್ನಕ್ಕೆ ಕೈಹಾಕಿದೆ. 'ಕಸದಿಂದ ರಸ' ಎಂಬ ತತ್ವದಡಿ ಮರುಬಳಕೆ ಮಾಡಲಾಗದ ಪ್ಲಾಸ್ಟಿಕ್‌ಗೆ ಹೊಸ ರೂಪ ನೀಡುತ್ತಿದ್ದು, ಅವು 'ಪ್ಲಾಸ್ಟಿಕ್ ಟೈಲ್ಸ್' ರೂಪದಲ್ಲಿ ಪಾದಚಾರಿ ಮಾರ್ಗಕ್ಕೆ ಹೊದಿಕೆಯಾಗುತ್ತಿವೆ.

ಬದಲಾವಣೆಗೆ ತುಡಿಯುತ್ತಿರುವ ಇಂತಹ ಹತ್ತು ಹಲವು ಮನಸ್ಸುಗಳು ನಮ್ಮ ನಡುವೆ ಇವೆ. ಹುಡುಕುತ್ತಾ ಹೋದರೆ ನೂರಾರು ಸ್ಫೂರ್ತಿದಾಯಕ ಕಥೆಗಳು ನಮ್ಮೆದುರು ತೆರೆದುಕೊಳ್ಳುತ್ತವೆ. ಇಷ್ಟಾದರೂ ಪ್ಲಾಸ್ಟಿಕ್ ತ್ಯಾಜ್ಯ ಪೆಡಂಭೂತವಾಗಿ ಕಾಡುತ್ತಲೇ ಇದೆ.

ದಿನಸಿ ಅಂಗಡಿಗಳಲ್ಲಿ ಬೇಳೆ ಕಾಳು ಸೇರಿದಂತೆ ಇತರೆ ದವಸ ಧಾನ್ಯಗಳನ್ನು ಕಾಗದದ ಪೊಟ್ಟಣಗಳಲ್ಲಿ ಕಟ್ಟಿಕೊಡುತ್ತಿದ್ದ ಕಾಲವೊಂದಿತ್ತು. ಅದು ಕ್ರಮೇಣ ಮರೆಯಾಗುತ್ತಿದೆ. ಹಳ್ಳಿ, ಪಟ್ಟಣ, ನಗರ, ಮಹಾನಗರ... ಹೀಗೆ ಎಲ್ಲೆಡೆಯೂ ಪ್ಲಾಸ್ಟಿಕ್ ಮಾರಾಟ ಅವ್ಯಾಹತವಾಗಿ ನಡೆಯುತ್ತಿದೆ.

2011ರಲ್ಲಿ ಸರ್ಕಾರವು 40 ಮೈಕ್ರಾನ್‌ಗಿಂತಲೂ ತೆಳುವಾದ ಪ್ಲಾಸ್ಟಿಕ್ ವಸ್ತುಗಳ ಮೇಲೆ ನಿಷೇಧ ಹೇರಿತ್ತು. ಶಾಂಪೂ ಬಾಟಲಿಗಳು, ಪ್ಲಾಸ್ಟಿಕ್ ಬಾವುಟ ಹೀಗೆ ಒಟ್ಟು 19 ಬಗೆಯ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನೂ ನಿಷೇಧಿಸಿತ್ತು. ಇಷ್ಟಾದರೂ ದಿನಸಿ, ಹೂವು, ತರಕಾರಿ, ಮಾಂಸ ಮಾರಾಟದ ಅಂಗಡಿಗಳು ಹಾಗೂ ಬೇಕರಿಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಂತಿಲ್ಲ.

6ನೇ ಪುಟ ನೋಡಿ

ಒಳನೋಟ

> ಏಕ ಬಳಕೆ ಪ್ಲಾಸ್ಟಿಕ್ ಅನ್ನು ತೊಡೆದುಹಾಕಲು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಸಹಯೋಗದಲ್ಲಿ ಜಂಟಿ ಪ್ರಯತ್ನ ಮುಂದುವರಿಸುತ್ತೇವೆ
> **ಈಶ್ವರ ಖಂಡ್ರೆ,** ಪರಿಸರ ಸಚಿವ



ಬೆಂಗಳೂರಿನ ಹಲಸೂರು ಕೆರೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಮಹಿಳೆಯರು ತೆರವುಗೊಳಿಸುತ್ತಿರುವ ದೃಶ್ಯ
ಪ್ರಜಾವಾಣಿ ಸಂಗ್ರಹ ಚಿತ್ರ: ಎಂ.ಎಸ್.ಮಂಜುನಾಥ್

ಅಧಿಕಾರಿಗಳ ಜಾಣ ಕುರುಡು

'ಪ್ಲಾಸ್ಟಿಕ್ ಎಲ್ಲಿ ಉತ್ಪಾದನೆಯಾಗುತ್ತದೆ, ಯಾರು ಮಾಲೀಕರು, ನೋಟಿಸ್ ನೀಡಿದ ಮೇಲೂ ಹಿಂಬಾಗಿಲಿನಿಂದ ಕಾರ್ಯಾಚರಣೆ ಮಾಡುತ್ತಿರುವವರಾರು ಎಂಬ ಎಲ್ಲ ಮಾಹಿತಿಯೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಇರುತ್ತದೆ. ಆದರೆ, ಯಾರೂ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವುದಿಲ್ಲ. ಏಕೆಂದರೆ ಅವರಿಗೆ ಬೇಕಾದ 'ವ್ಯವಸ್ಥೆ' ಆಗಿರುತ್ತದೆ' ಎಂದು ಘನತ್ಯಾಜ್ಯ ನಿರ್ವಹಣೆ ತಜ್ಞ ರಾಮ್‌ಪ್ರಸಾದ್ ದೂರಿದರು.

'ಪ್ಲಾಸ್ಟಿಕ್, ಅದರಲ್ಲೂ ಏಕಬಳಕೆ ಪ್ಲಾಸ್ಟಿಕ್ ಉತ್ಪಾದನೆಯನ್ನೇ ನಿಲ್ಲಿಸಬೇಕೆಂಬ ಕಾನೂನು 2016ರಲ್ಲಿ ಬಂದಿದ್ದರೂ ಏಳು ವರ್ಷಗಳಲ್ಲಿ ಕೆಲವೊಂದು ನೋಟಿಸ್‌ಗಳನ್ನು ಜಾರಿ ಮಾಡಿದ್ದು ಬಿಟ್ಟರೆ ಕಠಿಣ ಕ್ರಮ ಕೈಗೊಂಡಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳಿಗೆ ಆಯಾ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ತಯಾರಿಸುತ್ತಿರುವವರ ಬಗ್ಗೆ ಮಾಹಿತಿ ಇದ್ದೇ ಇರುತ್ತದೆ. ಈ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳೂ ನೋಟಿಸ್ ಕೊಟ್ಟಂತೆ ಮಾಡಿ, ಸ್ಥಳೀಯ ಸಂಸ್ಥೆಗೆ ಅದನ್ನು ನಿರ್ಬಂಧಿಸುವ ಜವಾಬ್ದಾರಿ ವಹಿಸುತ್ತಾರೆ. ಆದರೆ, ಕೊಡುವ ಒಂದು ನೋಟಿಸ್‌ನಿಂದ ಸಂಪೂರ್ಣ ನಿರ್ಬಂಧ ಸಾಧ್ಯವಾಗುವುದಿಲ್ಲ. ಕ್ರಿಮಿನಲ್ ಪ್ರಕರಣ ದಾಖಲಿಸಿ, ಕಟ್ಟಡವನ್ನು ಜಪ್ತಿ ಮಾಡಿದರೆ ಪ್ಲಾಸ್ಟಿಕ್ ಉತ್ಪಾದನೆ ನಿಲ್ಲಿಸಬಹುದು. ಇಂತಹ ಒಂದು ಪ್ರಯತ್ನವೂ ನಡೆದಿಲ್ಲ' ಎಂದು ಆರೋಪಿಸಿದರು.

'ಪ್ಲಾಸ್ಟಿಕ್ ಉತ್ಪಾದನೆ ಮತ್ತು ಮಾರಾಟದ ಮಾಹಿತಿ ಏನಾದರೂ ಮಾಧ್ಯಮಗಳಲ್ಲಿ ಪ್ರಕಟವಾದರೆ ಅದು ಅಧಿಕಾರಿಗಳಿಗೆ ಲಾಭದಾಯಕ. ಅದನ್ನೇ ಮುಂದಿಟ್ಟುಕೊಂಡು ಹೋಗಿ ಮತ್ತಷ್ಟು 'ವಸೂಲಿ' ಮಾಡಿಕೊಂಡು ಸುಮ್ಮನಾಗುತ್ತಾರೆ. ಪ್ಲಾಸ್ಟಿಕ್ ಬಳಕೆ ಹಾಗೂ ತ್ಯಾಜ್ಯದಿಂದ ಅತ್ಯಂತ ಗಂಭೀರ ಆರೋಗ್ಯ ಸಮಸ್ಯೆಗಳಾಗುತ್ತಿವೆ. ಇದೆಲ್ಲದ್ದಕ್ಕೂ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೇ ಜವಾಬ್ದಾರರಾಗುತ್ತಾರೆ. ಇವರ ವಿರುದ್ಧ ಮೊದಲು ಕಾನೂನು ಕ್ರಮವಾದರೆ, ಪ್ಲಾಸ್ಟಿಕ್ ಅನ್ನು ಮೂಲದಲ್ಲೇ ನಿರ್ಮೂಲನೆ ಮಾಡಬಹುದು' ಎಂದರು.

ಸಂಭ್ರಮದ ಜೊತೆ ಮುನಿಸು

ವಾರಾಂತ್ಯದೊಳಗೆ ವಿಜಯೇಂದ್ರ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಬಿ.ವೈ. ವಿಜಯೇಂದ್ರ ಅವರನ್ನು ನೇಮಿಸಿರುವುದು ಬಿ.ಎಸ್. ಯಡಿಯೂರಪ್ಪ ಪಾಳಯದಲ್ಲಿ ಹರ್ಷ ಮೂಡಿಸಿದ್ದರೆ, ಅವರ ವಿರೋಧಿಗಳು ಮತ್ತು 'ಪ್ರಬಲ' ಹುದ್ದೆಗಳ ಮೇಲೆ ಕಣ್ಣಿಟ್ಟದ್ದವರು ಮೆದು ಧ್ವನಿಯಲ್ಲಿ ಅಸಮಾಧಾನ ಹೊರ ಹಾಕಲಾರಂಭಿಸಿದ್ದಾರೆ.

ದೀರ್ಘ ಕಾಲದಿಂದ ಯಡಿಯೂರಪ್ಪ ಅವರ ಜತೆ ಗುರುತಿಸಿಕೊಂಡಿರುವವರು ಹಾಗೂ ಕಾಂಗ್ರೆಸ್, ಜೆಡಿಎಸ್‌ನಿಂದ ವಲಸೆ ಬಂದಿರುವವರು ವಿಜಯೇಂದ್ರ ಅಧ್ಯಕ್ಷರಾಗಿರುವುದನ್ನು ಸಂಭ್ರಮಿಸುತ್ತಿದ್ದಾರೆ. ಪಕ್ಷದ ಕಾರ್ಯಕರ್ತರಲ್ಲೂ ಸಂಭ್ರಮ ಗೋಚರಿಸುತ್ತಿದೆ. ಆದರೆ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಸಿ.ಟಿ. ರವಿ, ವಿ. ಸೋಮಣ್ಣ, ವಿರೋಧ ಪಕ್ಷದ ನಾಯಕನ ಸ್ಥಾನ ಬಯಸಿದ್ದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಸೇರಿದಂತೆ ಕೆಲವರಲ್ಲಿ ಅಸಮಾಧಾನ ಸೃಷ್ಟಿಸಿದೆ.

ಸಿ.ಟಿ. ರವಿ ಅವರು ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದಲೂ ಅವರನ್ನು ಕೈಬಿಡಲಾಗಿತ್ತು. ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡುವುದಕ್ಕಾಗಿಯೇ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೈಬಿಡಲಾಗಿದೆ ಎಂಬ ಚರ್ಚೆ ಪಕ್ಷದ ಒಂದು ವಲಯದೊಳಗೆ ನಡೆದಿತ್ತು. ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಣದಲ್ಲಿ ಗುರುತಿಸಿಕೊಂಡಿರುವ ರವಿ ಅಧ್ಯಕ್ಷ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಬಹುದು ಎಂಬ ನಿರೀಕ್ಷೆ ಹಲವರಲ್ಲಿ ಇತ್ತು.

ಈಗ ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದು ಯಡಿಯೂರಪ್ಪ ಅವರ ವಿರುದ್ಧದ ಗುಂಪಿನಲ್ಲಿ ಗುರುತಿಸಿಕೊಂಡಿರುವ ರವಿ ಅವರಲ್ಲಿ ಅಸಮಾಧಾನ ಮೂಡಿಸಿದೆ. 'ಕುಟುಂಬ ರಾಜಕಾರಣದ ಪ್ರಶ್ನೆ ಕಾಡುತ್ತಿದೆ' ಎನ್ನುವ ಮೂಲಕ ಅವರು ವಿಜಯೇಂದ್ರ ಅವರ ನೇಮಕವನ್ನು ಪರೋಕ್ಷವಾಗಿ ವಿರೋಧಿಸಿದ್ದಾರೆ.

ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಕೂಡ ವಿಜಯೇಂದ್ರ ನೇಮಕಕ್ಕೆ ಪರೋಕ್ಷ ಅಸಮಾಧಾನ ಹೊರಹಾಕಿದ್ದಾರೆ. 'ಸಾಮೂಹಿಕ ನಾಯಕತ್ವದಲ್ಲಿ ಪಕ್ಷ ಮುನ್ನಡೆಯುತ್ತದೆ' ಎನ್ನುವ ಮೂಲಕ ಯಡಿಯೂರಪ್ಪ ಬಣದ ವಿರುದ್ಧದ ನಿಲುವು ತಳೆದಿದ್ದಾರೆ.

ಬಸನಗೌಡ ಪಾಟೀಲ ಯತ್ನಾಳ ಮತ್ತು ಅರವಿಂದ ಬೆಲ್ಲದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಪ್ರಯತ್ನ ನಡೆಸುತ್ತಿದ್ದರು.

4ನೇ ಪುಟ ನೋಡಿ

ಮೌನಕ್ಕೆ ಜಾರಿದ ಸೋಮಣ್ಣ, ಬೆಲ್ಲದ

ತಮ್ಮನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸುವಂತೆ ಮಾಜಿ ಸಚಿವ ವಿ. ಸೋಮಣ್ಣ ಹಲವು ಬಾರಿ ಬಹಿರಂಗವಾಗಿಯೇ ಬಿಜೆಪಿ ವರಿಷ್ಠರನ್ನು ಆಗ್ರಹಿಸಿದ್ದರು. ಈಗ ವಿಜಯೇಂದ್ರ ನೇಮಕದ ಬಳಿಕ ಮೌನಕ್ಕೆ ಜಾರಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯುವುದಕ್ಕಾಗಿ ಸುದ್ದಿ ವಾಹಿನಿಗಳ ವರದಿಗಾರರು ಸೋಮಣ್ಣ ಮನೆ ಬಳಿಗೆ ಶನಿವಾರ ಹೋಗಿದ್ದರು. ಪ್ರತಿಕ್ರಿಯೆಗೆ ನಿರಾಕರಿಸಿದ ಅವರು ಕಾರು ಹತ್ತಿ ಹೊರಟುಹೋದರು.

ಧಾರವಾಡದಲ್ಲಿದ್ದ ಶಾಸಕ ಅರವಿಂದ ಬೆಲ್ಲದ ಕೂಡ ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. 'ಮಾತನಾಡಲು ಈ ಜಾಗ ಸೂಕ್ತವಲ್ಲ' ಎಂದರು.

'ಚುನಾವಣೆಗೆ ಸಾಮೂಹಿಕ ನಾಯಕತ್ವ'

ಶಿವಮೊಗ್ಗ: 'ಬಿ.ವೈ.ವಿಜಯೇಂದ್ರ ಪಕ್ಷದ ಚುಕ್ಕಾಣಿ ಹಿಡಿದಿದ್ದಾರೆ. ಅವರೊಬ್ಬರೇ ಪಕ್ಷ ಮುನ್ನಡೆಸುತ್ತಾರೆ ಎಂದೇನೂ ಇಲ್ಲ. ಬಿಜೆಪಿಯು ಒಬ್ಬ ವ್ಯಕ್ತಿಯ ಮೇಲೆ ನಿಂತಿಲ್ಲ. ಸಾಮೂಹಿಕ ನಾಯಕತ್ವದಡಿ ಲೋಕಸಭಾ ಚುನಾವಣೆ ಎದುರಿಸಿ ಮೋದಿಯನ್ನು ಮತ್ತೆ ಪ್ರಧಾನಿ ಮಾಡುತ್ತೇವೆ' ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

'ಬಿಜೆಪಿಯು ಕುಟುಂಬ ರಾಜಕಾರಣವನ್ನು ವಿರೋಧಿಸುತ್ತಾ ಬಂದಿದೆ. ವಿಜಯೇಂದ್ರ ನೇಮಕವನ್ನು ಕುಟುಂಬ ರಾಜಕಾರಣ ಎಂದು ಹೇಳಲಾಗದು. ನಮ್ಮದು ಶಿಸ್ತಿನ ಪಕ್ಷ. ವಿಜಯೇಂದ್ರ ಆಯ್ಕೆಯನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ' ಎಂದರು.

ಇನ್ನಷ್ಟು ಸುದ್ದಿಗಳು 4

ಒಳ ಪುಟಗಳಲ್ಲಿ
ಸಕ್ಕರೆ ಉತ್ಪಾದನೆ ಶೇ 40 ಕುಸಿತ? 9



'ಗಾಜಾಪಟ್ಟಿ: ನಿಗಾದಲ್ಲಿದ್ದ 39 ಶಿಶುಗಳ ಜೀವಕ್ಕೆ ಅಪಾಯ' 9
ಮಾದಿಗರ ಸಬಲೀಕರಣಕ್ಕೆ ಸಮಿತಿ 7

ಸಿಐಡಿ ತನಿಖೆಗೆ ಕೆಇಎ ಪರೀಕ್ಷಾ ಅಕ್ರಮ

ಕಲಬುರಗಿ: ಕಲಬುರಗಿ ನಗರ, ಅಫಜಲಪುರ, ಯಾದಗಿರಿ ಸೇರಿ ಇತರೆ ಪರೀಕ್ಷಾ ಕೇಂದ್ರಗಳಲ್ಲಿ ಕೆಲವು ಅಭ್ಯರ್ಥಿಗಳು ಅಕ್ರಮವಾಗಿ ಬ್ಲೂಟೂತ್ ಉಪಕರಣ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

4

ಚಿನಕುರಳಿ

ಪ್ರಕಾಶ್ ಶೆಟ್ಟಿ



ದಾಲ್ ಸರೋವರದ 'ಬೋಟ್‌ಹೌಸ್'ನಲ್ಲಿ ಅಗ್ನಿ ದುರಂತ

ಮೂವರ ಸಜೀವ ದಹನ

ಪ್ರಜಾವಾಣಿ ವಾರ್ತೆ

ಶ್ರೀನಗರ (ಜಮ್ಮು ಮತ್ತು ಕಾಶ್ಮೀರ): ಇಲ್ಲಿನ ದಾಲ್ ಸರೋವರದ 'ಬೋಟ್‌ಹೌಸ್'ಗಳಲ್ಲಿ (ಪ್ರವಾಸಿಗರು ತಂಗುವ ದೋಣಿ ಮನೆ) ಹಠಾತ್ ಆಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಬಾಂಗ್ಲಾದೇಶದ ಮೂವರು ಪ್ರವಾಸಿಗರು ಶನಿವಾರ ಮೃತಪಟ್ಟಿದ್ದಾರೆ.

ಸರೋವರದ 9ನೇ ಘಟ್ಟದ ಬಳಿ ಬೆಳಿಗ್ಗೆ ಸುಮಾರು 5:15ಕ್ಕೆ ಒಂದು 'ಬೋಟ್‌ಹೌಸ್'ಗೆ ಬೆಂಕಿ ಹೊತ್ತಿಕೊಂಡಿತು. ಅದು ಹತ್ತಿರದಲ್ಲಿದ್ದ ಎಲ್ಲಾ 'ಬೋಟ್‌ಹೌಸ್'ಗಳಿಗೂ ಆವರಿಸಿತು. ಕೆಲವೇ ಕ್ಷಣಗಳಲ್ಲಿ ಅವು ಉರಿದು ಬೂದಿಯಾದವು.

ಬಾಂಗ್ಲಾದೇಶದ ಮೂವರು ಪ್ರವಾಸಿಗರ ಮೃತದೇಹಗಳು 9ನೇ ಘಟ್ಟದ ಬಳಿ ದೊರೆತಿವೆ. ಅವರೆಲ್ಲರೂ ಸಫೀನಾ 'ಬೋಟ್‌ಹೌಸ್'ನಲ್ಲಿ ಇದ್ದರು, ಅದು ಸಂಪೂರ್ಣವಾಗಿ ನಾಶವಾಗಿದೆ. ಮೃತರ ಡಿಎನ್‌ಎ ಮಾದರಿಗಳನ್ನು ಪರೀಕ್ಷೆಗೆ ಕಳಿಸಲಾಗಿದೆ. ಎಂಟು ಜನರನ್ನು ಭದ್ರತಾ ಸಿಬ್ಬಂದಿ ರಕ್ಷಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

'ಎಂಟು ಬೋಟ್‌ಹೌಸ್‌ಗಳಲ್ಲಿ ಐದು ಬೆಂಕಿಗಾಹುತಿಯಾಗಿವೆ. ಬೆಂಕಿಗೆ ಕಾರಣವೇನು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಅಗ್ನಿಶಾಮಕ ಸೇವೆ ಅಧಿಕಾರಿಗಳು ತಿಳಿಸಿದ್ದಾರೆ.



ಜಮ್ಮು ಮತ್ತು ಕಾಶ್ಮೀರದ ದಾಲ್ ಸರೋವರದಲ್ಲಿ ಶನಿವಾರ ಬೆಂಕಿಗಾಹುತಿಯಾದ ಬೋಟ್‌ಹೌಸ್‌ಗಳ ಅವಶೇಷಗಳು –ಪಿಟಿಐ ಚಿತ್ರ

ಉತ್ತರಾಖಂಡ:

ಯುಸಿಸಿ ಅಂಗೀಕಾರಕ್ಕೆ ಶೀಘ್ರ ಅಧಿವೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಮೊದಲ ಬಾರಿಗೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ಮುಂದಾಗಿರುವ ಬಿಜೆಪಿ ನೇತೃತ್ವದ ಉತ್ತರಾಖಂಡ ರಾಜ್ಯ ಸರ್ಕಾರವು, ಶೀಘ್ರವೇ ಈ ಸಂಬಂಧ ವಿಶೇಷ ಅಧಿವೇಶನ ಕರೆದು ಮಸೂದೆಗೆ ಅಂತಿಮ ಮುದ್ರೆ ಒತ್ತಲು ಸಿದ್ಧತೆ ನಡೆಸಿದೆ.

'ಏಕರೂಪ ನಾಗರಿಕ ಸಂಹಿತೆ ಜಾರಿಯು ಬಿಜೆಪಿಯ ರಾಜಕೀಯ ಕಾರ್ಯಸೂಚಿಯ ಭಾಗವಾಗಿದೆ. ಹಾಗಾಗಿ, ಪಕ್ಷದ ಹೈಕಮಾಂಡ್‌ನ ಅಂತಿಮ ಸೂಚನೆಗೆ ರಾಜ್ಯ ಸರ್ಕಾರವು ಎದುರು ನೋಡುತ್ತಿದೆ' ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ


ಅಧಿಕಾರಿಗಳ ಸೋಗಿನಲ್ಲಿ ಕೃತ್ಯ ● ದುಬೈನಿಂದ ಅಕ್ರಮವಾಗಿ ತಂದವರಿಂದಲೇ ದೂರು

ಕಳ್ಳಸಾಗಣೆಯಲ್ಲಿ ತಂದ ಚಿನ್ನದ ದರೋಡೆ!

ಅಹಮದಾಬಾದ್ (ಪಿಟಿಐ): ದುಬೈನಿಂದ 'ಯಶಸ್ವಿ'ಯಾಗಿ ₹ 50 ಲಕ್ಷ ಮೌಲ್ಯದ ಚಿನ್ನವನ್ನು ಅಕ್ರಮವಾಗಿ ಕಳ್ಳಸಾಗಣೆ ಮಾಡಿದ್ದ ವ್ಯಕ್ತಿಯೊಬ್ಬನ ಸ್ಥಿತಿ ಈಗ 'ಕೈಗೆ ಬಂದ ತುತ್ತು ಬಾಯಿಗಿಲ್ಲ' ಎಂಬಂತಾಗಿದೆ.

ಎಟಿಎಸ್ ಅಧಿಕಾರಿಗಳ ಸೋಗಿನಲ್ಲಿ ಬಂದು ಆತನನ್ನು ಅಪಹರಿಸಿದ ಇಬ್ಬರು, 850 ಗ್ರಾಂ ತೂಕದ ಚಿನ್ನ ದರೋಡೆ ಮಾಡಿದ್ದಾರೆ. ಅಹಮದಾಬಾದ್‌ನ ವಿಮಾನ ನಿಲ್ದಾಣದಲ್ಲಿ ಅಕ್ಟೋಬರ್ 28ರಂದು ಈ ಕೃತ್ಯ ನಡೆದಿದ್ದು, ಪ್ರಕರಣ ದಾಖಲಾಗಿದೆ.

ನಕಲಿ ಅಧಿಕಾರಿಗಳಿಂದ ದರೋಡೆಗೊಳಗಾದ, ದುಬೈನಿಂದ ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದ ಗುಜರಾತ್‌ನ ನಿವಾಸಿ ಡ್ಯಾನಿಶ್ ಶೇಖ್ ಈ ಕುರಿತು ಪೊಲೀಸರಿಗೆ ದೂರು ನೀಡಿದ್ದಾರೆ.



ದೂರಿನ ಪ್ರಕಾರ, ಪರಿಚಯದವರೊಬ್ಬರು ಇವರನ್ನು ಚಿನ್ನದ ಕಳ್ಳಸಾಗಣೆಗಾಗಿ ಅಕ್ಟೋಬರ್ 9ರಂದು ದುಬೈಗೆ ಕಳುಹಿಸಿದ್ದರು. ವಿಮಾನ ಟಿಕೆಟ್ ಒದಗಿಸಿ, ದುಬೈನಲ್ಲಿ ವಸತಿ ವ್ಯವಸ್ಥೆಯನ್ನೂ ಕಲ್ಪಿಸಿದ್ದರು. ಚಿನ್ನ ಕಳ್ಳಸಾಗಣೆಗಾಗಿ ₹ 20 ಸಾವಿರ ನಗದು ನೀಡಿದ್ದರು.

ಯೋಜನೆಯಂತೆ ಶೇಖ್ 850 ಗ್ರಾಂ ತೂಕದ, ₹ 50 ಲಕ್ಷ ಮೌಲ್ಯದ ಚಿನ್ನದ ಎರಡು ಗಟ್ಟಿಗಳೊಂದಿಗೆ ಅಹಮದಾಬಾದ್ ವಿಮಾನನಿಲ್ದಾಣಕ್ಕೆ ಅ. 28ರ ಬೆಳಗಿನ ಜಾವ ಬಂದಿಳಿದಿದ್ದರು. ಕ್ಯಾಪ್ಸೂಲ್ ರೂಪದಲ್ಲಿದ್ದ ಚಿನ್ನದ ಗಟ್ಟಿಗಳನ್ನು ಅವರು ಗುದದ್ವಾರದಲ್ಲಿ ಇಟ್ಟುಕೊಂಡು ಬಂದಿದ್ದರು. ವಿಮಾನ ನಿಲ್ದಾಣದಲ್ಲಿ ತಪಾಸಣೆ ಪ್ರಕ್ರಿಯೆಯನ್ನೂ ದಾಟಿದ್ದರು. ಬಳಿಕ ತಮಗಾಗಿ ಕಾಯುತ್ತಿದ್ದ ಪರಿಚಿತರ ಕಾರು ಏರಲು ವಾಹನ ನಿಲುಗಡೆ ಸ್ಥಳಕ್ಕೆ ತೆರಳಿದ್ದರು.

ಅದೇ ವೇಳೆಗೆ ವಾಹನ ನಿಲುಗಡೆ ಸ್ಥಳಕ್ಕೆ ಬಂದಿದ್ದ ಇಬ್ಬರು, 'ನಾವು ಎಟಿಎಸ್ ಅಧಿಕಾರಿಗಳು. ನಮಗೆ ಎಲ್ಲವೂ ಗೊತ್ತಿದೆ. ಎಟಿಎಸ್ ಕಚೇರಿಗೆ ಬನ್ನಿ' ಎಂದು ಅದೇ ಕಾರಿನಲ್ಲಿ ದೂರುದಾರನ ಪರಿಚಿತರ ಸಮೇತ ಕರೆದೊಯ್ದಿದ್ದಾರೆ.

ಕಾರಿನಲ್ಲಿದ್ದ ಇತರ ಇಬ್ಬರನ್ನು ನಿರ್ಜನ ಪ್ರದೇಶವೊಂದರಲ್ಲಿ ಬಿಟ್ಟ 'ನಕಲಿ ಅಧಿಕಾರಿಗಳು', ದೂರುದಾರನನ್ನಷ್ಟೇ ಪ್ರತ್ಯೇಕ ಕಾರಿನಲ್ಲಿ ಕರೆದೊಯ್ದಿದ್ದಾರೆ. ಬಹುಮಹಡಿ ಕಟ್ಟಡದ 10ನೇ ಮಹಡಿಗೆ ಅತನನ್ನು ಕರೆದೊಯ್ದ ಅವರು, ಹಲ್ಲೆ ಮಾಡಿ ಚಿನ್ನ, ನಗದು ದೋಚಿದ್ದಾರೆ. ಬಳಿಕ ಆಟೊರಿಕ್ಷಾದಲ್ಲಿ ಆತನನ್ನು ಬಸ್ ನಿಲ್ದಾಣಕ್ಕೆ ಬಿಟ್ಟು, ಪರಾರಿಯಾಗಿದ್ದಾರೆ.

'ದೂರುದಾರ ಈ ಬಗ್ಗೆ ಪೊಲೀಸರಿಗೆ ದೂರು ನೀಡಲು ಬೆದರಿದ್ದು, ಪ್ರಕರಣ ದಾಖಲಾಗಲು ವಿಳಂಬವಾಯಿತು. ಈಗ ತನಿಖೆ ಪ್ರಗತಿಯಲ್ಲಿದೆ' ಎಂದು ಸಬ್ ಇನ್‌ಸ್ಪೆಕ್ಟರ್ ಆರ್.ಎಚ್.ಪಾಂಡವ್ ತಿಳಿಸಿದ್ದಾರೆ.

ಅಧಿಕಾರಿಗಳ ಸೋಗಿನಲ್ಲಿದ್ದ ಇಬ್ಬರು ಅಪರಿಚಿತರ ವಿರುದ್ಧ ಐಪಿಸಿ ಕಾಯ್ದೆಯ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶನಿವಾರ ಹಮ್ಮಿಕೊಂಡಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಮೊಳಕಾಲ್ಮುರು ಸಿದ್ದಯ್ಯನಕೋಟೆ ಮಠದ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಾಹಿತಿ ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಮಾಜಿ ಸಚಿವ ಎಚ್‌. ಆಂಜನೇಯ ಇದ್ದರು

‘ಪಠ್ಯದಲ್ಲಿ ಮತ್ತೆ ಓಬವ್ವ ಪಾಠ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಠ್ಯದಲ್ಲಿದ್ದ ಓಬವ್ವಳ ಪಾಠವನ್ನು ಬಿಜೆಪಿ ಸರ್ಕಾರ ಕೈಬಿಟ್ಟಿದ್ದು, ಅದನ್ನು ಮತ್ತೆ ಪಠ್ಯದಲ್ಲಿ ಸೇರಿಸಲು ಕಾಂಗ್ರೆಸ್ ಸರ್ಕಾರ ಕ್ರಮಕೈಗೊಳ್ಳಲಿದೆ’ ಎಂದು ಮಾಜಿ ಸಚಿವ ಎಚ್‌. ಆಂಜನೇಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಹಮ್ಮಿಕೊಂಡಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ತಳ ಸಮುದಾಯದ ಒನಕೆ ಓಬವ್ವ ತನ್ನ ಸಮಯೋಚಿತ ಚಿಂತನೆ, ಧೈರ್ಯದ ಕಾರಣದಿಂದ ಜಗತ್ತಿನ ಅಸಾಮಾನ್ಯ ಮಹಿಳೆಯ ಪಟ್ಟ ಗಳಿಸಿದ್ದಾರೆ. ಓಬವ್ವ ರಾಜನ ಪತ್ನಿಯಲ್ಲ. ಕಹಳೆ ಊದುವ ಮದ್ದ ಹನುಮಂತನ ಪತ್ನಿ. ಕೋಟೆಗೆ ನುಗ್ಗುತ್ತಿದ್ದ ಹೈದರಾಲಿ ಸೈನಿಕರನ್ನು ಒನಕೆಯಿಂದ ಸದೆ ಬಡೆದು ಕೋಟೆ ರಕ್ಷಿಸಿ, ಪ್ರಾಣತ್ಯಾಗ ಮಾಡಿ ಇತಿಹಾಸದಲ್ಲಿ ಅಜರಾಮರ ಆಗಿದ್ದಾಳೆ’ ಎಂದು ಬಣ್ಣಿಸಿದರು.

ಸಾಹಿತಿ ಮೀರಾಸಾಬಿಹಳ್ಳಿ ಶಿವಣ್ಣ ಉಪನ್ಯಾಸ ನೀಡಿ, ‘ಕೋಟೆಯಲ್ಲಿ ಓಬವ್ವಳ ಸ್ಮಾರಕ ಆಗಬೇಕು. ಸೈನಿಕರನ್ನು ಸದೆ ಬಡಿದ ಸ್ಥಳ ಒನಕೆ ಓಬವ್ವ ಕಿಂಡಿ ಜನಾಕರ್ಷಣೆ ಪಡೆಯುವಂತೆ ಮಾಡಬೇಕು’ ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಮಾತನಾಡಿ, ‘ಓಬವ್ವ ನಾಡಿನ ಮಹಿಳೆಯರಿಗೆ ಸ್ಫೂರ್ತಿ ಆಗಿದ್ದಾಳೆ. ಆಕೆಯ ದಿಟ್ಟತನ ಈಗಿನ ಮಹಿಳೆಯರು ಮೈಗೂಡಿಸಿಕೊಂಡರೆ ದೌರ್ಜನ್ಯಕ್ಕೆ ಶಾಶ್ವತವಾಗಿ ಕಡಿವಾಣ ಹಾಕಬಹುದು’ ಎಂದರು.

ಮೊಳಕಾಲ್ಮುರು ಸಿದ್ದಯ್ಯನಕೋಟೆ ಮಠದ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಹೂವು, ಹಣ್ಣು, ಹಣತೆಗಳ ಖರೀದಿ • ಸಂಭ್ರಮಕ್ಕೆ ಅಡ್ಡಿಯಾಗದ ದರ ಹೆಚ್ಚಳ • ಪೂಜಾ ಸಾಮಗ್ರಿಗಳಿಗೂ ಬೇಡಿಕೆ

ಬೆಳಕಿನ ಹಬ್ಬಕ್ಕೆ ಖರೀದಿ ಭರಾಟೆ ಜೋರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಆಚರಣೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ಜನ ನಗರದ ಮಾರುಕಟ್ಟೆಗಳಲ್ಲಿ ಶನಿವಾರ ನೆರೆದಿದ್ದರು. ಬೆಳಕಿನ ಹಬ್ಬಕ್ಕೆ ಮೆರುಗು ಹೆಚ್ಚಿಸುವ ಹೂವು, ಹಣ್ಣು, ಹಣತೆ, ಅಲಂಕಾರಿಕ ವಸ್ತುಗಳ ಖರೀದಿಗೆ ಜನ ಮಳಿಗೆಗಳಲ್ಲಿ ಮುಗಿಬಿದ್ದಿದ್ದರು.

ಮಾರುಕಟ್ಟೆಗಳಲ್ಲಿ ಮಣ್ಣಿನ ಹಣತೆಗಳನ್ನು ರಸ್ತೆ ಬದಿಗಳಲ್ಲೇ ರಾಶಿ ಹಾಕಲಾಗಿದೆ. ತರಹೇವಾರಿ ವಿನ್ಯಾಸದ ಹಣತೆಗಳು ಜನರನ್ನು ಆಕರ್ಷಿಸುತ್ತಿದ್ದವು. ದೀಪವೊಂದರ ಬೆಲೆ ₹5ರಿಂದ ₹300ವರೆಗಿದೆ.

ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ, ಮಲ್ಲೇಶ್ವರ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ಎಲೆ, ತೆಂಗಿನಕಾಯಿ ಖರೀದಿ ಜೋರಾಗಿತ್ತು. ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಕಿರು ಮಾರುಕಟ್ಟೆಗಳು ತಲೆ ಎತ್ತಿವೆ.

ದೀಪಾವಳಿ ಹಬ್ಬಕ್ಕೆ ಎಂದಿನಂತೆ ಹೂವಿನ ದರಗಳು ಏರಿಕೆ ಕಂಡಿದ್ದು, ಪ್ರತಿ ಕೆ.ಜಿ. ಕನಕಾಂಬರ ₹ 1,200, ಮಲ್ಲಿಗೆ ₹ 800, ಚೆಂಡು, ಸೇವಂತಿಗೆ ₹ 120, ಗುಲಾಬಿ ಮತ್ತು ಸುಗಂಧರಾಜ ₹ 200 ರಂತೆ ಮಾರಾಟವಾಗುತ್ತಿವೆ.

‘ದೀಪಾವಳಿಗೆ ಹೆಚ್ಚು ಖರೀದಿಯಾಗುವುದು ಸೇವಂತಿಗೆ ಹಾಗೂ ಚೆಂಡು ಹೂ. ಆದ್ದರಿಂದ ಈ ಹೂಗಳ ಬೆಲೆಗಳು ಅಷ್ಟೇನೂ ಏರಿಕೆಯಾಗಿಲ್ಲ. ಉಳಿದ ಹೂಗಳ ದರ ಎಂದಿನಂತೆ ಸ್ವಲ್ಪ ಹೆಚ್ಚಾಗಿದೆ. ಆದರೆ, ವರಮಹಾಲಕ್ಷ್ಮಿ ಮತ್ತು ದಸರಾ ಹಬ್ಬಗಳಲ್ಲಿ ಇದ್ದ ಹೂವಿನ ಬೇಡಿಕೆ ಈಗಿಲ್ಲ’ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕರಾದ ಗಂಗಾ ಮತ್ತು ರಮೇಶ್ ತಿಳಿಸಿದರು.

ಪೂಜಾ ಸಾಮಗ್ರಿಗಳ ಖರೀದಿ ಭರಾಟೆ: ದೀಪಾವಳಿಯನ್ನು ವಿವಿಧ ಸಮುದಾಯಗಳಲ್ಲಿ ತಮ್ಮದೇ ವಿಶೇಷ ಶೈಲಿಗಳಲ್ಲಿ ಆಚರಿಸಲಾಗುತ್ತದೆ. ಬಹುತೇಕರು ಹಿಂದಿನಿಂದಲೂ ಈ ಹಬ್ಬಕ್ಕೆ ನೋಮುವ ಸಂಪ್ರದಾಯ ಉಳಿಸಿಕೊಂಡಿದ್ದಾರೆ. ಇದಕ್ಕೆಂದೇ ಕೈಗೆ ನೋಮುದಾರ ಕಟ್ಟಿಕೊಂಡು ಆಚರಣೆಯಲ್ಲಿ ತೊಡಗುತ್ತಾರೆ.

ಪೂಜೆಯ ವೇಳೆ ನೋಮುದಾರ, ಅರಿಶಿನ-ಕುಂಕುಮ, ಅಡಿಕೆ, ವೀಳ್ಯದ ಎಲೆಗಳನ್ನು ಬಾಗಿನ ರೂಪದಲ್ಲಿ ಪ್ರಧಾನವಾಗಿ ಇಡುತ್ತಾರೆ. ಹಾಗಾಗಿ, ಪೂಜಾ ಸಾಮಗ್ರಿಗಳ ಮಳಿಗೆಗಳ ಬಳಿಯೂ ಜನರ ದಂಡು ಬೀಡುಬಿಟ್ಟಿತ್ತು.



ಶೇಷಾದ್ರಿಪುರ ಮೈದಾನದಲ್ಲಿ ಶನಿವಾರ ಸಾರ್ವಜನಿಕರು ಪಟಾಕಿ ಖರೀದಿಸಿದರು —ಪ್ರಜಾವಾಣಿ ಚಿತ್ರ



ದೀಪಾವಳಿ ಅಂಗವಾಗಿ ನಗರದ ಗಾಂಧಿ ಬಜಾರ್ ಮುಖ್ಯ ರಸ್ತೆಯಲ್ಲಿ ಶನಿವಾರ ಹೂವುಗಳ ಖರೀದಿಯಲ್ಲಿ ತೊಡಗಿರುವ ಜನ —ಪ್ರಜಾವಾಣಿ ಚಿತ್ರ

ಕೆ.ಆರ್. ಮಾರುಕಟ್ಟೆಯ ದರಗಳು

ಹೂವುಗಳ ದರ ಪ್ರತಿ ಕೆಜಿಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಮಲ್ಲಿಗೆ	400	1,000
ಕನಕಾಂಬರ	600	1,200
ಗುಲಾಬಿ	150	200
ಸೇವಂತಿಗೆ	60	120
ಚೆಂಡು	50	120
ಸುಗಂಧರಾಜ	100	150

ಹಣ್ಣುಗಳ ದರ ಪ್ರತಿ ಕೆ.ಜಿಗೆ

	ಕಳೆದ ವಾರ	ಈ ವಾರ
ದ್ರಾಕ್ಷಿ	240	200
ಸೇಬು	100	120
ದಾಳಿಂಬೆ	80	100
ಸಪೋಟ	60	80
ಏಲಕ್ಕಿ ಬಾಳೆ	70	60
ಸೀತಾಫಲ	140	160
ಪಚ್ಚೆಬಾಳೆ	30	40

ಸೊಪ್ಪಿನ ದರ ಪ್ರತಿ ಕಟ್ಟಿಗೆ

	ಕಳೆದ ವಾರ	ಈ ವಾರ
ಕೊತ್ತಂಬರಿ	30	20
ಪುದೀನಾ	10	10
ಪಾಲಕ್	10	20
ಸಬ್ಬಕ್ಕಿ	15	20
ಮೆಂತೆ	10	20

ತರಕಾರಿ ದರಗಳು ಪ್ರತಿ ಕೆಜಿಗೆ

	ಕಳೆದ ವಾರ	ಈ ವಾರ
ಬಟಾಣಿ	160	240
ಈರುಳ್ಳಿ	40	60
ಕ್ಯಾರೆಟ್	40	40
ಕ್ಯಾಪ್ಸಿಕಮ್	60	40
ಬೀನ್ಸ್	80	60
ಟೊಮೆಟೊ	10	30
ಆಲೂಗಡ್ಡೆ	20	20
ಹೀರೇಕಾಯಿ	60	40
ಸೌತೆಕಾಯಿ	20	30
ಹಾಗಲಕಾಯಿ	40	40
ಬದನೆಕಾಯಿ	40	30
ಮೆಣಸಿನಕಾಯಿ	80	80
ಸೋರೆಕಾಯಿ	60	40
ಬಿಟ್‌ರೂಟ್	40	40
ಬೆಳ್ಳುಳ್ಳಿ	160	180
ಶುಂಠಿ	240	160

ಪಟಾಕಿ ಖರೀದಿಗೆ ಮುಗಿಬಿದ್ದ ಜನ

ಆನೇಕಲ್: ಅತ್ತಿಬೆಲೆ ಪಟಾಕಿ ದುರಂತ ಹಿನ್ನೆಲೆಯಲ್ಲಿ ಈ ಬಾರಿ ಸೀಮಿತ ಮಳಿಗೆಗಳಲ್ಲಿ ಶನಿವಾರ ಪಟಾಕಿ ವ್ಯಾಪಾರ ಆರಂಭವಾಯಿತು.

ಕಡಿಮೆ ಸಂಖ್ಯೆಯಲ್ಲಿ ಮಳಿಗೆಗಳನ್ನು ತೆರೆದ ಕಾರಣ ಜನಸಂದಣಿ ಕಂಡು ಬಂದಿತು. ಇದರಿಂದ ಗಡಿ ಭಾಗದ ರಸ್ತೆಗಳಲ್ಲಿ ಕಿಲೋಮೀಟರ್ ಗಟ್ಟಲೇ ವಾಹನ ದಟ್ಟಣೆ ಉಂಟಾಗಿತ್ತು.

ಪಟಾಕಿ ಮಳಿಗೆಗಳನ್ನು ತೆರೆಯುತ್ತಿದ್ದಂತೆ ಸಾವಿರಾರು ಜನರು ಖರೀದಿಗೆ ಮುಗಿಬಿದ್ದರು.

ಕಳೆದ ವರ್ಷಕ್ಕಿಂತ ಈ ಬಾರಿ ಬೆಲೆ ದುಬಾರಿಯಾಗಿದ್ದರೂ ಖರೀದಿ ಭರಾಟೆ ಜೋರಾಗಿಯೇ ನಡೆಯಿತು.

ಅತ್ತಿಬೆಲೆ, ಚಂದಾಪುರ, ನೆರಳೂರು ಮತ್ತು ಹೆಬ್ಬಗೋಡಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ತೆರೆದಿರುವ ಮಳಿಗೆಗಳ ಮುಂದೆ ಜನಸಾಗರ ಕಂಡು ಬಂದಿತು.

ಹಬ್ಬ: ಹೆಚ್ಚಿದ ಜನ, ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಹಾಗೂ ನಾನಾ ಕಾರಣಗಳಿಂದ ನಗರದಲ್ಲಿ ನೆಲೆಸಿರುವವರು ದೀಪಾವಳಿ ಹಬ್ಬದ ಪ್ರಯುಕ್ತ ತಮ್ಮ ತಮ್ಮ ಊರುಗಳಿಗೆ ಹೊರಟಿರುವುದರಿಂದ ನಗರದ ಬಸ್‌ನಿಲ್ದಾಣಗಳಲ್ಲಿ ಭಾರಿ ಜನದಟ್ಟಣೆ ಉಂಟಾಯಿತು. ಹೊರಜಿಲ್ಲೆ, ಹೊರರಾಜ್ಯಗಳನ್ನು ಸಂಪರ್ಕಿಸುವ ನಗರದ ರಸ್ತೆಗಳಲ್ಲಿ ವಾಹನದಟ್ಟಣೆ ಹೆಚ್ಚಾಗಿ ಸಂಚಾರಕ್ಕೆ ತೊಡಕುಂಟಾಯಿತು.

ಶುಕ್ರವಾರವೇ ಜನಸಂದಣಿ ಕಂಡು ಬಂದಿತ್ತು. ಶನಿವಾರ ದಟ್ಟಣೆ ಇನ್ನಷ್ಟು ಹೆಚ್ಚಾಯಿತು. ಜನರು ಲಗೇಜುಗಳೊಂದಿಗೆ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಸ್ಯಾಟ್‌ಲೈಟ್ ಬಸ್ ನಿಲ್ದಾಣಗಳ ಕಡೆಗೆ ಗುಂಪು ಗುಂಪಾಗಿ ಬರತೊಡಗಿದ್ದರು.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರ್ಗಿ ಸಹಿತ ವಿವಿಧ ನಗರಗಳಿಗೆ ಹೋಗುವವರು ನಿಲ್ದಾಣಗಳಲ್ಲಿ ಜಮಾಯಿಸಿದ್ದರಿಂದ ಬಸ್, ರೈಲು ನಿಲ್ದಾಣಗಳು ಕಿಕ್ಕಿರಿದವು. ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಜನ, ನಿಲ್ದಾಣಕ್ಕೆ ಬಂದು ಬಸ್‌ಗಾಗಿ ಹುಡುಕಾಟ ನಡೆಸಿದರು.

ಚಾಲುಕ್ಯ ವೃತ್ತ, ಆನಂದರಾವ್ ವೃತ್ತ, ಮೈಸೂರು ರಸ್ತೆ, ಯಶವಂತಪುರ, ಆರ್‌ಎಂಸಿ ಯಾರ್ಡ್, ತುಮಕೂರು ರಸ್ತೆ, ಹೊಸೂರು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಅಧಿಕವಾಗಿತ್ತು. ಮೆಜೆಸ್ಟಿಕ್ ನಿಲ್ದಾಣದಿಂದ ಹೊರಟಿದ್ದ ಬಸ್‌ಗಳು, ದಟ್ಟಣೆಯಿಂದಾಗಿ ನಿಧಾನವಾಗಿ ಸಂಚರಿಸಿದವು.

ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ ಕೆಎಸ್‌ಆರ್‌ಟಿಸಿ, ಹೆಚ್ಚುವರಿಯಾಗಿ 2,000 ಬಸ್‌ಗಳ ವ್ಯವಸ್ಥೆ ಮಾಡಿತ್ತು. ಖಾಸಗಿ ಕಂಪನಿಗಳು ಸಹ ಹೆಚ್ಚುವರಿ ಬಸ್‌ಗಳನ್ನು ರಸ್ತೆಗೆ ಇಳಿಸಿದ್ದವು.



ದೀಪಾವಳಿ ಪ್ರಯುಕ್ತ ತಮ್ಮ ಊರುಗಳಿಗೆ ತೆರಳಲು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಶನಿವಾರ ಕಾದು ಕುಳಿತಿದ್ದ ದೃಶ್ಯ —ಪ್ರಜಾವಾಣಿ ಚಿತ್ರ



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಲೆಕ್ಕಾಧಿಕಾರಿಗಳ ಸಂಘವು ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಶನಿವಾರ ಆಯೋಜಿಸಿದ್ದ ಉಪನ್ಯಾಸ–ಸಂಗೀತ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಗಾಯಕ ಮುದ್ದು ಮೋಹನ್ ಅವರನ್ನು ಸನ್ಮಾನಿಸಲಾಯಿತು. ಹೃದ್ರೋಗ ತಜ್ಞೆ, ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ, ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ, ಸಪ್ತಕದ ಜಿ.ಎಸ್‌. ಹೆಗಡೆ, ಸಂಘದ ಸದಸ್ಯರು ಇದ್ದರು

‘ಮೈತ್ರೀ ಪ್ರಶಸ್ತಿ’ಗೆ ರಾಮಚಂದ್ರ ಭಟ್ಟ ಉಮಾಕಾಂತ್ ಭಟ್ಟ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈತ್ರೀ ಸಂಸ್ಕೃತ–ಸಂಸ್ಕೃತಿ ಪ್ರತಿಷ್ಠಾನ ನೀಡುವ 2023ನೇ ಸಾಲಿನ ‘ಮೈತ್ರೀ ಪುರಸ್ಕಾರ’ಕ್ಕೆ ವಿದ್ವಾಂಸರಾದ ರಾಮಚಂದ್ರ ಜಿ. ಭಟ್ಟ ಕೋಟೆಮನೆ ಹಾಗೂ ಉಮಾಕಾಂತ್ ಭಟ್ಟ ಕೆರೆಕೈ ಆಯ್ಕೆಯಾಗಿದ್ದಾರೆ.

ಸಂಸ್ಕೃತ, ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ವಿದ್ವಾಂಸರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 19ರಂದು ಬೆಳಿಗ್ಗೆ 10 ಗಂಟೆಗೆ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಉಮಾಕಾಂತ್ ಭಟ್ಟ ಕೆರೆಕೈ



ರಾಮಚಂದ್ರ ಜಿ. ಭಟ್ಟ

ಜೈಶಂಕರ್ ಪ್ರವಾಸ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗಾಗಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಶನಿವಾರ ತಮ್ಮ ಐದು ದಿನದ ಬ್ರಿಟನ್ ಪ್ರವಾಸ ಆರಂಭಿಸಿದರು.


ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮುಂದಿನ ಕೆಲವು ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದ್ದು, ಲಂಡನ್‌ನಲ್ಲಿ ನಡೆಯುವ ಮಾತುಕತೆಯಲ್ಲಿ ಪ್ರಧಾನಿ ಪ್ರವಾಸದ ಸಿದ್ಧತೆಗಳ ಬಗ್ಗೆಯೂ ಚರ್ಚೆಯಾಗಲಿದೆ.

ದತ್ತಿ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ವೃತ್ತಿಪರ ಶಿಕ್ಷಣ, ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಶ್ರವಣದೋಷವುಳ್ಳ ವಿದ್ಯಾರ್ಥಿಗಳು, ಶ್ರವಣ ನ್ಯೂನತೆ ವಿಭಾಗದಲ್ಲಿ ಶ್ರಮಿಸುತ್ತಿರುವ ವಾಕ್ ಶ್ರವಣ ತಜ್ಞರು, ವಿಶೇಷ ಶಿಕ್ಷಕರಿಂದ ಡಾ. ಶಾಂತ ರಾಧಾಕೃಷ್ಣ ದತ್ತಿ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಬಹುದು.

ಇ-ಮೇಲ್ ಮೂಲಕ ಡಿ. 20ರೊಳಗೆ ಅರ್ಜಿ ಸಲ್ಲಿಸಬಹುದಾಗಿದ್ದು, ₹10,000 ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ. ಇ-ಮೇಲ್: vagdevitrust@gmail.com

ಮಾಜಿ ಶಾಸಕ ವೆಂಕಟೇಶಪ್ಪ ನಿಧನ



ಬಂಗಾರಪೇಟೆ: ಮಾಜಿ ಶಾಸಕ ಸಿ. ವೆಂಕಟೇಶಪ್ಪ (75) ಹೃದಯಾಘಾತದಿಂದ ಶನಿವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಇದ್ದಾರೆ. ಸ್ವಗ್ರಾಮ ಬುವನಹಳ್ಳಿಯಲ್ಲಿ ಅಂತ್ಯ ಸಂಸ್ಕಾರ ನಡೆಯಿತು.

ಜಮೀನು ವಿವಾದ ಸಂಬಂಧ ಗರುಡ ಕೆಂಪನಹಳ್ಳಿ ರೈತರೊಬ್ಬರು ಇವರು ಮೇಲೆ ನಾಡಬಂದೂಕಿನಿಂದ ಗುಂಡು ಹಾರಿಸಿದ್ದರು. ಕೆಲ ತಿಂಗಳ ಕಾಲ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಕಾಂಗ್ರೆಸ್‌ನಿಂದ ಎರಡು ಬಾರಿ ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಒಂದು ಬಾರಿ ಶಾಸಕರಾಗಿದ್ದರು.

ಕಾಂಗ್ರೆಸ್‌ನಲ್ಲಿ ಸೂಕ್ತ ಸ್ಥಾನಮಾನ ಸಿಗಲಿಲ್ಲ ಎಂದು ಬಿಜೆಪಿ ಸೇರಿದ್ದರು. ಬಳಿಕ ಅಲ್ಲಿಯೂ ಸೂಕ್ತ ಸ್ಥಾನ ಸಿಗದ ಕಾರಣ ರಾಜಕೀಯದಿಂದ ದೂರ ಉಳಿದಿದ್ದರು.

ಹಬ್ಬಕ್ಕೂ ಮುನ್ನ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ದೀಪಾವಳಿ ಹಬ್ಬಕ್ಕೂ ಮುನ್ನವೇ ಪಟಾಕಿ ಅವಘಡಗಳು ಸಂಭವಿಸುತ್ತಿದ್ದು, ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಒಂದು ಪ್ರಕರಣ ವರದಿಯಾಗಿದೆ. ಬಂಗಾರಪೇಟೆಯ 7 ವರ್ಷದ ಬಾಲಕ ಪಟಾಕಿಯಿಂದಾದ ಗಾಯದ ಕಾರಣ ಮಿಂಟೊ ಆಸ್ಪತ್ರೆಗೆ ದಾಖಲಾಗಿದ್ದಾನೆ. ಬಿಜಲಿ ಪಟಾಕಿ ಸಿಡಿತ ವೀಕ್ಷಿಸುತ್ತಿದ್ದಾಗ ಕಣ್ಣಿಗೆ ಕಿಡಿ ಸಿಡಿದು, ಎರಡೂ ಕಣ್ಣಿಗೆ ಗಂಭೀರ ಸ್ವರೂಪದ ಗಾಯವಾಗಿದೆ.

‘ಬಾಲಕನ ಕಣ್ಣಿನ ಒಳಗೆ ರಕ್ತ ಹೆಪ್ಪುಗಟ್ಟಿದೆ. ಇದರಿಂದ ಕ್ಯಾಟರ್‍ಯಾಕ್ಟ್ ಸಮಸ್ಯೆಯೂ ಕಂಡುಬಂದಿದ್ದು, ಶಸ್ತ್ರಚಿಕಿತ್ಸೆ ಮಾಡಬೇಕಿದೆ. ಪಟಾಕಿಗಳನ್ನು ಸಿಡಿಸುವವರು ಮಾತ್ರವಲ್ಲದೆ, ನೋಡುವವರಿಗೂ ಅಪಾಯವಿರುತ್ತದೆ. ಆದ್ದರಿಂದ ಪಟಾಕಿಯಿಂದ ಅಂತರ ಕಾಯ್ದುಕೊಳ್ಳಬೇಕು’ ಎಂದು ಮಿಂಟೊ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ, ಮಕ್ಕಳ ದಿನಾಚರಣೆ: ಅತಿಥಿಗಳು: ಆರತಿ ಕೃಷ್ಣ, ಡಾ. ಮನೋಜ್, ಜಗದೀಶ್, ಪವಿತ್ರ ಪ್ರಸನ್ನ, ಗೋಪಿನಾಥ್, ಎಸ್. ಉಮೇಶ್, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಸ್ಥಳ: ಬ್ಯಾಂಡ್‌ಸ್ಟ್ಯಾಂಡ್ ಹತ್ತಿರ, ಕಬ್ಬನ್ ಉದ್ಯಾನ, ಬೆಳಿಗ್ಗೆ 8

ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ರು. ಬಸಪ್ಪ, ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಉಪಸ್ಥಿತಿ: ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ನಂಜುಂಡಸ್ವಾಮಿ ಬಿ.ಎ., ನಾ. ಶ್ರೀಧರ್, ಯು.ಚಿ. ದೊಡ್ಡಯ್ಯ, ಮಹೇಶ್ ಸಿ.ಎನ್., ಪರಿಮಳ ಎಸ್., ಪ್ರಿಯಾಂಕ ಬಿ.ಎಚ್., ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಕನ್ನಡ ಪುಸ್ತಕ ಹಬ್ಬ: ಎಸ್.ಆರ್. ರಾಮಸ್ವಾಮಿ ಅವರ ‘ಸಾಹಿತ್ಯ ಸಾನ್ನಿಹಿತ್ಯ’ ಪುಸ್ತಕ ಬಿಡುಗಡೆ: ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಪುಸ್ತಕದ ಕುರಿತು: ದಿವಾಕರ ಹೆಗಡೆ ಬೆಳಿಗ್ಗೆ 11ಕ್ಕೆ, ‘ಕನ್ನಡ ಕವಿಗಳು ಕಂಡ ಭಾರತ’ ಕುರಿತು ಉಪನ್ಯಾಸ: ಬಿ.ವಿ. ವಸಂತಕುಮಾರ್, ಅತಿಥಿ: ಕೆ.ಎನ್. ಚನ್ನೇಗೌಡ ಸಂಜೆ 5ಕ್ಕೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ

ಕನ್ನಡ ಹವ್ಯಾಸಿ ನಾಟಕೋತ್ಸವ ಸಮಾರೋಪ ಸಮಾರಂಭ–2023: ಅತಿಥಿಗಳು: ವೀಣಾ ಮಹೇಂದ್ರ, ಡಿ. ಮಹೇಂದ್ರ, ವಿದ್ಯಾರಣ್ಯ ಬಿ.ಎಸ್., ಅಧ್ಯಕ್ಷತೆ: ಶ್ರೀರಾಮೇಗೌಡ, ‘ಇದ್ದಾಗ ನಿಮ್ದು ಕದ್ದಾಗ ನಮ್ದು’ ನಾಟಕ ಪ್ರದರ್ಶನ: ಪ್ರಸ್ತುತಿ: ರಂಗರಥ, ನಿರ್ದೇಶನ: ಆಸಿಫ್ ಕ್ಷತ್ರಿಯ, ಶ್ವೇತ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಸಂಜೆ 6.30

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಭಾರತ ಹಾಗೂ ನೆದರ್ಲೆಂಡ್ಸ್ ನಡುವಿನ ಪಂದ್ಯ ಭಾನುವಾರ ನಡೆಯಲಿದ್ದು, ಕ್ರೀಡಾಂಗಣದ ಸುತ್ತಮುತ್ತ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

ಕ್ರೀಡಾಂಗಣದ ಸುತ್ತಮುತ್ತ ವಾಹನ ದಟ್ಟಣೆಯಾಗುವ ಸಾಧ್ಯತೆಯಿದ್ದು, ಸುಗಮ ಸಂಚಾರದ ದೃಷ್ಟಿಯಿಂದ ಹಲವು ಕಡೆ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ.

ಭಾನುವಾರ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಎಂ.ಜಿ.ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ವಿಠ್ಠಲ್ ಮಲ್ಯ ರಸ್ತೆ ಹಾಗೂ ನೃಪತುಂಗ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಅವಕಾಶವಿಲ್ಲ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕಿಂಗ್ಸ್ ರಸ್ತೆ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಶಿವಾಜಿನಗರ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ಸಾರ್ವಜನಿಕರು ವಾಹನ ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ.

'ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡುವಂತೆ 'ಎಕ್ಸ್'ನಲ್ಲಿ ಶನಿವಾರ ಅಭಿಯಾನ ನಡೆಸಿದ ಕನ್ನಡಿಗರು, ಹಳದಿ- ಕೆಂಪು ಬಣ್ಣಗಳ ಬಾವುಟದ ಚಿತ್ರಗಳನ್ನು ಹಂಚಿಕೊಳ್ಳುವ ಮೂಲಕ ಕಾನೂನಿನ ಮನ್ನಣೆಗೆ ಆಗ್ರಹಿಸಿದರು.

ಕನ್ನಡ ಬಾವುಟದ ಮಾನ್ಯತೆಗೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ನೀಡಿದ್ದ ಕರೆಗೆ ಕನ್ನಡಿಗರಿಂದ 'ಎಕ್ಸ್'ನಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಯಿತು. '#ಕನ್ನಡಬಾವುಟ_ನಮ್ಮಗುರುತು', '#KannadaFlag_MyPride' ಎಂಬ ಹ್ಯಾಶ್ ಟ್ಯಾಗ್ ಅಡಿಯಲ್ಲಿ ಸಂಜೆ 5 ಗಂಟೆಯಿಂದ ಈ ಅಭಿಯಾನ ನಡೆಯಿತು.

ರಾಜ್‌ಕುಮಾರ್ ಸೇರಿ ಕನ್ನಡ ನಾಡಿನ ಸಾಧಕರ ಚಿತ್ರ ಸಹಿತ ಹಲವರು ಪೋಸ್ಟ್ ಮಾಡಿ ಒತ್ತಾಯಿಸಿದರೆ, ಕೆಲವರು ಕನ್ನಡ ಬಾವುಟದ ಜತೆಗೆ ಇರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಇನ್ನೂ ಕೆಲವರು ಕನ್ನಡ ಪರ ಘೋಷಣೆಗಳನ್ನು ಪೋಸ್ಟ್ ಮಾಡಿದ್ದಾರೆ. ಸಂಜೆ 7 ಗಂಟೆಯ ವೇಳೆಗೆ 13 ಸಾವಿರಕ್ಕೂ ಅಧಿಕ ಮಂದಿ '#ಕನ್ನಡಬಾವುಟ_ನಮ್ಮಗುರುತು' ಅಡಿ ಪೋಸ್ಟ್ ಮಾಡಿದ್ದರು. ಆ ವೇಳೆ ಈ ಅಭಿಯಾನ 'ಎಕ್ಸ್' ಟ್ರೆಂಡಿಂಗ್‌ನಲ್ಲಿ 5ನೇ ಸ್ಥಾನದಲ್ಲಿತ್ತು.

ಸಿನಿಮಾ ನಿರ್ದೇಶಕ ಸುನಿಲ್ ಕುಮಾರ್ (ಸುನಿ), 'ಮಸಿ ಬಳಿದಾಗ...ಸುಟ್ಟಾಗ...ಹರಿದಾಗ ಸುಮ್ಮನಿರಲು ಅದು ಬರಿಯ ಬಟ್ಟೆಯಲ್ಲ. ಕನ್ನಡಿಗರ ಪ್ರತೀಕ ಹಾಗೂ ಕನ್ನಡಿಗರಿಗೆ ಆಮ್ಲಜನಕ. ಕನ್ನಡಿಗರ ಐಕ್ಯ ಮೊಳಗಲಿ, ನಮ್ಮ ಧ್ವಜಕ್ಕೆ ಮಾನ್ಯತೆ ಸಿಗಲಿ' ಎಂದು ಪೋಸ್ಟ್ ಮಾಡಿದ್ದಾರೆ.

'ಕರ್ನಾಟಕದ ಬಾವುಟಕ್ಕೆ ಮಾನ್ಯತೆ ಸಿಕ್ಕರೆ ಕನ್ನಡಿಗರ ಆತ್ಮಾಭಿಮಾನ ಮತ್ತಷ್ಟು ಹೆಚ್ಚಾಗಲಿದೆ. ಈಗ ಇರುವ ಹಳದಿ ಮತ್ತು ಕೆಂಪು ಬಣ್ಣದ ಬಾವುಟ ಕನ್ನಡಿಗರ ಅಸ್ಮಿತೆಯಾಗಿ, ಮನೆ ಮನಗಳಲ್ಲಿ ಹಾರುತ್ತಲೇ ಇದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಇನ್ನೊಮ್ಮೆ ಪತ್ರ ಬರೆಯಲಿ' ಎಂದು ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ಆಗ್ರಹಿಸಿದ್ದಾರೆ.

'ಪ್ರಪಂಚದ ವಿವಿಧ ದೇಶಗಳಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಅನುಸರಿಸುವ ರಾಜ್ಯಗಳು ಪ್ರತ್ಯೇಕ ಬಾವುಟ ಹೊಂದಿವೆ. ಭಾರತದ ಒಕ್ಕೂಟದಲ್ಲೂ ರಾಜ್ಯಗಳು ಅಧಿಕೃತ ಬಾವುಟ ಹೊಂದಲು ಅವಕಾಶ ಸಿಗಬೇಕು' ಎಂದು ಕನ್ನಡ ಪರ ಕಾರ್ಯಕರ್ತ ಅರುಣ್ ಜಾವಗಲ್ ಒತ್ತಾಯಿಸಿದ್ದಾರೆ.

ಉಪಮುಖ್ಯಮಂತ್ರಿ ಶಿವಕುಮಾರ್‌ಗೆ ಬಿ.ಎಸ್. ಯಡಿಯೂರಪ್ಪ ಆಹ್ವಾನ

ಸಮಸ್ಯೆ ಆಲಿಸಲು ನನ್ನ ಜೊತೆ ಬನ್ನಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ವಿರೋಧ ಪಕ್ಷದವರು ಎನ್ನುವ ಕಾರಣಕ್ಕೆ ಅನುದಾನಗಳನ್ನು ನಿಲ್ಲಿಸಿದ್ದೀರಿ. ಜನರ ಅಹವಾಲು ಆಲಿಸಲು ನೀವೂ ಬನ್ನಿ, ನಾನೂ ಬರುತ್ತೇನೆ. ಆಗ ಸಮಸ್ಯೆ ಅರ್ಥವಾಗುತ್ತದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಶನಿವಾರ ಆಹ್ವಾನ ನೀಡಿದರು.

ಪೀಣ್ಯ ಕೈಗಾರಿಕಾ ಪ್ರದೇಶ, ನೆಲಗೆದರನಹಳ್ಳಿ ಮುಖ್ಯರಸ್ತೆ, ಬಸ್ ನಿಲ್ದಾಣ, ಸಪ್ತಗಿರಿ ಕಾಲೇಜು ಹಿಂಭಾಗ ರಸ್ತೆ, ಚಿಕ್ಕಬಾಣಾವರ ಕೆರೆಯನ್ನು ಶಾಸಕ ಎಸ್. ಮುನಿರಾಜು ಜೊತೆ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಶಿವಕುಮಾರ್ ಅವರೇ ನೀವೇ ಉಸ್ತುವಾರಿ ಸಚಿವರಾಗಿದ್ದೀರಿ. ಇಲ್ಲೇ ಓಡಾಡುತ್ತಿದ್ದೀರಿ. ಆದರೂ ಅನುದಾನ ಒದಗಿಸಲು ಯಾಕೆ ಸಾಧ್ಯವಾಗುತ್ತಿಲ್ಲ? ಸರ್ಕಾರ ಏನಾದರೂ ದಿವಾಳಿಯಾಗಿದೆಯೇ? ವಾಸ್ತವ ಪರಿಸ್ಥಿತಿಯನ್ನು ಜನರಿಗೆ ತಿಳಿಸಿ' ಎಂದು ಹೇಳಿದರು.

'ಬ್ರ್ಯಾಂಡ್ ಬೆಂಗಳೂರು ಎಂದು ಸುಮ್ಮನೆ ಬೊಗಳೆ ಬಿಡಬಾರದು. ಬನ್ನಿ ಜನರ ಮಧ್ಯೆ ಕುಳಿತು ಮಾತಾಡೋಣ. ಯಾವುದೂ ಬ್ರ್ಯಾಂಡ್ ಇಲ್ಲ. ಬರವೇ ಎಲ್ಲ ಕಡೆ ಇದೆ. ಬರ ಅಧ್ಯಯನದ ವರದಿ ತಯಾರಿ ಮಾಡಿ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೀಡುತ್ತೇವೆ' ಎಂದು ತಿಳಿಸಿದರು.

ದೊಡ್ಡಣ್ಣ ಕೈಗಾರಿಕಾ ಪ್ರದೇಶಕ್ಕೆ ಡಿ.ವಿ. ಸದಾನಂದ ಗೌಡ ಅವರು ಭೇಟಿ ನೀಡಿದರು.



ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಪೀಣ್ಯ ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧ ಸ್ಥಳಗಳಿಗೆ ಶಾಸಕ ಎಸ್. ಮುನಿರಾಜು ಜೊತೆ ಭೇಟಿ ನೀಡಿ ಪರಿಶೀಲಿಸಿದರು. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ ಇದ್ದರು.

ವಿಜಯೇಂದ್ರಗೆ ರಾಜ್ಯ ಬಿಜೆಪಿ ಸಾರಥ್ಯ: ಸಿ.ಟಿ.ರವಿ ಪ್ರಶ್ನೆ • ಯಾರಲ್ಲೂ ಮುನಿಸಿನ ಪ್ರಶ್ನೆಯೇ ಇಲ್ಲ –ಯಡಿಯೂರಪ್ಪ

‘ಕುಟುಂಬ ರಾಜಕಾರಣ ಪ್ರಶ್ನೆ ಕಾಡುತ್ತಿದೆ’

ಪ್ರಜಾವಾಣಿ ವಾರ್ತೆ


ಸಿ.ಟಿ.ರವಿ

ಬೆಂಗಳೂರು: ‘ಕುಟುಂಬ ರಾಜಕಾರಣದ ಪ್ರಶ್ನೆ ನನ್ನನ್ನು ಕಾಡುತ್ತಿದೆ. ನನಗೂ ಇರುವುದು ಪ್ರಶ್ನೆ ಮಾತ್ರ. ಎಲ್ಲ ಪ್ರಶ್ನೆಗಳಿಗೂ ಈಗ ಉತ್ತರ ಕೊಡುವುದು ಸೂಕ್ತ ಅಲ್ಲ’ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಶನಿವಾರ ಹೇಳಿದರು.

‘ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ವಿಜಯೇಂದ್ರ ನೇಮಕದಿಂದಾಗಿ ಕುಟುಂಬ ರಾಜಕಾರಣ ಕುರಿತು ಮಾತನಾಡುವ ನೈತಿಕತೆಯನ್ನು ಬಿಜೆಪಿ ಕಳೆದುಕೊಂಡಿದೆ’ ಎಂಬ ಪತ್ರಕರ್ತರ ಪ್ರಶ್ನೆಗೆ ಅವರು ಉತ್ತರಿಸಿದರು.

‘ನನ್ನಂತಹ ಕಾರ್ಯಕರ್ತರ ಮನದಲ್ಲಿರುವ ಪ್ರಶ್ನೆಗಳನ್ನು ಸಾರ್ವಜನಿಕವಾಗಿ ಚರ್ಚಿಸುವುದು ಸೂಕ್ತವಲ್ಲ. ಈಗ ನಾನು ಕೆಲ ಸಂಗತಿಗಳ ಬಗ್ಗೆ ಮಾತನಾಡಿದರೆ ತಪ್ಪು ಅರ್ಥ ಕಲ್ಪಿಸುವ ಸಾಧ್ಯತೆ ಹೆಚ್ಚಿದೆ. ಏನಾದರೂ ಮಾತನಾಡಿದರೆ ಹಿಂದಿನ ಮಾತಿನ ವಿಡಿಯೊ ತೋರಿಸುತ್ತೀರಿ. ಎಲ್ಲದಕ್ಕೂ ಜೋಡಿಸಲು ಪ್ರಯತ್ನಿಸುತ್ತೀರಿ’ ಎಂದರು.

ಎಲ್ಲರೂ ಚೆನ್ನಾಗಿ ಆಡಿದರೆ ಮಾತ್ರ ತಂಡ ಗೆಲ್ಲಬಹುದು. ಸಾಮಾನ್ಯ ಕಾರ್ಯಕರ್ತರಿಂದ ರಾಷ್ಟ್ರೀಯ ಅಧ್ಯಕ್ಷರವರೆಗೆ ಸಮನ್ವಯದಿಂದ ಕೆಲಸ ಮಾಡಬೇಕು. ಇಲ್ಲಿ ಗೆಲ್ಲುವುದು ತಂಡ. ಮಾರ್ಗದರ್ಶನ, ಸಮನ್ವಯದಿಂದ ಕೊಂಡೊಯ್ಯುವುದು ನಾಯಕರ ಜವಾಬ್ದಾರಿ. ತಂಡವನ್ನು ಯಶಸ್ವಿಯಾಗಿ ಮುನ್ನಡೆಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

‘ನಾವೆಲ್ಲ ಸೈದ್ಧಾಂತಿಕ ನೆಲೆಯ ಕಾರ್ಯಕರ್ತರು. ನಮ್ಮ ಬಗ್ಗೆ ಯಾರೂ ವಿಚಲಿತರಾಗಲು ನಾವು ಅವಕಾಶವನ್ನೇ ಕೊಟ್ಟಿಲ್ಲ. ಸೈದ್ಧಾಂತಿಕ ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಕ್ಷಮೆ ಇರಲಿ’: ‘35 ವರ್ಷಗಳ ಸಾರ್ವಜನಿಕ ಜೀವನದಲ್ಲಿ ನನ್ನ ನಂಬಿಕೆಯನ್ನಾಧರಿಸಿ ಯಾರಿಗಾದರೂ ನೋವುಂಟು ಮಾಡಿದ್ದರೆ ಕ್ಷಮಿಸಿ ಎಂದು ದೀಪಾವಳಿಯ ಹಿಂದಿನ ದಿನ ಕೇಳಿಕೊಳ್ಳುವೆ’ ಎಂದು ರವಿ ಕೈಮುಗಿದು ಮನವಿ ಮಾಡಿದರು.

ಬೇಡಿಕೆ ಇಟ್ಟಿರಲಿಲ್ಲ: ಬಿಎಸ್‌ವೈ


ಯಡಿಯೂರಪ್ಪ

ಬೆಂಗಳೂರು: ‘ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸುವಂತೆ ಪಕ್ಷದ ವರಿಷ್ಠರ ಮುಂದೆ ನಾನು ಬೇಡಿಕೆ ಇಟ್ಟಿರಲಿಲ್ಲ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿಜಯೇಂದ್ರ ನೇಮಕವನ್ನು ನಾನು ನಿರೀಕ್ಷಿಸಿರಲಿಲ್ಲ. ಅದರ ಸುಳಿವೂ ಇರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ವರಿಷ್ಠರು ಈ ವಿಚಾರದಲ್ಲಿ ಸೂಕ್ತ ಕಾಲದಲ್ಲಿ, ಒಳ್ಳೆಯ ನಿರ್ಧಾರ ಕೈಗೊಂಡಿದ್ದಾರೆ’ ಎಂದರು.

‘ವೀರಶೈವ ಸಮಾಜ ಯಾವತ್ತೂ ಬಿಜೆಪಿ ಜತೆಗಿದೆ. ವಿಜಯೇಂದ್ರ ಅಧ್ಯಕ್ಷರಾಗಿರುವುದರಿಂದ ಇನ್ನೂ ಹೆಚ್ಚಿನ ಬೆಂಬಲ ದೊರಕಲಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕ ಸ್ಥಾನಗಳನ್ನು ಗೆಲ್ಲುವುದು ಗುರಿ. ಯಾರಲ್ಲೂ ಮುನಿಸಿನ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

ಯತ್ನಾಳ ಸ್ಥಿತಿ ಮಂಗನಿಗೆ ಸಾರಾಯಿ ಕುಡಿಸಿದಂತಾಗಿದೆ: ನಿರಾಣಿ

ಬೆಂಗಳೂರು: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಸ್ಥಿತಿ ಮಂಗನಿಗೆ ಸಾರಾಯಿ ಕುಡಿಸಿದಂತಾಗಿದೆ’ ಎಂದು ಬಿಜೆಪಿ ಮುಖಂಡ ಮುರುಗೇಶ ನಿರಾಣಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಮಂಗನಿಗೆ ಸಾರಾಯಿ ಕುಡಿಸಿದರೆ ಏನು ಆಗುತ್ತದೆ ಎಂಬ ಗಾದೆ ಮಾತಿದೆ. ಸಾರಾಯಿ ಕುಡಿಸಿ, ಬಾಲಕ್ಕೆ ಪಟಾಕಿ ಕಟ್ಟಿದರೆ ಏನಾಗುತ್ತದೋ ಅದೇ ರೀತಿ ಯತ್ನಾಳಗೂ ಆಗಿದೆ. ಹುಚ್ಚನಂತೆ ಮಾತನಾಡುತ್ತಾ ಅಡ್ಡಾಡುತ್ತಿದ್ದಾರೆ’ ಎಂದರು.

‘ಅವರ ಮಾತನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಬಿ.ಎಸ್. ಯಡಿಯೂರಪ್ಪ ಕುಟುಂಬ, ಜಗದೀಶ ಶೆಟ್ಟರ್, ಪ್ರಹ್ಲಾದ ಜೋಶಿ, ಸೋಮಣ್ಣ, ನನಗೆ ಎಲ್ಲರಿಗೂ ಮಾತನಾಡಿದ್ದಾರೆ. ಯಾರನ್ನೂ ಬಿಟ್ಟಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ನಾನೇ ಮುಂದಿನ ಸಿ.ಎಂ, ಮುಂದಿನ ಅಧ್ಯಕ್ಷ, ವಿರೋಧ ಪಕ್ಷದ ನಾಯಕ ಎಂದು ಹೇಳಿಕೊಂಡು ಅಡ್ಡಾಡುತ್ತಾರೆ. ನಾಯಕರು ಅವರನ್ನು ಗಣನೆಗೆ ತೆಗೆದುಕೊಂಡಿಲ್ಲ. ಆತ ಸ್ವಯಂಘೋಷಿತ ನಾಯಕ’ ಎಂದು ನಿರಾಣಿ ವ್ಯಂಗ್ಯವಾಡಿದರು.

ಇದು, ಕುಟುಂಬ ರಾಜಕಾರಣವಲ್ಲವೇ- ಪ್ರಿಯಾಂಕ್ ಪ್ರಶ್ನೆ

ಬೆಂಗಳೂರು: ‘ಕುಟುಂಬ ರಾಜಕಾರಣ ತೊಲಗಿಸಬೇಕು, ಓಲೈಕೆ ರಾಜಕಾರಣ, ಭ್ರಷ್ಟಾಚಾರ ನಾವು ಒಪ್ಪಲ್ಲ ಎಂದು ಕೆಂಪುಕೋಟೆಯ ಮೇಲೆ ನಿಂತು ಪ್ರಧಾನಿ ನರೇಂದ್ರ ಮೋದಿ ಭಾಷಣ ಮಾಡುತ್ತಿದ್ದರು. ಆದರೆ, ಈಗ ವಿಜಯೇಂದ್ರ ನೇಮಕಕ್ಕೆ ಏನು ಹೇಳಬೇಕು’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಾನು ಏನೇ ಮಾಡಿದರೂ ಖರ್ಗೆ ಮಗ ಎನ್ನುತ್ತಾರೆ. ನಾನು ಯುವ ಕಾಂಗ್ರೆಸ್‌ನಲ್ಲಿ ಕೆಲಸ ಮಾಡಿ ಶಾಸಕನಾದೆ. ಆದರೂ ನಮ್ಮದು ಕುಟುಂಬ ರಾಜಕಾರಣ ಅಂದರು. ಈಗ ಯಡಿಯೂರಪ್ಪ ಮಗನಿಗೆ ಸ್ಥಾನ ನೀಡಿದ್ದಾರೆ. ಇದಕ್ಕೆ ಬಿಜೆಪಿಯವರು ಉತ್ತರ ಕೊಡಬೇಕು’ ಎಂದರು.

‘ವಿಜಯೇಂದ್ರ ನೇಮಕದ ಮೂಲಕ ಬಿ.ಎಲ್. ಸಂತೋಷ್ ಅವರಿಗೆ, ‘ನೀವು ಕೇಶವಕೃಪಾದಲ್ಲೇ ಇರಿ’ ಎಂದು ಬಿಜೆಪಿ ಹೈಕಮಾಂಡ್ ಸಂದೇಶ ಕೊಟ್ಟಂತಿದೆ’ ಎಂದರು. ‘ಬೂತ್ ಮಟ್ಟ, ಸಂಘದಲ್ಲಿ ಕೆಲಸ ಮಾಡಿದ್ದೇನೆ. ವಿಜಯೇಂದ್ರ ನನಗೆ ಬಚ್ಚಾ ಎನ್ನುತ್ತಿದ್ದ ಈಶ್ವರಪ್ಪ ಈಗ ಎಲ್ಲಿಗೆ ಹೋದರು? ಈಗವರು ಪಕ್ಷ ಬಿಡುತ್ತಾರಾ?’ ಎಂದು ವ್ಯಂಗ್ಯವಾಡಿದರು.

‘ರಾಜ್ಯದಲ್ಲಿ ಬಿಜೆಪಿ ಮುಗಿಸಲು ವಿಜಯೇಂದ್ರ ಅವರನ್ನು ನೇಮಿಸಿದಂತಿದೆ. ದೈಹಿಕವಾಗಿ ಸಮರ್ಥರಿದ್ದರೂ ಸದಾನಂದಗೌಡರಿಗೆ ಸ್ವಯಂನಿವೃತ್ತಿ ಕೊಡಿಸಿದ್ದಾರೆ. ಈಗ ಬಿಜೆಪಿ ವರ್ಸಸ್ ಬಿಜೆಪಿ ಆಗಿದೆ’ ಎಂದು ವ್ಯಾಖ್ಯಾನಿಸಿದರು.

‘ಲಿಂಗಾಯತರೇ ಸಿ.ಎಂ ಆಗಿದ್ದಾಗ ಏಕೆ ಗೆಲ್ಲಲಿಲ್ಲ?’


ಸಿದ್ದರಾಮಯ್ಯ

ಬಂಗಾರಪೇಟೆ (ಕೋಲಾರ ಜಿಲ್ಲೆ): ‘2013ರ ವಿಧಾನಸಭೆ ಚುನಾವಣೆಗೆ ಮುನ್ನ ರಾಜ್ಯದಲ್ಲಿ ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದರು. ಅವರೂ ಲಿಂಗಾಯತ ಸಮುದಾಯದವರು. ಆಗ ಏಕೆ ಬಿಜೆಪಿ ಗೆಲ್ಲಲಿಲ್ಲ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ವಿಜಯೇಂದ್ರ ನೇಮಕ ಕುರಿತ ಪ್ರಶ್ನೆಗೆ ಹೀಗೆ ಪ್ರಕ್ರಿಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಟೀಕೆಗೆ ‘ಮೋದಿ ಪ್ರಧಾನಿಯಾಗುವ ಮುನ್ನ ದೇಶದಲ್ಲಿ ₹53.11ಲಕ್ಷ ಕೋಟಿ ಸಾಲವಿತ್ತು. ಈಗ ₹125ಲಕ್ಷ ಕೋಟಿ ಸಾಲವಿದೆ. ದೇಶವನ್ನು ದಿವಾಳಿ ಮಾಡಿದ್ದು ಯಾರು? ಚರ್ಚೆಗೆ ಕರೆಯಿರಿ ಮೋದಿ ಅವರನ್ನು’ ಎಂದು ಸವಾಲು ಹಾಕಿದರು.

‘ಅತ್ತೂ ಕರೆದು ಮಾಡಿದ್ದಾರೆ’

ಹುಬ್ಬಳ್ಳಿ: ‘ಅತ್ತೂ ಕರೆದು ಮಾಡಿದ್ದಾರೆ. ಆರು ತಿಂಗಳ ಹಿಂದೆ ಏಕೆ ಮಾಡಲಿಲ್ಲ. ಎಲ್ಲೋ ಒಂದು ಕಡೆ ಬಿಜೆಪಿ ಫೇಲ್ ಆಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಪ್ರತಿಕ್ರಿಯಿಸಿದರು.

ಬಿ.ವೈ.ವಿಜಯೇಂದ್ರ ನೇಮಕ ಕುರಿತು ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಆರು ತಿಂಗಳಿನಿಂದ ಏನಾಗಿದೆ ಎಂದು ಗಮನಿಸಿದರೆ, ಕಾರ್ಯಕರ್ತರಿಂದ ಕೇಳಿದರೆ ಒಟ್ಟು ಸ್ಥಿತಿ ಗೊತ್ತಾಗುತ್ತದೆ. ಬಿಜೆಪಿ ಹಣೆಬರಹ ವಿಧಾನಸಭೆ ಚುನಾವಣೆಯಲ್ಲೇ ಗೊತ್ತಾಗಿದೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 20 ಸ್ಥಾನಗಳವರೆಗೆ ಗೆಲ್ಲಲಿದೆ’ ಎಂದರು.

‘ಅಪ್ಪನ ವ್ಯಕ್ತಿತ್ವ ಪುತ್ರನಿಗಿಲ್ಲ’

ಬೆಳಗಾವಿ: ‘ಬಿಜೆಪಿಯಲ್ಲಿ ಯಡಿಯೂರಪ್ಪ ಮಾತ್ರ ಪ್ರಬಲ ನಾಯಕ. ಅದಕ್ಕೆ ಅವರ ಪುತ್ರನಿಗೆ ರಾಜ್ಯ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಮತಗಳಿಗೆ ಹೀಗೆ ಮಾಡಿರಬಹುದು. ಆದರೆ, ಯಡಿಯೂರಪ್ಪ ಅವರ ಆಕರ್ಷಕ ವ್ಯಕ್ತಿತ್ವ ವಿಜಯೇಂದ್ರಗೆ ಇಲ್ಲ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಸಿ.ಎಂ. ಸ್ಥಾನದಿಂದ ಯಡಿಯೂರಪ್ಪ ಇಳಿಸಿದ್ದೂ ಕಾರಣ. ಈಗ ಆ ಪಕ್ಷಕ್ಕೆ ಬಿಎಸ್‌ವೈ ಅನಿವಾರ್ಯ ಆಗಿದ್ದಾರೆ. ಮಕ್ಕಳು, ಮೊಮ್ಮಕ್ಕಳ ಸರದಿ ಈಗ ಬಿಜೆಪಿಯಲ್ಲೂ ಆರಂಭವಾಗಿದೆ’ ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಬಯೊಮೆಟ್ರಿಕ್ ಹ್ಯಾಕ್: ರೈತರ ಖಾತೆಯಿಂದ ₹1.24 ಲಕ್ಷ ಕಳವು

ಹಂಸಭಾವಿ (ಹಾವೇರಿ): ರೈತರ ಬಯೊಮೆಟ್ರಿಕ್ ಹ್ಯಾಕ್ ಮಾಡಿ ಅವರಿಗೆ ಅರಿವಿಲ್ಲದಂತೆ ಕಿಡಿಗೇಡಿಗಳು ಬ್ಯಾಂಕ್ ಖಾತೆಯಿಂದ ಹಣ ಕಳವು ಮಾಡಿದ ಘಟನೆ ಸಮೀಪದ ಬತ್ತಿಕೊಪ್ಪ ಗ್ರಾಮದಲ್ಲಿ ನಡೆದಿದೆ.

ಬತ್ತಿಕೊಪ್ಪ ಗ್ರಾಮದ ರಾಮಪ್ಪ ಮೋಟಣ್ಣನವರ ಅವರ ಎಸ್‌ಬಿಐ ಖಾತೆಯಿಂದ ಅಕ್ಟೋಬರ್ 29ರಿಂದ ನವೆಂಬರ್ 5ರವರೆಗೆ ದಿನ ಬಿಟ್ಟು ದಿನ ₹9 ಸಾವಿರದಿಂದ ₹10 ಸಾವಿರದವರೆಗೆ ಕಳವು ಮಾಡಿದ್ದಾರೆ.

‘ಅದೇ ಗ್ರಾಮದ ಹನುಮಂತಪ್ಪ ಮೋಟಣ್ಣನವರ ಅವರ ನೆಶ್ವಿ ಗ್ರಾಮದಲ್ಲಿನ ಕೆವಿಜಿ ಬ್ಯಾಂಕ್ ಖಾತೆಯಿಂದ ಅಕ್ಟೋಬರ್ 24ರಿಂದ ನವೆಂಬರ್ 3ವರೆಗೆ ದಿನ ಬಿಟ್ಟು ದಿನ ₹8 ಸಾವಿರದಿಂದ ₹10 ಸಾವಿರದವರೆಗೆ ಹಣ ಕಳವು ಮಾಡಲಾಗಿದೆ. ಇಬ್ಬರೂ ರೈತರ ಖಾತೆಯಿಂದ ₹1.24 ಲಕ್ಷ ಹಣ ಕಳವು ಆಗಿದೆ. ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ’ ಎಂದು ಹಂಸಭಾವಿ ಪೊಲೀಸ್ ಠಾಣೆಯ ಪಿಎಸ್‌ಐ ಚಂದನ್ ತಿಳಿಸಿದ್ದಾರೆ.

ಎ.ಸಿ ಕೈಗೆ ಹೊಡೆದ ಜಿಲ್ಲಾಧಿಕಾರಿ



ಹಾಸನ: ಭಕ್ತರಿಗೆ ಹಾಸನಾಂಬ ದೇವಿಯ ದರ್ಶನ ಕಲ್ಪಿಸುವ ಕುರಿತು ಶನಿವಾರ ಏರ್ಪಟ್ಟ ವಾಗ್ವಾದದ ನಡುವೆ ಸಕಲೇಶಪುರ ಉಪ ವಿಭಾಗಾಧಿಕಾರಿ ಶ್ರುತಿ ಅವರ ಕೈಗೆ ಜಿಲ್ಲಾಧಿಕಾರಿ ಸಿ. ಸತ್ಯಭಾಮಾ ಅವರು ಹೊಡೆದ ದೃಶ್ಯಾವಳಿ ಎಲ್ಲೆಡೆ ಹರಡಿ ಚರ್ಚೆಗೀಡಾಗಿದೆ.

ಸಚಿವರು ಹಾಗೂ ಶಾಸಕರನ್ನು ಒಳಗೆ ಬಿಡಲು ಶ್ರುತಿ ಅವರು ದ್ವಾರದ ಬೀಗ ತೆಗೆದಾಗ ಸಾವಿರಾರು ಜನರು ದೇವಾಲಯಕ್ಕೆ ನುಗ್ಗಿದರು. ಆಗ, ‘ಗೇಟ್ ತೆಗೆದವರು ಯಾರು?’ ಎಂದು ಡಿ.ಸಿ.ಸಿಡಿಮಿಡಿಗೊಂಡರು. ತಮ್ಮ ಮಾತಿಗೆ ಉತ್ತರಿಸುತ್ತಿದ್ದ ಅಧಿಕಾರಿಯ ಕೈಗೆ ಹೊಡೆದರು. ಅಧಿಕಾರಿಯು ಸಮಜಾಯಿಷಿಯನ್ನು ನೀಡುತ್ತಲೇ ಇದ್ದರು. ‘ಹೋಗಿ ನಿಮ್ಮ ಕೆಲಸ ಮಾಡಿ’ ಎಂದು ಗುಡುಗಿದ ಡಿ.ಸಿ ಭಕ್ತರ ಕಡೆಗೆ ತಿರುಗಿದರು.

ವಿವಿಐಪಿ ಗೇಟ್ ಮುಂಭಾಗವೂ ಎಸ್‌ಪಿ ಮೊಹಮದ್ ಸುಜೀತಾ ಅವರೊಂದಿಗೆ ವಾಗ್ವಾದ ನಡೆಸಿದರು. ‘ಪರಿಸ್ಥಿತಿಯನ್ನು ನಿಯಂತ್ರಿಸಲಾಗುತ್ತಿಲ್ಲ, ಬಿಡಿ’ ಎಂಬ ಎಸ್ಪಿ ಅವರ ಮಾತಿಗೆ, ‘ಒಮ್ಮೆಲೆ ಜನರನ್ನು ಬಿಡುವುದಕ್ಕೆ ಆಗಲ್ಲ. ನಾವು ಹೋಗ್ತೇವೆ. ನೀವು ಮಾಡಿಕೊಳ್ಳಿ’ ಎಂದು ಮತ್ತೆ ಸಿಟ್ಟಾದರು.

‘ಬನ್ನಿ ನಾವು ಹೋಗೋಣ’ ಎಂದು ಉಪವಿಭಾಗಾಧಿಕಾರಿ ಶ್ರುತಿ ಅವರನ್ನು ಕರೆದುಕೊಂಡು ಹೊರಡುತ್ತಿದ್ದಂತೆಯೇ ಎಸ್‌ಪಿ ಕೂಡ ಹೊರಟರು.


ಬಿ.ವೈ. ವಿಜಯೇಂದ್ರ ಅವರು ಬೆಂಗಳೂರಿನ ಕುಮಾರಕೃಪಾ ಮತಗಟ್ಟೆ ವ್ಯಾಪ್ತಿಯ ಬೂತ್ ಸಮಿತಿ ಅಧ್ಯಕ್ಷ ಶಶಿಧರ್ ಅವರ ಮನೆಗೆ ಶನಿವಾರ ಭೇಟಿ ನೀಡಿ ಸಿಹಿ ತಿನ್ನಿಸಿದರು. ಶಶಿಧರ್ ಕುಟುಂಬದ ಸದಸ್ಯರು ಹಾಗೂ ಸಂಸದ ಪಿ.ಸಿ. ಮೋಹನ್ ಇದ್ದರು – ಪ್ರಜಾವಾಣಿ ಚಿತ್ರ

‘ಬೂತ್ ಕಡೆ, ವಿಜಯೇಂದ್ರ ನಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತಗಟ್ಟೆ ಹಂತದಿಂದಲೇ ಪಕ್ಷ ಬಲಪಡಿಸುವತ್ತ ಹೆಜ್ಜೆ ಇಟ್ಟಿದ್ದಾರೆ. ನೇಮಕಗೊಂಡ ಮರುದಿನವೇ ‘ಬೂತ್ ಗೆಲ್ಲಿಸಿ- ದೇಶ ಗೆಲ್ಲಿಸಿ’ ಎಂಬ ಸಂದೇಶವನ್ನು ಪಕ್ಷದ ಕಾರ್ಯಕರ್ತರಿಗೆ ರವಾನಿಸಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿರುವ ಆದೇಶ ಶುಕ್ರವಾರ ಸಂಜೆ ಹೊರಬಿದ್ದಿತ್ತು. ಶನಿವಾರ ಬೆಳಿಗ್ಗೆಯೇ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಗಾಂಧಿನಗರ ವಾರ್ಡ್‌ನ ಕುಮಾರಕೃಪಾ ಮತಗಟ್ಟೆ ವ್ಯಾಪ್ತಿಯ ಬಿಜೆಪಿ ಬೂತ್ ಸಮಿತಿ ಅಧ್ಯಕ್ಷ ಶಶಿಧರ್ ಮನೆಗೆ ಭೇಟಿ ನೀಡಿದರು.

ಸಂಸದ ಪಿ.ಸಿ. ಮೋಹನ್, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್ ಮತ್ತು ಶಾಸಕ ಹರೀಶ್ ಪೂಂಜಾ ಜತೆಗಿದ್ದರು. ಭೇಟಿಯ ಬಳಿಕ ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡ ವಿಜಯೇಂದ್ರ, ‘ಮೊದಲ ಹೆಜ್ಜೆ ಬೂತ್‌ನೆಡೆಗೆ, ಗುರಿ ಒಂದೇ ಗೆಲುವಿನೆಡೆಗೆ, ಕಾರ್ಯಕರ್ತ ನಮ್ಮ ಶಕ್ತಿ, ಮತದಾರ ನಮ್ಮ ಬಂಧು’ ಎಂದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯದ 58,282 ಮತಗಟ್ಟೆಗಳಲ್ಲೂ ಬಿಜೆಪಿ ಬಲಪಡಿಸುವುದು ನನ್ನ ಗುರಿ. ಅದಕ್ಕಾಗಿ ಬೂತ್ ಸಮಿತಿ ಅಧ್ಯಕ್ಷರ ಮನೆಗೆ ಬಂದಿದ್ದೇನೆ. ಮತಗಟ್ಟೆ ಗೆದ್ದರೆ ದೇಶ ಗೆದ್ದಂತೆ ಎಂಬ ಕೇಂದ್ರ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಚಿಂತನೆಯನ್ನು ಪಾಲಿಸಿದ್ದೇನೆ’ ಎಂದು ಹೇಳಿದರು.

ಕೇಶವಕೃಪಾಗೆ ಭೇಟಿ: ಕುಮಾರ ಕೃಪಾದಿಂದ ಚಾಮರಾಜ ಪೇಟೆಯಲ್ಲಿರುವ ಆರ್‌ಎಸ್‌ಎಸ್ ಕಚೇರಿ ಕೇಶವಕೃಪಾಕ್ಕೆ ತೆರಳಿದ ವಿಜಯೇಂದ್ರ, ಸಂಘಟನೆಯ ಪ್ರಮುಖರೊಂದಿಗೆ ಕೆಲಕಾಲ ಚರ್ಚಿಸಿದರು.

ಬಿಎಸ್‌ವೈ ಮನೆಗೆ ಮುಖಂಡರ ದಂಡು: ವಿಜಯೇಂದ್ರ ಅವರನ್ನು ಅಭಿನಂದಿಸಲು ಬಿಜೆಪಿ ಶಾಸಕರು, ಸಂಸದರು, ಮುಖಂಡರು ಶನಿವಾರ ತಂಡೋಪತಂಡವಾಗಿ ಬಿ.ಎಸ್. ಯಡಿಯೂರಪ್ಪ ನಿವಾಸಕ್ಕೆ ಭೇಟಿ ನೀಡಿದ್ದರು. ಯಡಿಯೂರಪ್ಪ ಬಣದಲ್ಲಿ ಗುರುತಿಸಿಕೊಂಡಿರುವ ಸಂಸದರು, ಶಾಸಕರ ದಂಡೇ ಅಲ್ಲಿ ನೆರೆದಿತ್ತು.

ಸಂಭ್ರಮದ ಜೊತೆ ಮುನಿಸು

ಒಂದನೇ ಪುಟದಿಂದ...

ಈಗ ಲಿಂಗಾಯತ ಸಮುದಾಯದ ವಿಜಯೇಂದ್ರ ಅಧ್ಯಕ್ಷರಾಗಿರುವುದರಿಂದ ಅದೇ ಸಮುದಾಯಕ್ಕೆ ವಿರೋಧ ಪಕ್ಷದ ನಾಯಕನ ಹುದ್ದೆ ನೀಡುವ ಸಾಧ್ಯತೆ ಇಲ್ಲ. ಇದು ಈ ಇಬ್ಬರ ಅಸಮಾಧಾನಕ್ಕೆ ಕಾರಣ ಎಂಬ ಮಾತು ಪಕ್ಷದೊಳಗೆ ಇದೆ.

ಸಂಭ್ರಮದಲ್ಲಿ ಭಾಗಿ: ಯಡಿಯೂರಪ್ಪ ಬಣದಲ್ಲಿ ಗುರುತಿಸಿಕೊಂಡಿದ್ದವರ ಪೈಕಿ, ಕೆಲವರು ಗುರುವಾರ ರಾತ್ರಿಯೇ ವಿಜಯೇಂದ್ರ ಭೇಟಿಯಾಗಿ ಅಭಿನಂದಿಸಿದರು. ಹೊರಜಿಲ್ಲೆಗಳಿಂದ ಶುಕ್ರವಾರ ಬೆಳಿಗ್ಗೆಯೇ ದೌಡಾಯಿಸಿ, ಸಂಭ್ರಮ ಪಟ್ಟರು.

ಬೆಂಗಳೂರಿನ ಶಾಸಕರ ಪೈಕಿ ಬೈರತಿ ಬಸವರಾಜ, ಮುನಿರತ್ನ, ಎಸ್. ಆರ್. ವಿಶ್ವನಾಥ್ ಅವರು ಮನೆಗೆ ತೆರಳಿ ಅಭಿನಂದಿಸಿದರೆ, ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಎಸ್.ಟಿ. ಸೋಮಶೇಖರ್ ಆ ಕಡೆ ಸುಳಿಯಲಿಲ್ಲ.

ಸೋತವರ ಪೈಕಿ ಮುರುಗೇಶ ನಿರಾಣಿ, ಎಂ.ಪಿ. ರೇಣುಕಾಚಾರ್ಯ ಮೊದಲಾದವರು ವಿಜಯೇಂದ್ರ ಅವರನ್ನು ಭೇಟಿಯಾದರು.

‘ಇನ್ನು ಗಜೇಂದ್ರ ಮೋಕ್ಷವು ಆಗಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯ ಘಟಕಕ್ಕೆ ಅಧ್ಯಕ್ಷರ ನೇಮಿಸಿ ಹೈಕಮಾಂಡ್ ಕೊನೆಗೂ ಗಜಪ್ರಸವ ಮಾಡಿದೆ. ವಿಧಾನಸಭೆ ಪ್ರತಿಪಕ್ಷದ ನಾಯಕನ ಸ್ಥಾನಕ್ಕೂ ಆಯ್ಕೆ ಮಾಡಿ ಗಜೇಂದ್ರ ಮೋಕ್ಷ ನೀಡಲಿ’ ಎಂದು ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಜಯೇಂದ್ರ ಮುಂದೆ ಬೆಟ್ಟದಂತಹ ಸವಾಲಿದೆ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಬಿರುಸಿನಲ್ಲಿ ಓಡುತ್ತಿದೆ. ಅದನ್ನು ತಡೆಯಲು ಪಕ್ಷ ಸಂಘಟಿಸಬೇಕು’ ಎಂದರು.

‘ವಿಜಯೇಂದ್ರ ನೇಮಕದ ವಿಷಯದಲ್ಲಿ ಕುಟುಂಬ ರಾಜಕಾರಣದ ಪ್ರಶ್ನೆ ಬರುವುದಿಲ್ಲ. ಎಚ್.ಡಿ. ದೇವೇಗೌಡರು, ಸಿದ್ದರಾಮಯ್ಯ ಸೇರಿ ಎಲ್ಲರೂ ಅದನ್ನು ಮಾಡಿದವರೇ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶವಿದೆ. ಆದರೆ, ಎಲ್ಲರೂ ಒಳ್ಳೆಯ ರಾಜಕಾರಣ ಮಾಡಲಿ’ ಎಂದು ಆಶಿಸಿದರು.

‘ಮಾರ್ಚ್ 17ಕ್ಕೆ ರಾಜಕೀಯದಿಂದ ನಿವೃತ್ತಿ ಘೋಷಿಸುತ್ತೇನೆ. ಬಳಿಕ ಯಾವುದೇ ಪಕ್ಷದ ಪರ ಪ್ರಚಾರ ಮಾಡುವುದಿಲ್ಲ. ಯಾವ ಪಕ್ಷಕ್ಕೂ ಸಲಹೆ–ಸೂಚನೆ ನೀಡುವುದಿಲ್ಲ. ರಾಜಕೀಯದ ಚಟುವಟಿಕೆಗಳಿಂದ ಸಂಪೂರ್ಣ ದೂರ ಉಳಿಯುತ್ತೇನೆ’ ಎಂದು ಮತ್ತೊಮ್ಮೆ ಹೇಳಿದರು.

ಬಿಆರ್‌ಟಿ: ಎ.ಸಿ ಭೇಟಿ, ಪರಿಶೀಲನೆ

ಚಾಮರಾಜನಗರ: ‘ಜಿಲ್ಲೆಯ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಬಿಳಿಗಿರಿರಂಗನಬೆಟ್ಟದಲ್ಲಿ ರೆಸಾರ್ಟ್, ಲಾಡ್ಜ್‌ಗಳು ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿವೆ’ ಎಂಬ ಗುಪ್ತಚರ ಇಲಾಖೆಯ ವರದಿ ಬೆನ್ನಲ್ಲೇ ಕೊಳ್ಳೇಗಾಲ ಉಪವಿಭಾಗಾಧಿಕಾರಿ ಮಹೇಶ್ ಅವರು ಶನಿವಾರ ಬಿಳಿಗಿರಿರಂಗನಬೆಟ್ಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು (ಎನ್‌ಟಿಸಿಎ) ಕಳೆದ ವರ್ಷದ ನವೆಂಬರ್‌ನಲ್ಲಿ ನೀಡಿದ್ದ ವರದಿ ಆಧಾರದಲ್ಲಿ ಗುಪ್ತಚರ ಇಲಾಖೆಯು ಇದೇ 16ರಂದು ಸರ್ಕಾರದ ಮುಖ್ಯಕಾರ್ಯದರ್ಶಿಗೆ ಅಕ್ರಮ ರೆಸಾರ್ಟ್‌ಗಳ ಬಗ್ಗೆ ವರದಿ ಸಲ್ಲಿಸಿತ್ತು. ಈ ವರದಿಗೆ ಸಂಬಂಧಿಸಿದಂತೆ ‘ಪ್ರಜಾವಾಣಿ’ಯ ಶುಕ್ರವಾರದ ಸಂಚಿಕೆಯಲ್ಲಿ ‘ಬಿಆರ್‌ಟಿ: ಅಕ್ರಮ ರೆಸಾರ್ಟ್’ ಎಂಬ ತಲೆಬರಹದ ಅಡಿಯಲ್ಲಿ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾ ನಾಗ್ ಅವರ ಸೂಚನೆ ಮೇರೆಗೆ ಉಪ ವಿಭಾಗಾಧಿಕಾರಿ ಮಹೇಶ್ ಅವರು ಬಿಳಿಗಿರಿರಂಗನಬೆಟ್ಟದಲ್ಲಿರುವ ವಿವಿಧ ರೆಸಾರ್ಟ್, ಲಾಡ್ಜ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಳೆದ ವರ್ಷ ಎನ್‌ಟಿಸಿಎ ವರದಿ ನೀಡಿದ್ದ ಸಂದರ್ಭದಲ್ಲೂ ಅಕ್ರಮ ರೆಸಾರ್ಟ್‌ಗಳ ಬಗ್ಗೆ ‘ಪ್ರಜಾವಾಣಿ’ ವಿಸ್ತೃತವಾಗಿ ವರದಿ ಮಾಡಿತ್ತು.

ಒಂದೊಂದು ರೀತಿಯಲ್ಲಿ ಹೇಳಿಕೆ ಕೊಡುತ್ತಿರುವ ಆರೋಪಿ

ಸಿಐಡಿ ತನಿಖೆಗೆ ಕೆಇಎ ಪರೀಕ್ಷಾ ಅಕ್ರಮ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ನಗರ, ಅಫಜಲಪುರ, ಯಾದಗಿರಿ ಸೇರಿ ಇತರೆ ಪರೀಕ್ಷಾ ಕೇಂದ್ರಗಳಲ್ಲಿ ಕೆಲವು ಅಭ್ಯರ್ಥಿಗಳು ಅಕ್ರಮವಾಗಿ ಬ್ಲೂಟೂತ್ ಉಪಕರಣ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

ಅಕ್ಟೋಬರ್ 28ರಂದು ಕೆಇಎ ವಿವಿಧ ನಿಗಮಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆ ನಡೆಸಿತ್ತು. ಬ್ಲೂಟೂತ್ ಡಿವೈಸ್‌ಗಳನ್ನು ಬಳಸಿದ್ದ ಕೆಲ ಅಭ್ಯರ್ಥಿಗಳು ಪರೀಕ್ಷೆ ಬರೆಯುವಾಗ ಹಾಗೂ ತಪಾಸಣೆ ವೇಳೆ ಬಂಧಿತರಾಗಿದ್ದರು. ಪ್ರಕರಣದ ಆರೋಪಿ ಆರ್.ಡಿ. ಪಾಟೀಲ ಬಂಧನವಾದ ಮರುದಿನವೇ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ.

‘ಅಫಜಲಪುರ ಠಾಣೆಯ ಅಪರಾಧ ಸಂಖ್ಯೆ 267/2023ರಲ್ಲಿ ಐಪಿಸಿ 109, 114, 120 ಬಿ, 420 ಇತರೆ ಸೆಕ್ಷನ್‌ಗಳಲ್ಲಿ ದಾಖಲಾದ ಪ್ರಕರಣವನ್ನು ಮುಂದಿನ ತನಿಖೆಗಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಸಿಐಡಿಗೆ ವರ್ಗಾಯಿಸಲಾಗಿದೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಸಿಐಡಿಗೆ ಒಪ್ಪಿಸಬೇಕು’ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಆರ್.ಹಿತೇಂದ್ರ ಅವರು ಶನಿವಾರ ಆದೇಶಿಸಿದ್ದಾರೆ.

ಪ್ರಕರಣದ ಕಡತವನ್ನು ಸಿಐಡಿ ತನಿಖಾಧಿಕಾರಿಗೆ ಖುದ್ದಾಗಿ ಹಸ್ತಾಂತರಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ. ಸಿಐಡಿಯ ವಿಶೇಷ ಘಟಕವು ಹೆಚ್ಚಿನ ತನಿಖೆ ಕೈಗೊಳ್ಳಲು ವ್ಯವಸ್ಥೆ ಮಾಡಿಕೊಂಡು, ಪ್ರಕರಣದ ತನಿಖೆ ಪೂರ್ಣಗೊಂಡ ಬಳಿಕ ವಿವರವಾದ ವರದಿಯನ್ನು ಕಳುಹಿಸುವಂತೆಯೂ ತಿಳಿಸಿದ್ದಾರೆ.

ಸಿಐಡಿಯ ಮುಂದಿನ ನಡೆ ಏನು?: ‘ಪರೀಕ್ಷೆಯಲ್ಲಿ ಅಕ್ರಮ ಬ್ಲೂಟೂತ್ ಬಳಕೆಯ ಸಂಬಂಧ ಎಂಟು ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳ ಮಾಹಿತಿಯನ್ನು ಸಿಐಡಿ ತನಿಖಾ ಅಧಿಕಾರಿ ತರಿಸಿಕೊಳ್ಳುವರು. ನ್ಯಾಯಾಂಗ ಬಂಧನದ ಬಳಿಕ ಪ್ರಕರಣದ ಆರೋಪಿಗಳನ್ನು ಸಿಐಡಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುವರು’ ಎಂದು ಸಿಐಡಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಆದೇಶ ಕೈ ಸೇರಿದ ಬಳಿಕ ಕ್ರಮ: ಸಚಿವ ಪರಮೇಶ್ವರ

ಬೆಂಗಳೂರು: ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿಗೆ ಮರು ಪರೀಕ್ಷೆ ನಡೆಸುವಂತೆ ಹೈಕೋರ್ಟ್ ತೀರ್ಪು ನೀಡಿದೆ. ಆದೇಶದ ಕೈ ಸೇರಿದ ಬಳಿಕ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಕೋರ್ಟ್ ಆದೇಶವನ್ನು ನಾನು ನೋಡಿಲ್ಲ. ಅಡ್ವೊಕೇಟ್ ಜನರಲ್ ಜೊತೆ ಮಾತನಾಡಿದ್ದೇನೆ’ ಎಂದರು.

‘ಸ್ವತಂತ್ರ ಸಂಸ್ಥೆಯಿಂದ ಆದಷ್ಟು ಬೇಗ ಪರೀಕ್ಷೆ ನಡೆಸುವಂತೆ ಕೋರ್ಟ್ ಹೇಳಿದೆ. ನಮಗೆ ಓದಲು ಸಮಯ ನೀಡುವಂತೆ ಅಭ್ಯರ್ಥಿಗಳು ಮನವಿ ಮಾಡಿದ್ದಾರೆ. ಅವರ ಮನವಿಯನ್ನು ಪರಿಗಣಿಸುತ್ತೇವೆ’ ಎಂದರು.

‘ಪಿಎಸ್‌ಐ ನೇಮಕಾತಿ ಬಳಿಕ ತರಬೇತಿ ಮುಗಿಯಲು ಒಂದು ವರ್ಷ ಬೇಕು. ಹೀಗಾಗಿ, ಸುಮಾರು 600 ಎಎಸ್‌ಐಗಳಿಗೆ ನಿಯಮ 32ರಡಿ ಪಿಎಸ್‌ಐ ಹುದ್ದೆಗೆ ಬಡ್ತಿ ನೀಡಿದ್ದೇವೆ. ನೇಮಕಾತಿ ಪ್ರಕ್ರಿಯೆ ನಡೆದಿದ್ದ 545 ಪಿಎಸ್‌ಐ ಹುದ್ದೆಗಳ ಜೊತೆಗೆ ಇನ್ನೂ 400 ಹುದ್ದೆಗಳು ಖಾಲಿ ಇವೆ. ಈ ಎಲ್ಲ ಹುದ್ದೆಗಳಿಗೆ ಒಟ್ಟಿಗೆ ಪರೀಕ್ಷೆ ಮಾಡಬೇಕೇ? ಪ್ರತ್ಯೇಕವಾಗಿ ಮಾಡಬೇಕೇ ಎಂಬ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ’ ಎಂದರು.

ಮತ್ತೆ ಇಬ್ಬರ ಬಂಧನ

ಅಫಜಲಪುರದ ಸೊನ್ನ ಗ್ರಾಮದ ನಿವಾಸಿ, ಆರ್. ಡಿ. ಪಾಟೀಲನ ಆಪ್ತ ಸಲಿಂ ಹಾಗೂ ನಗರದ ಖಾಸಗಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಸಂತೋಷ ಎಂಬಾತನನ್ನು ಅಶೋಕ ನಗರ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದು, ಬಂಧಿತರ ಸಂಖ್ಯೆ 8ಕ್ಕೆ ತಲುಪಿದೆ. ಅಪಾರ್ಟ್‌ಮೆಂಟ್‌ನಿಂದ ತಪ್ಪಿಸಿಕೊಳ್ಳಲು ಸಹಕರಿಸಿದ್ದ ಮೂವರು ಆಪ್ತರು ಈಗಾಗಲೇ ಬಂಧಿತರಾಗಿದ್ದಾರೆ.

ಬ್ಲೂಟೂತ್ ಇರಿಸಿಕೊಂಡಿದ್ದ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರದ ಹೊರಗಡೆಯಿಂದ ಉತ್ತರ ಹೇಳಿದ ಆರೋಪದಡಿ ಸಲೀಂ ಹಾಗೂ ಇದಕ್ಕೆ ಸಹಕರಿಸಿದ ಸಂತೋಷನನ್ನು ಬಂಧಿಸಲಾಗಿದೆ ಎನ್ನಲಾಗುತ್ತಿದೆ.

ಆರು ಜನ ಅಂತರರಾಜ್ಯ ಶ್ರೀಗಂಧ ಕಳ್ಳರ ಬಂಧನ

ಆನೆ ದಂತ, ರಕ್ತಚಂದನ ಜಪ್ತಿ

ಪ್ರಜಾವಾಣಿ ವಾರ್ತೆ


ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿ ಠಾಣೆಯ ಪೊಲೀಸರು ವಶಕ್ಕೆ ಪಡೆದ ಆನೆ ದಂತ, ಚಿಪ್ಪುಹಂದಿಯ ಚಿಪ್ಪು ಹಾಗೂ ಶ್ರೀಗಂಧ

ಚಿತ್ರದುರ್ಗ: ಆರು ಜನ ಅಂತರರಾಜ್ಯ ಕಳ್ಳರನ್ನು ಬಂಧಿಸಿರುವ ಜಿಲ್ಲಾ ಪೊಲೀಸರು, 2 ಆನೆ ದಂತ, 91 ಕೆ.ಜಿ. ಶ್ರೀಗಂಧ, 15 ಕೆ.ಜಿ. ರಕ್ತಚಂದನ, ಚಿಪ್ಪುಹಂದಿಯ 34 ಕೆ.ಜಿ. ಚಿಪ್ಪುಗಳು ಹಾಗೂ ಕಾರುಗಳನ್ನು ಜಪ್ತಿ ಮಾಡಿದ್ದಾರೆ.

ತರಿಕೆರೆಯ ವಿ.ಚಂದ್ರಶೇಖರ್, ಆಂಧ್ರಪ್ರದೇಶದ ಖಲೀಲ್, ಹೊಸದುರ್ಗ ತಾಲ್ಲೂಕಿನ ಗೂಳಿಹಟ್ಟಿ ಗ್ರಾಮದ ಟಿ.ಪ್ರಶಾಂತ್, ರಂಗಸ್ವಾಮಿ, ಕಡೂರು ತಾಲ್ಲೂಕಿನ ಆಲದಹಳ್ಳಿಯ ಪುನೀತ್ ನಾಯ್ಕ ಹಾಗೂ ರಾಮಾನಾಯ್ಕ ಬಂಧಿತರು. ಈ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

‘ಹೊಳಲ್ಕೆರೆ ತಾಲ್ಲೂಕಿನ ಕೊಳಾಳ್ ಗ್ರಾಮದ ಸಮೀಪ, ಚಿತ್ರಹಳ್ಳಿ ಠಾಣೆಯ ಪೊಲೀಸರು ಶುಕ್ರವಾರ ವಾಹನವೊಂದನ್ನು ತಪಾಸಣೆಗೆ ಒಳಪಡಿಸಿದಾಗ ಮಾರಕಾಸ್ತ್ರಗಳು ಪತ್ತೆಯಾಗಿವೆ. ವಾಹನದಲ್ಲಿದ್ದ ಆರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಶ್ರೀಗಂಧ ಕಳವಿಗೆ ಹೊಂಚು ಹಾಕುತ್ತಿದ್ದುದಾಗಿ ಹೇಳಿದ್ದಾರೆ. ಪ್ರಮುಖ ಆರೋಪಿ ವಾಸವಾಗಿದ್ದ ಹಿರಿಯೂರು ತಾಲ್ಲೂಕಿನ ಬಬ್ಬೂರು ಗ್ರಾಮದ ಮನೆಯ ಮೇಲೆ ದಾಳಿ ನಡೆಸಿದಾಗ ಅಪಾರ ಪ್ರಮಾಣದ ವನ್ಯಜೀವಿ ಉತ್ಪನ್ನಗಳು ಪತ್ತೆಯಾಗಿವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ, ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಆರೋಪಿ ಚಂದ್ರಶೇಖರ್, ರೈತರು ಬೆಳೆದ ಶ್ರೀಗಂಧವನ್ನು ಕಳವು ಮಾಡುವುದಕ್ಕೆಂದೇ ಗುಂಪೊಂದನ್ನು ರಚಿಸಿಕೊಂಡಿದ್ದ. ಈತನ ತಂಡದಲ್ಲಿದ್ದ ಪ್ರಶಾಂತ್ ಮತ್ತು ರಂಗಸ್ವಾಮಿ, ವಿವಿಧೆಡೆ ತೆರಳಿ ಶ್ರೀಗಂಧದ ಮರಗಳನ್ನು ಪತ್ತೆ ಮಾಡುತ್ತಿದ್ದರು. ಖಲೀಲ್ ನೇತೃತ್ವದ ತಂಡ ಇಂತಹ ಮರಗಳನ್ನು ಕಡಿದು ಸಾಗಣೆ ಮಾಡುತ್ತಿತ್ತು. ಚಂದ್ರಶೇಖರ್ ಇವುಗಳನ್ನು ಹೊರರಾಜ್ಯಗಳಿಗೆ ರವಾನಿಸುತ್ತಿದ್ದ. ಆನೆದಂತ ಹಾಗೂ ಚಿಪ್ಪುಹಂದಿಯ ಚಿಪ್ಪುಗಳು ಎಲ್ಲಿಂದ ಬಂದವು ಎಂಬುದರ ಕುರಿತು ತನಿಖೆ ಮಾಡುತ್ತಿದ್ದೇವೆ’ ಎಂದು ತಿಳಿಸಿದರು.

ಜೊಯಿಡಾ: ವನ್ಯಜೀವಿ ಉತ್ಪನ್ನ ವಶಕ್ಕೆ

ಜೊಯಿಡಾ (ಉತ್ತರ ಕನ್ನಡ ಜಿಲ್ಲೆ): ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಗುಂದ ವನ್ಯಜೀವಿ ವಲಯ ವ್ಯಾಪ್ತಿಯ ಉಳವಿ ಸಮೀಪದ ಶಿವಪುರದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಎರಡು ದಿನ ಹಲವು ಮನೆಗಳಲ್ಲಿ ಶೋಧ ನಡೆಸಿ ಚಿರತೆಯ ಏಳು ಉಗುರು ಸೇರಿ ವಿವಿಧ ವನ್ಯ ಜೀವಿಗಳ ಉತ್ಪನ್ನಗಳನ್ನು ವಶಪಡಿಸಿಕೊಂಡಿದೆ. ಐವರು ಆರೋಪಿಗಳನ್ನು ಬಂಧಿಸಿದೆ.

‘ಶಿವಪುರ ಗ್ರಾಮದ ನಾರಾಯಣ ತಮ್ಮಣ್ಣ ಮಹಾಲೆ, ರಘುನಾಥ ತಿಮ್ಮಣ್ಣ ಮಹಾಲೆ, ಸುಧಾಕರ ವಡ್ಡೊ ಮಹಾಲೆ, ಮಾರುತಿ ಕೃಷ್ಣಮೂರ್ತಿ ಲಕ್ಕೊಳ್ಳಿ ಹಾಗೂ ಶಶಾಂಕ ನಾರಾಯಣ ಮಹಾಲೆ ಬಂಧಿತರು. ಎರಡು ಉಡದ ಚರ್ಮ, ಮಿಂಚುಳ್ಳಿಯ ಕೊಕ್ಕು, ಶ್ರೀಗಂಧದ ತುಂಡು, ಪಕ್ಷಿ ಸೆರೆ ಹಿಡಿಯುವ ಬಲೆ, ಪರವಾನಗಿ ರಹಿತ ನಾಡ ಬಂದೂಕು, ಮದ್ದುಗುಂಡು ಮತ್ತು ಹುಸಿ ಬಾಂಬ್ ವಶಪಡಿಸಿಕೊಳ್ಳಲಾಗಿದೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಆರೋಪಿಗಳ ಮೇಲೆ ಹಿಂದೆಯೂ ಕೆಲವು ಪ್ರಕರಣ ದಾಖಲಾಗಿದ್ದವು. ವನ್ಯಜೀವಿ ಉತ್ಪನ್ನಗಳನ್ನು ಇಟ್ಟುಕೊಂಡ ಶಂಕೆ ಮೇಲೆ ಕಾರ್ಯಾಚರಣೆ ನಡೆಸಿದೆವು. ತನಿಖೆ ಮುಂದುವರೆದಿದೆ’ ಎಂದು ಕುಂಬಾರವಾಡಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಅಮರಾಕ್ಷರ ವಿ.ಎಂ ತಿಳಿಸಿದರು.

ಹೆಚ್ಚಿದ ಉತ್ಪಾದನಾ ಸಾಮರ್ಥ್ಯ; ವಾರ್ಷಿಕ ವಹಿವಾಟು ₹2,000 ಕೋಟಿಗೆ ಏರಿಕೆ ನಿರೀಕ್ಷೆ

ಶೀಘ್ರದಲ್ಲಿ ಕೆಎಸ್‌ಡಿಎಲ್ ಕ್ಯಾಂಡಲ್, ಜೆಲ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗೆ ಬಗೆಯ ಆಲಂಕಾರಿಕ ಮೋಂಬತ್ತಿ (ಕ್ಯಾಂಡಲ್), ಚರ್ಮಕ್ಕೆ ಪೋಷಣೆ ನೀಡುವ ಸಾಬೂನು ಜೆಲ್, ಲಿಂಬೆ, ಲ್ಯಾವೆಂಡರ್, ಗುಲಾಬಿ, ಬೇವು, ಅರಿಸಿನ ಒಳಗೊಂಡ ಸುವಾಸನೆಯ ಸಾಬೂನುಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಮುಂದಾಗಿದೆ. ಆ ಮೂಲಕ ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಿ, ಒಟ್ಟು ವಹಿವಾಟು ಹೆಚ್ಚಿಸಲು ನಿರ್ಧರಿಸಿದೆ.

ಸದ್ಯ ಕೆಎಸ್‌ಡಿಎಲ್ ವಾರ್ಷಿಕ ₹1,400 ಕೋಟಿಯ ವಹಿವಾಟು ನಡೆಸುತ್ತಿದೆ. ಕಳೆದ ಆರು ತಿಂಗಳಿನಿಂದ ದಿನವೊಂದಕ್ಕೆ $1.30 ಕೋಟಿಯ ಮೌಲ್ಯದ ಉತ್ಪನ್ನಗಳು ಹೆಚ್ಚುವರಿಯಾಗಿ ತಯಾರಿಕೆಯಾಗುತ್ತಿವೆ. ಕಾರ್ಖಾನೆಯಲ್ಲಿ ತಯಾರಿಕಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿ, ಮಾರುಕಟ್ಟೆಯ ಸದ್ಯದ ಅಗತ್ಯಗಳನ್ನು ಮನಗಂಡು ಹೊಸ ಹೊಸ ಉತ್ಪನ್ನಗಳನ್ನು ತಯಾರಿಸಲು ಮತ್ತು ಹೊಸ ಏಜೆನ್ಸಿಗಳ ಮೂಲಕ ದೇಶ- ವಿದೇಶಗಳಿಗೆ ಉತ್ಪನ್ನಗಳನ್ನು ತಲುಪಿಸಲು ಕೆಎಸ್‌ಡಿಎಲ್ ತಯಾರಿ ನಡೆಸಿದೆ.

‘ಕಳೆದ ಆರು ತಿಂಗಳಲ್ಲಿ ಕೆಎಸ್‌ಡಿಎಲ್ ಆಡಳಿತ ಮಂಡಳಿಯ ಸಭೆಗಳನ್ನು ನಿರಂತರ ನಡೆಸಿ, ಹಲವು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇದರಿಂದಾಗಿ ತಯಾರಿಕಾ ಸಾಮರ್ಥ್ಯ ಮತ್ತು ವಹಿವಾಟಿನಲ್ಲಿ ಶೇ 25ರಷ್ಟು ದಾಖಲೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಸಾಬೂನು ತಯಾರಿ ಸಾಮರ್ಥ್ಯ ದಿನವೊಂದಕ್ಕೆ 100 ಟನ್‌ನಿಂದ 125 ಟನ್‌ಗೆ ಹೆಚ್ಚಳವಾಗಿದೆ. ಇದು ಕೆಎಸ್‌ಡಿಎಲ್ ಇತಿಹಾಸದಲ್ಲೇ ಗರಿಷ್ಠ ಪ್ರಮಾಣದ ತಯಾರಿಕೆ. ಅಲ್ಲದೆ, ವಹಿವಾಟು ದಿನವೊಂದಕ್ಕೆ ₹4 ಕೋಟಿಯಿಂದ ₹5.30 ಕೋಟಿಗೆ ಹೆಚ್ಚಳವಾಗಿದೆ. ಇದರಿಂದಾಗಿ ಪ್ರಸಕ್ತ ಸಾಲಿನಲ್ಲಿ (2023-24) ₹600 ಕೋಟಿಯಷ್ಟು ಹೆಚ್ಚುವರಿ ವಹಿವಾಟು ನಡೆಯಬಹುದೆಂದು ನಿರೀಕ್ಷಿಸಲಾಗಿದೆ. ವಾರ್ಷಿಕ ಒಟ್ಟು ವಹಿವಾಟು ₹2,000 ಕೋಟಿ ಮೀರಲಿದೆ’ ಎಂದು ಕೆಎಸ್‌ಡಿಎಲ್ ಅಧ್ಯಕ್ಷರೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

‘ಮೈಸೂರ್ ಸ್ಯಾಂಡಲ್, ಮಿಲೇನಿಯಂ, ಸಿಕ್ಸರ್, ಗೋಲ್ಡ್, ಬೇಬಿ, ಹರ್ಬಲ್ ಕೇರ್ ಸೋಪ್, ಮೈಸೂರ್ ಕಾರ್ಬಾಲಿಕ್, ವಾಷಿಂಗ್ ಹಾಫ್ ಬಾರ್ ಸೋಪ್ ಸೇರಿ ಬಗೆ ಬಗೆಯ 42 ಸಾಬೂನುಗಳ ಸಹಿತ 52 ಉತ್ಪನ್ನಗಳು ಸದ್ಯ ತಯಾರಾಗುತ್ತಿವೆ. ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಒಟ್ಟು ಉತ್ಪನ್ನಗಳನ್ನು ಹೆಚ್ಚಿಸುವ ಜೊತೆಗೆ ಮಾರುಕಟ್ಟೆ ವಿಸ್ತರಿಸಲು ಯೋಜನೆ ರೂಪಿಸಲಾಗಿದೆ. ರಫ್ತು ಪ್ರಮಾಣವನ್ನು ಹೆಚ್ಚಿಸುವ ಚಿಂತನೆಯಿದೆ. ಈ ಉದ್ದೇಶದಿಂದ ಎಚ್‌ಸಿಎಲ್ ಕಂಪನಿಯಲ್ಲಿ ಕೆಲಸ ಮಾಡಿದ್ದ ತಜ್ಞರ ತಾಂತ್ರಿಕ ಸಲಹೆ ಪಡೆಯಲಾಗಿದೆ. ಆ ಮೂಲಕ, ಮೈಸೂರು ಸ್ಯಾಂಡಲ್‌ನ ಬ್ರ್ಯಾಂಡ್ ಮೌಲ್ಯವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದೂ ಅವರು ತಿಳಿಸಿದರು.



ಸ್ಯಾಂಡಲ್ ಸೋಪ್ ಕಾರ್ಖಾನೆ ನಮ್ಮ ಹೆಮ್ಮೆ. ಅದರ ಉತ್ಪನ್ನಗಳು ದೇಶ ಮಾತ್ರವಲ್ಲ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸುತ್ತೇವೆ

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ ಹಾಗೂ ಕೆಎಸ್‌ಡಿಎಲ್ ಅಧ್ಯಕ್ಷ

ಕಳ್ಳತನಕ್ಕೆ ತಡೆ; ಕಳ್ಳಾಟಕ್ಕೆ ಕತ್ತರಿ

ಕಾರ್ಖಾನೆಯಲ್ಲಿ 480ಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಕೆಲವರು ಪರಸ್ಪರ ‘ಹೊಂದಾಣಿಕೆ’ ಮಾಡಿಕೊಂಡು ಕೆಲಸದಲ್ಲಿ ತೊಡಗಿಸಿಕೊಳ್ಳದೆ ನಿದ್ದೆ ಮಾಡುತ್ತಿದ್ದರು. ಈ ವಿಷಯವನ್ನು ವ್ಯಕ್ತಿಯೊಬ್ಬರು ಕರೆ ಮಾಡಿ ಸಚಿವ ಎಂ.ಬಿ. ಪಾಟೀಲರಿಗೆ ತಿಳಿಸಿದ್ದರು. ಸಚಿವರ ಸೂಚನೆಯಂತೆ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರು ಮಧ್ಯರಾತ್ರಿ ಕಾರ್ಖಾನೆಗೆ ದಿಢೀರ್ ತೆರಳಿ ಪರಿಶೀಲಿಸಿದಾಗ ನಿದ್ದೆ ಮಾಡುತ್ತಿರುವುದನ್ನು ಕಂಡಿದ್ದರು. ಹೀಗಾಗಿ, ಕೆಲವರನ್ನು ಅಮಾನತು ಮಾಡಲಾಗಿದೆ. ಆ ಮೂಲಕ, ಕಾರ್ಮಿಕರಲ್ಲಿ ದಕ್ಷತೆ ಹೆಚ್ಚಿಸಲಾಗಿದೆ. ಅಲ್ಲದೆ, ಕಾರ್ಖಾನೆಯಿಂದ ಕೆಲವು ಸಾಮಗ್ರಿಗಳು ಕಳವು ಆಗಿವೆ. ವಸ್ತುಗಳು ಕಳವು ಆಗುವುದನ್ನು ತಡೆಯಲು ಕೂಡಾ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ.


FINANCE BONANZA
Upto ₹12,500 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
BIGGEST Deepavali SALE
UPTO 70% OFF
ಮಳಿಗೆಗಳು 9.30AM – 10.30PM ವರೆಗು ತೆರೆದಿರುತ್ತದೆ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಉಚಿತ*
FIRE-BOLTT SMART CALLING WATCH WORTH ₹20000
EXCHANGE DHAMAKA
Upto ₹25,000
OFF ON EXCHANGE OF OLD TELEVISION, HOME APPLIANCES, LAPTOP & MOBILES*
FINANCE POWERED BY Groww
0% EMI ₹2,000 Cash Back
MIN PRODUCT VALUE ₹10,000
1 EMI FREE*
ASSURED GIFTS ON ALL LG PRODUCTS*
BT SPEAKER COOKER STEAM IRON KETTLE DRY IRON INDUCTION
AU SMALL FINANCE BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
YES BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹20,000 MAX CASH BACK UPTO ₹2500
one card 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
DBS BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹3000
5% INSTANT CASHBACK ON FULL SWIPE* MIN SWIPE ₹15000 MAX CASH BACK UPTO ₹1500
MobiKwik 5% CASH BACK* on UPI
MINIMUM TRANSACTION ₹5000 MAXIMUM CASHBACK UPTO ₹1000
SAMSUNG 98 QLED SMART TV 98Q80C ಇ.ಎಮ್.ಐ ₹6,990*
ಉಚಿತ: SAMSUNG S23 ULTRA MOBILE WORTH ₹135000
LG 77 4K SMART OLED OLED77B3PSA ಇ.ಎಮ್.ಐ ₹4,999*
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH + LG SMART CAMER WORTH ₹9990
NEVER BEFORE PRICES NW PRIDE OF INDIA
40 SMART LED ₹13,300* AFTER CASH BACK EMI: ₹1,108
43 4K SMART LED ₹17,650* AFTER CASH BACK EMI: ₹1,471
55 4K SMART LED ₹25,900* AFTER CASH BACK EMI: ₹2,158
SONY 83 XR SERIES 4K ULTRA HD SMART OLED XR-83A80L 3 YEARS WARRANTY ಇ.ಎಮ್.ಐ ₹8,300
Panasonic 43 4K SMART TV ಇ.ಎಮ್.ಐ ₹2,111
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
vivo Y56 (4 + 128) OFFER PRICE ₹15,199* (PRICE AFTER CASH BACK*) EMI ₹1,512
Redmi 12 5G 6/128 OFFER PRICE ₹11,500* (PRICE AFTER CASH BACK*) ಇ.ಎಮ್.ಐ ₹1,917
ONEPLUS NORD CE 3 -8/128 OFFER PRICE ₹23,499* (PRICE AFTER CASH BACK*) ಇ.ಎಮ್.ಐ ₹3,916
oppo A79 (8 + 128) OFFER PRICE ₹17,099* (PRICE AFTER CASH BACK*) EMI ₹1,499
iPhone 15\15 PRO\ PRO MAX STARTS FROM ₹74,990* (PRICE AFTER CASH BACK*) ಇ.ಎಮ್.ಐ ₹3,125
70% OFF ON DAMAGE PROTECTION
SAMSUNG Galaxy S23FE/S23/S23 Ultr STARTS FROM ₹47,499* (PRICE AFTER CASH BACK*) EMI ₹1,979
hp 15s N4500 8GB,512GB SSD, 15.6" HD WIN 11 MSO 2021 HOT DEAL OFFER PRICE ₹24,500* (PRICE AFTER CASH BACK) ಇ.ಎಮ್.ಐ ₹2,042
PAY RS. 2499 AND GET GOODIES WORTH ₹10999
HOT DEAL i5-1035G1 8GB, 1TB HDD+ 256 GB SSD, 14" FHD, FINGER PRINT READER, WIN 10 HOME OFFER PRICE ₹34,290* (PRICE AFTER CASH BACK)
ಉಚಿತ: METAL BT SMART WATCH WORTH ₹7999
Lenovo SLIM 3i RYZEN 7 5700U 16GB, 512GB SSD 15.6 FHD INT AMD RADEON GFX WIN 11 MSO 21 OFFER PRICE ₹43,490* (PRICE AFTER CASH BACK) ಇ.ಎಮ್.ಐ ₹3,624
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
Lenovo Gaming 3 RYZEN 5 6600 8GB, 512GB SSD NVIDIA RTX 3050 4GB GFX 15.6 FHD WIN 11 MSO 21 OFFER PRICE ₹53,500* (PRICE AFTER CASH BACK) ಇ.ಎಮ್.ಐ ₹4,458
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
DELL Inspiron 15 3520 12th Gen i5-1235U, 16GB DDR4 /512GB SSD, 15.6" FHD/Win 11 + MSO 21, WIN 11 MSO 21 OFFER PRICE ₹54,190* (PRICE AFTER CASH BACK) ಇ.ಎಮ್.ಐ ₹4,516
ಉಚಿತ: METAL BT SMART WATCH WORTH ₹7999+UPTO ₹5000 CASHBACK + PAY ₹2499 AND GET GOODIES WORTH ₹12199
LG 650 Ltr, CONVERTIBLE SIDE-BY-SIDE REFRIGERATOR B257EPZ3 ಇ.ಎಮ್.ಐ ₹4,999
ಉಚಿತ: FIRE-BOLTT SMART CALLING WATCH WORTH ₹20,000+ LG 242LTR FROST FREE WORTH ₹29,499
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL ಇ.ಎಮ್.ಐ ₹3,990
ಉಚಿತ: SAMSUNG 10 KG TOP LOADING WASHING MACHINE WORTH ₹32500
Haier 531 Ltr FRENCH DOOR REFRIGERATOR OFFER PRICE ₹59,990*
ಉಚಿತ: FIRE-BOLTT SMART CALLING WATCH WORTH ₹20000
BOSCH 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,574
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,141
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR OK55 ಇ.ಎಮ್.ಐ ₹1,772 OFFER PRICE ₹21,265 (PRICE AFTER CASH BACK)
LG SOUND BAR SC9S 3.1.3 Ch, 400W, DOLBY ATMOS & IMAX ENHANCED. OFFER PRICE ₹27,150 ಇ.ಎಮ್.ಐ ₹2,263 (PRICE AFTER CASH BACK)
LG 14 PLACE DISHWASHER WITH INVERTER DIRECT DRIVE DFB532FP ಇ.ಎಮ್.ಐ ₹2,999
LG 28ಲೀ ಕನ್‌ವೆಂಕ್ಷನ್ ಮೈಕ್ರೋವೇವ್ MC-2846BR ಇ.ಎಮ್.ಐ ₹1,333
WATER PURIFIERS UPTO 45% OFF
CHIMNEY UPTO 55% OFF
MIXER GRINDER UPTO 50% OFF
WATER HEATER UPTO 43% OFF
ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
GIRIAS THE CONSUMER DURABLE PEOPLE Since 1971
STORE LOCATOR
Terms & conditions apply. Finance at the sole discretion of the Finance company. Upto 26000 Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.12,500 Bajaj cash back / vouchers valid only in selected cities & valid only on Selected models & Brands. EMI offers the above products based on 9,12,18,24 & fixed emi schemes. Price after Cash Back is valid on selected Bank CC & DB cards EMI Purchase only. Exchange offer valid on MRP and Product as to be in good working condition. Free smart watch valid on 20000 & above Purchase on select models & brands.
148 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PROPERTY CORNER

REAL ESTATE SELLING

Sites

Arkavathi Layout

ARKAVATHI LAYOUT Site For Sale 55x100 Both-Sides Road Adjacent to BDA Layout In Good Location Call: 86602-20048 76769-00174

Banashankari

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80, Buying/ Selling, Immediate Settlement. SHIVARAJU: 9845390290, 7676547557.

SITE FOR SALE Banshankari 6th Stage 11 Block DC Conversation 30×40 East Facing, price 8,500 Contact. 9035699974

Electronic City

KHB SITE 45x40, 20x30 Sale at Suryanagar Phase 3, Near Chandapura, Attible Road. Call 9066865343

Whitefield

30X 40 site in Gated community at Chikkathirupathi 15 Lakhs. SBI approved. Call 7022206007.

Magadi Road

35X30 CORNER Revenue Site Sale 40ft Road Opposite Podar International School Magadi Road Contact: 9731652042

30X45 WF 40ft Road BEL Layout 1st Stage Magadi Road Near East West College 11000/-: 9916826976

Nagarabhavi

50X80 EAST FACING CORNER SITE SALE Nagarabhavi 2nd Stage, Near Swathi Hotel. Genuine Buyers Call: 9964358675.

AVAILABLE 30X40 Site D Group West Facing BDA Katha Sale Nagarabhavi Genuine Buyers Contact: 9743381719

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

RAJARAJESHWARI NAGAR BEML Layout, 5th Stage,40x60, S/F 40ft Road Owner Meeting: Contact 9844216344.

IDEA HOMES, Rajarajeswari Nagar, 1800 Sft. Site (East) Near Main Road. Vasavi: 9900522163

Vishweshwariah Layout

"VISVESHWARAIAH 1ST-BLOCK 40x60 North Facing Site, Near Shirke and 100 Feet Ring Road. 9845268611/ 8722706156"

BDA SITE for Sale in 40x60 East Facing, 2nd Block Visvesvaraya 60ft Road Call: 9980433004

VISHWESHWARAIAH LAYOUT 6th Block BDA 50x80 EF 60ft Road Near 100ft Road Good Location: 9980860138

BDA SITE for Sale SMVL, 1st Block, 30x40 South Facing Fully Built- Up Good Location: 8217392686

VISHVESWARAIAH LAYOUT 1st Block, opp 60ft road 40x60 East-Facing site.Contact: SREENIDHI PROPERTYJUNCTION. 9886634578/ 9742681666

"VISHVESHWARAIAH LAYOUT 50x80 East 60 feet Road 100% Vastu,30x40 East 40 feet Road. 7022218837"

Yelahanka

DC CONVERSATION SITE SALE READY-TO CONSTRUCT YALAHANKA JB KAVAL 20X40, 30X40, 40X60 CONTACT: 6366232222 6366242222

Mandya

40X60 NORTH Mandya MODA Site Sale Vivekananda Nagar "A" Block #2703 Rs. 3200/- Negotiable: 9731652042

Sadashiva Nagar

40X60 EAST Face, Sadashiva Nagar, 30x35 Commercial Basavanagudi, for SALE. Agent's Welcome: CONTACT: 8618373754

Kempegowda Layout

KEMPEGOWDA LAYOUT, BDA COMMERCIAL/ RESIDENTIAL SITE FOR SALE 30X40, 40X60, 50X80 CONTACT KUMAR: 9945119449

"KEMPEGOWDA LAYOUT 9th Block B-Sector 20x30 North, 1st Block L-Sector 20x30 East, 30x40 North. 9845532670"

House

Banashankari

SALE 20X30, 30X40 Thripex House's BSK 6th Stage, J.P.Nagar 8th Phase, Anjanapura Fully Furnished Granit Flooring Call:8722777999 9449812176

BTM Layout

BTM BANK OFFICERS Layout, Opposite Metro Station, 100 Feet Ring Road Building 40x60, 27,500/-Sft. 9480255422.

Kengeri

HOUSE FOR SALE 2 BHK, 4 Floors, 1130 sq. ft. Estate facing, A Khata, 2.20 Crores, K.S. Town, Bande Mutt, Arunachalam Layout, Bangalore. 9731751079

Nagarabhavi

'D'GROUP LAYOUT Commercial Rental Income Building 30x40 NorthFacing 4Floors Brand New 60Ft Road 3.4cr Negotiable-9148514646

Rajajinagar

SALE: TWO FLOOR HOUSE 2 & 3 BHK 2500 SQFT Rs. 1CR 82 LAKHS: 9019394110

Vidyaranyapura

SALE:5BHK, SPACIOUS DUPLEX HOUSE, CORNER OPPOSITE PARK, 40x60 VIDYARANYAPURA HMT LAYOUT, WHATSAPP MESSAGE 9980944343

Flat

J P Nagar

SALE OF building on 50x80 BDA site with 6 flats & 1 pent house in JP Nagar, Dollars layout, B,lore. 7676858184

Malleshwaram

MALLESWARAM 2BHK Flat. North facing, 988sft. First floor, Lift,Carpark. 1.25CR. (Negotiable). 9845243757

General

South

AVAILABLE/ WANTED 30x40 30x50,40x60,80x50- Residential Commercial Sites PG- Buildings Basavanagudi Jayanagar J.P.Nagar Chamarajpet Girinagar Hanumanthnagar Kanakapura/ Bannnarghatta Road For RENT/LEASE/Sale 2-3-4-5 BHK Houses/Flats/ Office Space/Godown Spaces Call-9900399006

Residential/ Commercial

Nagarabhavi

SELLING SPACIOUS 3B4B home with home theatre, gym, basement, 3 car parking and space for 4 motorcycles. 1710 sqft. Your dream home awaits. Contact- 91-9880315695

ANJANAPURA, BANASHANKARI 6th Stage, JP Nagar 8th/ 9th Phase, Narayan Nagar. Wanted BDA Sites: 9845298419

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI, 9900268073, 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

INDUSTRIAL RCC Building for Rent 6000 sft basement & Ground floor Nadakerappa Industrial Estate, Hegganahalli, Peenya. Ph: 8880004847

Flats

AVAILABLE APARTMENT 3 BHK furnished spacious flat Mysore Road for lease RS. 30L Ph: 9738223432.



Kanakapura Road

DUPLEX HOUSE 3BHK, SEMI FURNISHED READY TO OCCUPY 2400SFT FACING NORTH, KONANAKUNTE 1.60CRORE 9916691982 9343704220

Mysore

HOUSE FOR SALE 40X70, 4BHK Near JP Nagar, Ring Road Srirampura, Mysore.Rs:140 lakhs Contact:93422 88281

Uttarahalli

3/4 BHK New Luxurious Flats Sale, Fully Furnished, Italian Marble, Cauvery, Security, Car-parking. 70L/90L. 9844394444, 9945224058.

Agricultural Land

Hoskote

SALE: 6-ACRES 18-Guntas of agricultural land in Umamlu village, Jadigenahalli Hobli, Hoskote Taluk, Bangalore Rural District. Contact- 9972646572

Commercial Land

Mysore

"MYSORE,SCHOOL WITH 3.06 acre own Commercial converted Land in yellow zone,& can-be converted-to residential Layout,& Agricultural Land Upto 9 acres very close-to Ring Road. Only Genuine buyers Call. "Sri Ganesh Realtors" 9845286505

Villas/Bunglows

Sadashiva Nagar

PRIME RESIDENTIAL VACANT PLOT 45X60 ACROSS SADASHIVANAGAR SWIMMING POOL SOUTH-FACE CONTACT OWNER 9844018823

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

REAL ESTATE BUYING

Sites

Bannerghatta Road

WANTED 30X40 in Nisarga Layout- JIGINI for Retired Central Govt. Employee. Pure Vegetarians. Only White. 98450-19187. Brokers Excuse

Anjanapura

WANTED BDA sites Anjanapura, Banashankari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118; 9449060605; 7338328728.

RENTAL PROPERTIES

Accommodation Available

Commercial

AVAILABLE FOR RENT-prime 2400sft.`Land at Basaveshwar Nagar Bangalore,on the Main`Road. Build-to-Suit opportunity with approx.`5000sft Contact: apexventures9@ gmail.com

OFFICE FOR Rent 33x12 Sqft, Ground Floor with Furniture Near Anupama Theater, Navayuga Hotel Contact: 7019087616/ 7019123018

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing Materials

BUILDING SOLUTIONS WATERPROOFING ROOF,TANK, SKYLIGHT, BATHROOM, HOUSE PAINTING, FABRICATION, CARPENTRY and EPOXY COATING. Macbond.9886297762

JOB OPPORTUNITIES

Cook

WANTED BRAHAMIN Cook Lady/gent Part/Full Time for Brahamin family. J.P.Nagar 2nd Phase: 9845042249/ 9704288388

Engg/ Production Technical

REQUIRED EXPERIENCED CIVIL ENGINEERS for Reputed Construction Co. Contact: 94490-53904 Mail: kmc185km@gmail.com

General

BUS DRIVER: For Educational Institution at Nagarabhavi/ Vishweshwariah Layout. Attractive Salary. Food & Accommodation provided. Mobile: 9008542044. Apply: info@mccn.in; mountcarmelcollegeof nursing@gmail.com;

AN EX-AUDITOR and Tax Practitioner's office requires a Lady Personal Assistant, having computer knowledge. Contact with Bio-Data:- 9448175385.

WANTED HELPERS Lady/ Gents, SSLC, PUC, Diploma, English Typing, Stereo Art Line Rajajinagar, Bangalore. 9845149431.

Manager

WANTED MARKETING Manager for Educational Services. Contact: 9886021470



Security & Detectives

URGENTLY REQUIRED The U/M Candidates for reputed Security Guard Providing Company. 1. AGM (SALES and OPERATION), 2. SECURITY FIELD OFFICER. Experience five+ years. Salary no bar for eligible candidate, Interested Contact: 84848-23167/ 98226-58553/ Send resume: careers@Perfectprotectionindia.com

Teachers/ Professors

WANTED URGENTLY Full-Time Lecturers in English, Hindi, Computer Science, & Political Science Candidates with P.G, & B.Ed, Preferably with 2 Years of Experience, can apply to the Secretary Vidyavahini PU College, Anandanagar, Near Hebbal, Bangalore-24. Email: vvpucollege @gmail.com PH:9606516854 080-23433507

WANTED EXPERIENCED and Qualified Teachers to Teach High School Social Studies, Science and Physical Education (Gents). Contact PRINCIPAL-S.D.A. High School. Phone: 9845606243 e-mail.sdapucollege@gmail.com

MODERN PUBLIC ENGLISH SCHOOL, Ganganagar, Bangalore-32 Requires Experienced Qualified ENGLISH TEACHERS With B.A.B.Ed. Send CV: mpes.ganganagar@gmail.com Mobile: 7899296839

WANTED LECTURERS in English, Computer Science, Commerce and Biology for Vidyavana PU College, Tirumalashettyhalli Cross, Bengaluru- 560067. 9663389388

Marketing & Sales

CRESCENTS REALTORS & Interiors looking for female Sales Coordinator office manyata gate- 5, candidate must know good English & Excel call: 8088887878.

AUTOMOTIVE

Four Wheelers Selling

Maruti

SALE .MARUTI super carry reefer vehicle. With South Korean make Dongin refrigeration unit fitted in brand new condition.. very low usage. Bangalore. Mobile: 9886972374/ 99802 83865

MATRIMONIAL

Brides Wanted

Brahmin

BRIDE WANTED
Vegetarian / Brahman/ Lingayataradhya family bride No age bar. To living alone/ Ex Auditor/ Government Tax practioner, Monthly income 30,000/-. Rest all matter free to discuss. Contact directly: 9448175385

EDUCATIONAL

Diploma Courses

JNANA JYOTHI YOGA STUDY CENTRE Mahalakshmi Layout (Affiliated to Karnataka Sanskrit University) Admission Open- Courses- Certificate/ Diploma/ PG Diploma in Yoga. Last Date 15-11-2023, with fine 20.11.2023. 9663663637/ 9008557979/ 7019356168

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

PRIVATE LOAN 3cr to 300cr without income proof at 6% yearly. Property to be in good location. Low Cibil NPA also done. nriprivatefinance@gmail.com what'sapp +971527753407

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007



ಮೇಖ್ರಿ ವೃತ್ತದಲ್ಲಿ ಪಾದಚಾರಿಗಳ ಗೋಳು • ಮನವಿ ನೀಡಿದರೂ ಸ್ಪಂದಿಸದ ಬಿಬಿಎಂಪಿ ಆಡಳಿತ

ಸ್ಕೈವಾಕ್ ಅಸುರಕ್ಷಿತ; ಕೆಟ್ಟು ನಿಂತ ಲಿಫ್ಟ್

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕೆಟ್ಟು ನಿಂತು 6 ತಿಂಗಳಾದರೂ ದುರಸ್ತಿಯಾಗದ ಲಿಫ್ಟ್. ಮಾರ್ಗದುದ್ದಕ್ಕೂ ಅಪಾಯಕ್ಕೆ ಆಹ್ವಾನ ನೀಡುವ ಜಾಗಗಳು. ಸಾಲುಗಟ್ಟಿ ಸಂಚರಿಸುವ ವಾಹನಗಳನ್ನು ಮೇಲಿಂದ ನೋಡಿ ತಲೆ ಸುತ್ತಿ ಬೀಳುವ ಭಯದಲ್ಲಿ ಸಂಚರಿಸುವ ವೃದ್ಧರು. ಅವ್ಯವಸ್ಥೆಯಿಂದಾಗಿ ಒಂದು ತುದಿಯಿಂದ ಮತ್ತೊಂದು ತುದಿಗೆ ಆತಂಕದಲ್ಲಿ ಸಂಚರಿಸುವ ಶಾಲಾ ಮಕ್ಕಳು ಹಾಗೂ ಶಿಕ್ಷಕರು...

ಇದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಲ್ಲಿರುವ ಸ್ಕೈವಾಕ್ ಸ್ಥಿತಿ. ಅತಿಹೆಚ್ಚು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ನಿತ್ಯವೂ ದಟ್ಟಣೆ ಸಾಮಾನ್ಯ. ವಾಹನಗಳ ನಡುವೆ ನುಸುಳಿಕೊಂಡು ಒಂದು ಬದಿಯಿಂದ ಮತ್ತೊಂದು ಬದಿಗೆ ಪಾದಚಾರಿಗಳು ಸಂಚರಿಸುವ ಸಂದರ್ಭದಲ್ಲಿ ಅಪಘಾತಗಳು ಉಂಟಾಗಿರುವ ಪ್ರಕರಣಗಳೂ ದಾಖಲಾಗಿವೆ.

ಇದೇ ಕಾರಣಕ್ಕೆ ಪಾದಚಾರಿಗಳ ಅನುಕೂಲಕ್ಕಾಗಿ ಮೇಖ್ರಿ ವೃತ್ತದಲ್ಲಿ ಸ್ಕೈವಾಕ್ ನಿರ್ಮಿಸಲಾಗಿದೆ. ನಿರ್ವಹಣೆ ಕೊರತೆ ಹಾಗೂ ಅಸುರಕ್ಷಿತ ಕ್ರಮಗಳಿಂದಾಗಿ ಭಯದಲ್ಲಿಯೇ ಜನರು ಸ್ಕೈವಾಕ್ ಬಳಸುತ್ತಿದ್ದಾರೆ.

ವಾಯುಸೇನೆ ಕಮಾಂಡೊ ತರಬೇತಿ ಕೇಂದ್ರಕ್ಕೆ ಹೊಂದಿಕೊಂಡಂತೆ ಬಸ್ ತಂಗುದಾಣ (ಆರ್.ಟಿ.ನಗರದ ಗಂಗಾನಗರ ಬಳಿಯ ಅಶ್ವತ್ಥನಗರ) ನಿರ್ಮಿಸಲಾಗಿದೆ. ನಗರದಿಂದ ಹೆಬ್ಬಾಳ ಹಾಗೂ ವಿಮಾನ ನಿಲ್ದಾಣದತ್ತ ಹೋಗುವ ಬಸ್‌ಗಳು ಇದೇ ತಂಗುದಾಣಕ್ಕೆ ಬಂದು ಮುಂದಕ್ಕೆ ಸಾಗುತ್ತದೆ. ಅದೇ ರೀತಿ ಹೆಬ್ಬಾಳ ಹಾಗೂ ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಬಸ್‌ಗಳು, ಎದುರು ಬದಿಯ ರಸ್ತೆಯಲ್ಲಿರುವ ಬಸ್ ತಂಗುದಾಣದ ಮೂಲಕ ಸಂಚರಿಸುತ್ತವೆ.

ಎರಡು ನಿಲ್ದಾಣಗಳಿಗೆ ಹಾಗೂ ಅಕ್ಕ–ಪಕ್ಕದ ಪ್ರದೇಶಗಳಿಗೆ ಸಂಚರಿಸಲು ಪಾದಚಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಿಬಿಎಂಪಿ ವತಿಯಿಂದ 5.5 ಮೀಟರ್ ಎತ್ತರದ ಸ್ಕೈವಾಕ್ ನಿರ್ಮಿಸಿ, 2017ರಲ್ಲಿ ಜನರ ಸೇವೆಗೆ ಮುಕ್ತಗೊಳಿಸಲಾಗಿದೆ. ಕೇಂದ್ರೀಯ ವಿದ್ಯಾಲಯ, ಜಿಆರ್‌ವಿ ಕಾಲೇಜ್, ಸಿಬಿಐ ಕಚೇರಿ, ಜಿಎಸ್‌ಟಿ ಕಮಿಷನರ್ ಕಚೇರಿ, ವಾಯುಪಡೆ ಕಮಾಂಡೊ ತರಬೇತಿ ಕೇಂದ್ರ ಹಾಗೂ ಇತರೆ ಪ್ರಮುಖ ಸ್ಥಳಗಳು ಈ ಸ್ಕೈವಾಕ್‌ನ ಅಕ್ಕ–ಪಕ್ಕದಲ್ಲಿವೆ.


'ವಿಪರೀತ ದಟ್ಟಣೆ ಇರುವ ಬಳ್ಳಾರಿ ರಸ್ತೆಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡಿರುವುದು ಪಾದಚಾರಿಗಳಿಗೆ ಹೆಚ್ಚು ಅನುಕೂಲವಾಗಿದೆ. ಆದರೆ, ನಿರ್ವಹಣೆ ಇಲ್ಲದಿದ್ದರಿಂದ ಸ್ಕೈವಾಕ್ ಬಳಸಲು ಜನರು ಹಿಂದೇಟು ಹಾಕುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ಆರ್.ಲಕ್ಷ್ಮಿ ತಿಳಿಸಿದರು.

'ನಿತ್ಯವೂ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುತ್ತೇನೆ. ಮೇಖ್ರಿ ವೃತ್ತದಲ್ಲಿ ರಸ್ತೆ ದಾಟಲು ಸ್ಕೈವಾಕ್ ಬಳಸುತ್ತೇನೆ. ಆರಂಭದಲ್ಲಿ ಸ್ಕೈವಾಕ್ ನಿರ್ವಹಣೆ ಚೆನ್ನಾಗಿತ್ತು. ಇತ್ತೀಚಿನ ಕೆಲ ತಿಂಗಳಿನಿಂದ ಯಾರೂ ನಿರ್ವಹಣೆ ಮಾಡುತ್ತಿಲ್ಲ. ಸ್ಕೈವಾಕ್ ಮೇಲೆ ನಮೂದಿಸಿರುವ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೂ ಸ್ಪಂದನೆ ಸಿಗುತ್ತಿಲ್ಲ' ಎಂದು ಅವರು ದೂರಿದರು.

ಲಿಫ್ಟ್ ಕೆಟ್ಟಿದ್ದರಿಂದ ವೃದ್ಧರಿಗೆ ತೊಂದರೆ: 'ಸ್ಕೈವಾಕ್‌ನ ಎರಡೂ ಬದಿಯ ಲಿಫ್ಟ್‌ಗಳು ಕೆಟ್ಟು ಆರು ತಿಂಗಳಾಗಿದೆ. 5.5 ಮೀಟರ್ ಎತ್ತರದ ಸ್ಕೈವಾಕ್ ಏರಿ, ನಂತರ ರಸ್ತೆಗೆ ಇಳಿದು ಹೋಗಲು ವೃದ್ಧರು ಕಷ್ಟಪಡುತ್ತಿದ್ದಾರೆ. ಹಲವರು, ಸ್ಕೈವಾಕ್ ಇಳಿದ ಕೂಡಲೇ ರಸ್ತೆ ಬದಿಯಲ್ಲಿ ಕುಳಿತು ವಿಶ್ರಾಂತಿ ಪಡೆದು ಮುಂದಕ್ಕೆ ಹೋಗುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ರಾಹುಲ್ ಕುಮಾರ್ ಹೇಳಿದರು.

'ಲಿಫ್ಟ್ ಸರಿಪಡಿಸುವಂತೆ ಸ್ಥಳೀಯರೆಲ್ಲರೂ ಸೇರಿ ಬಿಬಿಎಂಪಿಗೆ ದೂರು ನೀಡಿದ್ದೇವೆ. ಆದರೆ, ಇದುವರೆಗೂ ಲಿಫ್ಟ್ ಸರಿಪಡಿಸಿಲ್ಲ. ಅಧಿಕಾರಿಗಳು ತುರ್ತಾಗಿ ಲಿಫ್ಟ್ ದುರಸ್ತಿ ಮಾಡಬೇಕು' ಎಂದು ಅವರು ಆಗ್ರಹಿಸಿದರು.

ವೃದ್ಧೆ ಲಲಿತಾ, 'ಕೆಲಸ ನಿಮಿತ್ತ ತಿಂಗಳಿಗೊಮ್ಮೆ ಮೇಖ್ರಿ ವೃತ್ತಕ್ಕೆ ಬಂದು ಹೋಗುತ್ತೇನೆ. ಈ ವೇಳೆ ಸ್ಕೈವಾಕ್ ಬಳಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಲಿಫ್ಟ್ ಇಲ್ಲ. ಹತ್ತಿ ಇಳಿಯಲು ಕಷ್ಟವಾಗುತ್ತಿದೆ' ಎಂದರು.



ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳು ಹಾಗೂ ಸ್ಕೈವಾಕ್ ಮೆಟ್ಟಿಲು ಬಳಿ ಕೆಟ್ಟಿರುವ ಲಿಫ್ಟ್ ಬಾಗಿಲು ಮುಚ್ಚಿರುವುದು



ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಲ್ಲಿರುವ ಸ್ಕೈವಾಕ್ ಇಳಿಯುತ್ತಿರುವ ವೃದ್ಧರು
– ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

ರಾಜಧಾನಿ ಜನರ ಧ್ವನಿ

'ಸ್ಕೈವಾಕ್ ಭದ್ರತೆಗೆ ಸಿಬ್ಬಂದಿ'

ಸ್ಕೈವಾಕ್‌ನ ಸಮರ್ಪಕ ಬಳಕೆ ಬಗ್ಗೆ ತಿಳಿಹೇಳಲು ಹಾಗೂ ತುರ್ತು ಸಂದರ್ಭದಲ್ಲಿ ಸಹಾಯಕ್ಕೆಂದು ಇಬ್ಬರು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ರಸ್ತೆಯ ಎರಡೂ ಬದಿಯಲ್ಲಿ ನಿಲ್ಲುವ ಸಿಬ್ಬಂದಿ, ಸ್ಕೈವಾಕ್‌ನಲ್ಲಿ ಜನರು ಸುರಕ್ಷಿತವಾಗಿ ಸಂಚರಿಸುವಂತೆ ನೋಡಿಕೊಳ್ಳುತ್ತಿದ್ದಾರೆ.

'ಸ್ಕೈವಾಕ್‌ನಲ್ಲಿ ಯಾರಾದರೂ ಸುಖಾಸುಮ್ಮನೇ ನಿಂತಿದ್ದರೆ, ಓಡಾಡುತ್ತಿದ್ದರೆ ಹಾಗೂ ಆಟವಾಡುತ್ತಿದ್ದರೆ ಅವರನ್ನು ಸ್ಥಳದಿಂದ ಕಳುಹಿಸುತ್ತೇವೆ. ಜೊತೆಗೆ, ನಿತ್ಯವೂ ಸ್ಕೈವಾಕ್ ಸ್ವಚ್ಛಗೊಳಿಸುತ್ತೇವೆ' ಎಂದು ಸಿಬ್ಬಂದಿ ಹೇಳಿದರು.

'ಎರಡೂ ಬದಿಯನ್ನೂ ಹೊದಿಕೆಯಿಂದ ಮುಚ್ಚಿ'

'ಸ್ಕೈವಾಕ್ ಕೆಳಗಿನ ರಸ್ತೆಯಲ್ಲಿ ಪ್ರತಿ ಸಮಯದಲ್ಲೂ ವಾಹನಗಳ ಸಾಲು ಇರುತ್ತದೆ. ಸ್ಕೈವಾಕ್‌ನಲ್ಲಿ ನಡೆದುಕೊಂಡು ಹೋಗುವ ಕೆಲವರು, ವಾಹನಗಳ ಸಾಲು ನೋಡಿ ಹೆದರಿ ತಲೆ ಸುತ್ತಿ ಬೀಳುವ ಸಂಭವ ಹೆಚ್ಚಿದೆ. ಇದೇ ಕಾರಣಕ್ಕೆ ಸ್ಕೈವಾಕ್‌ನ ಎರಡೂ ಬದಿಯನ್ನು ಹೊದಿಕೆಯಿಂದ ಮುಚ್ಚಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

'ಸ್ಕೈವಾಕ್ ಮೇಲೆ ಮಕ್ಕಳು ಹೆಚ್ಚು ಓಡಾಡುತ್ತಾರೆ. ಕೆಲವರಂತೂ ಅಲ್ಲಿಯೇ ಆಟವಾಡುತ್ತಿರುತ್ತಾರೆ. ಸ್ಕೈವಾಕ್‌ನ ಎರಡೂ ಬದಿಯಲ್ಲೂ ತೆರೆದ ಸ್ಥಳಗಳು ಹೆಚ್ಚಿವೆ. ಅದರಿಂದ ಮಕ್ಕಳು ಆಯತಪ್ಪಿ ರಸ್ತೆಗೆ ಬೀಳುವ ಸಾಧ್ಯತೆ ಇದೆ. ತೆರೆದ ಸ್ಥಳಗಳನ್ನೂ ಸಂಪೂರ್ಣವಾಗಿ ಬಂದ್ ಮಾಡಲು ಆದ್ಯತೆ ನೀಡಬೇಕು' ಎಂದು ಒತ್ತಾಯಿಸಿದರು.


ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ
9606038256

ಲಿಫ್ಟ್ ದುರಸ್ತಿ ಮಾಡಿ



ನಿತ್ಯವೂ ಸ್ಕೈವಾಕ್ ಬಳಸುತ್ತೇನೆ. ಲಿಫ್ಟ್ ಕೆಟ್ಟಿದ್ದರಿಂದ ತುಂಬಾ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಲಿಫ್ಟ್ ದುರಸ್ತಿ ಮಾಡಬೇಕು. ವೃದ್ಧರು, ಶಾಲಾ ಮಕ್ಕಳಿಗೆ ಮತ್ತಷ್ಟು ಅನುಕೂಲ ಆಗುತ್ತದೆ
ಪ್ರಿಯಾ ಪೊನ್ನಂಮುರುಗನ್, ಶಿಕ್ಷಕಿ

ಬಲೆಯನ್ನಾದರೂ ಅಳವಡಿಸಿ



ಸ್ಕೈವಾಕ್‌ನಲ್ಲಿ ಮಕ್ಕಳು ಹೆಚ್ಚಾಗಿ ಓಡಾಡುತ್ತಾರೆ. ಎರಡೂ ಬದಿಯೂ ಕಬ್ಬಿಣದ ರಾಡ್‌ಗಳ ಮಧ್ಯೆ ಹೆಚ್ಚಿನ ಅಂತರವಿದೆ. ಈ ಜಾಗದಲ್ಲಿ ಮಕ್ಕಳು ಬೀಳುವ ಅಪಾಯವಿದೆ. ಸುತ್ತಲೂ ಬಲೆಯನ್ನಾದರೂ ಅಳವಡಿಸಬೇಕು
ರವಿ, ಸ್ಥಳೀಯ ನಿವಾಸಿ

ನಾಯಿ ಕಚ್ಚಿದ್ದ ಪ್ರಕರಣ: ನಟ ದರ್ಶನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಹಿಳಾ ವಕೀಲರೊಬ್ಬರಿಗೆ ಶ್ವಾನ ಕಚ್ಚಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಟ ದರ್ಶನ್ ಅವರಿಗೆ ರಾಜರಾಜೇಶ್ವರಿನಗರ ಠಾಣೆ ಪೊಲೀಸರು ನೋಟಿಸ್ ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

'ದರ್ಶನ್ ಮನೆಯ ಸಾಕು ನಾಯಿ, ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಅಮಿತಾ ಜಿಂದಾಲ್ ಅವರಿಗೆ ಕಚ್ಚಿತ್ತು. ಅ. 28ರಂದು ನಡೆದಿದ್ದ ಘಟನೆ ಸಂಬಂಧ ಅಮಿತಾ ಅವರು ದೂರು ನೀಡಿದ್ದರು. ದರ್ಶನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದ ತನಿಖೆ ನಡೆಸಲಾಗುತ್ತಿದ್ದು, ಈಗಾಗಲೇ ಮಹಜರು ಪ್ರಕ್ರಿಯೆ ಮುಗಿಸಲಾಗಿದೆ. ದರ್ಶನ್ ಅವರ ಮನೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ನಾಯಿ ಕಚ್ಚಿದ್ದ ದೃಶ್ಯ ಸೆರೆಯಾಗಿರುವ ಅನುಮಾನವಿದೆ. ಹೀಗಾಗಿ, ಕ್ಯಾಮೆರಾದ ಡಿವಿಆರ್ ಸಮೇತ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ನಿಗದಿತ ದಿನದಂದು ದರ್ಶನ್ ವಿಚಾರಣೆಗೆ ಹಾಜರಾಗಬೇಕು. ಇಲ್ಲದಿದ್ದರೆ, ಕಾನೂನು ಅನ್ವಯ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಹಲ್ಲೆಗೆ ಪ್ರತೀಕಾರ: ರೌಡಿ ಕೊಂದಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಸಹದೇವ (32) ಕೊಲೆ ಪ್ರಕರಣದಲ್ಲಿ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ವಿನಯ್, ಧರ್ಮ, ಕಿರಣ್, ಕಿಶೋರ್, ಗಣೇಶ್, ನಿಶಾಂತ್, ಸುಹೇಬ್ ಹಾಗೂ ಅಕ್ಷಯ್ ಬಂಧಿತರು. ವಿನಯ್ ಹಾಗೂ ಅಕ್ಷಯ, ಅಣ್ಣ–ತಮ್ಮ. ಎಲ್ಲರೂ ಸೇರಿಕೊಂಡು ನ. 8ರಂದು ರಾತ್ರಿ ಸಹದೇವನನ್ನು ಹತ್ಯೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಗಣೇಶ ಹಬ್ಬದಂದು ಗಲಾಟೆ: 'ರೌಡಿಗಳಾದ ಕಳ್ಳ ನವೀನ್ ಹಾಗೂ ಸಹದೇವ, ಒಟ್ಟಿಗೆ ಸುತ್ತಾಡುತ್ತಿದ್ದರು. ಗಣೇಶ ಹಬ್ಬದ ದಿನದಂದು ಕೋಣನಕುಂಟೆ ಬಳಿ ಹೋಗಿದ್ದರು. ಇದೇ ಸಂದರ್ಭದಲ್ಲಿ ಆರೋಪಿ ವಿನಯ್ ಹಾಗೂ ಅಕ್ಷಯ್ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದರು. ಈ ಸಂಬಂಧ ಪ್ರಕರಣವೂ ದಾಖಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಲ್ಲೆಯಿಂದಾಗಿ ವಿನಯ್ ಹಾಗೂ ಅಕ್ಷಯ್, ಗಾಯಗೊಂಡಿದ್ದರು. ಹಲ್ಲೆಗೆ ಪ್ರತೀಕಾರ ತೀರಿಸಿಕೊಳ್ಳಬೇಕೆಂದು ಸ್ನೇಹಿತರ ಜೊತೆ ಮಾತನಾಡಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

ಕಳ್ಳ ನವೀನ್ ಕೊಲ್ಲಲು ಸಜ್ಜಾಗಿದ್ದರು: 'ವಿನಯ್ ಹಾಗೂ ಅಕ್ಷಯ್‌ಗೆ ಕಳ್ಳ ನವೀನ್ ಹೆಚ್ಚು ಹೊಡೆದಿದ್ದ. ಹೀಗಾಗಿ, ನವೀನ್‌ನನ್ನು ಕೊಲ್ಲಲು ಆರೋಪಿಗಳು ಸಜ್ಜಾಗಿದ್ದರು. ಪುಟ್ಟೇನಹಳ್ಳಿ ಬಳಿ ನವೀನ್ ಇರುವ ಮಾಹಿತಿ ತಿಳಿದು ನ. 8ರಂದು ರಾತ್ರಿ ಸ್ಥಳಕ್ಕೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನವೀನ್ ಇರಲಿಲ್ಲ. ಅದೇ ಸ್ಥಳದಲ್ಲಿ ಸಹದೇವ ಇದ್ದ. 'ನವೀನ್ ಎಲ್ಲಿ' ಎಂದು ಆರೋಪಿಗಳು ಕೇಳಿದ್ದರು. 'ಏಕೆ ಮೊನ್ನೆ ಹೊಡೆದಿದ್ದು ಸಾಕಾಗಿಲ್ಲವೇ? ಸ್ಥಳದಿಂದ ಹೊರಟು ಹೋಗದಿದ್ದರೆ, ಒಂದು ಗತಿ ಕಾಣಿಸುತ್ತೇನೆ' ಎಂದು ಸಹದೇವ ಬೆದರಿಸಿದ್ದ. ಸಿಟ್ಟಾಗಿದ್ದ ವಿನಯ್, ಬೊಂಡಾ ಅಂಗಡಿಯಲ್ಲಿದ್ದ ಸೌಟ್‌ನಿಂದ ಸಹದೇವಗೆ ಹೊಡೆದಿದ್ದ. ಗಲಾಟೆ ಶುರುವಾಗಿತ್ತು. ಎಲ್ಲ ಆರೋಪಿಗಳು, ಮಾರಕಾಸ್ತ್ರಗಳಿಂದ ಸಹದೇವಗೆ ಹೊಡೆದು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಮೂಲಗಳು ಹೇಳಿವೆ.

'15 ವರ್ಷ ವನ್ಯಜೀವಿ ಬೇಟೆ ಅವ್ಯಾಹತ'

'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಸಮಾರಂಭದಲ್ಲಿ ಉಲ್ಲಾಸ್ ಕಾರಂತ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 1945ರಿಂದ 1960ರ ಅವಧಿಯಲ್ಲಿ ವನ್ಯಜೀವಿಗಳನ್ನು ಅವ್ಯಾಹತವಾಗಿ ಬೇಟೆ ಆಡಲಾಗಿತ್ತು. ಬೇಟೆಗಾರರಿಗೆ ಅದು ಪರ್ವಕಾಲ ಎನಿಸಿತ್ತು' ಎಂದು ಸೈನ್ಸ್ ಏಷ್ಯಾದ ನಿರ್ದೇಶಕ ಉಲ್ಲಾಸ್ ಕಾರಂತ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಎಲ್.ಜಿ.ಮೀರಾ ಅನುವಾದಿಸಿದ ಡೊನಾಲ್ಡ್ ಆ್ಯಂಡರ್ಸನ್ ಅವರ ನೆನಪುಗಳ 'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಯಾರಲ್ಲೂ ಆಸಕ್ತಿಯೇ ಇರಲಿಲ್ಲ. 1960ರ ನಂತರವಷ್ಟೇ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಆಸಕ್ತಿ ಬೆಳೆಯಿತು. ಇಂದಿರಾ ಗಾಂಧಿ ಅವರು ಜಾರಿಗೆ ತಂದ ಕಾನೂನುಗಳು, ಸಲೀಂ ಅಲಿ ಪ್ರಭಾವ, ಎಂ.ಕೃಷ್ಣನ್ ಅವರ ಬರವಣಿಗೆಯಿಂದ ಭಾರತೀಯ ವನ್ಯಜೀವಿ ಸಂರಕ್ಷಣಾ ಚಳವಳಿ ಆರಂಭಗೊಂಡಿತ್ತು' ಎಂದು ಹೇಳಿದರು.

'ಕಾಡಿನ ನಿವಾಸಿಗಳು ಪ್ರಾಣಿಗಳನ್ನು ಬೇಟೆ ಆಡುವುದಿಲ್ಲ ಎಂದು ವಾದಿಸುವವರು ಇದ್ದಾರೆ. ಆದರೆ, ಈ ಪುಸ್ತಕ ಓದಿದರೆ ಹೇಗೆ ಶಿಕಾರಿ ನಡೆಸುತ್ತಿದ್ದರು ಎಂಬುದು ತಿಳಿಯಲಿದೆ' ಎಂದರು.

'ದಕ್ಷಿಣ ಕನ್ನಡ, ಕೊಡಗಿನಲ್ಲಿ ಬೇಟೆ ಹಾವಳಿ ವಿಪರೀತವಾಗಿತ್ತು. ಡೊನಾಲ್ಡ್ ಆ್ಯಂಡರ್ಸನ್, ಆಗಸ್ಟಸ್, ವಿದ್ಯಾಚರಣ್ ಶುಕ್ಲ ಅವರಂತಹ ಹಲವರು ಕೊನೆಯ ಹುಲಿಯನ್ನೂ ಬಿಟ್ಟರಲಿಲ್ಲ. ಆಗ ಶಿಕಾರಿ ಕಂಪನಿಗಳೇ ಇದ್ದವು' ಎಂದರು.

'ಕೆನೆತ್ ಆ್ಯಂಡರ್ಸನ್ ಪುತ್ರ ಡೊನಾಲ್ಡ್ ಅವರು ಉತ್ತುಂಗಕ್ಕೇರಿ ಕೊನೆಗಾಲದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ರಿಚ್ಮಂಡ್ ಟೌನ್‌ನ ಮನೆಯೊಂದರಲ್ಲಿ ಮಾಹಿತಿ ಸಂಗ್ರಹಿಸಿ ಶಿಕಾರಿಯ ಬಗ್ಗೆ ಜೋಷುವಾ ಮ್ಯಾಥ್ಯೂ ಪುಸ್ತಕ ರಚಿಸಿದ್ದಾರೆ. ಜೋಷುವಾ ಅವರ ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಂತೆ ಮನವಿ ಮಾಡಿದಾಗ ಕೆಲವು ಪ್ರಕಾಶಕರು ಹಿಂದೇಟು ಹಾಕಿದ್ದರು. ಇದು ವನ್ಯಜೀವಿ ಸಂರಕ್ಷಣಾ ವಿರೋಧಿ ಪುಸ್ತಕ ಎಂದು ಹೇಳಿದ್ದರು. ವನ್ಯಜೀವಿಗಳನ್ನು ಕಗ್ಗೊಲೆ ಮಾಡಿದ್ದು ಚಾರಿತ್ರಿಕ ದಾಖಲೆ ಆಗಬೇಕು ಎಂಬ ಕಾರಣಕ್ಕೆ ಪ್ರಕಟಿಸಲು ಪ್ರಯತ್ನಿಸಿದ್ದೆ. ಕೊನೆಗೆ ಕನ್ನಡಕ್ಕೆ ಅನುವಾದಗೊಂಡಿದೆ' ಎಂದು ಹೇಳಿದರು.

ಲೇಖಕ ಕಲೀಂ ಉಲ್ಲಾ ಮಾತನಾಡಿ, 'ಡೊನಾಲ್ಡ್ ಆ್ಯಂಡರ್ಸನ್ ಅವರು ಜಾಲಹಳ್ಳಿ, ವೈಟ್ ಫೀಲ್ಡ್‌ನಲ್ಲಿ ಚಿರತೆ, ಹುಲಿಗಳನ್ನು ನಿರಂತರವಾಗಿ ಬೇಟೆಯಾಡಿದ್ದರು. ಅತಿ ಅಮಾನುಷವಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಪ್ರಾಣಿ ಸಂಪತ್ತು ಸಂರಕ್ಷಣೆ ಮಾಡಿದ ಸಾಹಸ ಈ ಕೃತಿಯಲ್ಲಿ ಇಲ್ಲ. ಬದಲಾಗಿ ಪ್ರಾಣಿಗಳನ್ನು ಕೊಲ್ಲುವ ಕಥೆ ಇಲ್ಲಿದೆ' ಎಂದು ಹೇಳಿದರು.

'ಅಹಂ, ಸಂಪರ್ಕ, ಹೆಮ್ಮೆಯಿಂದ ಬೇಟೆ ಆಡುತ್ತಿದ್ದರು. ಬದುಕಿನ ಕೊನೆಗಾಲದಲ್ಲಿ ಕೆನೆತ್ ಅವರು ತಮ್ಮ ಪುತ್ರ ಡೊನಾಲ್ಡ್‌ಗೆ ಬೇಟೆಯಾಡುವುದನ್ನು ನಿಲ್ಲಿಸುವಂತೆ ಮನವಿ ಮಾಡಿದ್ದರು. ಆ ಹೊತ್ತಿಗೆ ವನ್ಯಜೀವಿ ಸಂಪತ್ತು ನಾಶವಾಗಿತ್ತು' ಎಂದು ಬೇಸರಿಸಿದರು.



ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸೈನ್ಸ್ ಏಷ್ಯಾದ ನಿರ್ದೇಶಕ ಉಲ್ಲಾಸ್ ಕಾರಂತ್ (ಎಡದಿಂದ ಮೂರನೆಯವರು) ಅವರು 'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಪ್ರಾಧ್ಯಾಪಕ ಎಸ್‌ ತ್ಯಾಗರಾಜ್, ಮೂಲ ಲೇಖಕ ಜೋಷುವಾ ಮ್ಯಾಥ್ಯೂ, ಪರಿಸರ ತಜ್ಞ ಬಿ.ಪಿ.ಮಹೇಂದ್ರ ಕುಮಾರ್, ಲೇಖಕ ಕಲೀಂ ಉಲ್ಲಾ, ಲೇಖಕಿ ಎಲ್‌ಜಿ.ಮೀರಾ ಇದ್ದರು

ಕೃತಿ ಪರಿಚಯ
ಕೃತಿ: ಕೊನೆಯ ಬಿಳಿ ಬೇಟೆಗಾರ
ಇಂಗ್ಲಿಷ್ ನಿರೂಪಣೆ: ಜೋಷುವಾ ಮ್ಯಾಥ್ಯೂ
ಕನ್ನಡಕ್ಕೆ: ಎಲ್.ಜಿ.ಮೀರಾ
ಬೆಲೆ: ₹395
ಪುಟಗಳು: 383
ಪ್ರಕಾಶನ: ಆಕೃತಿ

ಟಿಪ್ಪರ್ ಚಕ್ರ ಹರಿದು ಪಿಯು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಶನಿವಾರ ಅಪಘಾತ ಸಂಭವಿಸಿದ್ದು, ಟಿಪ್ಪರ್ ಚಕ್ರ ತಲೆ ಮೇಲೆ ಹರಿದು ಪಿಯು ವಿದ್ಯಾರ್ಥಿ ಯೋಗದೀಪ (17) ಮೃತಪಟ್ಟಿದ್ದಾರೆ.

'ಚನ್ನರಾಯಪಟ್ಟಣದ ಯೋಗದೀಪ, ನಗರದ ಕಣ್ಣೂರಿನಲ್ಲಿ ಪೋಷಕರ ಜೊತೆ ವಾಸವಿದ್ದರು. ತಂದೆ, ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಂದೆಗೆ ಶನಿವಾರ ರಜೆ ಇತ್ತು. ಅವರು ಮನೆಯಲ್ಲಿದ್ದರು. ಶನಿವಾರ ಬೆಳಿಗ್ಗೆ ಕಾಲೇಜಿಗೆ ತೆರಳಲು ಸಿದ್ಧವಾಗಿದ್ದ ಯೋಗದೀಪ, ತಂದೆಯ ದ್ವಿಚಕ್ರ ವಾಹನ ತೆಗೆದುಕೊಂಡು ಮನೆಯಿಂದ ಹೊರಟಿದ್ದ. ಆದರೆ, ಆತನ ಬಳಿ ಚಾಲನಾ ಪರವಾನಗಿ ಇರಲಿಲ್ಲ.'

'ಕೋಗಿಲು ರಸ್ತೆಯಲ್ಲಿ ಹೊರಟಿದ್ದಾಗ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ರಸ್ತೆಯಲ್ಲಿ ಬಿದ್ದಿದ್ದ ಯೋಗದೀಪ ತಲೆ ಮೇಲೆಯೇ ಟಿಪ್ಪರ್‌ನ ಹಿಂಬದಿ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೋಷಕರ ವಿರುದ್ಧ ಕ್ರಮ: 'ಮಕ್ಕಳ ಕೈಗೆ ವಾಹನ ನೀಡುವುದು ನಿಯಮಬಾಹಿರ. ಇಂಥ ಪ್ರಕರಣಗಳಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ. ಹೀಗಾಗಿ, ಪೋಷಕರು ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ರಾಜಾಜಿನಗರ: ಕಲ್ಲು ಎತ್ತಿ ಹಾಕಿ ವ್ಯಕ್ತಿ ಕೊಲೆ

ಬೆಂಗಳೂರು: ರಾಜಾಜಿನಗರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ತಡರಾತ್ರಿ ವ್ಯಕ್ತಿಯೊಬ್ಬರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿದೆ.

'ಮೃತ ವ್ಯಕ್ತಿಯ ಹೆಸರು ಗೊತ್ತಾಗಿಲ್ಲ. 45 ವರ್ಷದಿಂದ 50 ವರ್ಷ ವಯಸ್ಸಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನವರಂಗ ವೃತ್ತ ಹಾಗೂ ಸುತ್ತಮುತ್ತಲಿನ ಪಾದಚಾರಿ ಮಾರ್ಗದಲ್ಲಿ ವ್ಯಕ್ತಿ ನಿತ್ಯವೂ ಮಲಗುತ್ತಿದ್ದರೆಂದು ಸ್ಥಳೀಯರಿಂದ ಗೊತ್ತಾಗಿದೆ. ಮಲಗಿದ್ದ ಸ್ಥಳದಲ್ಲಿಯೇ ವ್ಯಕ್ತಿ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ತನಿಖೆ ನಡೆಯುತ್ತಿದೆ' ಎಂದು ತಿಳಿಸಿವೆ.

'ನ್ಯಾಯ ನಿರ್ಣಯ ಕ್ಷೀಣಿಸುತ್ತಿದೆ'

ನೆಲಮಂಗಲ: 'ನ್ಯಾಯ ನಿರ್ಣಯಕ್ಕೆ ಅಗತ್ಯ ಪೂರಕ ವ್ಯವಸ್ಥೆ ತೃಪ್ತಿದಾಯಕವಾಗಿಲ್ಲದೇ ಇರುವುದರಿಂದ ಸಾಮಾನ್ಯರಿಗೆ ನಿರೀಕ್ಷಿತ ಮಟ್ಟದ ನ್ಯಾಯ ದಕ್ಕುತ್ತಿಲ್ಲ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ವಿಷಾದಿಸಿದರು.

ಅಮೆರಿಕದಲ್ಲಿ ಹೃದಯ ತಜ್ಞರಾಗಿರುವ ಡಾ.ಕೆ.ಎ.ಗೌಡ ಮತ್ತು ವಕೀಲ ಕೆ. ಕೇಶವಮೂರ್ತಿ ಸಹೋದರರ ಸುವರ್ಣ ಸೇವಾ ಸಂಭ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಮಾತನಾಡಿ, 'ವ್ಯಕ್ತಿಗೆ ಸಾವಿದೆ. ವ್ಯಕ್ತಿತ್ವಕ್ಕೆ ಸಾವಿಲ್ಲ, ಸಮಾಜ ಸೇವೆಯಿಂದ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ರಾಜ್ಯ ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ, ಎಂಎಲ್‌ಸಿ ಕೃಷ್ಣಪ್ಪ, ಹರ್ಷ ಸಮೂಹ ಸಂಸ್ಥೆಯ ಅಧ್ಯಕ್ಷ ಎಸ್. ಶಿವಕುಮಾರ್ ಇತರರು ಇದ್ದರು.

ಮೂವರನ್ನು ಬಂಧಿಸಿದ ಇ.ಡಿ

ನವದೆಹಲಿ(ಪಿಟಿಐ): ದೆಹಲಿ ವಕ್ಫ್ ಬೋರ್ಡ್ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರಕ್ಕೆ ನಂಟಿರುವ ಹಣ ಅಕ್ರಮ ವರ್ಗಾವಣೆ ಆರೋಪದಡಿ ಎಎಪಿ ಶಾಸಕ ಅಮಾನತ್ ಉಲ್ಲಾ ಖಾನ್ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಮೂವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಮೂವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಬಂಧಿತರ ವಿವರಗಳು ತಕ್ಷಣಕ್ಕೆ ಬಹಿರಂಗವಾಗಿಲ್ಲ ಎಂದು ಮೂಲಗಳು ಹೇಳಿವೆ.

ದೆಹಲಿಯ ಓಖ್ಲಾ ಕ್ಷೇತ್ರದ ಶಾಸಕ ಖಾನ್ ಅವರಿಗೆ ಸಂಬಂಧಿಸಿದ ಹಲವು ಜಾಗಗಳ ಮೇಲೆ ಇ.ಡಿ ಕಳೆದ ತಿಂಗಳು ದಾಳಿ ನಡೆಸಿತ್ತು.

ಯರಗೋಳ್ ಜಲಾಶಯ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

'ಕಾಂಗ್ರೆಸ್ ಸರ್ಕಾರದಲ್ಲೇ ಎತ್ತಿನಹೊಳೆ ಜಾರಿ'

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ ಜಿಲ್ಲೆ): 'ನಮ್ಮ ಸರ್ಕಾರದ ಅವಧಿಯಲ್ಲೇ ಎತ್ತಿನಹೊಳೆ ಯೋಜನೆ ಕಾಮಗಾರಿ ಸಂಪೂರ್ಣ ಮುಗಿಸಿ ಬೆಂಗಳೂರು ಗ್ರಾಮಾಂತರ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಕುಡಿಯುವ ನೀರು ಹರಿಸುತ್ತೇವೆ. ನಮ್ಮನ್ನು ಟೀಕಿಸುವವರ ಹೊಟ್ಟೆ ಉರಿಯುವಂತೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ತಾಲ್ಲೂಕಿನ ಯರಗೋಳ್ ಗ್ರಾಮದಲ್ಲಿ ಶನಿವಾರ ಕುಡಿಯುವ ನೀರಿನ ಉದ್ದೇಶದ ಯರಗೋಳ್ ಜಲಾಶಯ ಉದ್ಘಾಟಿಸಿ ಮಾತನಾಡಿದರು.

'ಈ ಯೋಜನೆಗೆ ಅನುದಾನವನ್ನು ₹23 ಸಾವಿರ ಕೋಟಿಗೆ ಹೆಚ್ಚಿಸಲಾಗಿದೆ. ಎತ್ತಿನಹೊಳೆ ಯೋಜನೆ ರೂಪಿಸಿದ್ದು ಯಾರು? ವಿಳಂಬ ಮಾಡಿದ್ದು ಯಾರು? ಯೋಜನೆಯಿಂದ ನೀರು ಬರುವುದಿಲ್ಲ ಎಂದು ಟೀಕಿಸಿದ್ದು ಯಾರು? ಕಳೆದ ಐದು ವರ್ಷಗಳ ಅವಧಿಯಲ್ಲಿ ಜಾರಿ ಆಗಲಿಲ್ಲ. ತ್ವರಿತಗತಿಯಲ್ಲಿ ಯೋಜನೆ ಜಾರಿಯಾಗಿದ್ದರೆ ಇಷ್ಟರಲ್ಲಿ ನೀರು ದೊರಕುತಿತ್ತು' ಎಂದರು.

'ಕೆ.ಸಿ.ವ್ಯಾಲಿ ಯೋಜನೆ ಜಾರಿ ಮಾಡಬಾರದು. ಅದರ ಮೂಲಕ ಜನರಿಗೆ ವಿಷ ನೀಡಲಾಗುತ್ತಿದೆ' ಎಂಬುದಾಗಿ ಎಚ್.ಡಿ.ಕುಮಾರಸ್ವಾಮಿ ಹೇಳುತ್ತಾರೆ. ಯೋಜನೆಯಿಂದ ಕೆರೆಗಳು ತುಂಬಿವೆ. ದನಕರುಗಳಿಗೆ ಮೇವು ಸಿಕ್ಕಿದೆ. ಈವರೆಗೆ ಜನ, ದನ, ಕರುಗಳು ಸತ್ತ ಉದಾಹರಣೆ ಇದೆಯೇ? ಕುಮಾರಸ್ವಾಮಿಗೆ ಜನರೇ ಉತ್ತರ ಕೊಡಬೇಕು. ಕೆ.ಸಿ.ವ್ಯಾಲಿ ಬಗ್ಗೆ ವಿಶ್ವಸಂಸ್ಥೆಯಿಂದ ನಮಗೆ ಶಹಬ್ಬಾಸ್‌ಗಿರಿ ಸಿಕ್ಕಿದೆ ಮಿಸ್ಟರ್ ಕುಮಾರಸ್ವಾಮಿ. ರಾಜಕಿಯಕ್ಕಾಗಿ ಟೀಕಿಸಬೇಡಿ' ಎಂದರು.

ಸಚಿವರಾದ ಬೈರತಿ ಸುರೇಶ್, ಕೆ.ಎಚ್.ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಕೃಷ್ಣಬೈರೇಗೌಡ, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಎಂ.ಸಿ. ಸುಧಾಕರ್ ಇತರರು ಇದ್ದರು.

ಪ್ರತಿ ಜಿಲ್ಲೆಗೆ ಮತ್ತಷ್ಟು ಬರ ಪರಿಹಾರ ನೀಡಲಾಗುವುದು. ಕುಡಿಯುವ ನೀರು, ಜಾನುವಾರು ಮೇವಿಗೆ ಎಷ್ಟು ಬೇಕಾದರೂ ಹಣ ನೀಡಲು ಸಿದ್ಧ. ಗುಳೆ ಹೋಗದಂತೆ ನೋಡಿಕೊಳ್ಳುತ್ತೇವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ



ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಯರಗೋಳ್ ಗ್ರಾಮದಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಯರಗೋಳ್ ಜಲಾಶಯ ಉದ್ಘಾಟಿಸಿದರು. ಎಂ.ಎಲ್‌ಅನಿಲ್ ಕುಮಾರ್, ಕೆ.ಎಚ್‌ಮುನಿಯಪ್ಪ, ಡಾ.ಎಚ್‌ಸಿ. ಮಹದೇವಪ್ಪ, ಎಸ್‌ಎನ್‌ ನಾರಾಯಣಸ್ವಾಮಿ, ನಸೀರ್ ಅಹ್ಮದ್, ಅಕ್ರಂ ಪಾಷ ಇದ್ದಾರೆ

ಪ್ಲಾಸ್ಟಿಕ್ ನಿರ್ಮೂಲನೆಗಿಲ್ಲ ಆಸಕ್ತಿ



ಮೈಸೂರಿನ ಸುಯೇಜ್ ಫಾರಂ ಆವರಣದಲ್ಲಿ ಪೇವರ್ ಟೈಲ್ಸ್ ಉತ್ಪಾದನೆಗಾಗಿ ಸಂಗ್ರಹಿಸಲಾಗಿರುವ ಪ್ಲಾಸ್ಟಿಕ್ ತ್ಯಾಜ್ಯ –ಪ್ರಜಾವಾಣಿ ಚಿತ್ರ / ಅನೂಪ್ ರಾಘ.ಟಿ.



1 ಕೋಟಿ ಟನ್ ಪ್ರತಿ ವರ್ಷ ಸಾಗರದ ಒಡಲು ಸೇರುತ್ತಿರುವ ಪ್ಲಾಸ್ಟಿಕ್

19 ಕೋಟಿ ಟನ್ ಏಕ ಬಳಕೆಯ ಉದ್ದೇಶಕ್ಕೆಂದೇ ಪ್ರತಿ ವರ್ಷ ಉತ್ಪಾದಿಸಲಾಗುತ್ತಿರುವ ಪ್ಲಾಸ್ಟಿಕ್

10 ಲಕ್ಷ ಪ್ಲಾಸ್ಟಿಕ್ ಮಾಲಿನ್ಯದಿಂದಾಗಿ ಪ್ರತಿ ವರ್ಷ ಸಾಯುತ್ತಿರುವ ಜಲಚರ ಜೀವಿಗಳು

18 ಕೆ.ಜಿ ಜೀವಿತಾವಧಿಯಲ್ಲಿ ಮನುಷ್ಯರ ದೇಹ ಸೇರುತ್ತಿರುವ ಪ್ಲಾಸ್ಟಿಕ್ ಅಂಶದ ಪ್ರಮಾಣ

5.3 ಕೆ.ಜಿ ಭಾರತದಲ್ಲಿ ಪ್ರತಿ ವ್ಯಕ್ತಿ ವಾರ್ಷಿಕವಾಗಿ ಬಳಕೆ ಮಾಡುತ್ತಿರುವ ಪ್ಲಾಸ್ಟಿಕ್‌ನ ಸರಾಸರಿ ಪ್ರಮಾಣ

20.9 ಕೆ.ಜಿ ಜಾಗತಿಕ ಮಟ್ಟದಲ್ಲಿ ವ್ಯಕ್ತಿಯೊಬ್ಬ ವಾರ್ಷಿಕವಾಗಿ ಬಳಕೆ ಮಾಡುತ್ತಿರುವ ಪ್ಲಾಸ್ಟಿಕ್‌ನ ಸರಾಸರಿ ಪ್ರಮಾಣ

*ಅಂಕಿ ಅಂಶಗಳ ಆಧಾರ: ಪ್ಲಾಸ್ಟಿಕ್ ಓಷಿಯನ್, ಸ್ವಿಟ್ಜರ್ಲೆಂಡ್‌ನ ಅರ್ಥ್ ಆ್ಯಕ್ಷನ್ ಸಂಶೋಧನಾ ಸಂಸ್ಥೆಯ ವರದಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

...ಒಂದನೇ ಪುಟದಿಂದ

ಪ್ಲಾಸ್ಟಿಕ್ ವಸ್ತುಗಳು ಮಣ್ಣಿನಲ್ಲಿ ಕೊಳೆಯುವುದಿಲ್ಲ. ಅವುಗಳನ್ನು ಸುಟ್ಟರೆ 'ಡಯಾಕ್ಸಿನ್' ಎಂಬ ವಿಷಪೂರಿತ ಅಂಶ ಬಿಡುಗಡೆಯಾಗುತ್ತದೆ. ಅದು ಗಾಳಿಯಲ್ಲಿ ಬೆರೆತರೆ ಉಸಿರಾಟಕ್ಕೆ ತೊಂದರೆ. ಈ ಸತ್ಯದ ಅರಿವಿದ್ದೋ ಇಲ್ಲದೆಯೋ ಪ್ಲಾಸ್ಟಿಕ್ ಉತ್ಪನ್ನಗಳನ್ನು ಮನಸೋ ಇಚ್ಛೆ ಬಳಸಲಾಗುತ್ತಿದೆ.

ಪ್ಲಾಸ್ಟಿಕ್ ತ್ಯಾಜ್ಯವು ಈಗ ಜಾಗತಿಕವಾಗಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಜಗತ್ತಿನ ಅತಿ ಎತ್ತರದ ಗಿರಿ ಶಿಖರಗಳಿಂದ ಹಿಡಿದು ಆಳ ಸಮುದ್ರದ ಒಡಲೊಳಗೂ ಸೇರಿಕೊಳ್ಳುತ್ತಿರುವ ಇದು ಜನ–ಜಾನುವಾರು ಹಾಗೂ ಸಸ್ಯ ಸಂಕುಲಕ್ಕೆ ಮಾರಕವಾಗಿದೆ. ಕಡಲ ಜೀವಿಗಳಿಗೂ ಕಂಟಕಪ್ರಾಯವಾಗಿದೆ.

'ಡಾಲ್ಫಿನ್, ತಿಮಿಂಗಿಲ ಮುಂತಾದ ದೊಡ್ಡ ಕಡಲಜೀವಿಗಳು ಆಹಾರ ನುಂಗಲು ಬಾಯಿ ತೆರೆದಾಗ ಪ್ಲಾಸ್ಟಿಕ್ ತ್ಯಾಜ್ಯ ಅವುಗಳ ಹೊಟ್ಟೆ ಸೇರುತ್ತದೆ. ನಂತರ ಹೊಟ್ಟೆ ಕಟ್ಟಿದಂತಾಗಿ ಹಸಿವಾಗುವುದಿಲ್ಲ. ಕ್ರಮೇಣ ಅವು ಆಹಾರ ಸೇವಿಸದೆ ಸಾಯುತ್ತವೆ' ಎಂದು ಸಾಗರದ ಬಗ್ಗೆ ಅಧ್ಯಯನ ನಡೆಸುತ್ತಿರುವ ಮಂಗಳೂರಿನ ತೇಜಸ್ವಿನಿ ಶೆಟ್ಟಿಗಾರ್ ಹೇಳುತ್ತಾರೆ.

'ದುರಸ್ತಿ ಮತ್ತು ಸ್ಕ್ರಾಪ್ ಮಾಡುವುದಕ್ಕಾಗಿ ಬೋಟ್‌ಗಳನ್ನು ಒಡೆಯುವ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಥರ್ಮಾಕೋಲ್ ಸಿಗುತ್ತದೆ. ಬಹುತೇಕ ಕಡೆಗಳಲ್ಲಿ ಇದನ್ನು ಹಿನ್ನೀರಿಗೆ ಎಸೆಯಲಾಗುತ್ತದೆ. ಇದು ಸಮುದ್ರ ಸೇರಿ ಮೀನಿನ ಸಂತತಿಗೆ ತೊಂದರೆ ಮಾಡುತ್ತದೆ' ಎಂದು ಮಂಗಳೂರಿನ ಪರ್ಸಿನ್ ಬೋಟ್ ಮಾಲೀಕ ಡೊನಾಲ್ಡ್ ಪಿಂಟೊ ವಾಸ್ತವದ ಚಿತ್ರಣವನ್ನು ಬಿಚ್ಚಿಡುತ್ತಾರೆ.

1950ರಲ್ಲಿ ಇಡೀ ವಿಶ್ವದಲ್ಲಿ ವಾರ್ಷಿಕ ಅಂದಾಜು 15 ಲಕ್ಷ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತಿತ್ತು. ನಂತರ ಇದು ವರ್ಷದಿಂದ ವರ್ಷಕ್ಕೆ ಏರುಗತಿ ಪಡೆಯಿತು. ಇದರ ಪರಿಣಾಮ 2021ರ ವೇಳೆಗೆ ಉತ್ಪಾದನೆಯ ಪ್ರಮಾಣ 39 ಕೋಟಿ ಟನ್‌ಗೆ ಹೆಚ್ಚಿದೆ. ಜಗತ್ತಿನಲ್ಲಿ ಪ್ಲಾಸ್ಟಿಕ್ ಉತ್ಪಾದನೆ ಹಾಗೂ ಮಾರಾಟವು ಹೀಗೆಯೇ ಮುಂದುವರಿದಿದ್ದೇ ಆದಲ್ಲಿ 2040ರ ವೇಳೆಗೆ ತ್ಯಾಜ್ಯದ ಪ್ರಮಾಣ 45 ಕೋಟಿ ಟನ್‌ಗೆ ಏರಲಿದೆ ಎಂದು ವಿಶ್ವಸಂಸ್ಥೆಯ 'ಎನ್ವಿರಾನ್‌ಮೆಂಟ್ ಪ್ರೋಗ್ರಾಂ' ಈ ವರ್ಷದ ಮೇ 16ರಂದು ಬಿಡುಗಡೆ ಮಾಡಿದ್ದ ವರದಿಯಲ್ಲಿ ಎಚ್ಚರಿಸಿದೆ.

ಮರು ಬಳಕೆ ಮಾಡಲು ಸಾಧ್ಯವೇ ಇಲ್ಲದಂತಹ ಪ್ಲಾಸ್ಟಿಕ್ ತ್ಯಾಜ್ಯದ ಉತ್ಪಾದನೆಯಲ್ಲಿ ಭಾರತ, ಚೀನಾ, ಬ್ರೆಜಿಲ್, ಇಂಡೋನೇಷ್ಯಾ, ಥಾಯ್ಲೆಂಡ್, ರಷ್ಯಾ, ಮೆಕ್ಸಿಕೊ, ಅಮೆರಿಕ, ಸೌದಿ ಅರೇಬಿಯಾ, ಕಾಂಗೊ ಗಣರಾಜ್ಯ, ಇರಾನ್ ಹಾಗೂ ಕಜಕಿಸ್ತಾನ ರಾಷ್ಟ್ರಗಳ ಪಾಲು ಶೇ 52ರಷ್ಟಿದೆ ಎಂದು ಸ್ವಿಟ್ಜರ್ಲೆಂಡ್‌ನ ಅರ್ಥ್ ಆ್ಯಕ್ಷನ್ (ಎಇ) ಸಂಶೋಧನಾ ಸಂಸ್ಥೆ ಜುಲೈ 28ರಂದು ಪ್ರಕಟಿಸಿರುವ '2023 ಪ್ಲಾಸ್ಟಿಕ್ ಓವರ್‌ಶೂಟ್ ಡೇ' ವರದಿಯಲ್ಲಿ ತಿಳಿಸಿದೆ. ಇದು ಆಘಾತಕಾರಿ.

ಈ ವರ್ಷದ ಜನವರಿಯಲ್ಲಿ ಪ್ರಕಟವಾಗಿದ್ದ ಮರಿಕೊ ಇನ್ನೊವೇಷನ್ ಫೌಂಡೇಷನ್‌ನ ವರದಿಯ ಪ್ರಕಾರ ಭಾರತದಲ್ಲಿ ವರ್ಷವೊಂದರಲ್ಲಿ ಅಂದಾಜು 34 ಲಕ್ಷ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಈ ಪೈಕಿ ಶೇ 30ರಷ್ಟು ಮಾತ್ರ ಮರು ಬಳಕೆಯಾಗುತ್ತಿದೆ. 2019–20ರಲ್ಲಿ ಈ ಪ್ರಮಾಣ 20 ಲಕ್ಷ ಟನ್‌ನಷ್ಟಿತ್ತು. ಕಡಿಮೆ ಪ್ಲಾಸ್ಟಿಕ್ ಬಳಕೆ ಮಾಡಿಯೂ ಮಾಲಿನ್ಯ ಹೆಚ್ಚಳಕ್ಕೆ ಕಾರಣವಾಗಿರುವ ದೇಶಗಳ ಪಟ್ಟಿಯಲ್ಲಿ ಭಾರತವೂ ಪ್ರಮುಖ ಸ್ಥಾನ ಹೊಂದಿದೆ. ದೇಶದಲ್ಲಿ ವಾರ್ಷಿಕ ಸರಾಸರಿ 3.30 ಲಕ್ಷ ಟನ್‌ನಷ್ಟು ಮೈಕ್ರೊ ಪ್ಲಾಸ್ಟಿಕ್ ಜಲಮೂಲಗಳಿಗೆ ಸೇರುತ್ತಿದೆ.

ಪ್ಲಾಸ್ಟಿಕ್ ಉತ್ಪಾದನಾ ಕ್ಷೇತ್ರ ಈಗ ಮತ್ತಷ್ಟು ಬೃಹದಾಕಾರವಾಗಿ ಬೆಳೆದುನಿಂತಿದೆ. ಭಾರತದಿಂದ ವಿದೇಶಗಳಿಗೆ ಅಗಾಧ ಪ್ರಮಾಣದಲ್ಲಿ ಪ್ಲಾಸ್ಟಿಕ್ ರಫ್ತಾಗುತ್ತಿದೆ. 2027–28ರ ವೇಳೆಗೆ ಭಾರತದ ಪ್ಲಾಸ್ಟಿಕ್ ಉತ್ಪಾದನಾ ವಲಯದ ಮಾರುಕಟ್ಟೆ ಗಾತ್ರ ₹ 10 ಲಕ್ಷ ಕೋಟಿಗೆ ವಿಸ್ತರಣೆಯಾಗುವ ನಿರೀಕ್ಷೆ ಇದೆ ಎಂದು ಅಖಿಲ ಭಾರತ ಪ್ಲಾಸ್ಟಿಕ್ ಉತ್ಪಾದಕರ ಸಂಘ (ಎಐಪಿಎಂಎ) ಹೇಳಿರುವುದು ಆತಂಕಕಾರಿ.

ಕರ್ನಾಟಕಕ್ಕೂ ಕಂಟಕ: 2022ರ ಡಿಸೆಂಬರ್‌ನ ಅಂಕಿ–ಅಂಶಗಳ ಪ್ರಕಾರ ರಾಜ್ಯದಲ್ಲಿ ವಾರ್ಷಿಕ ಅಂದಾಜು 2.96 ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಈ ಪೈಕಿ ಮರು ಬಳಕೆಯಾಗುತ್ತಿರುವುದು 73,000 ಟನ್ ಮಾತ್ರ. 50,000 ಟನ್‌ಗೂ ಅಧಿಕ ತ್ಯಾಜ್ಯವನ್ನು ಸುಡಲಾಗುತ್ತಿದೆ. ಪ್ರತಿದಿನ 830.36 ಟನ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ ಎಂದು 2022ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರ್ಕಾರವೇ ಮಾಹಿತಿ ನೀಡಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯ ಸುಮಾರು 5,000 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಶೇ 10ರಿಂದ ಶೇ 12ರಷ್ಟು ಪಾಲು ಪ್ಲಾಸ್ಟಿಕ್‌ನದ್ದು ಎಂದು ಅಂದಾಜಿಸಲಾಗಿದೆ. ಕೊಪ್ಪಳ ತಾಲ್ಲೂಕಿನ ಹುಲಗಿಯಲ್ಲಿನ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ತೆಂಗಿನಕಾಯಿಗಳನ್ನು ಪ್ಲಾಸ್ಟಿಕ್ ಕವರಿನಲ್ಲಿ ಇರಿಸಿ ಮಾರಾಟ ಮಾಡಲಾಗುತ್ತಿದ್ದು, ಇದರಿಂದ ಪಕ್ಕದಲ್ಲಿ ಹರಿಯುವ ತುಂಗಭದ್ರಾ ನದಿ ಪ್ಲಾಸ್ಟಿಕ್‌ಮಯವಾಗಿದೆ.

ಕಾಯ್ದೆಗಳಿಗೆ ಕಿಮ್ಮತ್ತಿಲ್ಲ: ರಾಜ್ಯ ಸರ್ಕಾರ 2016ರ ಮಾರ್ಚ್ 11ರಂದು ಹೊರಡಿಸಿದ್ದ ಅಧಿಸೂಚನೆಯ ಪ್ರಕಾರ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ತಟ್ಟೆ, ಲೋಟ, ಪ್ಲಾಸ್ಟಿಕ್ ಚಮಚ, ಪ್ಲಾಸ್ಟಿಕ್ ಹಾಳೆ, ಭಿತ್ತಿಪತ್ರ, ಕ್ಲಿಂಗ್ ಫಿಲ್ಮ್, ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಿಸಿದ ವಸ್ತುಗಳ ಸಂಗ್ರಹಣೆ, ಸರಬರಾಜು, ಮಾರಾಟ ಮತ್ತು ವಿತರಣೆ ಮಾಡುವಂತಿಲ್ಲ. ಇದನ್ನು ಮೀರಿ ಪ್ಲಾಸ್ಟಿಕ್ ಉತ್ಪಾದನೆಯಲ್ಲಿ ತೊಡಗಿದ್ದ ಘಟಕಗಳ ವಿರುದ್ಧ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಸಂರಕ್ಷಣೆ ಕಾಯ್ದೆ– 1986ರ ಕಲಂ 5ರ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಈವರೆಗೆ ಒಟ್ಟು 123 ಘಟಕಗಳನ್ನು ಮುಚ್ಚಲು ಆದೇಶಿಸಿದೆ.



ಮಂಗಳೂರಿನ ಬಂದರಿನಲ್ಲಿ ನಿರ್ವಹಣೆ ಇಲ್ಲದೆ ಸಮುದ್ರ ಸೇರುತ್ತಿರುವ ತ್ಯಾಜ್ಯ– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಇಷ್ಟಾದರೂ ಅಕ್ರಮವಾಗಿ ಪ್ಲಾಸ್ಟಿಕ್ ವಸ್ತು ತಯಾರಿಸುತ್ತಿರುವ ಕುರಿತ ದೂರುಗಳು ಕೇಳಿಬರುತ್ತಲೇ ಇವೆ. ಪದೇಪದೇ ನಿಯಮ ಉಲ್ಲಂಘಿಸಿದ್ದಕ್ಕಾಗಿ ಬಳ್ಳಾರಿ ಜಿಲ್ಲೆಯ 6, ವಿಜಯನಗರ ಮತ್ತು ಮೈಸೂರು ಜಿಲ್ಲೆಯ ತಲಾ 3 ಪ್ಲಾಸ್ಟಿಕ್ ತಯಾರಿಕಾ ಘಟಕಗಳ ವಿರುದ್ಧ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಿಮಿನಲ್ ಮೊಕದ್ದಮೆ ಹೂಡಿದೆ ಎಂದು ಅಧಿಕಾರಿಗಳು ಮಾಹಿತಿ ನೀಡುತ್ತಾರೆ.

ದಾಳಿ, ದಂಡಾಸ್ತ್ರಕ್ಕೂ ಬಗ್ಗದ ಜನ: ನಿಯಮ ಉಲ್ಲಂಘಿಸುವವರಿಗೆ 5 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ₹ 1 ಲಕ್ಷದವರೆಗೆ ದಂಡ ವಿಧಿಸಬಹುದಾಗಿದೆ. ತಪ್ಪು ಮರುಕಳಿಸಿದರೆ ಶಿಕ್ಷೆಯ ಪ್ರಮಾಣವನ್ನು 7 ವರ್ಷಗಳವರೆಗೂ ವಿಸ್ತರಿಸಬಹುದು. ಹೀಗಿದ್ದರೂ ಉತ್ಪಾದಕರು ಹಾಗೂ ವ್ಯಾಪಾರಿಗಳು ಕ್ಯಾರೆ ಎನ್ನುತ್ತಿಲ್ಲ. ದಂಡ ಹಾಕುವ ನಿಯಮವು ಕೆಲ ಭ್ರಷ್ಟ ಅಧಿಕಾರಿಗಳಿಗೆ ಹಣ ಮಾಡಲು ದಾರಿ ಮಾಡಿಕೊಟ್ಟಿದೆ ಎಂಬ ಆರೋಪ ಕೇಳಿ ಬರುತ್ತಿದೆ.

ಬೆಂಗಳೂರು– ತಮಿಳುನಾಡಿನ ಗಡಿಭಾಗದಲ್ಲಿ ಪ್ಲಾಸ್ಟಿಕ್ ಉತ್ಪಾದನಾ ಕಾರ್ಖಾನೆಗಳಿವೆ. ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಂದ್ ಮಾಡಿಸುವಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ವಿಫಲವಾಗಿದೆ. ಈವರೆಗೆ 56,614 ಪ್ರಕರಣಗಳನ್ನು ದಾಖಲಿಸಿದ್ದು, ₹ 2.55 ಕೋಟಿ ದಂಡ ವಿಧಿಸಿರುವುದೇ ಮಂಡಳಿಯ ಸಾಧನೆಯಾಗಿದೆ.

'ಸ್ಥಳೀಯ ಸಂಸ್ಥೆಯ ಅಧಿಕಾರಿಗಳ ಬಳಿ ಹಣ ಖಾಲಿಯಾದಾಗ ದಾಳಿ ಮಾಡುತ್ತಾರೆ. ₹ 500 ಅಥವಾ ₹ 1,000 ಕೊಟ್ಟರೆ ತೆಗೆದುಕೊಂಡು ಹೋಗುತ್ತಾರೆ. ಮರುದಿನದಿಂದ ಯಥಾ ಪ್ರಕಾರ ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆ ಮುಂದುವರಿಯುತ್ತದೆ' ಎಂದು ದಾವಣಗೆರೆಯ ದಿನಸಿ ಅಂಗಡಿ ಮಾಲೀಕರೊಬ್ಬರು ಹೇಳುತ್ತಾರೆ. 'ಮೊದಲು ಉತ್ಪಾದನೆಗೆ ಕಡಿವಾಣ ಹಾಕಬೇಕು. ಆಗ ಸಹಜವಾಗಿಯೇ ಮಾರಾಟ ಮತ್ತು ಬಳಕೆ ನಿಲ್ಲುತ್ತದೆ' ಎಂದೂ ಅವರು ಅಭಿಪ್ರಾಯಪಡುತ್ತಾರೆ.

'ಪ್ಲಾಸ್ಟಿಕ್ ಬಳಕೆ ಹಾಗೂ ಸಂಗ್ರಹ ಯಥೇಚ್ಛವಾಗಿದೆ. ತಿಂಗಳಲ್ಲಿ ಒಂದು ಅಥವಾ ಎರಡು ಬಾರಿ ದಾಳಿ ನಡೆಸಿದರೆ ಪ್ರಯೋಜನವಾಗುವುದಿಲ್ಲ. ಹೆಚ್ಚು ದಂಡ ವಿಧಿಸುವ ಜೊತೆಗೆ ಮಳಿಗೆ ಮುಚ್ಚುವ ಕ್ರಮಗಳಾಗಬೇಕಿದೆ' ಎಂದೂ ಉನ್ನತ ಮಟ್ಟದ ಅಧಿಕಾರಿಗಳು ಸಲಹೆ ನೀಡುತ್ತಾರೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಒಮ್ಮೆ ಆದೇಶ ನೀಡಿ ಸುಮ್ಮನಾಗುತ್ತಾರೆ. ಕಾನೂನು ಅನುಷ್ಠಾನದ ಅಧಿಕಾರವಿದ್ದರೂ ಅದನ್ನು ಬಳಸದೆ ಸ್ಥಳೀಯ ಸಂಸ್ಥೆಗಳಿಗೆ ಈ ಜವಾಬ್ದಾರಿಯನ್ನು ವರ್ಗಾಯಿಸುತ್ತಿದ್ದಾರೆ ಎಂಬ ಆರೋಪವೂ ನಾಗರಿಕರಿಂದ ಕೇಳಿಬರುತ್ತಿದೆ.

'ಈಗ ಲೋಕಾಯುಕ್ತ ಬಲಗೊಂಡಿದೆ. ಪ್ಲಾಸ್ಟಿಕ್ ಉತ್ಪಾದನೆ ಹಾಗೂ ಮಾರಾಟಗಾರರ ವಿರುದ್ಧ ದೂರು ನೀಡುವ ಕೆಲಸ ಜನರಿಂದ ಆಗಬೇಕು. ಪ್ಲಾಸ್ಟಿಕ್ ಅಪಾಯದ ಕುರಿತು ಶಾಲಾ ಹಂತದಿಂದಲೇ ಮಕ್ಕಳಲ್ಲಿ ಅರಿವು ಮೂಡಿಸಬೇಕು' ಎಂದು ದಾವಣಗೆರೆಯ ಹಾಲಿನ ವ್ಯಾಪಾರಿಯೊಬ್ಬರು ಸಲಹೆ ನೀಡುತ್ತಾರೆ.

ಕೆ–ಶೋರ್ ಬ್ಲೂ ಪ್ಯಾಕ್ ಯೋಜನೆಯ ನಿರೀಕ್ಷೆ: ಕರಾವಳಿ ಭಾಗದಲ್ಲಿ ಸಮುದ್ರಕ್ಕೆ ಪ್ಲಾಸ್ಟಿಕ್ ಸೇರುವುದನ್ನು ತಡೆಯಲು ಮತ್ತು ಪಶ್ಚಿಮ ಘಟ್ಟದ ಜೀವವೈವಿಧ್ಯ ಉಳಿಸುವ ಉದ್ದೇಶದಿಂದ ಜಾರಿಗೆ ತರಲು ಉದ್ದೇಶಿಸಿರುವ ಕೆ–ಶೋರ್ ಬ್ಲೂ ಪ್ಯಾಕ್ ಯೋಜನೆಯ ಮೇಲೆ ಪರಿಸರ ಚಿಂತಕರು ನಿರೀಕ್ಷೆಯ ಕಣ್ಣು ನೆಟ್ಟಿದ್ದಾರೆ.

₹ 840 ಕೋಟಿ ಮೊತ್ತದ ಈ ಯೋಜನೆಗಾಗಿ ರಾಜ್ಯ ಸರ್ಕಾರ ವಿಶ್ವಬ್ಯಾಂಕ್‌ನಿಂದ ಸಾಲ ಪಡೆದುಕೊಳ್ಳಲಿದೆ. ಶೇಕಡ 70ರಷ್ಟು ಹಣವನ್ನು ವಿಶ್ವಬ್ಯಾಂಕ್ ನೀಡಲಿದ್ದು ಉಳಿದ ಮೊತ್ತವನ್ನು ಸರ್ಕಾರ ಭರಿಸಬೇಕು. ರಾಜ್ಯ ಪರಿಸರ ಇಲಾಖೆಯ ಮೂಲಗಳ ಪ್ರಕಾರ ವಿಶ್ವಬ್ಯಾಂಕ್‌ನ ತಂಡವೊಂದು ಸಾಗರದೊಡಲಿನ ಅಧ್ಯಯನ ನಡೆಸಿ ಸಮಗ್ರ ಯೋಜನಾ ವರದಿ ಮಂಡಿಸಲಿದೆ. ಇದಕ್ಕೆ ತಾತ್ವಿಕ ಒಪ್ಪಿಗೆಯೂ ಸಿಕ್ಕಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಗಿ ಪಡೆದಿರುವ 142 ಮರು ಬಳಕೆದಾರರು ಪ್ಲಾಸ್ಟಿಕ್ ತ್ಯಾಜ್ಯದ ಅಂತಿಮ ವಿಲೇವಾರಿ ನಡೆಸುತ್ತಿದ್ದಾರೆ. ₹ 260 ಕೋಟಿ ವೆಚ್ಚದಲ್ಲಿ ಬಿಬಿಎಂಪಿ, ಕೆಪಿಸಿಎಲ್ ಸಹಯೋಗದಲ್ಲಿ ಪ್ಲಾಸ್ಟಿಕ್ ಬಳಸಿಕೊಂಡು, 11.05 ಎಂ.ಡಬ್ಲ್ಯು ವಿದ್ಯುತ್ ಉತ್ಪಾದಿಸುವ ಯೋಜನೆ ಇದೆ. ಇದು ನಿರ್ಮಾಣದ ಅಂತಿಮ ಹಂತದಲ್ಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡುತ್ತಾರೆ.

ಸ್ಥಳೀಯ ಸಂಸ್ಥೆಗಳು ವಿಫಲ?: ಪ್ಲಾಸ್ಟಿಕ್‌ಗೆ ಕಡಿವಾಣ ಹಾಕುವಲ್ಲಿ ಸ್ಥಳೀಯ ಸಂಸ್ಥೆಗಳು ವಿಫಲವಾಗಿವೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ. ಆದರೆ ಅಧಿಕಾರಿಗಳು ಸರ್ವೇಸಾಧಾರಣವಾಗಿ ಇದನ್ನು ತಳ್ಳಿ ಹಾಕುತ್ತಾರೆ.

'ಪ್ಲಾಸ್ಟಿಕ್ ನಿರ್ಮೂಲನೆಗಾಗಿ ಹಲವು ಜಾಗೃತಿ ಅಭಿಯಾನಗಳನ್ನು ಕೈಗೊಳ್ಳಲಾಗುತ್ತಿದೆ. ಮಾರಾಟದ ಮೇಲೂ ನಿರ್ಬಂಧ ಹೇರಲಾಗಿದೆ. ದಾಳಿ ನಡೆಸಿ ಪ್ಲಾಸ್ಟಿಕ್ ಜಪ್ತಿ ಮಾಡಲಾಗುತ್ತಿದೆ. ಹೊರ ರಾಜ್ಯಗಳಿಂದ ಬರುವ ಪ್ಲಾಸ್ಟಿಕ್ ಮೇಲೆ ನಿರ್ಬಂಧ ಹೇರುವ ಅಧಿಕಾರ ನಮಗಿಲ್ಲ. ಪ್ಲಾಸ್ಟಿಕ್ ನಿರ್ಮೂಲನೆಯಲ್ಲಿ ನಾಗರಿಕರ ಸಹಕಾರ ತುಂಬಾ ಮುಖ್ಯ' ಎಂದು ಬೆಳಗಾವಿ ಜಿಲ್ಲೆ ಚನ್ನಮ್ಮನ ಕಿತ್ತೂರು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಎಂ.ವಿ. ಹಿರೇಮಠ ಹಾಗೂ ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕೊಮಾರನಹಳ್ಳಿ ಗ್ರಾಮ ಪಂಚಾಯಿತಿಯ ಪಿಡಿಒ ಡಿ.ಕೇಶವಮೂರ್ತಿ ಹೇಳುತ್ತಾರೆ. ಒಟ್ಟಾರೆ ಏಕಬಳಕೆಯ ಪ್ಲಾಸ್ಟಿಕ್ ನಿರ್ಮೂಲನೆ ಮರೀಚಿಕೆಯಾಗಿದೆ.

ಪೂರಕ ಮಾಹಿತಿ: ಆರ್.ಮಂಜುನಾಥ್, ವಿಕ್ರಂ ಕಾಂತಿಕೆರೆ, ಆರ್.ಜಿತೇಂದ್ರ.



ಪ್ಯಾಕೇಜಿಂಗ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ಬಳಕೆಯಾಗುತ್ತಿದೆ. ಅದನ್ನು ನಿರ್ಬಂಧಿಸಿದರೆ ಪ್ಲಾಸ್ಟಿಕ್ ಬಳಕೆ ತಾನಾಗಿಯೇ ಕಡಿಮೆಯಾಗುತ್ತದೆ

ವಿನಯ್ ಮಾಳಗೆ, ಸಾಮಾಜಿಕ ಕಾರ್ಯಕರ್ತ, ಬೀದರ್

ಪ್ಲಾಸ್ಟಿಕ್ ನಿಯಂತ್ರಣ, ನಿಷೇಧ ಮಾಡುವುದು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಕೆಲಸ ಎನ್ನುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಭಾವಿಸಿದಂತಿದೆ.

ಚಿದಾನಂದ, ಅಧ್ಯಕ್ಷ, ಯುವ ಸಂಚಲನ, ದೊಡ್ಡಬಳ್ಳಾಪುರ



ಸರ್ಕಾರದ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ (ನೀರಿನ ಬಾಟಲಿ, ಪ್ಲಾಸ್ಟಿಕ್ ಕವರ್) ಬಳಸದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಆ ಮೂಲಕ ಮಾದರಿಯಾಗಬೇಕು.

ಶಂಕರ ಕುಂಬಿ, ಪರಿಸರಾಸಕ್ತ, ಧಾರವಾಡ

ಟ್ರೋಲ್ ಬೋಟಿಂಗ್‌ನಿಂದಾಗಿ ಸಮುದ್ರದಲ್ಲಿ ಪ್ಲಾಸ್ಟಿಕ್ ಬಲೆಗಳ ತುಂಡುಗಳು ಉಳಿಯುತ್ತವೆ. ಆದರೂ ಯಾವುದೇ ಕ್ರಮ ಆಗುತ್ತಿಲ್ಲ

ಡೊನಾಲ್ಡ್ ಪಿಂಟೊ, ಪರ್ಸಿನ್ ಬೋಟ್ ಮಾಲೀಕ, ಮಂಗಳೂರು

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಟ್ಟೆ ಚೀಲ, ಕಾಗದದ ಚೀಲ, ಅಡಿಕೆ ಹಾಳೆ ತಟ್ಟೆ, ಲೋಟ ಬಳಸಲು ಆದ್ಯತೆ ನೀಡಬೇಕು. ಮೊದಲು ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳನ್ನು ಕಡ್ಡಾಯವಾಗಿ ನಿಷೇಧಿಸಬೇಕು

ಅಸ್ಲಾಂ ಜಹಾನ್ ಎಂ ಅಬ್ಬಿಹಾಳ್, ಪರಿಸರಾಸಕ್ತ, ಧಾರವಾಡ

ಬಳಸಿ ಬಿಸಾಡಿದ ಪ್ಲಾಸ್ಟಿಕ್‌ಗೆ ಟೈಲ್ಸ್ ರೂಪ!

ಮೈಸೂರು: ಬಳಸಿ ಬಿಸಾಡಿದ ಕವರ್, ತಿಂಡಿಗಳ ಖಾಲಿ ಪೊಟ್ಟಣ... ಹೀಗೆ ಮರು ಬಳಕೆ ಮಾಡಲಾಗದ ಪ್ಲಾಸ್ಟಿಕ್ ಇಲ್ಲಿ ಹೊಸ ರೂಪ ಪಡೆದು ಪಾದಚಾರಿ ರಸ್ತೆಗೆ ಹೊದಿಕೆಯಾಗುತ್ತಿದೆ. 'ಪ್ಲಾಸ್ಟಿಕ್ ಟೈಲ್ಸ್' ದಿನದಿಂದ ದಿನಕ್ಕೆ ಹೆಚ್ಚು ಜನಪ್ರಿಯವಾಗುತ್ತಿದೆ.

ಮೈಸೂರು ಮಹಾನಗರ ಪಾಲಿಕೆಯು ಕಸದಿಂದ ರಸ ತತ್ವದ ಅಡಿ ಪ್ಲಾಸ್ಟಿಕ್ ಮರು ಬಳಕೆ ಮಾಡುತ್ತಿದ್ದು, ಅದಕ್ಕಾಗಿ ಇಪಿಆರ್ ಪ್ರಮಾಣಪತ್ರವನ್ನು ಪಡೆದಿದೆ. ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಸಂಬಂಧ ಜಾಗೃತ್ ಟೆಕ್ ಪ್ರೈ. ಲಿ. ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿದೆ. ಸುಯೇಜ್ ಫಾರಂನಲ್ಲಿರುವ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಜಾಗ ನೀಡಿದ್ದು, ನಿತ್ಯ 2 ಟನ್‌ನಷ್ಟು ಪ್ಲಾಸ್ಟಿಕ್ ಕಸವನ್ನು ಇಂಟರ್‌ಲಾಕಿಂಗ್ ಮಾದರಿ ಟೈಲ್ಸ್ ಆಗಿ ಪರಿವರ್ತಿಸಲಾಗುತ್ತಿದೆ.

ಮನೆಗಳಿಂದ ಕಸ ಸಂಗ್ರಹಣೆ ಮಾಡುವ ಸಂದರ್ಭವೇ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೇರ್ಪಡಿಸಿ ಆಟೊಗಳ ಮೂಲಕ ಸುಯೇಜ್ ಫಾರಂನಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ತರಲಾಗುತ್ತದೆ. ಅಲ್ಲಿ ಸಣ್ಣಸಣ್ಣ ತುಂಡುಗಳನ್ನಾಗಿ ವಿಭಜಿಸಿ 1.5 ಕೆ.ಜಿ. ಹಾಗೂ 2 ಕೆ.ಜಿ. ತೂಕದ ನೆಲಹಾಸುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಪಾಲಿಕೆಯು ಈವರೆಗೆ 220 ಟನ್‌ನಷ್ಟು ಪ್ಲಾಸ್ಟಿಕ್ ಕಸವನ್ನು ಕಂಪನಿಗೆ ನೀಡಿದ್ದು, 90 ಟನ್ ಅನ್ನು ಟೈಲ್ಸ್ ಆಗಿ ಪರಿವರ್ತಿಸಲಾಗಿದೆ.



ಮೈಸೂರಿನ ಸುಯೇಜ್ ಫಾರಂ ಆವರಣದಲ್ಲಿರುವ ಜಾಗೃತ್ ಟೆಕ್ ಪ್ರೈ. ಲಿ. ಕಾರ್ಖಾನೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ಉತ್ಪಾದಿಸಲಾದ ಪೇವರ್ ಟೈಲ್ಸ್‌ಗಳನ್ನು ಜೋಡಿಸುವಲ್ಲಿ ನಿರತನಾಗಿರುವ ಕಾರ್ಮಿಕ



ದಿನೇಶ್ ಬೋಪಣ್ಣ

'2 ಕೆ.ಜಿ. ತೂಕದ ಎಂ–60 ದರ್ಜೆಯ ಇಂಟರ್‌ಲಾಕಿಂಗ್ ಟೈಲ್ಸ್ ಒಂದರ ಉತ್ಪಾದನೆಗೆ ಸುಮಾರು ₹85 ವೆಚ್ಚ ಆಗುತ್ತಿದ್ದು, ಅದೇ ದರಕ್ಕೆ ಮಾರಾಟ ಮಾಡುತ್ತಿದ್ದೇವೆ. ಇದೇ ಗುಣಮಟ್ಟದ ಸಿಮೆಂಟ್ ಟೈಲ್ಸ್‌ನ ಬೆಲೆ ಮಾರುಕಟ್ಟೆಯಲ್ಲಿ ₹110–120 ಇದೆ. ಸಿಮೆಂಟ್ ಟೈಲ್ಸ್‌ನ ಆಯಸ್ಸು 20 ವರ್ಷ. ಆದರೆ ಈ ಟೈಲ್ಸ್ 500 ವರ್ಷಗಳವರೆಗೆ ಬಳಸಬಹುದಾಗಿದೆ. ಚೆನ್ನೈನ ಅನೇಕ ಕಾರ್ಪೊರೇಟ್ ಕಂಪನಿಗಳೂ ಕೊಂಡೊಯ್ಯುತ್ತಿವೆ. ಇದೇ ಮಾದರಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ಮಾಡಿದ ಬ್ಲಾಕ್‌ಗಳನ್ನು ಬಳಸಿ ರಸ್ತೆಗಳನ್ನು ನಿರ್ಮಿಸಬಹುದು. ಸಿಮೆಂಟ್‌ಗೆ ಪರ್ಯಾಯವಾಗಿ ಬಳಸಬಹುದು' ಎನ್ನುತ್ತಾರೆ ಜಾಗೃತ್ ಕಂಪನಿಯ ಮಾಲೀಕ ದಿನೇಶ್ ಬೋಪಣ್ಣ.

ಬೆಂಕಿ–ಬಿಸಿಲಿನಿಂದ ಹಾನಿಯಿಲ್ಲ: 'ಏಕಬಳಕೆಯ ಪ್ಲಾಸ್ಟಿಕ್ ಆದರೆ ಸುಡುತ್ತದೆ. ಆದರೆ ಇಲ್ಲಿ 3 ಕೆ.ಜಿ.ಯಷ್ಟು ಪ್ಲಾಸ್ಟಿಕ್ ಅನ್ನು ಕಂಪ್ರೆಸ್ ಮಾಡಿ 2 ಕೆ.ಜಿ.ಗೆ ಇಳಿಸಲಾಗುತ್ತದೆ. ಹೀಗಾಗಿ ಏಕಾಏಕಿ ಬೆಂಕಿ ಬಿದ್ದರೂ ಟೈಲ್ಸ್ ಹೊತ್ತಿಕೊಳ್ಳುವುದಿಲ್ಲ. 120–150 ಡಿಗ್ರಿವರೆಗಿನ ಉಷ್ಣಾಂಶವನ್ನು ಇದು ತಡೆದುಕೊಳ್ಳುತ್ತದೆ. ಬಿಸಿ ಹೆಚ್ಚಿದಾಗಲೂ ದ್ರವ ರೂಪಕ್ಕೆ ಬರುವುದಿಲ್ಲ. 150–200 ಡಿಗ್ರಿ ಉಷ್ಣಾಂಶದಲ್ಲಿ ಮಾತ್ರ ಕರಗಲು ಆರಂಭಿಸುತ್ತದೆ' ಎನ್ನುತ್ತಾರೆ ದಿನೇಶ್.


'ಸದ್ಯ ನಗರಪಾಲಿಕೆಯು ನಮಗೆ ಕಾರ್ಖಾನೆಗೆ ಜಾಗ ಹಾಗೂ ನಿತ್ಯ 2 ಟನ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯ ನೀಡುತ್ತಿದೆ. ಈವರೆಗೆ 200 ಟನ್‌ಗೂ ಹೆಚ್ಚು ಕಸವನ್ನು ಟೈಲ್ಸ್ ಆಗಿ ಪರಿವರ್ತಿಸಿದ್ದು, ಇಂಗಾಲದ ಹೊರೆ ತಗ್ಗಿಸಿದ್ದೇವೆ. ಇದನ್ನೇ ದೊಡ್ಡ ಪ್ರಮಾಣದಲ್ಲಿ ಮಾಡಿದರೆ ಇನ್ನಷ್ಟು ಲಾಭ ಕಂಡುಕೊಳ್ಳಬಹುದು' ಎಂದು ಅವರು ಹೇಳುತ್ತಾರೆ.

'ಮೈಸೂರು ನಗರ ವ್ಯಾಪ್ತಿಯಲ್ಲಿ ನಿತ್ಯ 300 ಆಟೊಗಳು ಮನೆಗಳಿಂದ ಕಸ ಸಂಗ್ರಹಿಸುತ್ತಿವೆ. ಪ್ರತಿ ಗಾಡಿಯಿಂದ ಕನಿಷ್ಠ 5 ಕೆ.ಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗುತ್ತಿದೆ. ಅದನ್ನು ಉಪ ಉತ್ಪನ್ನವಾಗಿ ಪರಿವರ್ತಿಸಲಾಗುತ್ತಿದ್ದು, ಪರಿಸರದ ಸಂರಕ್ಷಣೆಯೂ ಆಗುತ್ತಿದೆ. ಈ ಹಿಂದೆ ಪ್ಲಾಸ್ಟಿಕ್‌ನಿಂದ ಶೀಟ್‌ಗಳ ನಿರ್ಮಾಣಕ್ಕೂ ಯೋಜಿಸಲಾಗಿತ್ತು. ವೆಚ್ಚ ಹೆಚ್ಚೆಂಬ ಕಾರಣಕ್ಕೆ ಕೈಬಿಡಲಾಯಿತು' ಎನ್ನುತ್ತಾರೆ ಪಾಲಿಕೆಯ ಎಂಜಿನಿಯರ್ ಮಧುಕರ್.

ಶೀಘ್ರ ಪೇಟೆಂಟ್: 'ನಾನು ಸಿಮೆಂಟ್ ಕೈಗಾರಿಕೆ ಕ್ಷೇತ್ರದಲ್ಲಿ 35 ವರ್ಷ ಅನುಭವ ಹೊಂದಿದವನು. 1990–2000ರ ದಶಕದಲ್ಲಿ ಭಾರತಕ್ಕೆ ಇಂಟರ್‌ಲಾಕಿಂಗ್ ಟೈಲ್ಸ್ ಪರಿಚಯ ಆದಾಗಿನಿಂದ ಅದರ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದೇವೆ. ನಮ್ಮ ಕಂಪನಿಯ ಇತರ ಇಬ್ಬರು ಪಾಲುದಾರರಾದ ಕೆ. ದಶರಥ್ ಹಾಗೂ ಸಿ. ದರ್ಶನ್ ಕೂಡ ಹೊಸ ಅನ್ವೇಷಣೆ ಕುರಿತು ಉತ್ಸುಕರಾದವರು. ಪರಿಸರಕ್ಕೆ ಧಕ್ಕೆ ಆಗದಂತೆ ನಿರ್ಮಾಣ ಕಾರ್ಯ ನಡೆಯಬೇಕು. ಇಂಗಾಲದ ಪ್ರಮಾಣ ಕಡಿಮೆ ಮಾಡಬೇಕು ಎನ್ನುವ ಆಶಯದೊಂದಿಗೆ ಈ ಪ್ರಯತ್ನಕ್ಕೆ ಕೈ ಹಾಕಿದೆವು' ಎನ್ನುತ್ತಾರೆ ದಿನೇಶ್ ಬೋಪಣ್ಣ.

'ಟೈಲ್ಸ್ ಮತ್ತಿತರ ಉತ್ಪನ್ನಗಳಿಗೆ ಬೇಕಾದ ಯಂತ್ರಗಳನ್ನು ನಾವೇ ವಿನ್ಯಾಸಗೊಳಿಸಿದ್ದೇವೆ. ಪ್ಲಾಸ್ಟಿಕ್‌ನಿಂದ ಟೈಲ್ಸ್ ಉತ್ಪಾದನೆಯ ಈ ಪ್ರಯತ್ನ ದೇಶದಲ್ಲೇ ಮೊದಲು. ಇದಕ್ಕೆ ಪೇಟೆಂಟ್ ಪಡೆಯುವ ಪ್ರಯತ್ನದಲ್ಲಿ ಇದ್ದೇವೆ' ಎನ್ನುತ್ತಾರೆ ಅವರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 12-11-1998

● ದಳ ಬಲ ಪ್ರದರ್ಶನ ತಡೆಗೆ ಮರುಯತ್ನ

ಬೆಂಗಳೂರು, ನ. 11– ಪಕ್ಷದ ವರಿಷ್ಠರ ಆದೇಶದಂತೆ ಬರುವ ಶುಕ್ರವಾರ ಜನತಾ ದಳದ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಸಭೆಯಲ್ಲಿ ಬಲಾಬಲ ಪ್ರದರ್ಶನ ನಡೆಯುವುದನ್ನು ತಪ್ಪಿಸಲು ಪಕ್ಷದ ಹಿರಿಯ ಮುಖಂಡರು ಗಂಭೀರ ಪ್ರಯತ್ನ ನಡೆಸಿದ್ದಾರೆ.

ಆದರೆ, ಇನ್ನೊಂದೆಡೆ ಸಭೆಯಲ್ಲಿ ಬಲಾಬಲ ಪ್ರದರ್ಶನಕ್ಕೆ ದಳದ ಭಿನ್ನಮತೀಯ ಹಾಗೂ ನಿಷ್ಠಾವಂತ ಶಾಸಕರ ಗುಂಪುಗಳು ಸಜ್ಜಾಗುತ್ತಿದ್ದು, ತಂತ್ರ– ಪ್ರತಿತಂತ್ರ ರೂಪಿಸುವಲ್ಲಿ ಮಗ್ನವಾಗಿವೆ.

50 ವರ್ಷಗಳ ಹಿಂದೆ — ಸೋಮವಾರ, 12-11-1973

● ಮುಷ್ಕರದ ಹಕ್ಕು ತ್ಯಜಿಸಲು ಕಾರ್ಮಿಕರಿಗೆ ಪ್ರಧಾನಮಂತ್ರಿ ಕರೆ

ನವದೆಹಲಿ, ನ. 11– ಈಗಿನ ಕಠಿಣ ಪರಿಸ್ಥಿತಿಯಲ್ಲಿ ಮುಷ್ಕರಗಳನ್ನು ತಪ್ಪಿಸಲು ಕಾರ್ಮಿಕರ ಜತೆ ಒಪ್ಪಂದವಾಗಬೇಕು ಎಂದು ಪ್ರಧಾನಿ ಇಂದಿರಾಗಾಂಧಿ ಅವರು ಇಂದು ಸಲಹೆ ಮಾಡಿದರು. ರಾಷ್ಟ್ರ ಎದುರಿಸುತ್ತಿರುವ ಪರಿಸ್ಥಿತಿಯು ಯುದ್ಧಕಾಲದ ತುರ್ತು ಸ್ಥಿತಿಗಿಂತ ಕಡಿಮೆಯೇನಿಲ್ಲ ಎಂದು ಸಂಸತ್ತಿನ ಕಾಂಗ್ರೆಸ್ ಸದಸ್ಯರಿಗೆ ಅವರು ತಿಳಿಸಿದರು.

ರಾಷ್ಟ್ರದಲ್ಲಿ ಈಗ ಇರುವ ಕಠಿಣ ಆರ್ಥಿಕ ಪರಿಸ್ಥಿತಿ ಕಾರಣ, ಕಾರ್ಮಿಕರು ತಾವಾಗಿಯೇ ಮುಷ್ಕರ ಹೂಡುವ ಹಕ್ಕನ್ನು ಬಿಟ್ಟುಕೊಡಬೇಕು ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ನವೆಂಬರ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ದಶಿ ಗಂ. 14-45 ನಕ್ಷತ್ರ: ಸ್ವಾತಿ ಗಂ. 26-51 ಯೋಗ: ಆಯುಷ್ಮಾನ್ ಗಂ 16-24 ಕರಣ: ಶಕುನಿ ಗಂ. 14-45, ತುಲಾ ಮಾಸದ 26 ನೇ ದಿನ, ಮಳೆನಕ್ಷತ್ರ: ವಿಶಾಖ 2.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-32 ಸೂರ್ಯಾಸ್ತ : 05-57,
ಮುಸ್ಲಿಂ ದಿನಾಂಕ : 27 ರಬಿಯುಸ್ಸಾನಿ
ದಿನ ವಿಶೇಷ : ನರಕ ಚತುರ್ದಶಿ, ಲಕ್ಷ್ಮೀ ಪೂಜೆ, ಅದೃಷ್ಟ ಸಂಖ್ಯೆ : 5, 1

ಮೇಷ: ಸುತ್ತಮುತ್ತಲಿನಲ್ಲಿ ಸಣ್ಣ-ಪುಟ್ಟ ಸಮಸ್ಯೆಯಿಂದಾಗಿ ನಿಮ್ಮ ಹಿತ ಶತ್ರುಗಳ ಪತ್ತೆಯಾಗಲಿದೆ, ಮಿತ್ರರೂ ಶತ್ರುಗಳಾಗಿ ಪರಿವರ್ತನೆಯಾದಾರು. ನಿರ್ದಿಷ್ಟ ಗುರಿ ಮತ್ತು ಕಠಿಣ ಶ್ರಮ ನಿಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯಲಿದೆ.

ವೃಷಭ: ಉನ್ನತ ಪದವೀಧರರಿಗೆ ವಿದ್ಯಾರ್ಹತೆಗೆ ತಕ್ಕಂತಹ ಕೆಲಸದ ಸೂಚನೆ ದೊರೆಯಲಿದೆ. ನೂತನವಾಗಿ ಪ್ರಾರಂಭಿಸುವ ನಿಮ್ಮ ಕೆಲಸಕ್ಕೆ ಅನೇಕ ಅಡೆತಡೆಗಳು ಎದುರಾಗಬಹುದು. ಮಕ್ಕಳ ಯಶಸ್ಸನ್ನು ಕಂಡು ಸಂಭ್ರಮಿಸುವಿರಿ.

ಮಿಥುನ: ನಿಮ್ಮ ವ್ಯವಹಾರಕ್ಕೆ ಅನುಕೂಲವಾಗುವಂತೆ ಆತ್ಮೀಯರಿಂದ ಆರ್ಥಿಕ ಸಹಾಯ ದೊರಕುತ್ತದೆ. ಮಿತ್ರರ ಸಹಾಯ, ಸಹಕಾರದಿಂದ ಕಾರ್ಯದಲ್ಲಿ ಜಯ ಸಾಧಿಸುವಿರಿ. ಸ್ತ್ರೀವರ್ಗದಿಂದ ಮಹತ್ವದ ಸಹಾಯ ಪ್ರಾಪ್ತವಾಗಲಿದೆ.

ಕರ್ಕಾಟಕ: ಮಡದಿಯೊಂದಿಗೆ ಸಂಸಾರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಈ ದಿನ ನೀವು ಇಚ್ಛಿಸಿದ ಕಾರ್ಯಗಳೆಲ್ಲಾ ನೆರವೇರುತ್ತವೆ. ಒಬ್ಬಂಟಿಯ ದೂರ ಪ್ರವಾಸ ಸರಿಯಲ್ಲ.

ಸಿಂಹ: ಸ್ನೇಹಿತರ ಸಲಹೆ ಅಥವಾ ನಿಮ್ಮ ಸ್ವಾರ್ಥದ ಮನೋಭಾವದಿಂದ ಬರುವ ದುರಾಲೋಚನೆಯು ನಿಮ್ಮ ದಾರಿತಪ್ಪಿಸುವುದು. ಹಿಂದೊಂದು ದಿನ ನಿಮ್ಮನ್ನು ಅವಮಾನಿಸುತ್ತಿದ್ದವರೇ ಇಂದು ನಿಮ್ಮ ಸಹಾಯ ಕೋರಿ ಬರಲಿದ್ದಾರೆ.

ಕನ್ಯಾ: ಕಲಾವಿದರಿಗೆ ಪ್ರಮುಖವಾಗಿ ನಾಟ್ಯಕಲೆಯವರಿಗೆ ಒಳ್ಳೆಯ ಅವಕಾಶಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹವಿರುತ್ತದೆ. ಕ್ರಯ ವಿಕ್ರಯದ ಮಾತುಕತೆ ನಡೆಸಬಹುದು.

ತುಲಾ: ಹಿರಿಯರ ಆಶೀರ್ವಾದ ಎಲ್ಲಾ ಕಾರ್ಯಗಳಲ್ಲೂ ಜಯ ತಂದು ಕೊಡಲಿದೆ. ನಿಮ್ಮ ಈಗಿರುವ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಪ್ರಾಪ್ತಿಯಾಗುತ್ತದೆ. ಉತ್ತಮ ಅವಕಾಶದಿಂದ ಆತ್ಮಗೌರವ ಹೆಚ್ಚಲಿದೆ.

ವೃಶ್ಚಿಕ: ಸಾಮಾಜಿಕವಾದ ನಿಮ್ಮ ಕೆಲಸಗಳಿಂದ ಕೌಟುಂಬಿಕವಾಗಿ ಸಮಯದ ಅಭಾವ ಉಂಟಾಗುವುದು. ಮೋಸ, ನಷ್ಟವನ್ನು ನೀವು ಅನುಭವಿಸುವಿರಿ. ನಿಮ್ಮ ಬಯಕೆಗಳು ಸ್ವಪ್ರಯತ್ನದಿಂದ ಸುಲಭವಾಗಿ ಈಡೇರುವವು.

ಧನು: ನಾಲ್ಕಾರು ದಿನದಿಂದ ಉದ್ಯೋಗದಲ್ಲಿ ಉಂಟಾದ ಸಮಸ್ಯೆಗೆ ಈ ದಿನ ಸುಲಭವಾಗಿ ಉತ್ತರ ಸಿಗಲಿದೆ. ಸೂಕ್ತ ವ್ಯಕ್ತಿಗಳಿಂದ ಸಕಾಲದಲ್ಲಿ ಸಲಹೆ ಪಡೆಯುವುದು ಹಿತಕರ. ಹೈನು ಪದಾರ್ಥಗಳ ಮಾರಾಟದಿಂದ ಲಾಭ.

ಮಕರ: ಒಂದು ವಿಚಾರವನ್ನು ಭಿನ್ನ ದೃಷ್ಟಿಯಿಂದ ನೋಡುವ ನಿಮ್ಮ ಅಭ್ಯಾಸದಿಂದ ನಷ್ಟವಾಗುವ ವಿಚಾರದಲ್ಲಿ ಮುಂಜಾಗ್ರತಾ ರೂಪದಲ್ಲಿ ಜವಾಬ್ದಾರಿ ವಹಿಸಬಹುದು. ಗಣೇಶನ ದರ್ಶನದಿಂದ ಮನಸ್ಸಿಗೆ ನೆಮ್ಮದಿ.


ಕುಂಭ: ಈ ದಿನ ನೀವು ಮಾಡುವ ಕೆಲಸಗಳಲ್ಲಿ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುವಂತಾಗುವುದು. ಅನಿವಾರ್ಯದ ಕಾರಣದಿಂದಾಗಿ ದೀರ್ಘ ಕಾಲದ ನಿರ್ಧಾರಗಳು ಬದಲಾಗುವವು. ಹಣದ ವಿಷಯದಲ್ಲಿ ಜಾಗೃತರಾಗಿರಿ.

ಮೀನ: ಗೃಹದಲ್ಲಿ ಬಂಧು- ಮಿತ್ರರ ಆಗಮನ ಸಂತಸ ತರುವುದು. ಸ್ವಾಭಿಮಾನಕ್ಕೆ ಗಾಯ ಮಾಡುವವರಿಂದ ದೂರ ಉಳಿಯುವ ಪ್ರಯತ್ನ ಮಾಡಿ. ವಿದ್ಯಾರ್ಥಿಗಳ ಅಭ್ಯಾಸಕ್ಕೆ ವಿಶೇಷ ರೀತಿಯ ಸೌಲಭ್ಯಗಳು ದೊರೆಯಲಿವೆ.

ಪದಬಂಧ 5498 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಸುವಿನ ಹತ್ತಿರವಿರುವ ಚಿಕ್ಕ ಮಗು (4)
3.ನಿಜವಾಗಿಯೂ ಧರಿಸಿರುವ ಯಜ್ಞೋಪವೀತ (4)
5.ಮನದೊಳಗೇ ಹೊಕ್ಕಿರುವನಲ್ಲಾ ಈ ಮನ್ಮಥ! (3)
6.ತಿರುಗಿಸಿದರೂ ಇದು ಚಿನ್ನ! (3)
8.ಉತ್ತರದವರ ನಲ್ಲಿಯು ಉಲ್ಟಾ ಪಲ್ಟಾ ಆಗಿದೆ (2)
11.ಕಮ್ಮಾರನ ಕೈಯಿದು (2)
13.ಕಾರು ಹತ್ತಿದವನೇ ಹಬ್ಬಿಸಿರುವ ಸುಳ್ಳು ಸುದ್ದಿ (3)
15.ಇದು ಮಾವಿನ ಮರ (3)
16.ಮಳೆಗಾಲದ ಮೋಡ (4)
17.ಪಕ್ಷದವರು ತೋರಿದ ಭೇದಭಾವ (4)

ಮೇಲಿಂದ ಕೆಳಕ್ಕೆ
1.ತಾಳ ಹಾಕುತ್ತಲೇ ಹೂಡಿದ ಸಂಪು (4)
2.ಇದು ಹೂವಿನ ಶರ (4)
3. ಸೀತೆಯ ತಂದೆ (3)
7.ಕನ್ನ ಹಾಕಿ ಎಗರಿಸಿದ ಚಾಳೀಸು! (4)
9.ಗುಂಪಿನ ಬಳಿ ಹರಡಿದ ಸುವಾಸನೆ (4)
10.ಕೀ ಹಿಡಿದು ತಿರುಗಿ ನಿಂತವ ನಮ್ಮವನಲ್ಲ! (4)
12.ಈತ ಸೂರ್ಯನ ಮಗ (4)
14.ಮಾಲು ತರಲು ಹೋದಾಗ ತಲೆಗೆ ಧರಿಸಿದ ಬಟ್ಟೆ (3)



5497ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಲಿಂಗನ 3.ವಿನಿಮಯ
5.ಸುಗಮ 6.ನಡು
8.ವನ 9.ಕಂಬ
10.ಕರ 12.ಸಾಹಸ
14.ವರ್ಧಮಾನ 15.ಸಮಾಚಾರ

ಮೇಲಿಂದ ಕೆಳಕ್ಕೆ:
1.ಆಪೋಶನ 2.ನನಸು
3.ವಿರಾಮ 4.ಯಜಮಾನ
7.ಡುರಬ 8.ವರ್ತಕ
9.ಕಂಠೀರವ 11.ರತ್ನಾಕರ
12.ಸಾಧನ 13.ಸಮಾಸ

ಸುಡೊಕು 5884

	9				5		6	
2		6	4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5883 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನದಿ ಜೋಡಣೆ ಹೆಸರಿನಲ್ಲಿ ಮತಕ್ಕೆ 'ಗಾಳ'

ಚುನಾವಣಾ ಪಯಣ
ಮಧ್ಯಪ್ರದೇಶ



ಮಂಜುನಾಥ ಹೆಬ್ಬಾರ್

ಪನ್ನಾ (ಮಧ್ಯಪ್ರದೇಶ): ಬಿಜೆಪಿಯ 'ಭೀಷ್ಮ' ಅಟಲ್ ಬಿಹಾರಿ ವಾಜಪೇಯಿ ಅವರ ಭವ್ಯ ಕನಸಿನ ನದಿ ಜೋಡಣೆ ಯೋಜನೆಯಿದು. ಬುಂದೇಲ್‌ಖಂಡದ ಬರಪೀಡಿತ ಪ್ರದೇಶಗಳಿಗೆ ನೀರುಣಿಸಲು 2002ರಲ್ಲೇ 'ಮುನ್ನುಡಿ' ಬರೆದ ಮಹತ್ವಾಕಾಂಕ್ಷೆಯ ಯೋಜನೆಯಿದು. ಆ ಬಳಿಕ ನಡೆದ ನಾಲ್ಕು ಚುನಾವಣೆಗಳ ಸಂದರ್ಭದಲ್ಲಿ ರಾಜಕಾರಣಿಗಳು ಭರವಸೆಯ ಹೊಳೆ ಹರಿಸಿದ್ದಾರೆ. ಆದರೆ, ನದಿ ಜೋಡಣೆಯೂ ಆಗಿಲ್ಲ. ಬರಪೀಡಿತ ಪ್ರದೇಶಕ್ಕೆ ಒಂದು ಕೊಡ ನೀರೂ ಹರಿದಿಲ್ಲ.

ನೀರಿಗಾಗಿ ಕಾದು ಇಲ್ಲಿನ ನಿವಾಸಿಗಳು ಬಸವಳಿದಿದ್ದಾರೆ. ಮತ್ತೊಂದು ಚುನಾವಣೆಯ ಹೊತ್ತಿನಲ್ಲಿ ರಾಜಕಾರಣಿಗಳಿಂದ ನದಿ ಜೋಡಣೆಯ ಜೋರು ಧ್ವನಿ ಮೊಳಗಲಾರಂಭಿಸಿದೆ. ಸಹನೆ ಕಳೆದುಕೊಂಡಿರುವ ಈ ಭಾಗದ ಜನರು, 'ನೀರು ಕೊಡದವರಿಗೆ ನಮ್ಮ ಮತವಿಲ್ಲ' ಎಂದೂ ಹೇಳಲಾರಂಭಿಸಿದ್ದಾರೆ.

ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶದ ಸರಿ ಸುಮಾರು 11 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಹರಿಸುವ ಕೆನ್–ಬೆಟ್ವಾ ನದಿ ಜೋಡಣೆ ಯೋಜನೆಯ ಕಥೆ ಇದು. ಕೆನ್ ಮತ್ತು ಬೆಟ್ವಾ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶದ ಮೂಲಕ ಹರಿದು ಮುಂದೆ ಯಮುನೆಯನ್ನು ಸೇರುವ ನದಿಗಳು. ಈ ನದಿಗಳನ್ನು ಜೋಡಿಸಿ, ಕೆನ್ ನದಿಯಲ್ಲಿರುವ ಹೆಚ್ಚುವರಿ ನೀರನ್ನು ಬೆಟ್ವಾಗೆ ವರ್ಗಾಯಿಸುವುದು ಯೋಜನೆಯ ಮುಖ್ಯ ಉದ್ದೇಶ. ಪನ್ನಾ, ಛತ್ತರ್‌ಪುರ ಹಾಗೂ ಖಜುರಾಹೋ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಿಕ್ಕ ಹಲವು ಮತದಾರರು, 'ಕಳೆದ ಒಂಬತ್ತೂವರೆ ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಆದರೆ, ಈ ಯೋಜನೆಗೆ ಪರಿಸರ ಅನುಮೋದನೆ ಕೊಡಿಸಲು ರಾಜ್ಯದ ಬಿಜೆಪಿ ನಾಯಕರಿಗೆ ಆಗಿಲ್ಲ. ಬಿಜೆಪಿಯ ನದಿ ಜೋಡಣೆಯ ಕಥೆಯನ್ನು ನಂಬಲು ನಾವು ಸಿದ್ಧರಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.

'ಸಣ್ಣ ರಾಜ್ಯವೊಂದರ ಬಜೆಟ್ ಗಾತ್ರದಷ್ಟು ಮೊತ್ತವನ್ನು ಬಯಸುವ ಈ ನದಿ ಜೋಡಣೆಯು ಕಾರ್ಯಸಾಧುವಲ್ಲ. ಈ ಭಾಗದ ಮತದಾರರ ಓಲೈಸಲು ಈ ಯೋಜನೆಯನ್ನು ಜೀವಂತವಾಗಿಡಲಾಗಿದೆ. ಈ ವರ್ಷದ ಅಕ್ಟೋಬರ್ 4ರಂದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಯೋಜನೆಗೆ ಚಾಲನೆ ಕೊಡಿಸಲು ಮಧ್ಯಪ್ರದೇಶ ಸರ್ಕಾರ ಉದ್ದೇಶಿಸಿತ್ತು. ಅದೇ ಸಂದರ್ಭದಲ್ಲಿ ಹೆಚ್ಚಿನ ಮೊತ್ತದ ಪರಿಹಾರಕ್ಕಾಗಿ ಭೂ ಸಂತ್ರಸ್ತರು ಬೀದಿಗಿಳಿದಿದ್ದರು. ಚುನಾವಣೆಯಲ್ಲಿ ಹಿನ್ನಡೆಯಾಗಬಹುದು ಎಂಬ ಭಯದಿಂದ ಸರ್ಕಾರ ಈ ನಿರ್ಧಾರದಿಂದ ಹಿಂದಕ್ಕೆ ಸರಿಯಿತು' ಎಂದು ಹೇಳುತ್ತಾರೆ ಛತ್ತರ್‌ಪುರದ ಸಾಮಾಜಿಕ ಕಾರ್ಯಕರ್ತ ಗೋವಿಂದ ವ್ಯಾಸ್. ಇನ್ನೈದು ಚುನಾವಣೆ ಕಳೆದರೂ ಈ ಯೋಜನೆ ತುದಿ ಮುಟ್ಟುರುವುದಿಲ್ಲ ಎಂದು ಅವರು ಭವಿಷ್ಯ ನುಡಿಯುತ್ತಾರೆ.

ಯೋಜನೆಯ ಸುತ್ತಮುತ್ತ...

- ಯೋಜನೆಯ ಮೊತ್ತ ₹44,406 ಕೋಟಿ
- ನದಿ ಜೋಡಣೆ ಪೂರ್ಣಗೊಂಡ ನಂತರ, ಮಧ್ಯಪ್ರದೇಶದ 8.11 ಲಕ್ಷ ಹೆಕ್ಟೇರ್, ಉತ್ತರಪ್ರದೇಶದ 2.51 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಸಿಗಲಿದೆ.
- ಎರಡೂ ರಾಜ್ಯಗಳ 62 ಲಕ್ಷ ಜನರಿಗೆ ಕುಡಿಯುವ ನೀರು ಒದಗಿಸಲಾಗುತ್ತದೆ.
- 103 ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ.

ಪಕ್ಕದ ಉದ್ಕಿ ಗ್ರಾಮದ 65ರ ಹರೆಯದ ಕೃಷ್ಣ ಮಂಡಲ್ ಅವರು ಐದು ಎಕರೆ ಕೃಷಿ ಭೂಮಿ ಹೊಂದಿದ್ದಾರೆ. ಒಳ್ಳೆಯ ಮಳೆ ಬಂದರೆ ಮಾತ್ರ ಅವರ ಜಮೀನಿನಲ್ಲಿ ಬೆಳೆ. ನದಿ ಜೋಡಣೆಯಾಗಿ ತಮ್ಮ ಜಮೀನಿಗೆ ನೀರು ಹರಿದು ಬರಲಿದೆ ಎಂಬ ವಿಶ್ವಾಸದಲ್ಲಿ ಅವರು ಕಾಯುತ್ತಲೇ ಇದ್ದಾರೆ. '2014ರಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಮೀನಿನಲ್ಲಿ ಸಣ್ಣ ಕೆರೆ ನಿರ್ಮಿಸಿದೆವು. ತಿಂಗಳು ಪೂರ್ತಿ ಮಳೆಯಾದರೆ ಈ ಕೆರೆ ತುಂಬುತ್ತದೆ. ಒಂದು ಎಕರೆಯಲ್ಲಿ ಒಂದು ಬೆಳೆ ತೆಗೆಯಲು ಈ ನೀರು ಸಾಲುತ್ತದೆ. ಎರಡೇ ವರ್ಷಗಳಲ್ಲಿ ನಿಮ್ಮ ಜಮೀನಿಗೆ ನೀರು ಬರಲಿದೆ ಎಂದು ಅಭ್ಯರ್ಥಿಯೊಬ್ಬರು ಮೊನ್ನೆಯಷ್ಟೇ ಭರವಸೆ ನೀಡಿದ್ದಾರೆ. ನಾನು ಸಾಯುವ ಮುನ್ನವಾದರೂ ನದಿ ಜೋಡಣೆಯಾಗಿ ನನ್ನ ಜಮೀನಿಗೆ ನೀರು ಬರಬಹುದಲ್ಲ' ಎಂದು ಅವರು ಪ್ರಶ್ನಿಸುತ್ತಾರೆ. 'ಮೊದಲು ಕಾಂಗ್ರೆಸ್‌ಗೆ ಮತ ಹಾಕುತ್ತಿದ್ದೆ. 2008ರಿಂದ ಬಿಜೆಪಿಗೆ ಮತ ನೀಡುತ್ತಿದ್ದೇನೆ. ನೀರು ಕೊಟ್ಟು ನಮ್ಮ ಉದ್ಧಾರ ಮಾಡುತ್ತಾರೆ ಎಂಬ ಆಸೆಯಿತ್ತು. ಈ ಚುನಾವಣೆಯಲ್ಲೂ ಬಿಜೆಪಿಯವರು ನದಿ ಜೋಡಣೆಯ ಕಥೆ ಹೇಳುತ್ತಿದ್ದಾರೆ. ಅವರಿಗೆ ಈ ಸಲ ಪಾಠ ಕಲಿಸುತ್ತೇವೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಕೂಗಳತೆ ದೂರದಲ್ಲಿ ಸಣ್ಣ ಗುಡಿಸಲಿನಲ್ಲಿ ನೆಲೆಸಿರುವ ಹಿರಿಯ ಜೀವ ರಾಮ್ ಕಾಲಿ ಅವರಿಗೆ ಬರುವುದು ₹1 ಸಾವಿರ ಪಿಂಚಣಿ. ನೀರಿಲ್ಲದ ಕಾರಣಕ್ಕೆ ಕೃಷಿ ಭೂಮಿ ಪಾಳು ಬಿದ್ದಿದೆ. 'ನದಿ ಜೋಡಣೆ ಆಮೇಲೆ ಮಾಡಿ. ಮೊದಲು ನನ್ನ ಜಮೀನಿಗೊಂದು ಕೆರೆ ಮಂಜೂರು ಮಾಡಿಸಿ. ಈ ಬಗ್ಗೆ ವಾಗ್ದಾನ ಮಾಡಿದವರಿಗೆ ನನ್ನ ಮತ ಕೊಡುತ್ತೇನೆ' ಎಂದು ಅವರು ಹೇಳುತ್ತಾರೆ.

'ಯೋಜನೆಗಾಗಿ ಜಮೀನು ಬಿಟ್ಟುಕೊಡುವ ಕುಟುಂಬಕ್ಕೆ ₹15 ಲಕ್ಷ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಈ ಪರಿಹಾರ ಮೊತ್ತ ಏನೇನೂ ಸಾಲದು. ಈ ಮೊತ್ತ ವೈಜ್ಞಾನಿಕವಾಗಿಯೂ ಇಲ್ಲ. ಹೀಗಾಗಿ, ಹೆಚ್ಚಿನ ಪರಿಹಾರಕ್ಕಾಗಿ ಧ್ವನಿ ಎತ್ತಿದ್ದೇವೆ. ನಾವು ಯೋಜನೆಗೆ ವಿರುದ್ಧವಾಗಿಲ್ಲ. ದುಪ್ಪಟ್ಟು ಪರಿಹಾರ ಕೊಡಿಸುವುದಾಗಿ ಕಾಂಗ್ರೆಸ್ ಹಾಗೂ ಬಿಜೆಪಿಯ ಸ್ಥಳೀಯ ಮುಖಂಡರು ಅಭಯ ನೀಡಿದ್ದಾರೆ. ಚುನಾವಣೆಯಾದ ನಂತರ ಈ ಮಾತನ್ನು ಉಳಿಸಿಕೊಳ್ಳುತ್ತಾರೆ ಎಂಬ ನಂಬಿಕೆ ಇಲ್ಲ' ಎಂಬುದು ದೌಧಾನ್ ಗ್ರಾಮದ ನಿವಾಸಿ ಮಹೇಶ್ ಕುಮಾರ್ ಅಭಿಮತ. ಪನ್ನಾ ಹುಲಿ ಅಭಯಾರಣ್ಯದ ಮೀಸಲು ಪ್ರದೇಶದಲ್ಲಿ ಮೂರು ಎಕರೆ ಕೃಷಿ ಭೂಮಿ ಹೊಂದಿರುವ ಅವರು ಸಣ್ಣ ಮಣ್ಣಿನ ಮನೆಯಲ್ಲಿ ವಾಸಿಸುತ್ತಿದ್ದಾರೆ. 'ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಹೆಚ್ಚಿನ ಪರಿಹಾರಕ್ಕಾಗಿ ಧ್ವನಿ ಎತ್ತಿದ್ದೇವೆ. ಈ ಬಗ್ಗೆ ರಾಜ್ಯ ಬಿಜೆಪಿ ಸರ್ಕಾರ ಯಾವುದೇ ಭರವಸೆ ನೀಡಿಲ್ಲ. ಪಕ್ಷದ ಪ್ರಣಾಳಿಕೆಯಲ್ಲೂ ಇದನ್ನು ಸೇರಿಸಿಲ್ಲ. ಇದನ್ನೆಲ್ಲ ನೋಡಿಕೊಂಡೇ ಈ ಸಲ ಮತ ಚಲಾಯಿಸುತ್ತೇವೆ' ಎಂದು ಹೇಳುತ್ತಾರೆ.

ಇದೊಂದು ಹಣ ವ್ಯರ್ಥ ಮಾಡುವ ಯೋಜನೆ ಎಂದು ದೂರುತ್ತಾರೆ ಪನ್ನಾದ ಸ್ಥಳೀಯ ಹೋರಾಟಗಾರ ರಾಮ್ ಚಂದಾವತ್. 'ಕೆನ್ ನದಿಯು ಒಣಗುತ್ತಿದೆ. ನೀರಿಲ್ಲದ ನದಿಯನ್ನು ಜೋಡಿಸಿದರೆ ಬುಂದೇಲ್‌ಖಂಡಕ್ಕೆ ಹೆಚ್ಚಿನ ಅನುಕೂಲವಾಗುವುದಿಲ್ಲ. ಪನ್ನಾ ಹುಲಿ ಸಂರಕ್ಷಿತ ಪ್ರದೇಶದ ಶೇ 40ರಷ್ಟು ಭಾಗ ನೀರಿನಲ್ಲಿ ಮುಳುಗಿ ಹೋಗುತ್ತದೆ. ಹುಲಿಗಳು ಹಾಗೂ ಇತರ ಕಾಡು ಪ್ರಾಣಿಗಳು ಶಾಶ್ವತವಾಗಿ ನೆಲೆ ಕಳೆದುಕೊಳ್ಳಲಿವೆ. ಯೋಜನೆ ಜಾರಿಯಾದರೆ ರಾಜಕಾರಣಿಗಳಿಗೆ ಒಂದಷ್ಟು ಕಮಿಷನ್ ಬರುತ್ತದೆ. ಅಷ್ಟೇ ಲಾಭ' ಎಂದು ಅವರು ವ್ಯಂಗ್ಯವಾಗಿ ಹೇಳುತ್ತಾರೆ. ಝೂನ್ಸಿ–ಪನ್ನಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುವ ಸಂದರ್ಭದಲ್ಲಿ ನದಿಯೊಂದರನ್ನು ತೋರಿಸಿದ ಕಾರು ಚಾಲಕ ರವಿ ಪಾಠಕ್, 'ಇದೇ ನೋಡಿ ಬೆಟ್ವಾ ನದಿ. ಇದು ನವೆಂಬರ್‌ನಲ್ಲೇ ಬತ್ತಿ ಹೋಗಲಾರಂಭಿಸಿದೆ. ಕಾಲುವೆಗಳೆಲ್ಲ ನಿರ್ಮಾಣವಾಗಿ ಇದಕ್ಕೆ ಈ ಶತಮಾನದಲ್ಲಿ ನೀರು ಬರುವುದು ಅನುಮಾನ. ಚುನಾವಣೆ ಹೊತ್ತಿನಲ್ಲಿ ರಾಜಕಾರಣಿಗಳು ನಾಟಕವಾಡುತ್ತಿದ್ದಾರೆ' ಎಂದು ನಕ್ಕರು.

ಮಧ್ಯಪ್ರದೇಶ ವಿಧಾನಸಭೆ

230 ಸ್ಥಾನಗಳು | **2,534** ಅಭ್ಯರ್ಥಿಗಳು | **253** ಮಹಿಳೆಯರು | ಮತದಾನ ದಿನ **17** ನವೆಂಬರ್

ಅಪರಾಧ ಮತ್ತು ಅಭ್ಯರ್ಥಿಗಳು

291 ಗಂಭೀರ ಪ್ರಕರಣ

ಪಕ್ಷ	ಪ್ರಕರಣ
ಕಾಂಗ್ರೆಸ್	61
ಬಿಜೆಪಿ	23
ಎಎಪಿ	18
ಬಿಎಸ್‌ಪಿ	16

24 ಮಹಿಳೆಯರ ವಿರುದ್ಧ ಅಪರಾಧ ಎಸಗಿದ ಆರೋಪವಿರುವ ಅಭ್ಯರ್ಥಿಗಳು

1 ಅತ್ಯಾಚಾರ

10 ಕೊಲೆ

17 ಕೊಲೆಯತ್ನ

79 ರೆಡ್ ಅಲರ್ಟ್ ಕ್ಷೇತ್ರಗಳು (3 ಅಥವಾ ಹೆಚ್ಚು ಅಭ್ಯರ್ಥಿಗಳು ತಮ್ಮ ವಿರುದ್ಧ ಅಪರಾಧ ಪ್ರಕರಣಗಳಿರುವ ಕುರಿತು ಘೋಷಿಸಿರುವ ಕ್ಷೇತ್ರಗಳು)

ಹಣ ಮತ್ತು ಅಭ್ಯರ್ಥಿಗಳು

727 ಒಟ್ಟು ಕೋಟ್ಯಧಿಪತಿಗಳು

ಬಿಜೆಪಿ	ಕಾಂಗ್ರೆಸ್	ಎಎಪಿ	ಬಿಎಸ್‌ಪಿ
200	196	39	54

ವಯಸ್ಸು	
25 - 40 ವರ್ಷ	952
41 - 60 ವರ್ಷ	1,252
61 - 80 ವರ್ಷ	328
80 ವರ್ಷಕ್ಕಿಂತ ಮೇಲಿನವರು	2

ಮೂಲ: ಅಸೋಸಿಯೇಶನ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)


ಶಿಕ್ಷಣ	
5–12ನೇ ತರಗತಿ	1233
ಪದವೀಧರರು	1105
ಡಿಪ್ಲೊಮಾ	28
ಅಕ್ಷರಸ್ಥರು	134
ಅನಕ್ಷರಸ್ಥರು	28
ವಿವರ ನೀಡದವರು	6

ಅಭ್ಯರ್ಥಿಗಳ ಸರಾಸರಿ ಆಸ್ತಿ ₹ 2.89 (ಕೋಟಿ ₹ ಗಳಲ್ಲಿ)

ಪಕ್ಷ	ಆಸ್ತಿ
ಕಾಂಗ್ರೆಸ್	₹13.69
ಬಿಜೆಪಿ	₹10.46
ಎಎಪಿ	₹2.76
ಬಿಎಸ್‌ಪಿ	₹1.96

- ಅತಿ ಶ್ರೀಮಂತ: ಚೈತನ್ಯ ಕಶ್ಯಪ್–ರತ್‌ಲಾಮ್ ನಗರ ಬಿಜೆಪಿ ₹ 296.08
- ಆಸ್ತಿ ಇಲ್ಲವೆಂದು ಘೋಷಿಸಿದ 12 ಅಭ್ಯರ್ಥಿಗಳು

ನುಡಿ-ಕಿಡಿ



ಛತ್ತೀಸಗಢದಲ್ಲಿ ಕಾಂಗ್ರೆಸ್ ಸರ್ಕಾರ ಒಂದೂ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಜನರಿಂದ ಈ ಸರ್ಕಾರ ಅಂಕಗಳನ್ನು ಬಯಸಿದರೆ ಅದಕ್ಕೆ ಸಿಗುವುದು ಸೊನ್ನೆಯೇ.

ಹೀಗಿದ್ದೂ ಕಾಂಗ್ರೆಸ್ ನಾಯಕರು ತಮ್ಮನ್ನು ಹೀರೊಗಳು ಎಂದುಕೊಳ್ಳುತ್ತಾರೆ. ಅವರು ಹೀರೊಗಳಲ್ಲ, ಜೀರೊಗಳು (ಸೊನ್ನೆ). ಚುನಾವಣೆಯಲ್ಲಿ ಅವರಿಗೆ ಬೀಳ್ಕೊಡುಗೆ ನೀಡುವ ಸಮಯ ಬಂದಿದೆ.


ರಾಜನಾಥ್ ಸಿಂಗ್, ರಕ್ಷಣಾ ಸಚಿವ



ರಾಜಸ್ಥಾನವು ಐದು ವರ್ಷಗಳಲ್ಲಿ ಮಾದರಿ ರಾಜ್ಯವಾಗಿ ಹೊರಹೊಮ್ಮಿದೆ. ಇದರಿಂದ ಬಿಜೆಪಿ ನಾಯಕರಿಗೆ ಹೆದರಿಕೆಯಾಗಿದೆ. ಹಾಗಾಗೇ ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸುತ್ತಿದ್ದಾರೆ. ಇದು ಆಧಾರರಹಿತ. ಇದು ತಪ್ಪು ಅಷ್ಟೇ ಅಲ್ಲ ಸುಳ್ಳು ಕೂಡ.

ಟೀಕಿಸಲು ಬಿಜೆಪಿಗೆ ಯಾವ ವಿಷಯವೂ ಇಲ್ಲದ ಕಾರಣ ಇ.ಡಿ ಮತ್ತು ಸಿಬಿಐ ಅಧಿಕಾರಿಗಳನ್ನು ರಾಜ್ಯಕ್ಕೆ ಕಳುಹಿಸುತ್ತಿದ್ದಾರೆ. ಪ್ರಧಾನಿ ಮತ್ತು ಅವರ ಪಕ್ಷದ ನಾಯಕರು ಧ್ರುವೀಕರಣದ ಬಗ್ಗೆ ಮಾತನಾಡುತ್ತಿದ್ದಾರೆ.

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಒಂದು ಪ್ರದೇಶದ ಮತಬ್ಯಾಂಕನ್ನು ವಶಕ್ಕೆ ಪಡೆಯುವ ಯತ್ನದಲ್ಲಿ ಕಾಂಗ್ರೆಸ್ ಇಷ್ಟು ಕೆಳಮಟ್ಟಕ್ಕೆ ಇಳಿಯುವುದೆಂದು ನಾನು ಎಂದಿಗೂ ಊಹಿಸಿರಲಿಲ್ಲ.

ಒಂದು ಧರ್ಮದವರಿಗೆ ನಿರ್ದಿಷ್ಟ ಪ್ರಣಾಳಿಕೆ ಬಿಡುಗಡೆ ಮಾಡುವ ಮೂಲಕ ಕಾಂಗ್ರೆಸ್ ತೆಲಂಗಾಣದಲ್ಲಿ, ಮುಸ್ಲಿಂ ಲೀಗ್‌ನ ಮೊಹಮ್ಮದ್ ಅಲಿ ಜಿನ್ನಾ ಅವರ ಕನಸನ್ನು ನನಸಾಗಿಸುತ್ತಿದೆ.

ಹಿಮಂತ್ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ



ಬಿಜೆಪಿಯೇತರ ರಾಜ್ಯಗಳನ್ನು ರಾಜಭವನದ ಮೂಲಕ ನಿಯಂತ್ರಣದಲ್ಲಿಸಿಕೊಳ್ಳಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ರಾಷ್ಟ್ರ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಮಾರಕವಾಗಿದೆ.

ರಾಜಭವನವು ತನ್ನ ಅಧಿಕಾರ ದುರ್ಬಳಕೆ ಮಾಡಿಕೊಳ್ಳಲು ಯತ್ನಿಸುತ್ತಿದೆ. ಅದು ಪಂಜಾಬ್ ಇರಲಿ, ತಮಿಳುನಾಡು ಇರಲಿ ಅಥವಾ ಛತ್ತೀಸಗಢವೇ ಇರಲಿ, ಡಜನ್‌ಗಟ್ಟಲೆ ಮಸೂದೆಗಳು ರಾಜಭವನದಲ್ಲಿ ಸಿಲುಕಿಕೊಂಡಿವೆ.

ಭೂಪೇಶ್ ಬಘೆಲ್, ಛತ್ತೀಸಗಢ ಮುಖ್ಯಮಂತ್ರಿ

ಎಂಆರ್‌ಪಿಎಸ್ ಆಯೋಜಿಸಿದ್ದ ರ್‍ಯಾಲಿಯಲ್ಲಿ ಪ್ರಧಾನಿ ಮೋದಿ ಭರವಸೆ

ಮಾದಿಗರ ಸಬಲೀಕರಣಕ್ಕೆ ಸಮಿತಿ



ಸಿಕಂದರಾಬಾದ್‌ನಲ್ಲಿ ಆಯೋಜಿಸಿದ್ದ ರ್‍ಯಾಲಿಯಲ್ಲಿ ಭಾವುಕರಾದ ಎಂಆರ್‌ಪಿಎಸ್ ಸಂಸ್ಥಾಪಕ ಕೃಷ್ಣ ಮಾದಿಗ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಪ್ಪಿಕೊಂಡು ಸಮಾಧಾನಪಡಿಸಿದರು ಪಿಟಿಐ ಚಿತ್ರ

ಹೈದರಾಬಾದ್ (ಪಿಟಿಐ): ಪರಿಶಿಷ್ಟ ಜಾತಿಗಳ ವರ್ಗೀಕರಣದ ಬೇಡಿಕೆಗೆ ಸಂಬಂಧಿಸಿದಂತೆ ಮಾದಿಗರ (ಎಸ್‌ಸಿ ಸಮುದಾಯ) ಸಬಲೀಕರಣಕ್ಕಾಗಿ ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಕೇಂದ್ರವು ಶೀಘ್ರದಲ್ಲೇ ಸಮಿತಿ ರಚಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಮಾದಿಗರ ಸಮುದಾಯದ ಸಂಘಟನೆಯಾದ ಮಾದಿಗ ಮೀಸಲಾತಿ ಹೋರಾಟ ಸಮಿತಿ (ಎಂಆರ್‌ಪಿಎಸ್) ಆಯೋಜಿಸಿದ್ದ ರ್‍ಯಾಲಿಯಲ್ಲಿ ಮಾತನಾಡಿದರು.

'ಮೂರು ದಶಕಗಳಿಂದ ಪ್ರತಿಯೊಂದು ಹೋರಾಟದಲ್ಲೂ ಬಿಜೆಪಿ ನಿಮ್ಮೊಂದಿಗೆ ನಿಂತಿದೆ. ಈ ಅನ್ಯಾಯವನ್ನು ಆದಷ್ಟು ಬೇಗ ಕೊನೆಗೊಳಿಸಲು ಬದ್ಧರಾಗಿದ್ದೇವೆ. ನಿಮ್ಮನ್ನು ಸಬಲೀಕರಿಸಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅಳವಡಿಸಿಕೊಳ್ಳುವ ಸಮಿತಿಯನ್ನು ಶೀಘ್ರದಲ್ಲೇ ರಚಿಸುತ್ತೇವೆ ಎಂಬ ಭರವಸೆ ನೀಡಲಾಗುವುದು. ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಪ್ರಕ್ರಿಯೆ ನಡೆಯುತ್ತಿದೆ ಎಂಬುದೂ ನಿಮಗೆ ತಿಳಿದಿದೆ. ನಿಮ್ಮ ಹೋರಾಟ ನ್ಯಾಯಯುತವೆಂದು ಪರಿಗಣಿಸುತ್ತೇವೆ' ಎಂದು ಅವರು ತಿಳಿಸಿದರು.

'ನಾವು ನ್ಯಾಯವನ್ನು ಖಾತರಿಪಡಿಸುತ್ತೇವೆ. ನ್ಯಾಯಾಲಯದಲ್ಲಿಯೂ ನಿಮಗೆ ನ್ಯಾಯ ಸಿಗುವಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ' ಎಂದರು.

ಕಾಂಗ್ರೆಸ್ ಪಕ್ಷವು ಬಿ.ಆರ್. ಅಂಬೇಡ್ಕರ್ ಅವರು ಚುನಾವಣೆಯಲ್ಲಿ ಗೆಲ್ಲಲು ಅವಕಾಶ ನೀಡಲಿಲ್ಲ ಮತ್ತು ಸಂಸತ್ತಿನಲ್ಲಿ ಬಾಬಾ ಸಾಹೇಬ್ ಅವರ ಚಿತ್ರವನ್ನು ಹಾಕಿಲ್ಲ. ಅಂಬೇಡ್ಕರ್ ಅವರಿಗೆ ದಶಕಗಳಿಂದ ಭಾರತ ರತ್ನ ನೀಡದಿರುವುದಕ್ಕೆ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕೇಂದ್ರದಲ್ಲಿ ಬಿಜೆಪಿ ಬೆಂಬಲಿತ ಸರ್ಕಾರ ರಚನೆಯಾದ ನಂತರವೇ ಇದು ಸಾಧ್ಯವಾಯಿತು ಎಂದರು.

ಬಿಆರ್‌ಎಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, ಪ್ರತ್ಯೇಕ ರಾಜ್ಯ ಹೋರಾಟ ಸಂದರ್ಭದಲ್ಲಿ ದಲಿತ ಸಮುದಾಯದವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ, ರಾಜ್ಯ ರಚನೆಯಾದ ಬಳಿಕ ಕೆ.ಚಂದ್ರಶೇಖರ ರಾವ್ ಅವರು ದಲಿತರ ಆಕಾಂಕ್ಷೆಗಳನ್ನು ಹತ್ತಿಕ್ಕುವ ಮೂಲಕ ಮುಖ್ಯಮಂತ್ರಿ ಕುರ್ಚಿ ಅತಿಕ್ರಮಿಸಿದರು. ಬಿಆರ್‌ಎಸ್ ದಲಿತ ವಿರೋಧಿ ಮತ್ತು ಕಾಂಗ್ರೆಸ್ ಕೂಡ ಅದಕ್ಕಿಂತ ಕಡಿಮೆಯೇನಿಲ್ಲ ಎಂದು ಟೀಕಿಸಿದರು.

'ರಾಜಕೀಯ ಪಕ್ಷಗಳು ಮತ್ತು ನಾಯಕರು ಈ ಹಿಂದೆ ಮಾದಿಗ ಸಮುದಾಯಕ್ಕೆ ಭರವಸೆಗಳನ್ನು ನೀಡಿ, ಅವರಿಗೆ ದ್ರೋಹ ಬಗೆದಿದ್ದಾರೆ. ಅವರ ಪಾಪಗಳಿಗೆ ನಾನು ಕ್ಷಮೆಯಾಚಿಸುತ್ತೇನೆ' ಎಂದು ಮೋದಿ ಹೇಳಿದರು.

ಭಾಷಣದ ಬಳಿಕ ಭಾವುಕರಾದ ಎಂಆರ್‌ಪಿಎಸ್ ಸಂಸ್ಥಾಪಕ ಕೃಷ್ಣ ಮಾದಿಗ ಅವರನ್ನು ಮೋದಿ ಅವರು ಅಪ್ಪಿಕೊಂಡು ಸಮಾಧಾನ ಪಡಿಸಿದರು.

ಚುನಾವಣಾ ಕಣದಲ್ಲಿ

- **ಮತಗಟ್ಟೆ ನಿರ್ಮಾಣ:** ರಾಜಸ್ಥಾನದ ಅಬು ಪಿಂಢವಾಢಾ ಕ್ಷೇತ್ರದ ಶೆರ್ಗಾಂವ್‌ನಲ್ಲಿ ಇದೇ ಮೊದಲ ಬಾರಿ ಮತದಾರರು ತಮ್ಮ ಗ್ರಾಮದಲ್ಲೇ ಮತದಾನ ಮಾಡಲಿದ್ದಾರೆ. ಇಲ್ಲಿ 117 ಮತದಾರರಿದ್ದಾರೆ. ಮತಗಟ್ಟೆ ಸಿಬ್ಬಂದಿ ದಟ್ಟ ಅರಣ್ಯದಲ್ಲಿ 18 ಕಿ.ಮೀ ನಡೆದು ಈ ಮತಗಟ್ಟೆಯನ್ನು ತಲುಪಬೇಕಿದೆ. ಈ ಮೊದಲು ಶೆರ್ಗಾಂವ್‌ನ ಮತದಾರರು ಪಕ್ಕದ ಗ್ರಾಮಕ್ಕೆ ಹೋಗಿ ಮತ ಹಾಕಬೇಕಾಗಿತ್ತು.
- **'ಗೂಂಡಾ ಪದಕ್ಕೆ ಅವಮಾನ':** ಬಿಜೆಪಿಯ ಹಿರಿಯ ನಾಯಕ ಬ್ರಿಜ್‌ಮೋಹನ್ ಅಗರ್‌ವಾಲ್ ಅವರ ಮುಂದೆ ಬೇರೆಯವರನ್ನು ಗೂಂಡಾ ಎನ್ನುವುದು ಆ ಪದಕ್ಕೆ ಮಾಡಿದ ಅವಮಾನ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ವ್ಯಂಗ್ಯವಾಡಿದ್ದಾರೆ. ಪ್ರಚಾರದ ವೇಳೆ ತಮ್ಮ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಅಗರ್‌ವಾಲ್ ಆರೋಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಬಘೆಲ್, ಅವರು ಚುನಾವಣೆಯಲ್ಲಿ ಹಿಂದೆ ಬಿದ್ದಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ವಿಡಿಯೊದಲ್ಲಿ ಅಗರ್‌ವಾಲ್ ಅವರೇ ಜನರನ್ನು ತಳ್ಳುತ್ತಿದ್ದಾರೆ ಎಂದಿದ್ದಾರೆ.
- **ಬಿಜೆಪಿಗೆ ಸೇರ್ಪಡೆ:** ಕಾಂಗ್ರೆಸ್ ನಾಯಕರಾದ ರಾಮ್ ಗೋಪಾಲ್ ಬೈರ್‍ವಾ ಮತ್ತು ಅಶೋಕ್ ತನ್ವರ್ ಅವರು ಶನಿವಾರ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಛಾಕ್ಸು ಕ್ಷೇತ್ರದಿಂದ ಈ ಹಿಂದೆ ಅಶೋಕ್ ಅವರು ಆಯ್ಕೆಯಾಗಿದ್ದರು. ರಾಮ್ ಗೋಪಾಲ್ ಅವರು ಮಾಜಿ ಸಚಿವರು.
- **ಹಬ್ಬದ ಬಳಿಕ ಪ್ರಣಾಳಿಕೆ:** ಬಿಜೆಪಿಯು ದೀಪಾವಳಿ ಹಬ್ಬದ ಬಳಿಕ ತೆಲಂಗಾಣ ವಿಧಾನಸಭೆ ಚುನಾವಣೆಗೆ ಪ್ರಣಾಳಿಕೆ ಘೋಷಿಸಲಿದೆ ಎಂದು ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಇದೇ 26 ಮತ್ತು 27ರಂದು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಕೈಗೊಳ್ಳುವರು. ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ ಅವರೂ ಭಾಗವಹಿಸುವರು ಎಂದರು.

'ಒಳನುಸುಳುವಿಕೆಗೆ ಕಡಿವಾಣ'

ಧಾರ್, ಮಧ್ಯ ಪ್ರದೇಶ (ಪಿಟಿಐ): ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಗಡಿಯಲ್ಲಿ ಒಳನುಸುಳುವಿಕೆಯನ್ನು ತಡೆದಿದ್ದು, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕುರಿತ ವಿಧಿ 370 ಅನ್ನು ಹಿಂಪಡೆಯುವ ಧೈರ್ಯವನ್ನೂ ತೋರಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಕಾಂಗ್ರೆಸ್ ಅಥವಾ ವಿರೋಧ-ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ನಾಯಕರಿಂದ ಇದು ಸಾಧ್ಯವಾಗಿರಲಿಲ್ಲ ಎಂದು ಧಾರ್ ಜಿಲ್ಲೆಯ ಮನವರ್‌ನಲ್ಲಿ ಶನಿವಾರ ನಡೆದ ಚುನಾವಣಾ ಸಾರ್ವಜನಿಕ ಸಭೆಯಲ್ಲಿ ಅವರು ಟೀಕಿಸಿದರು.

'ಒಳನುಸುಳುವಿಕೆಯನ್ನು ಮೋದಿ ತಡೆದಿದ್ದಾರೆ. ತಡೆದಿದ್ದಾರೋ ಇಲ್ಲವೊ' ಎಂದು ಸಭಿಕರನ್ನು ಪ್ರಶ್ನಿಸಿದರು. ನ. 17ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯುತ್ತಿದೆ.

ವಿಧಿ 370 ಅನ್ನು ಹಿಂಪಡೆದರೆ ರಕ್ತಪಾತವಾಗಲಿದೆ ಎಂದು ಕಾಂಗ್ರೆಸ್‌ನ ರಾಹುಲ್ ಗಾಂಧಿ ಎಚ್ಚರಿಸಿದ್ದರು. ಮೋದಿ ಸರ್ಕಾರ ವಿಧಿಯನ್ನು ಹಿಂಪಡೆಯಿತು. ಆದರೆ, ರಾಹುಲ್ ಎಚ್ಚರಿಸಿದ್ದಂತೆ ಏನೂ ಆಗಲಿಲ್ಲ ಎಂದು ಅಭಿಪ್ರಾಯಪಟ್ಟರು. 2018ರ ಚುನಾವಣೆ ಬಳಿಕ ರಾಜ್ಯದಲ್ಲಿ 15 ತಿಂಗಳು ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರವು, 'ತೀರ್ಥ ದರ್ಶನ ಯೋಜನೆ' ಸೇರಿದಂತೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿತು ಎಂದು ಆರೋಪಿಸಿದರು.

ರಾಜ್ಯದ ಜನರಿಗೆ ಈಗ ಮೂರು ಬಾರಿ ದೀಪಾವಳಿ ಆಚರಿಸುವ ಸಮಯ ಬಂದಿದೆ. ಮೊದಲನೆಯದಾಗಿ ಭಾನುವಾರ, 2ನೆಯದಾಗಿ ಮತಎಣಿಕೆ ನಡೆಯುವ ಡಿ.3ರಂದು ಹಾಗೂ ಅಯೋಧ್ಯೆಯಲ್ಲಿ ರಾಮಮೂರ್ತಿ ಪ್ರತಿಷ್ಠಾಪಿಸುವ ಜ. 22ರಂದು ಮೂರನೆಯ ಬಾರಿಗೆ ದೀಪಾವಳಿ ಆಚರಿಸಬಹುದು ಎಂದು ಹೇಳಿದರು.

'ಮುಸ್ಲಿಮರ ಪ್ರಗತಿ ತಂದೆಗಿಂತ ಹೆಚ್ಚು ಮಾಡುವೆ'



ಜಗನ್ ಮೋಹನ್ ರೆಡ್ಡಿ

ವಿಜಯವಾಡ (ಪಿಟಿಐ): 'ಮುಸ್ಲಿಮರ ಕಲ್ಯಾಣ ಕಾರ್ಯಗಳಿಗೆ ಮಾಜಿ ಮುಖ್ಯಮಂತ್ರಿ ಹಾಗೂ ನನ್ನ ತಂದೆ ವೈ.ಎಸ್. ರಾಜಶೇಖರ ರೆಡ್ಡಿ ಶ್ರಮಿಸಿದ್ದು, ಅದಕ್ಕೂ ಹೆಚ್ಚಿನದ್ದನ್ನು ನಾನು ಮಾಡುವೆ' ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಹೇಳಿದರು.

'ನನ್ನ ತಂದೆ ಮುಸ್ಲಿಮರ ಅಭಿವೃದ್ಧಿಗಾಗಿ ಒಂದು ಹೆಜ್ಜೆ ಇಟ್ಟಿದ್ದರು. ನಾನು ಹೆಮ್ಮೆಯಿಂದ ಎರಡು ಹೆಜ್ಜೆಯಿಡುವೆ' ಎಂದು ಶನಿವಾರ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಕಟಿಸಿದರು.

ರಾಷ್ಟ್ರೀಯ ಶಿಕ್ಷಣ ದಿನ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ದಿನದ ಅಂಗವಾಗಿ ಆಯೋಜಿಸಿದ್ದ ರ್‍ಯಾಲಿಯಲ್ಲಿ ಮಾತನಾಡಿದ ಅವರು '2019ರಲ್ಲಿ ವೈಎಸ್‌ಆರ್‌ಸಿಪಿ ನೇತೃತ್ವದ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ ರಾಜಕೀಯ, ಆರ್ಥಿಕ, ಮಹಿಳಾ ಸಬಲೀಕರಣ ಸೇರಿದಂತೆ ಇನ್ನಿತರೆ ಕ್ಷೇತ್ರಗಳಲ್ಲಿ ಮುಸ್ಲಿಂ ಸಮುದಾಯದಲ್ಲಾಗಿರುವ ಭಾರಿ ಬದಲಾವಣೆ ಗಮನಿಸಬೇಕು' ಎಂದರು.

ಮಧ್ಯಪ್ರದೇಶ ವಿಧಾನಸಭಾ ಚುನಾವಣೆ: ಬಿಜೆಪಿ ಪ್ರಣಾಳಿಕೆ ಬಿಡುಗಡೆ

₹450ಕ್ಕೆ ಎಲ್‌ಪಿಜಿ ಸಿಲಿಂಡರ್, ಉಚಿತ ಶಿಕ್ಷಣ



ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಭೋಪಾಲ್‌ನಲ್ಲಿ ಶನಿವಾರ ಬಿಡುಗಡೆ ಮಾಡಿದರು. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಇತರರು ಇದ್ದಾರೆ ಪಿಟಿಐ ಚಿತ್ರ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಶನಿವಾರ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಗೋಧಿ, ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆ ಹಾಗೂ ರಾಜ್ಯದ ಪ್ರಮುಖ ಯೋಜನೆ ಲಾಡ್ಲಿ ಬೆಹನಾ ಫಲಾನುಭವಿಗಳಿಗೆ ಮನೆಗಳನ್ನು ನೀಡುವುದಾಗಿ ಭರವಸೆ ನೀಡಿದೆ.

ಬಡ ಕುಟುಂಬಗಳ ಹೆಣ್ಣು ಮಕ್ಕಳಿಗೆ ಸ್ನಾತಕೋತ್ತರ ಪದವಿವರೆಗೆ ಉಚಿತ ಶಿಕ್ಷಣ, 12ನೇ ತರಗತಿವರೆಗೆ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಲಾಡ್ಲಿ ಬೆಹನಾ ಮತ್ತು 'ಪಿಎಂ' ಉಜ್ವಲಾ ಯೋಜನೆಗಳ ಫಲಾನುಭವಿಗಳಿಗೆ ₹ 450ಕ್ಕೆ ಎಲ್‌ಪಿಜಿ ಸಿಲಿಂಡರ್ ನೀಡುವುದು ಪ್ರಮುಖ ಅಂಶಗಳಾಗಿವೆ.

96 ಪುಟಗಳ 'ಸಂಕಲ್ಪ ಪತ್ರ' (ವಿಷನ್ ಡಾಕ್ಯುಮೆಂಟ್) ವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪಕ್ಷದ ರಾಜ್ಯ ಅಧ್ಯಕ್ಷ ವಿ.ಡಿ.ಶರ್ಮಾ, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಇತರ ನಾಯಕರು ಬಿಡುಗಡೆ ಮಾಡಿದರು.

ಪ್ರಣಾಳಿಕೆಯಲ್ಲಿ ಕ್ವಿಂಟಲ್ ಗೋಧಿಗೆ ₹2,700 ಮತ್ತು ಭತ್ತಕ್ಕೆ ₹3,100 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹಾಗೂ ಪ್ರತಿ ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ಉದ್ಯೋಗ ಅಥವಾ ಸ್ವಯಂ ಉದ್ಯೋಗದ ಅವಕಾಶ ನೀಡುವ ಭರವಸೆ ನೀಡಿದೆ.

'ಸಂಕಲ್ಪ ಪತ್ರ'ದ ಪ್ರಕಾರ, ರಾಜ್ಯದಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಂಡರೆ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಮಾದರಿಯಲ್ಲಿ ತಾಂತ್ರಿಕ ಸಂಸ್ಥೆ ಮತ್ತು ಏಮ್ಸ್ (ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್) ಮಾದರಿಯಲ್ಲಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

ಆರು ಹೊಸ ಎಕ್ಸ್‌ಪ್ರೆಸ್ ವೇಗಳು ಮತ್ತು ಬುಡಕಟ್ಟು ಸಮುದಾಯಗಳ ಸಬಲೀಕರಣಕ್ಕಾಗಿ ₹3 ಲಕ್ಷ ಕೋಟಿ ಬಜೆಟ್ ನೀಡಲಾಗುವುದು ಎಂದು ಹೇಳಿದೆ.

ಸಮಾಜದ ಎಲ್ಲಾ ವರ್ಗಗಳು, ಬುದ್ಧಿಜೀವಿಗಳ ಜತೆ ಚರ್ಚೆ ಮತ್ತು ಸಲಹೆಗಳನ್ನು ಪಡೆದ ನಂತರ ಸಮಿತಿಯು ಪ್ರಣಾಳಿಕೆಯನ್ನು ಸಿದ್ಧಪಡಿಸಿದೆ. ಪ್ರಣಾಳಿಕೆಯು ಜನರ ಆಕಾಂಕ್ಷೆಗಳನ್ನು ಒಳಗೊಂಡಿದೆ. ಅದರ ಬಗ್ಗೆ ಚರ್ಚಿಸಲು ವಿಭಾಗೀಯ ಮಟ್ಟದಲ್ಲಿ ಸಮಾವೇಶಗಳನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ವಿ.ಡಿ. ಶರ್ಮಾ ತಿಳಿಸಿದರು.

ಜನ ಆಶೀರ್ವಾದ ಯಾತ್ರೆ ವೇಳೆ ಏಳು ಲಕ್ಷ ಸಲಹೆಗಳನ್ನು ಸ್ವೀಕರಿಸಲಾಗಿತ್ತು. ಅವುಗಳಲ್ಲಿ ಅನೇಕ ಅಂಶಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಲಾಗಿದೆ ಎಂದರು.

ಮುಖ್ಯಮಂತ್ರಿ ಚೌಹಾಣ್ ಮಾತನಾಡಿ, 'ನರಕ ಚತುರ್ದಶಿ' ಸಂದರ್ಭದಲ್ಲಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಏಕೆ ಹೊರತರುತ್ತಿದೆ ಎಂದು ಕಾಂಗ್ರೆಸ್ ಆಶ್ಚರ್ಯ ಪಡುತ್ತಿದೆ. ಕಾಂಗ್ರೆಸ್‌ಗೆ ಪುರಾಣ, ಇತಿಹಾಸ ಗೊತ್ತಿಲ್ಲ. ಕೃಷ್ಣನು ನರಕಾಸುರನಿಂದ ಸಹೋದರಿಯರನ್ನು ಮುಕ್ತಗೊಳಿಸಿದ ದಿನ ಅದು ಎಂದು ಅವರು ಹೇಳಿದರು.

ಪ್ರಣಾಳಿಕೆಗಳಲ್ಲಿನ ಅಂಶಗಳನ್ನು ಅಕ್ಷರಶಃ ಜಾರಿಗೆ ತಂದ ಏಕೈಕ ಪಕ್ಷ ಬಿಜೆಪಿ. ಪಕ್ಷವು ತನ್ನ ಮೇಲ್ವಿಚಾರಣಾ ವ್ಯವಸ್ಥೆ ಮೂಲಕ ಪ್ರಣಾಳಿಕೆ ಅನುಷ್ಠಾನದ ಮೇಲೆ ಕಣ್ಣಿಟ್ಟಿದೆ.

ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಪ್ರಣಾಳಿಕೆಯನ್ನು ಮಧ್ಯ ಪ್ರದೇಶದ ಅಭಿವೃದ್ಧಿಗೆ ಮಾರ್ಗ ಸೂಚಿಯನ್ನಾಗಿ ಮಾಡಲಾಗುವುದು. ಸರ್ಕಾರವು ಎಲ್ಲಾ ಭರವಸೆಗಳನ್ನು ಜಾರಿಗೆ ತರುವ ಮೂಲಕ ಜನರ ಆಕಾಂಕ್ಷೆ ಈಡೇರಿಸಲು ಪ್ರಯತ್ನಿಸಿದೆ.

ಶಿವರಾಜ್ ಸಿಂಗ್ ಚೌಹಾಣ್, ಮಧ್ಯಪ್ರದೇಶ ಮುಖ್ಯಮಂತ್ರಿ

ಡೀಪ್‌ಫೇಕ್ ವಿಡಿಯೊ: ದೆಹಲಿ ಪೊಲೀಸರಿಂದ ಮೆಟಾಗೆ ಪತ್ರ



ರಶ್ಮಿಕಾ ಮಂದಣ್ಣ

ನವದೆಹಲಿ (ಪಿಟಿಐ): ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ಖಾತೆದಾರರ ಯುಆರ್‌ಎಲ್ ಒದಗಿಸುವಂತೆ ದೆಹಲಿ ಪೊಲೀಸರು ಮೆಟಾ ಕಂಪನಿಗೆ ಪತ್ರ ಬರೆದಿದ್ದಾರೆ.

ಘಟನೆ ಕುರಿತು ನಗರ ಪೊಲೀಸರು ಎಫ್‌ಐಆರ್ ದಾಖಲಿಸಿದ ಬೆನ್ನಲ್ಲೇ ಮೆಟಾಗೆ ಪತ್ರ ಬರೆಯಲಾಗಿದೆ.

'ವಿಡಿಯೊ ರಚಿಸಿದ ಖಾತೆದಾರರ ಯುಆರ್‌ಎಲ್ ಐಡಿಯನ್ನು ಬಳಸಲು ಅವಕಾಶ ನೀಡಬೇಕೆಂದೂ ಮೆಟಾಗೆ ಬರೆದ ಪತ್ರದಲ್ಲಿ ತಿಳಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಡೀಪ್‌ಫೇಕ್ ವಿಡಿಯೊ ಕುರಿತಂತೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 465, 469, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66ಸಿ ಮತ್ತು 66ಇ ಅಡಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣ ಭೇದಿಸಲು ಅಧಿಕಾರಿಗಳ ತಂಡವೊಂದನ್ನು ರಚಿಸಲಾಗಿದೆ. ಶೀಘ್ರದಲ್ಲೇ ಪ್ರಕರಣದ ಆರೋಪಿಗಳನ್ನು ಪತ್ತೆಹಚ್ಚಲಾಗುವುದು' ಎಂದು ಹೇಳಿದರು.

ಉತ್ತರಾಖಂಡ: ಯುಸಿಸಿ ಅಂಗೀಕಾರಕ್ಕೆ ಶೀಘ್ರ ಅಧಿವೇಶನ

ಒಂದನೇ ಪುಟದಿಂದ...

ಯುಸಿಸಿ ಕರಡು ಮಸೂದೆ ರಚನೆ ಸಂಬಂಧ ಕಳೆದ ವರ್ಷ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸಮಿತಿ ರಚಿಸಿದ್ದರು. ಈ ಸಮಿತಿ ರಚಿಸಿರುವ ಕರಡು ಮಸೂದೆಯನ್ನೇ ಇಡೀ ರಾಷ್ಟ್ರಕ್ಕೆ ಅನ್ವಯಿಸಲು ಬಿಜೆಪಿ ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ.

'ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನ್ ದೇಸಾಯಿ ಅವರ ನೇತೃತ್ವದ ಸಮಿತಿಯು ಕರಡು ಮಸೂದೆಯನ್ನು ಅಂತಿಮಗೊಳಿಸಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸುವುದಷ್ಟೇ ಬಾಕಿ ಇದೆ' ಎಂದು 'ಪ್ರಜಾವಾಣಿ'ಗೆ ಮೂಲಗಳು ತಿಳಿಸಿವೆ.

'ಏಕರೂಪ ಸಂಹಿತೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಈ ಮಾದರಿ ಮಸೂದೆಯನ್ನು ಸಮಿತಿಯು ಸರ್ಕಾರಕ್ಕೆ ಸಲ್ಲಿಸಲಿದೆ. ಇದಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದ ಬಳಿಕ ವಿಧಾನಸಭಾ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ನೀಡಲಾಗುವುದು' ಎಂದು ಮೂಲಗಳು ಹೇಳಿವೆ.

'ಮಹಿಳಾ ಸಶಕ್ತೀಕರಣವೇ ಪ್ರಸ್ತಾವಿತ ಮಸೂದೆಯ ಮೂಲ ಗುರಿಯಾಗಿದೆ. ವೈವಾಹಿಕ ಕಟ್ಟುಪಾಡು ಹಾಗೂ ನಾಗರಿಕರ ಯಾವುದೇ ಸಾಂಪ್ರದಾಯಿಕ ನಂಬಿಕೆಗಳಿಗೆ ಧಕ್ಕೆ ತರುವ ಉದ್ದೇಶ ಹೊಂದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು. ನಿಖಾ–ಹಲಾಲ ಹಾಗೂ ಬಹುಪತ್ನಿತ್ವ ಪದ್ಧತಿ ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಮಸೂದೆಯಲ್ಲಿ ವಿವರಿಸಲಾಗಿದೆ. ಮಹಿಳೆಯರಿಗೂ ಪಿತ್ರಾರ್ಜಿತ ಹಕ್ಕುಗಳನ್ನು ಸಮಾನವಾಗಿ ನೀಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಸಹಜೀವನ ಸಂಬಂಧ ನಡೆಯುವುದಕ್ಕೂ ಮೊದಲು ಸಂಬಂಧಪಟ್ಟವರು ನೋಂದಣಿ ಮಾಡಿಕೊಳ್ಳುವ ಬಗ್ಗೆಯೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಹೇಳಲಾಗಿದೆ.

ಜವಾಬ್ದಾರಿಯುತ ಪಿತೃತ್ವದ ಆಧಾರದ ಮೇಲೆ ಜನಸಂಖ್ಯಾ ನಿಯಂತ್ರಣದ ಬಗ್ಗೆಯೂ ವರದಿಯಲ್ಲಿ ವಿವರಿಸಲಾಗಿದೆ. ಉತ್ತರಾಖಂಡ ಸರ್ಕಾರದ ಈ ಮಸೂದೆಯನ್ನು ಬಿಜೆಪಿ ಆಡಳಿತ ಇರುವ ದೇಶದ ಇತರೆ ರಾಜ್ಯಗಳಲ್ಲೂ ಅಳವಡಿಸಿಕೊಳ್ಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ. ಏಕರೂಪ ಸಂಹಿತೆಯ ಮಸೂದೆ ಸಿದ್ಧಪಡಿಸಲು 2022ರ ಮೇ ತಿಂಗಳಿನಲ್ಲಿ ಸಮಿತಿ ರಚಿಸಲಾಗಿತ್ತು. ಹಲವು ಮಧ್ಯಸ್ಥಗಾರರಿಂದ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಸಮಿತಿಯು ಕರಡು ವರದಿಯನ್ನು ಸಿದ್ಧಪಡಿಸಿದೆ. 2.31 ಲಕ್ಷ ಮನವಿ ಪತ್ರಗಳನ್ನು ಸ್ವೀಕರಿಸಿದೆ. ಮುಸ್ಲಿಂ ಸಮುದಾಯದ ಮಹಿಳೆಯರು ಸೇರಿದಂತೆ 20 ಸಾವಿರಕ್ಕೂ ಹೆಚ್ಚು ಜನರು ಸಮಿತಿಯ ಮುಂದೆ ಖುದ್ದಾಗಿ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ.

ಕ್ರಿಪ್ಟೊ ವಹಿವಾಟಿಗೆ ಮಾರ್ಗಸೂಚಿ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಕ್ರಿಪ್ಟೊ ಕರೆನ್ಸಿ ವಹಿವಾಟುಗಳ ನಿಯಂತ್ರಣಕ್ಕಾಗಿ ಮಾರ್ಗಸೂಚಿ ರೂಪಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಅರ್ಜಿಯಲ್ಲಿ ಉಲ್ಲೇಖಿಸಿರುವ ವಿಚಾರವು ಶಾಸಕಾಂಗದ ನಿರ್ದೇಶನದ ಸ್ವರೂಪದಲ್ಲಿದೆ ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ಕ್ರಿಪ್ಟೊ ಕರೆನ್ಸಿ ಸಂಬಂಧಿತ ಪ್ರಕರಣದಲ್ಲಿ ಜಾಮೀನು ಪಡೆಯುವುದು ಅರ್ಜಿದಾರರ ಮೂಲ ಉದ್ದೇಶವಾಗಿದೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೂ ಒಳಗೊಂಡಿದ್ದ ನ್ಯಾಯಪೀಠ ಹೇಳಿದೆ.

'ಅರ್ಜಿದಾರರಿಗೆ ಜಾಮೀನಿಗಾಗಿ ಸೂಕ್ತ ನ್ಯಾಯಾಲಯದ ಮೊರೆ ಹೋಗುವ ಸ್ವಾತಂತ್ರ್ಯವಿದೆ' ಎಂದೂ ಹೇಳಿದೆ.

ಕ್ರಿಪ್ಟೊ ಕರೆನ್ಸಿ ಪ್ರಕರಣದಲ್ಲಿ ಆರೋಪಿಯಾಗಿರುವ ಉತ್ತರಪ್ರದೇಶದ ವ್ಯಕ್ತಿಯೊಬ್ಬರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಶಸ್ತ್ರಾಸ್ತ್ರ ಕಳ್ಳಸಾಗಣೆ: ನಾಲ್ವರ ವಿರುದ್ಧ ಎನ್‌ಐಎ ಪೂರಕ ಆರೋಪಪಟ್ಟಿ

ನವದೆಹಲಿ (ಪಿಟಿಐ): ಖಾಲಿಸ್ತಾನ್ ಟೈಗರ್ ಫೋರ್ಸ್‌ಗೆ (ಕೆಟಿಎಫ್) ನೇಮಕಾತಿ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳ ವಿರುದ್ಧ ಎನ್‌ಐಎ ಶನಿವಾರ ಪೂರಕ ಆರೋಪಪಟ್ಟಿಯನ್ನು ದಾಖಲಿಸಿದೆ.

ಆರೋಪಿಗಳಾದ ಅಮೃತ್ ಪಾಲ್ ಸಿಂಗ್ ಅಲಿಯಾಸ್ ಅಮ್ಮಿ, ಅಮೃಕ್‌ಸಿಂಗ್, ಜಸ್ಸಾ ಸಿಂಗ್ ಮತ್ತು ಗಗನದೀಪ್ ಸಿಂಗ್ ಅಲಿಯಾಸ್ ಮಿಥಿ ವಿರುದ್ಧ ಇಲ್ಲಿನ ವಿಶೇಷ ಎನ್‌ಐಎ ಕೋರ್ಟ್‌ನಲ್ಲಿ ಆರೋಪಪಟ್ಟಿ ದಾಖಲಿಸಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ. ಹಿಂದೆ 9 ಆರೋಪಿಗಳ ವಿರುದ್ಧ ಜು.22ರಂದು ಎನ್‌ಐಎ ಆರೋಪಪಟ್ಟಿ ದಾಖಲಿಸಿತ್ತು.

ಭಯೋತ್ಪಾದನೆಗೆ ಸಂಚು ಆರೋಪ ಕುರಿತಂತೆ ಕೆಟಿಎಫ್ ಮತ್ತು ಬಬ್ಬರ್ ಖಾಲ್ಸಾ ಇಂಟರ್ ನ್ಯಾಷನಲ್ (ಬಿಕೆಐ) ಅದರ ಜೊತೆಗೆ ಸಂಪರ್ಕವನ್ನು ಹೊಂದಿದ್ದ 12 ಸದಸ್ಯರ ವಿರುದ್ಧ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ಈಗ ಆರೋಪಪಟ್ಟಿ ದಾಖಲಿಸಿರುವ ನಾಲ್ವರು ಆರೋಪಿಗಳು ಮುಖ್ಯ ಆರೋಪಿ ಅರ್ಷ್ ದಾಲಾ ಜೊತೆಗೂಡಿ ಸಂಚಿನಲ್ಲಿ ಭಾಗಿಯಾಗಿದ್ದರು ಹಾಗೂ ಕೆಟಿಎಫ್‌ಗಾಗಿ ಸಂಪನ್ಮೂಲ ಕ್ರೋಡೀಕರಿಸಲು ಒತ್ತು ನೀಡಿದ್ದರು ಎಂದು ತಿಳಿಸಿದ್ದಾರೆ.

ದತ್ತಾಂಶಕ್ಕೆ ಕಾಯುತ್ತಿವೆ ಅಮೆರಿಕ, ರಷ್ಯಾ

ಜಮ್ಮು(ಪಿಟಿಐ): ಚಂದ್ರಯಾನ–3 ಮತ್ತು ಆದಿತ್ಯ ಎಲ್–1 ಯೋಜನೆಗಳ ಮೂಲಕ ಸಂಗ್ರಹಿಸಿರುವ ದತ್ತಾಂಶಗಳನ್ನು ಭಾರತವು ಹಂಚಿಕೊಳ್ಳುವುದಕ್ಕಾಗಿ ಅಮೆರಿಕ ಮತ್ತು ರಷ್ಯಾ ಕಾತರದಿಂದ ಕಾಯುತ್ತಿವೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಶನಿವಾರ ಹೇಳಿದ್ದಾರೆ.


ಜಿತೇಂದ್ರ ಸಿಂಗ್

ಪ್ರಧಾನಿ ನರೇಂದ್ರ ಮೋದಿ ಅವರ ಬಾಹ್ಯಾಕಾಶ ವಲಯದಲ್ಲಿ ಖಾಸಗಿ ಸಹಭಾಗಿತ್ವದ ನೀತಿಯನ್ನೂ ಅವರು ಪ್ರಶಂಸಿಸಿದ್ದಾರೆ.

ಚಂದ್ರಯಾನ–3 ಮತ್ತು ಆದಿತ್ಯ ಎಲ್–1 ಯೋಜನೆಗಳು ಭಾರತದ ವೇಗದ ಅಭಿವೃದ್ಧಿಯ ಸಂಕೇತವಾಗಿದೆ ಎಂದೂ ಬಣ್ಣಿಸಿದ್ದಾರೆ.

ಚಂದ್ರನ ವಾತಾವರಣ, ಖನಿಜ ಮತ್ತು ಉಷ್ಣ ಪರಿಸ್ಥಿತಿಗಳ ಕುರಿತು ಚಂದ್ರಯಾನ–3 ದತ್ತಾಂಶ ಸಂಗ್ರಹಿಸುತ್ತಿದೆ ಎಂದು ವಿವರಿಸಿದ್ದಾರೆ.

ಇರುಳ ವಿರುದ್ಧ ಬೆಳಕಿನ ಯುದ್ಧ

• ನವೀನ ಗಂಗೋತ್ರಿ



ಬೆಳಕನ್ನು ಸಂಭ್ರಮಿಸುವುದು ಭಾರತೀಯರಿಗೆ ಬಲು ಸಹಜವಾಗಿ ಒದಗಿಬಂದ ಪ್ರವೃತ್ತಿ. ಹಬ್ಬ ಅಥವಾ ಉತ್ಸವ ಯಾವುದೇ ಇದ್ದರೂ ಅದರಲ್ಲಿ ದೀಪ ಮತ್ತು ಅಗ್ನಿಗೆ ಆದ್ಯಸ್ಥಾನ ಇದ್ದೇ ಇದೆ. ಹಾಗೆಂದೇ ಬೆಳಕಿನ ಹಬ್ಬವೊಂದನ್ನು ರೂಢಿಸಿಕೊಂಡಿದ್ದೇವೆ. ದೀಪಾವಳಿ ಹಬ್ಬದ ಆಚರಣೆ ಅತ್ಯಂತ ಪ್ರಾಚೀನ ಕಾಲದಿಂದಲೂ ಇತ್ತು ಎನ್ನುವುದಕ್ಕೆ ವಿವಿಧ ಭಾರತೀಯ ಭಾಷೆಗಳ ಸಾಹಿತ್ಯದಲ್ಲಿ ಪುರಾವೆ ಸಿಗುತ್ತದೆ. ಆಯಾ ಪ್ರಾದೇಶಿಕ ಮಹತ್ತಿನ ಸಂಗತಿಗಳು ಕಾಲಾಂತರದಲ್ಲಿ ಈ ಹಬ್ಬದೊಂದಿಗೆ ಮಿಳಿತಗೊಂಡಂತೆ ತೋರುತ್ತದೆ. ಹಾಗಾಗಿಯೇ ಭಾರತದ ಭಿನ್ನ ಭಿನ್ನ ಪ್ರದೇಶಗಳಲ್ಲಿ ದೀಪಾವಳಿಯ ಜೊತೆಗೆ ಬೆಸೆದಿರುವ ಕಥೆಗಳು ಭಿನ್ನ ಭಿನ್ನ. ಹಾಗಿದ್ದೂ ಕೆಲವು ಐತಿಹ್ಯಗಳು ಎಲ್ಲ ಕಡೆಯೂ ಸಮಾನವಾಗಿವೆ. ಅದರಲ್ಲಿ ಪ್ರಸಿದ್ಧವಾದ್ದು ನರಕಾಸುರನ ವಧೆ. ಇದು ಭಾಗವತ ಪುರಾಣದಲ್ಲಿ ಬರುವ ಒಂದು ಕಥೆ.

ವರಾಹಾವತಾರದ ಕಾಲದಲ್ಲಿ ವಿಷ್ಣುವಿನ ಮೈಬೆವರಿನಿಂದ ಭೂದೇವಿಯಲ್ಲಿ ಹುಟ್ಟಿದ ಈತನಿಗೆ 'ಭೌಮಾಸುರ' ಎಂದೂ ಹೆಸರು. ಭೂದೇವಿಯ ಆಗ್ರಹಕ್ಕೆ ಮಣಿದು ಅವನಿಗೆ ವೈಷ್ಣವಾಸ್ತ್ರವನ್ನು ಕೊಡಮಾಡುತ್ತಾನೆ ಮಹಾವಿಷ್ಣು. ಆದರೆ ಪ್ರವೃತ್ತಿಯಿಂದ ರಾಕ್ಷಸನಾದ ಅವನು, ಆ ಅಸ್ತ್ರದ ಮದದಿಂದ ಲೋಕಕಂಟಕನಾಗುತ್ತಾನೆ. ಮುಂದೆ ವಿಷ್ಣುವಿನ ಕೃಷ್ಣಾವತಾರದ ಕಾಲದಲ್ಲಿ ಇಂದ್ರನ ಕೋರಿಕೆಯಂತೆ ಮುರಾಸುರ, ನರಕಾಸುರ ಮತ್ತು ಅವನ ಗಣಗಳನ್ನೆಲ್ಲ ಕೃಷ್ಣನು ಸಂಹರಿಸುತ್ತಾನೆ. ಅಂದಿನಿಂದ ಇಂದಿನವರೆಗೆ ಆಶ್ವಯುಜ ಮಾಸದ ಕೃಷ್ಣ ಚತುರ್ದಶಿಯ ದಿನವನ್ನು ನರಕಾಸುರ ಸಂಹಾರದ ದಿನವನ್ನಾಗಿ ಭಾರತೀಯ ಸಂಸ್ಕೃತಿಯು ನೆನಪಿಟ್ಟುಕೊಂಡಿದೆ.

ಭಾರತದ ಕೆಲವು ರಾಜ್ಯಗಳಲ್ಲಿ ದೀಪಾವಳಿಯ ಹಬ್ಬದ ಜೊತೆಗೆ ಬಲಿ ಚಕ್ರವರ್ತಿಯನ್ನೂ ನೆನೆಯಲಾಗುತ್ತದೆ. ಇವನಾದರೋ ವಿಷ್ಣುಭಕ್ತ, ವೈದಿಕ ಕರ್ಮಗಳಲ್ಲಿ ಶ್ರದ್ಧೆಯಿಟ್ಟವ. ಹಾಗಿದ್ದೂ ತನ್ನ ರಜಸ್ಸು ಮತ್ತು ತಮಸ್ಸಿನ ಗುಣದಿಂದಾಗಿ ಮೂರು ಲೋಕಕ್ಕೂ ತಾನೇ ಇಂದ್ರನಾಗಿ ಮೆರೆಯುತ್ತಾನೆ, ಇಂದ್ರನನ್ನು ಪದಚ್ಯುತಗೊಳಿಸುತ್ತಾನೆ. ಇದು ದೇವತೆಗಳನ್ನು ಕಂಗೆಡಿಸಲಾಗಿ ಅವರೆಲ್ಲ ವಿಷ್ಣುವಿನ ಮೊರೆಹೊಗುತ್ತಾರೆ. ಚಿರಂಜೀವಿಯಾದ ಇವನನ್ನು ವಿಷ್ಣುವು ಪಾತಾಳಕ್ಕೆ ತಳ್ಳುತ್ತಾನೆ. ತನ್ನ ರಾಜ್ಯವನ್ನು ಕಾಣಲೆಂದು ವರ್ಷಕ್ಕೊಮ್ಮೆ ಭೂಲೋಕಕ್ಕೆ ಬರುವ ಅವಕಾಶವನ್ನು ಬಲಿ ಉಳಿಸಿಕೊಳ್ಳುತ್ತಾನೆ. ಹಾಗಾಗಿ ದೀಪಾವಳಿ ಪಾಡ್ಯದಂದು ಬಲಿ ಭೂಲೋಕಕ್ಕೆ ಬರುವನೆಂಬ ನಂಬಿಕೆ ಇದೆ.

ಇನ್ನು ದಸರೆಯ ಹೊತ್ತಿಗೆ ರಾವಣಸಂಹಾರ ಮಾಡಿ ಶ್ರೀಲಂಕೆಯಿಂದ ಹೊರಟು ಶ್ರೀರಾಮಚಂದ್ರ ಮತ್ತು ಸೀತಾದೇವಿಯರು ಅಯೋಧ್ಯೆಯನ್ನು ತಲುಪಿದ್ದು ದೀಪಾವಳಿಯಂದೇ. ಹಾಗಾಗಿ ದೀಪಾವಳಿಯ ಹೊತ್ತಿಗೆ ಅಯೋಧ್ಯೆಯು ಅಕ್ಷರಶಃ ಬೆಳಕಿನ ಲೋಕವಾಗಿ ಮೈದಾಳುತ್ತದೆ. ಈ ನಡಾವಳಿಯನ್ನು ನಮ್ಮ ಕಾಲದಲ್ಲಿಯೂ ನೋಡಬಹುದಾಗಿದೆ.

ಈ ಇಲ್ಲ ಕಥೆಗಳ ಒಳ ಮರ್ಮ ಒಂದೇ, ಅದು ಒಳಿತು ಕೆಡುಕುಗಳ ಪ್ರಜ್ಞೆ ಮತ್ತು ಒಳಿತನ್ನು ಉಳಿಸಿ ಎತ್ತಿಹಿಡಿಯುವ ಯತ್ನ. ಕಾಲ ಕಾಲಕ್ಕೆ ಮನುಷ್ಯನಿಗೆ ಒಳಿತು ಕೆಡುಕುಗಳ ನಡುವೆ ಭೇದವೇ ಮರೆತುಹೋಗಿ ಸಮಾಜ ಕಂಗೆಡುತ್ತದೆ ಎಂಬುದಕ್ಕೆ ಐತಿಹಾಸಿಕ ಉದಾಹರಣೆಗಳಿವೆ. ನಾವಾದರೂ ಉಗ್ರವಾದಕ್ಕೂ ದೇಶನಿರ್ಮಾಣದ ಕ್ರಾಂತಿಗೂ, ಚಾಮುಂಡಿಗೂ ಮಹಿಷಾಸುರನಿಗೂ ವ್ಯತ್ಯಾಸ ಅರಿಯದ ಭ್ರಾಂತ ಅವಸ್ಥೆಯಲ್ಲಿದ್ದೇವೆ. ಒಳಿತಿನ ಮೇಲ್ಮೆಯನ್ನು ಮತ್ತು ಕೆಡುಕಿನ ವಿರುದ್ಧ ಅದರ ವಿಜಯವನ್ನು ಪದೇ ಪದೇ ಕೀರ್ತಿಸುವ ಮತ್ತು ಅದನ್ನು ನಿಚ್ಚಳಗೊಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ದೀಪಾವಳಿಯಂಥ ಹಬ್ಬಗಳು ಮುಖ್ಯವಾಗುತ್ತವೆ. ಬೆಳಕು ನಮ್ಮ ಬದುಕಿನ ಭರವಸೆ. ಈ ದೀಪಾವಳಿ ನಮಗಿದನ್ನು ಮತ್ತೆ ಮತ್ತೆ ಅರುಹಲಿ. ❖

ಹರಿಯಾಣ: ಕಳ್ಳಬಟ್ಟಿಗೆ 12 ಬಲಿ

ಯಮುನಾನಗರ/ಅಂಬಾಲಾ (ಪಿಟಿಐ): ಹರಿಯಾಣದ ಎರಡು ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿ ನಡೆದಿರುವ ಪ್ರತ್ಯೇಕ ಪ್ರಕರಣಗಳಲ್ಲಿ ಕಳ್ಳಬಟ್ಟಿಯನ್ನು ಕುಡಿದು 12 ಜನರು ಸತ್ತಿದ್ದಾರೆ. ಶುಕ್ರವಾರ ರಾತ್ರಿ ಎಂಟು ಜನರು ಸತ್ತಿದ್ದು, ಅಸ್ವಸ್ಥಗೊಂಡಿದ್ದ ಐವರು ಶನಿವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಮುನಾನಗರ ಜಿಲ್ಲೆಯಲ್ಲಿ 10 ಜನರು ಸತ್ತಿದ್ದರೆ, ನೆರೆಯ ಅಂಬಾಲಾದಲ್ಲಿ ನಡೆದ ಘಟನೆಯಲ್ಲಿ ಇಬ್ಬರು ಸತ್ತಿದ್ದಾರೆ. ಘಟನೆ ಕುರಿತಂತೆ ವಿರೋಧ ಪಕ್ಷಗಳಾದ ಕಾಂಗ್ರೆಸ್, ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ಭಾರತೀಯ ರಾಷ್ಟ್ರೀಯ ಲೋಕದಳ (ಐಎನ್‌ಎಲ್‌ಡಿ), ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿವೆ.

'ಇಂಥ ಅಹಿತಕರ ಘಟನೆಗಳು ಹಿಂದೆಯೂ ನಡೆದಿವೆ. ಆದರೆ, ಮನೋಹರ ಲಾಲ್ ಖಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಅದರಿಂದ ಪಾಠ ಕಲಿತಿಲ್ಲ ಎಂಬುದನ್ನು ಈ ಘಟನೆ ದೃಢಪಡಿಸುತ್ತದೆ' ಎಂದು ತರಾಟೆಗೆ ತೆಗೆದುಕೊಂಡಿವೆ.

ಯಮುನಾನಗರ ಜಿಲ್ಲೆಯ ಮಂಡೆಬಾರಿ, ಪಂಜೆಟೊ ಕ ಮಾಜ್ರಾ, ಫೂಸ್‌ಗರ್, ಸಾರನ್ ಗ್ರಾಮಗಳಲ್ಲಿ ಘಟನೆ ನಡೆದಿದೆ. ಅಂಬಾಲಾ ಜಿಲ್ಲೆಯಲ್ಲಿ ಉತ್ತರ ಪ್ರದೇಶದಿಂದ ವಲಸೆ ಬಂದಿದ್ದ ಇಬ್ಬರು ಕಾರ್ಮಿಕರು ಸತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಯಮುನಾನಗರ ಜಿಲ್ಲೆಯಲ್ಲಿ ಕೃತ್ಯಕ್ಕೆ ಸಂಬಂಧಿಸಿ ಏಳು ಜನರನ್ನು ಬಂಧಿಸಲಾಗಿದೆ. ತನಿಖೆಗಾಗಿ ವಿಶೇಷ ತಂಡ ರಚಿಸಲಾಗಿದೆ. ಅಂಬಾಲಾದಲ್ಲಿ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಾಪಾರಿಗಳು ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ದೀಪ ದಾಖಲೆ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ದೀಪಾವಳಿ ಪ್ರಯುಕ್ತ ಶನಿವಾರ ಆಯೋಜಿಸಿದ್ದ ದೀಪೋತ್ಸವದಲ್ಲಿ 22.23 ಲಕ್ಷ ಹಣತೆಗಳನ್ನು ಏಕಕಾಲಕ್ಕೆ ಬೆಳಗಲಾಗಿದ್ದು, ಗಿನ್ನಿಸ್ ವಿಶ್ವದಾಖಲೆ ನಿರ್ಮಾಣಗೊಂಡಿದೆ –ಪಿಟಿಐ ಚಿತ್ರ

ಲಾಲು ಆಪ್ತನ ಬಂಧನ

ನವದೆಹಲಿ (ಪಿಟಿಐ): 'ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್, ಅವರ ಮಗ ತೇಜಸ್ವಿ ಯಾದವ್ ಅವರ ಆಪ್ತ ಅಮಿತ್ ಕಾತ್ಯಾಲ್ ಅವರನ್ನು ಇ.ಡಿ ಬಂಧಿಸಿದೆ' ಎಂದು ಮೂಲಗಳು ಶನಿವಾರ ತಿಳಿಸಿವೆ.

'ಅಮಿತ್ ಅವರನ್ನು ಇ.ಡಿ ಶುಕ್ರವಾರ ವಿಚಾರಣೆ ನಡೆಸಿದ ಬಳಿಕ ಬಂಧಿಸಿದೆ. ನ್ಯಾಯಾಲಯಕ್ಕೆ ಹಾಜರುಪಡಿಸುವ ನಿರೀಕ್ಷೆ ಇದ್ದು, ವಿಚಾರಣೆಗೆ ವಶಕ್ಕೆ ನೀಡಬೇಕೆಂದು ಕೋರಲಿದೆ' ಎಂದು ಹೇಳಿವೆ.

ದೆಹಲಿಯಲ್ಲಿ ತಗ್ಗಿದ ಮಾಲಿನ್ಯ

ಪಟಾಕಿ ಸಿಡಿಸಬೇಡಿ, ಹೊರಗೆ ಹೋಗಬೇಡಿ: ಸ್ಥಳೀಯರಿಗೆ ಸೂಚನೆ

ನವದೆಹಲಿ (ಪಿಟಿಐ): ಕಳೆದೆರಡು ವಾರಗಳಿಂದ ವಾಯುಮಾಲಿನ್ಯದ ಆಗರವಾಗಿದ್ದ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ಬೆಳಗ್ಗೆ ವಾತಾವರಣ ತಿಳಿಯಾಗಿತ್ತು. ಶುಕ್ರವಾರ ಸುರಿದ ಅಕಾಲಿಕ ಮಳೆಯಿಂದಾಗಿ ಪರಿಸ್ಥಿತಿ ಗಣನೀಯ ಪ್ರಮಾಣದಲ್ಲಿ ಸುಧಾರಣೆ ಕಂಡಿದೆ. ಹಲವು ದಿನಗಳಿಂದ ಆವರಿಸಿಕೊಂಡಿದ್ದ ವಿಷಪೂರಿತ ದಟ್ಟ ಮಂಜು ನಿವಾರಣೆಯಾಗಿ, ಸೂರ್ಯನ ಪ್ರಖರ ಬಿಸಿಲು ಕೂಡ ಆವರಿಸಿತ್ತು.

ಗುರುವಾರ ಸರಾಸರಿ 437 ಇದ್ದ ದೆಹಲಿಯ ಎಕ್ಯುಐ (ವಾಯು ಗುಣಮಟ್ಟ ಸೂಚ್ಯಂಕ) ಶನಿವಾರದ ಹೊತ್ತಿಗೆ ಸುಧಾರಣೆ ಕಂಡು 219ಕ್ಕೆ ಇಳಿದಿತ್ತು. ಕಳೆದ 30–32ರ ಗಂಟೆಗಳಲ್ಲಿ ರಾಜಧಾನಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಸುರಿದ ಅಕಾಲಿಕ ಮಳೆ ಮತ್ತು ವೇಗವಾದ ಗಾಳಿಯು ದೆಹಲಿಯ ವಾಯುಮಾಲಿನ್ಯ ನಿವಾರಣೆಗೆ ಗಣನೀಯ ಕೊಡುಗೆ ನೀಡಿದೆ.


ದೆಹಲಿಯ ಸರ್ದಾರ್ ಬಜಾರ್‌ನಲ್ಲಿ ದೀಪಾವಳಿ ಹಬ್ಬದ ಖರೀದಿಯಲ್ಲಿ ಮಗ್ನರಾಗಿರುವ ಜನ (ಪಿಟಿಐ)

ದೆಹಲಿಯ ಜತೆಗೆ, ಗುರುಗ್ರಾಮ (181), ಗಜಿಯಾಬಾದ್ (157), ಗ್ರೇಟರ್ ನೋಯ್ಡಾ (131), ನೋಯ್ಡಾ (148) ಮತ್ತು ಫರೀದಾಬಾದ್‌ನ (174) ವಾಯುಗುಣಮಟ್ಟವೂ ವೃದ್ಧಿಯಾಗಿದೆ.

ಸೂಚನೆ ನೀಡಿದ ಇಲಾಖೆ: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ವಾಯುಗುಣಮಟ್ಟ ಕುಸಿಯುವ ಭೀತಿ ಇರುವ ಕಾರಣಕ್ಕೆ ಆರೋಗ್ಯ ಇಲಾಖೆಯು ನಾಗರಿಕರಿಗೆ ಕೆಲ ಸಲಹೆ ಸೂಚನೆಗಳನ್ನು ನೀಡಿದೆ.

ಪಟಾಕಿಗಳನ್ನು ಸಿಡಿಸಬಾರದು ಮತ್ತು ಅನಗತ್ಯವಾಗಿ ಹೊರಗೆ ಸಂಚರಿಸಬಾರದು ಎಂದು ಸಲಹೆ ನೀಡಿದೆ. ಗರ್ಭಿಣಿಯರು, ಆರೋಗ್ಯ ಸಮಸ್ಯೆಯುಳ್ಳವರು, ಮಕ್ಕಳು, ಹಿರಿಯರು ಹೆಚ್ಚು ಜಾಗರೂಕರಾಗಿರಬೇಕು. ಗಾಳಿಗೆ ಹೆಚ್ಚು ಒಡ್ಡಿಕೊಳ್ಳಬಾರದು ಎಂದು ಹೇಳಿದೆ.

ಮಾಲಿನ್ಯ ಹೆಚ್ಚಾದ ದಿನಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೆ ತೆರಳಬಾರದು. ಜಾಗಿಂಗ್, ಓಟ, ವ್ಯಾಯಾಮ ಮಾಡಬಾರದು. ಸಿಗರೇಟು ಸೇದಬಾರದು. ಸೊಳ್ಳೆ ಕಾಯಿಲ್, ಅಗರಬತ್ತಿ, ಧೂಪ, ಕಟ್ಟಿಗೆ, ಎಲೆ, ಕೂಳೆ, ತ್ಯಾಜ್ಯ ಸುಡಬಾರದು ಎಂದು ಇಲಾಖೆ ತಿಳಿಸಿದೆ.

ಬಸ್‌ಗಳ ಮುಖಾಮುಖಿ ಡಿಕ್ಕಿ: ಐವರ ಸಾವು

ವಾಣಿಯಂಬಾಡಿ (ತಮಿಳುನಾಡು, ಪಿಟಿಐ): ಚೆನ್ನೈ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜ್ಯ ಸರ್ಕಾರಿ ಬಸ್ ಮತ್ತು ಖಾಸಗಿ ಬಸ್ ನಡುವೆ ಶನಿವಾರ ನಸುಕಿನಲ್ಲಿ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಐವರು ಮೃತಪಟ್ಟಿದ್ದು, ಸುಮಾರು 60 ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಡುವಂಚೇರಿಯ ರಿತಿಕಾ (32), ವಾಣಿಯಂಬಾಡಿಯ ಮೊಹಮ್ಮದ್ ಫಿರೋಜ್ (37), ಎಸ್‌ಇಟಿಸಿ ಬಸ್ ಚಾಲಕ ಕೆ.ಏಳುಮಲೈ (47), ಚಿತ್ತೂರಿನ ಬಿ.ಅಜಿತ್ (25) ಸ್ಥಳದಲ್ಲೇ ಮೃತಪಟ್ಟರೆ, ಖಾಸಗಿ ಬಸ್‌ನ ಚಾಲಕ ಎನ್.ಸೈಯದ್ ನಂತರ ಮೃತಪಟ್ಟಿದ್ದಾರೆ.

ಬೆಂಗಳೂರಿನಿಂದ ಚೆನ್ನೈಗೆ ಚಲಿಸುತ್ತಿದ್ದ ತಮಿಳುನಾಡು ರಾಜ್ಯ ಎಕ್ಸ್‌ಪ್ರೆಸ್ ನಿಗಮದ ಬಸ್, ಚೆನ್ನೈನಿಂದ ಬೆಂಗಳೂರಿಗೆ ಬರುತ್ತಿದ್ದ ಖಾಸಗಿ ಬಸ್‌ಗೆ ಚೆಟ್ಟಿಯಪ್ಪನೂರು ಬಳಿ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಎರಡೂ ಬಸ್‌ಗಳ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ಪೊಲೀಸರು ಹತ್ತು ಆಂಬುಲೆನ್ಸ್‌ಗಳಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಕಳಿಸಿಕೊಟ್ಟರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ನಸುಕಿನ 4 ಗಂಟೆ ವೇಳೆಗೆ ಅಪಘಾತ ಸಂಭವಿಸಿದೆ. ಗಾಯಾಳುಗಳನ್ನು ತಿರುಪತ್ತೂರು ಜಿಲ್ಲೆಯ ವಾಣಿಯಂಬಾಡಿಯ ಸರ್ಕಾರಿ ಆಸ್ಪತ್ರೆಗೆ ಹಾಗೂ ವೆಲ್ಲೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿಧನ ವಾರ್ತೆ

ತೆಲುಗು ನಟ ಚಂದ್ರಮೋಹನ್


ಚಂದ್ರಮೋಹನ್

ಬೆಂಗಳೂರು: ತೆಲುಗಿನ ಖ್ಯಾತ ನಟ ಚಂದ್ರಮೋಹನ್ (82) ಅವರು ಶನಿವಾರ ಹೈದರಾಬಾದ್‌ನಲ್ಲಿ ನಿಧನರಾದರು. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಹೈದರಾಬಾದ್‌ನ ಅಪೋಲೊ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

ಚಂದ್ರಮೋಹನ್ ಅವರು ನಾಯಕನ ಪಾತ್ರದ ಜತೆಗೆ ಹಾಸ್ಯ ಹಾಗೂ ಪೋಷಕ ಪಾತ್ರಗಳ ಮೂಲಕ ಜನರ ಮನಸ್ಸಿನಲ್ಲಿ ಸ್ಥಾನ ಪಡೆದಿದ್ದಾರೆ.

1996ರಲ್ಲಿ 'ರಂಗುಲ ರಾಟ್ನಂ' ಚಿತ್ರದ ಮೂಲಕ ಅವರು ಸಿನಿಮಾ ರಂಗ ಪ್ರವೇಶಿಸಿದ್ದರು. ಅವರ ಅಂತ್ಯಕ್ರಿಯೆ ಸೋಮವಾರ ಹೈದರಾಬಾದ್‌ನಲ್ಲಿ ನಡೆಯಲಿದೆ.

ಪಾಕ್‌ನಿಂದ 80 ಭಾರತೀಯ ಮೀನುಗಾರರ ಬಿಡುಗಡೆ

ಅಮೃತಸರ (ಪಿಟಿಐ): ಮೂರು ವರ್ಷದ ಹಿಂದೆ ಅರಬ್ಬಿ ಸಮುದ್ರದಲ್ಲಿ ಅಕ್ರಮವಾಗಿ ಗಡಿರೇಖೆ ಪ್ರವೇಶಿಸಿದ್ದ ಆರೋಪದ ಮೇಲೆ ಪಾಕಿಸ್ತಾನ ಸರ್ಕಾರದಿಂದ ಬಂಧನಕ್ಕೆ ಒಳಗಾಗಿದ್ದ ಭಾರತದ 80 ಮೀನುಗಾರರನ್ನು ಬಿಡುಗಡೆಗೊಳಿಸಲಾಗಿದೆ.

ಪಾಕ್‌ನ ಕರಾಚಿಯ ಮಾಲಿರ್ ಕಾರಾಗೃಹದಿಂದ ಬಿಡುಗಡೆಯಾದ ಈ ಮೀನುಗಾರರನ್ನು ಶುಕ್ರವಾರ ಅಟ್ಟಾರಿ–ವಾಘಾ ಗಡಿಯಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಸುಪರ್ದಿಗೆ ಒಪ್ಪಿಸಲಾಗಿದೆ.

ನಿಯಮ ಉಲ್ಲಂಘಿಸಿದ್ದರಿಂದ ದೋಣಿಗಳನ್ನು ವಶಕ್ಕೆ ಪಡೆದು ಈ ಮೀನುಗಾರರನ್ನು ಬಂಧಿಸಲಾಗಿತ್ತು.

'ಎಲ್ಲಾ ಮೀನುಗಾರರಿಗೂ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನರ್ ಕಚೇರಿಯಿಂದ ತುರ್ತು ಪ್ರವಾಸಿ ಪ್ರಮಾಣ ಪತ್ರ ವಿತರಿಸಲಾಗಿದೆ. ಶುಕ್ರವಾರ ರಾತ್ರಿ ಎಲ್ಲರೂ ವಾಘಾ ಗಡಿಯ ಮೂಲಕ ತವರು ನೆಲವನ್ನು ಪ್ರವೇಶಿಸಿದ್ದಾರೆ' ಎಂದು ಪಂಜಾಬ್ ಪೊಲೀಸ್ ವಿಭಾಗದ ಶಿಷ್ಟಾಚಾರ ಅಧಿಕಾರಿ ಅರುಣ್ ಮಹಲ್ ತಿಳಿಸಿದ್ದಾರೆ.

ಬಾಲಕಿ ಮೇಲೆ ಎಸ್‌ಐ ಅತ್ಯಾಚಾರ ಜನರ ಆಕ್ರೋಶ, ಠಾಣೆಗೆ ಮುತ್ತಿಗೆ

ಜೈಪುರ (ಪಿಟಿಐ): ರಾಜಸ್ಥಾನದ ದೌಸಾ ಜಿಲ್ಲೆಯಲ್ಲಿ ನಾಲ್ಕು ವರ್ಷದ ಬಾಲಕಿಯ ಮೇಲೆ ಸಬ್ ಇನ್ ಸ್ಪೆಕ್ಟರ್‌ನೊಬ್ಬ ಅತ್ಯಾಚಾರ ಎಸಗಿದ್ದಾನೆ. ಘಟನೆಗೆ ಆಕ್ರೋಶ ವ್ಯಕ್ತಪಡಿಸಿರುವ ಜನರು, ಕಟ್ಟುನಿಟ್ಟಿನ ಕ್ರಮಕ್ಕೆ ಆಗ್ರಹಿಸಿ ಶನಿವಾರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದರು.

ದೌಸಾ ಜಿಲ್ಲೆಯ ಲಾಲ್‌ಸೋಟ್ ವಲಯದಲ್ಲಿ ಶುಕ್ರವಾರ ಸಂಜೆ ಘಟನೆ ನಡೆದಿದೆ. ಆರೋಪಿ, ಸಬ್ ಇನ್‌ಸ್ಪೆಕ್ಟರ್ ಭೂಪೇಂದ್ರ ಸಿಂಗ್, ದಲಿತ ವರ್ಗದ ಬಾಲಕಿಯನ್ನು ತನ್ನ ಕೊಠಡಿಗೆ ಎಳೆದೊಯ್ದು ಕೃತ್ಯ ಎಸಗಿದ್ದಾನೆ ಎಂದು ಹೇಳಲಾಗಿದೆ.

ಆರೋಪಿ ಅಧಿಕಾರಿಯನ್ನು ಬಂಧಿಸಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಬಾಲಕಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಎಎಸ್‌ಪಿ ರಾಮಚಂದ್ರ ಸಿಂಗ್ ನೆಹ್ರಾ ಅವರು ತಿಳಿಸಿದರು.

'ಬಾಲಕಿ ವಯಸ್ಸು ಕುರಿತು ಗೊಂದಲವಿದೆ. ವೈದ್ಯಕೀಯ ವರದಿ ಮತ್ತು ಕುಟುಂಬ ಸದಸ್ಯರ ಹೇಳಿಕೆ ಬಳಿಕ ಖಚಿತಪಡಿಸಲಾಗುವುದು. ಸದ್ಯ, ಬಾಲಕಿಯ ವಯಸ್ಸು 4 ಅಥವಾ 5 ಇರಬಹುದು' ಎಂದು ಎಸ್‌ಪಿ ವಂದಿತಾ ರಾಣಾ ತಿಳಿಸಿದರು.

ಅತ್ಯಾಚಾರಿ ಬಚಾವೊ ಸರ್ಕಾರದ ಆದ್ಯತೆ; ಟೀಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 'ಬೇಟಿ ಬಚಾವೊ' ಪರವಿದ್ದರೆ, ರಾಜಸ್ಥಾನದ ಕಾಂಗ್ರೆಸ್ ಸರ್ಕಾರ 'ಅತ್ಯಾಚಾರಿ ಬಚಾವೊ' ಪರವಾಗಿದೆ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.


ದೌಸಾ ಜಿಲ್ಲೆಯಲ್ಲಿ ಬಾಲಕಿ ಮೇಲೆ ಸಬ್ ಇನ್‌ಸ್ಪೆಕ್ಟರ್ ಅತ್ಯಾಚಾರ ಎಸಗಿರುವ ಕೃತ್ಯ ಉಲ್ಲೇಖಿಸಿರುವ ಬಿಜೆಪಿ, 'ರಾಜ್ಯದಲ್ಲಿ ಅತ್ಯಾಚಾರಿಗಳೇ ಅತೀವ ವಿಶ್ವಾಸದಿಂದಿದ್ದಾರೆ' ಎಂದು ಟೀಕಿಸಿದೆ.

ಆರೋಪಿ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಪಡಿಸಿ ಸ್ಥಳೀಯರು ಶನಿವಾರ ರಾಹುವಾಸ್ ಠಾಣೆಗೆ ಘೆರಾವ್ ಹಾಕಿದ್ದು, ಆರೋಪಿ ಅಧಿಕಾರಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಸ್ಥಳೀಯ ಶಾಸಕ, ಬಿಜೆಪಿಯ ಕಿರೋಡಿ ಲಾಲ್ ಮೀನಾ ಸ್ಥಳಕ್ಕೆ ಭೇಟಿ ನೀಡಿದ್ದರು. ಸರ್ಕಾರದ ವಿರುದ್ಧ ಕಿಡಿಕಾರಿದರು.

ಮಳೆ ಕೊರತೆಯಿಂದ ಕಬ್ಬು ಉತ್ಪಾದನೆ ಶೇ 29ರಷ್ಟು ಇಳಿಕೆ ಸಾಧ್ಯತೆ

ಸಕ್ಕರೆ ಉತ್ಪಾದನೆ ಶೇ 40 ಕುಸಿತ?

• ಶ್ರೀಕಾಂತ ಕಲ್ಲಮ್ಮನವರ



ಹುಬ್ಬಳ್ಳಿ: ಮಳೆ ಕೊರತೆಯಿಂದ ಕಬ್ಬಿನ ಇಳುವರಿ ಕಡಿಮೆಯಾಗಿದೆ. ಪರಿಣಾಮವಾಗಿ, ಸಕ್ಕರೆ ಉತ್ಪಾದನೆಯೂ ಕಡಿಮೆ ಆಗಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಅಂದಾಜು ಶೇ 40ರಷ್ಟು ಸಕ್ಕರೆ ಉತ್ಪಾದನೆ ಖೋತಾ ಆಗಬಹುದು.

ಕಬ್ಬು ಅರೆಯುವ ಕಾರ್ಯ ಅಲ್ಲಲ್ಲಿ ಸಕ್ಕರೆ ಕಾರ್ಖಾನೆಗಳಲ್ಲಿ ಈಗಾಗಲೇ ಆರಂಭವಾಗಿದೆ. 35.20 ಲಕ್ಷ ಕ್ವಿಂಟಲ್ ಸಕ್ಕರೆ ಉತ್ಪಾದಿಸುವ ನಿರೀಕ್ಷೆ ಇದೆ. ಕಳೆದ ವರ್ಷ 59.52 ಲಕ್ಷ ಕ್ವಿಂಟಲ್ ಸಕ್ಕರೆ ಉತ್ಪಾದಿಸಲಾಗಿತ್ತು ಎಂದು ಸಕ್ಕರೆ ಇಲಾಖೆ ಮೂಲಗಳು ತಿಳಿಸಿವೆ.

ಕಬ್ಬು ಉತ್ಪಾದನೆ ಕುಂಠಿತ: ಕಳೆದ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದರಿಂದ 620 ಲಕ್ಷ ಟನ್ ಕಬ್ಬು ಬೆಳೆಯಲಾಗಿತ್ತು. ಈ ವರ್ಷ ಜೂನ್–ಜುಲೈ ತಿಂಗಳಲ್ಲಿ ಮಳೆ ಕೊರತೆಯಾಗಿದ್ದರಿಂದ ಆತಂಕಗೊಂಡ ನೂರಾರು ರೈತರು ಕಬ್ಬು ಬೆಳೆಯಲಿಲ್ಲ. ಇದರ ಪರಿಣಾಮ 440 ಲಕ್ಷ ಟನ್‌ದಿಂದ 450 ಲಕ್ಷ ಟನ್‌ವರೆಗೆ ಮಾತ್ರ ಕಬ್ಬು ಉತ್ಪಾದನೆಯಾಗುವ ಸಾಧ್ಯತೆ ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 26ರಿಂದ ಶೇ 29ರಷ್ಟು ಕಡಿಮೆ ಆಗಬಹುದು ಎಂದು ಅಂದಾಜಿಸಲಾಗಿದೆ.

‘ನೀರಿನ ಕೊರತೆಯಿಂದ ಹಲವೆಡೆ ಕಬ್ಬು ಸಮೃದ್ಧವಾಗಿ ಬೆಳೆದಿಲ್ಲ. ಬಹಳ ಕಡೆ ಒಣಗಿದ ಕಬ್ಬು ಇದೆ. ಗುಣಮಟ್ಟದ ಕಬ್ಬು ಇಲ್ಲ. ಹೀಗಾಗಿ ಇಳುವರಿಯೂ ಕಡಿಮೆಯಾಗುವ ನಿರೀಕ್ಷೆ ಇದೆ’ ಎಂದು ಕಬ್ಬು ಬೆಳೆಗಾರರು ತಿಳಿಸಿದರು.

‘ಬೆಳಗಾವಿ, ವಿಜಯಪುರ, ಬಾಗಲಕೋಟೆ ಸೇರಿ ರಾಜ್ಯದ ವಿವಿಧೆಡೆ ಕಬ್ಬು ಬೆಳೆಯುವ ಪ್ರದೇಶ ಕೂಡ ಕಡಿಮೆಯಾಗಿದೆ. ಕಳೆದ ವರ್ಷ 7.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿತ್ತು. ಈ ವರ್ಷ ಒಟ್ಟು 6.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 15ರಷ್ಟು ಪ್ರದೇಶ ಕಡಿಮೆಯಾಗಿದೆ’ ಎಂದು ಸಕ್ಕರೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕಬ್ಬು ಕಡಿಮೆ ಇದೆ. ಕಳೆದ ವರ್ಷ ನಮ್ಮ ಕಾರ್ಖಾನೆಯೊಂದರಲ್ಲೇ 6.25 ಲಕ್ಷ ಟನ್ ಸಕ್ಕರೆ ನುರಿಸಲಾಗಿತ್ತು. ಈ ವರ್ಷ ಶೇ 25ರಿಂದ ಶೇ 30ರಷ್ಟು ಕಡಿಮೆಯಾಗುವ ಸಾಧ್ಯತೆ ಇದೆ’ ಎಂದು ಬೆಳಗಾವಿ ಜಿಲ್ಲೆಯ ಅಥಣಿಯ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಪರಪ್ಪ ಸವದಿ ಹೇಳಿದರು.

ಬಿಎಸ್‌ಇ ಲಾಭ ₹118 ಕೋಟಿ

ನವದೆಹಲಿ (ಪಿಟಿಐ): ಮುಂಬೈ ಷೇರು ವಿನಿಮಯ ಕೇಂದ್ರವು (ಬಿಎಸ್‌ಇ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹118.4 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹29.4 ಕೋಟಿ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ನಾಲ್ಕು ಪಟ್ಟು ಏರಿಕೆ ಕಂಡಿದೆ. ವರಮಾನವು ₹240 ಕೋಟಿಯಿಂದ ₹367 ಕೋಟಿಗೆ ಶೇ 53ರಷ್ಟು ಏರಿಕೆ ಆಗಿದೆ.

ದೀರ್ಘಾವಧಿಯ ಬೆಳವಣಿಗೆಗಾಗಿ ಹೂಡಿಕೆ ಮುಂದುವರಿಸಲಾಗುವುದು ಎಂದು ಬಿಎಸ್‌ಇನ ಸಿಇಒ ಸುಂದರರಾಮನ್ ರಾಮಮೂರ್ತಿ ಹೇಳಿದ್ದಾರೆ.

ಒಎನ್‌ಜಿಸಿ ಲಾಭ ಶೇ 20ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹10,216 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹12,826 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 20ರಷ್ಟು ಇಳಿಕೆ ಕಂಡಿದೆ. ಜೂನ್ ತ್ರೈಮಾಸಿಕದಲ್ಲಿಯೂ ಕಂಪನಿಯ ಲಾಭ ಶೇ 34ರಷ್ಟು ಇಳಿಕೆ ಆಗಿತ್ತು.

ತೈಲ ದರ ಇಳಿಕೆ ಮತ್ತು ಉತ್ಪಾದನೆ ಕಡಿಮೆ ಆಗಿರುವುದರಿಂದ ಲಾಭದಲ್ಲಿ ಇಳಿಕೆ ಆಗಿದೆ ಎಂದು ಕಂಪನಿ ಹೇಳಿದೆ. ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆದ ಬಳಿಕ 2022ರ ಏಪ್ರಿಲ್–ಜೂನ್ ಅವಧಿಯಲ್ಲಿ ಜಾಗತಿಕವಾಗಿ ಕಚ್ಚಾ ತೈಲ ದರ ತೀವ್ರ ಏರಿಕೆ ಕಂಡಿತು. ಆದರೆ, ಈ ವರ್ಷ ಕಚ್ಚಾ ತೈಲ ದರ ಇಳಿಕೆ ಕಂಡಿದ್ದು ಎರಡನೇ ತ್ರೈಮಾಸಿಕದಲ್ಲಿ ಬ್ಯಾರಲ್‌ಗೆ 80–90 ಡಾಲರ್ ಮಟ್ಟದಲ್ಲಿ ಇದೆ.

ಕಂಪನಿ ಉತ್ಪಾದನೆ ಮಾಡಿದ ಕಚ್ಚಾ ತೈಲ ಮಾರಾಟದಿಂದ ಪ್ರತಿ ಬ್ಯಾರಲ್‌ಗೆ ಬರುವ ಗಳಿಕೆಯು ಕಡಿಮೆ ಆಗಿದೆ ಎಂದು ಅದು ಹೇಳಿದೆ. ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಪ್ರತಿ ಬ್ಯಾರಲ್‌ಗೆ 95.50 ಡಾಲರ್ (₹7,926) ಸಿಕ್ಕಿತ್ತು. ಆದರೆ, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಪ್ರತಿ ಬ್ಯಾರಲ್‌ಗೆ 84.84 ಡಾಲರ್ (₹7,042) ಬಂದಿದೆ ಎಂದು ತಿಳಿಸಿದೆ.

ಪುನಶ್ಚೇತನ ಯೋಜನೆ: ಬಿಡ್ ಸಲ್ಲಿಸಿದ್ದ ಏಕೈಕ ಕಂಪನಿಯ ಅರ್ಜಿ ತಿರಸ್ಕೃತ

ದಿವಾಳಿಯತ್ತ ಫ್ಯೂಚರ್ ರಿಟೇಲ್

ಮುಖ್ಯಾಂಶಗಳು
- ಫ್ಯೂಚರ್ ರಿಟೇಲ್ ಸಾಲ ₹30 ಸಾವಿರ ಕೋಟಿ
- ₹550 ಕೋಟಿ ಮೊತ್ತದ ಪುನಶ್ಚೇತನ ಯೋಜನೆ ಸಲ್ಲಿಸಿದ್ದ ಸ್ಪೇಸ್ ಮಂತ್ರ

ನವದೆಹಲಿ (ಪಿಟಿಐ): ಫ್ಯೂಚರ್ ಸಮೂಹದ ಪ್ರಮುಖ ಉದ್ಯಮದಲ್ಲಿ ಒಂದಾಗಿದ್ದ ಫ್ಯೂಚರ್ ರಿಟೇಲ್ ಕಂಪನಿಯು ದಿವಾಳಿಯಾಗುವತ್ತ ಸಾಗುತ್ತಿದೆ. ಆರ್ಥಿಕ ಸಂಕಷ್ಟದಲ್ಲಿರುವ ಕಂಪನಿಯನ್ನು ಖರೀದಿಸಲು ಸೂಕ್ತ ಖರೀದಿದಾರರೇ ಸಿಗದ ಪರಿಸ್ಥಿತಿ ಎದುರಾಗಿದೆ.

ಸ್ಪೇಸ್ ಮಂತ್ರ ಪ್ರೈವೇಟ್ ಲಿಮಿಟೆಡ್ ಎನ್ನುವ ಏಕೈಕ ಕಂಪನಿಯು ಫ್ಯೂಚರ್ ರಿಟೇಲ್‌ನ ಪುನಶ್ಚೇತನ ಯೋಜನೆಯನ್ನು ಸಾಲದಾತ ಸಮಿತಿಗೆ (ಸಿಒಸಿ) ಸಲ್ಲಿಸಿತ್ತು. ಆದರೆ ಆ ಯೋಜನೆಯನ್ನೂ ಸಮಿತಿಯು ತಿರಸ್ಕರಿಸಿದೆ. ಹೀಗಾಗಿ ಕಂಪನಿಯ ದಿವಾಳಿ ಪ್ರಕ್ರಿಯೆ ನಿರ್ವಹಿಸುವ ವೃತ್ತಿಪರ ಅಧಿಕಾರಿಯು ದಿವಾಳಿ ಪ್ರಕ್ರಿಯೆ ಆರಂಭಿಸುವಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮೊರೆ ಹೋಗಿದ್ದಾರೆ. ಫ್ಯೂಚರ್ ರಿಟೇಲ್ ಕಂಪನಿಯು ₹30 ಸಾವಿರ ಕೋಟಿಯಷ್ಟು ಸಾಲದಲ್ಲಿ ಇದೆ.

ಸ್ಪೇಸ್ ಮಂತ್ರ ಕಂಪನಿ ಸಲ್ಲಿಸಿರುವ ಪುನಶ್ಚೇತನ ಯೋಜನೆಗೆ ಸಾಲದಾತ ಸಮಿತಿ ಒಪ್ಪಿಗೆ ನೀಡಿಲ್ಲ. ವೃತ್ತಿಪರ ಅಧಿಕಾರಿಯು ಎನ್‌ಸಿಎಲ್‌ಟಿನ ಮುಂಬೈ ಪೀಠದ ಎದುರು ದಿವಾಳಿ ಪ್ರಕ್ರಿಯೆ ಆರಂಭಿಸುವಂತೆ ಅರ್ಜಿ ನೀಡಿದ್ದಾರೆ ಎಂದು ಫ್ಯೂಚರ್ ರಿಟೇಲ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

₹550 ಕೋಟಿ ಮೊತ್ತದ ಪುನಶ್ಚೇತನ ಯೋಜನೆಯನ್ನು ಸ್ಪೇಸ್ ಮಂತ್ರ ಸಲ್ಲಿಸಿತ್ತು. ಆದರೆ, ಸಾಲದಾತ ಸಮಿತಿಯ ಇ–ವೋಟಿಂಗ್ ಪ್ರಕ್ರಿಯೆಯಲ್ಲಿ ಯೋಜನೆಗೆ ಒಪ್ಪಿಗೆ ಪಡೆಯಲು ಅಗತ್ಯ ಇರುವಷ್ಟು ಮತ ಪಡೆಯಲು ವಿಫಲವಾಯಿತು ಎಂದು ಫ್ಯೂಚರ್ ರಿಟೇಲ್ ಕಳೆದ ತಿಂಗಳು ತಿಳಿಸಿತ್ತು.

ಕಾರ್ಪೊರೇಟ್ ದಿವಾಳಿ ಗೊತ್ತುವಳಿ ಪ್ರಕ್ರಿಯೆ (ಸಿಐಆರ್‌ಪಿ) ಪೂರ್ಣಗೊಳಿಸಲು ಕಂಪನಿಗೆ ನೀಡಿದ್ದ ಗಡುವನ್ನು ಎನ್‌ಸಿಎಲ್‌ಟಿ ನಾಲ್ಕು ಬಾರಿ ವಿಸ್ತರಣೆ ಮಾಡಿತ್ತು. ಅಂತಿಮ ಗಡುವು ಸೆಪ್ಟೆಂಬರ್ 30ಕ್ಕೆ ಕೊನೆಗೊಂಡಿದೆ. 2022ರ ಜುಲೈನಲ್ಲಿ ಕಂಪನಿಯ ವಿರುದ್ಧ ದಿವಾಳಿ ಪ್ರಕ್ರಿಯೆ ಆರಂಭ ಆಯಿತು. ಆರ್ಥಿಕ ನಷ್ಟ ಮತ್ತು ದಿವಾಳಿ ಸಂಹಿತೆ (ಐಬಿಸಿ) ಪ್ರಕಾರ, 330 ದಿನಗಳ ಒಳಗಾಗಿ (ವ್ಯಾಜ್ಯದ ಅವಧಿ ಒಳಗೊಂಡು) ಸಿಐಆರ್‌ಪಿ ಪೂರ್ಣಗೊಳಿಸುವುದು ಕಡ್ಡಾಯವಾಗಿದೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1540)
ಸೋಯಾ (ರಿಫೈನ್ಡ್)	₹937 (930)
ಸೂರ್ಯಕಾಂತಿ (ರಿಫೈನ್ಡ್)	₹940 (925)
ಪಾಮೋಲಿನ್	₹835 (828)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹133

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹595
12 ಮೊಟ್ಟೆಗೆ	₹80

ಮೈಸೂರು

100 ಮೊಟ್ಟೆಗೆ	₹595

ಮುಂಬೈ ಧಾರಣೆ

ಶೇಂಗಾ

11-11-2023

ಜಾವಾ 70/80(ಹೊಸ)	10800-10800
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1550)
ಒಂದು ವಾರದ ಡೆಲಿವರಿ	1555 (1545)
ಸೋಯಾ ಕಚ್ಚಾ	890 (900)
ಪಾಮ್ ವಾರದ ಡೆಲಿವರಿ	833 (830)
ಸೂರ್ಯಕಾಂತಿ ಎಣ್ಣೆ ಕಚ್ಚಾ	905 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,700 (59,950)
ಬೆಳ್ಳಿ ಕೆ.ಜಿ 69,800 (70,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಗುಂಡಿನ ದಾಳಿ ಭಾರತ ಮೂಲದ ತಂದೆ, ಮಗ ಸಾವು

ಒಟ್ಟಾವ (ಪಿಟಿಐ): ಕೆನಡಾದ ಎಡ್ಮಂಟನ್ ನಗರದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಭಾರತೀಯ ಸಂಜಾತ ಸಿಖ್ ವ್ಯಕ್ತಿ ಹಾಗೂ ಅವರ 11 ವರ್ಷದ ಮಗ ಮೃತಪಟ್ಟಿದ್ದಾರೆ.

ಎಡ್ಮಂಟನ್‌ನ ಗ್ಯಾಸ್ ಸ್ಟೇಷನ್ ಬಳಿ ಗುರುವಾರ ನಡೆದ ಗುಂಡಿನ ದಾಳಿಯಲ್ಲಿ ಹರ್‌ಪ್ರೀತ್ ಸಿಂಗ್ ಉಪ್ಪಲ್ (41) ಮತ್ತು ಅವರ ಪುತ್ರ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿ ಕಾಲಿನ್ ಡೆರ್ಕ್ಸೆನ್ ತಿಳಿಸಿದ್ದಾರೆ.

ಹರ್‌ಪ್ರೀತ್, ಎಡ್ಮಂಟನ್‌ನಲ್ಲಿ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ ಗ್ಯಾಂಗ್‌ನ ಸದಸ್ಯರಾಗಿದ್ದು, ಕೊಕೇನ್ ಕಳ್ಳಸಾಗಣೆ ಪ್ರಕರಣದಲ್ಲಿ ಆರೋಪಿಯಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಇಂದು ಸಂಜೆ ಮುಹೂರ್ತದ ವಹಿವಾಟು

ನವದೆಹಲಿ (ಪಿಟಿಐ): ದೀಪಾವಳಿ ಹಬ್ಬದ ಪ್ರಯುಕ್ತ ಬಿಎಸ್‌ಇ ಮತ್ತು ಎನ್‌ಎಸ್‌ಇ ಷೇರುಪೇಟೆಗಳಲ್ಲಿ ಭಾನುವಾರ ಸಂಜೆ 6 ಗಂಟೆಯಿಂದ 7.15ರವರೆಗೆ ಮುಹೂರ್ತದ ವಹಿವಾಟು ನಡೆಯಲಿದೆ.

ಈ ವಹಿವಾಟು ಷೇರುದಾರರ ಏಳಿಗೆಗೆ ಮತ್ತು ಹಣಕಾಸು ವೃದ್ಧಿಗೆ ಕಾರಣವಾಗುತ್ತದೆ ಎನ್ನುವ ನಂಬಿಕೆ ಇದೆ. ಈ ಅವಧಿಯಲ್ಲಿ ವಹಿವಾಟು ನಡೆಸುವುದರಿಂದ ಹೂಡಿಕೆದಾರರಿಗೆ ವರ್ಷವಿಡೀ ಅನುಕೂಲ ಆಗುತ್ತದೆ. ಹೊಸ ಕೆಲಸ ಆರಂಭಿಸಲು ದೀಪಾವಳಿಯು ಹೆಚ್ಚು ಸೂಕ್ತ ಎಂದು ಪರಿಗಣಿಸಲಾಗುತ್ತದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಅನ್‌ಲಿಮಿಟೆಡ್: ದೀಪಾವಳಿ ಕೊಡುಗೆ

ಬೆಂಗಳೂರು: ಫ್ಯಾಷನ್ ರಿಟೇಲ್ ಕಂಪನಿ ಅನ್‌ಲಿಮಿಟೆಡ್, ದೀಪಾವಳಿ ಪ್ರಯುಕ್ತ ಪುರುಷರು, ಮಹಿಳೆಯರು ಮತ್ತು ಮಕ್ಕಳ ಉಡುಪು ಖರೀದಿ ಮೇಲೆ ವಿಶೇಷ ಕೊಡುಗೆ ಘೋಷಿಸಿದೆ.

₹2,999ಕ್ಕೂ ಅಧಿಕ ಮೌಲ್ಯದ ಉಡುಪು ಖರೀದಿಸಿದರೆ ₹199ಕ್ಕೆ ಸ್ಮಾರ್ಟ್‌ವಾಚ್ ಹಾಗೂ ₹5,999 ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಖರೀದಿ ಮಾಡಿದರೆ ₹199ಕ್ಕೆ ದೊಡ್ಡ ಬ್ಯಾಗ್ ಪಡೆದುಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಯೋಕಾನ್ ಲಾಭ ₹173 ಕೋಟಿ

ನವದೆಹಲಿ (ಪಿಟಿಐ): ಬಯೋಕಾನ್ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಎರಡು ಪಟ್ಟಿಗೂ ಹೆಚ್ಚು ಏರಿಕೆ ಕಂಡು ₹173 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು ₹82 ಕೋಟಿಯಷ್ಟು ಇತ್ತು. ಒಟ್ಟು ವರಮಾನ ₹2,384 ಕೋಟಿಯಿಂದ ₹3,620 ಕೋಟಿಗೆ ಏರಿಕೆ ಕಂಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಗಾಜಾಪಟ್ಟಿ: ಆಸ್ಪತ್ರೆಗೆ ವಿದ್ಯುತ್, ಆಮ್ಲಜನಕ ಪೂರೈಕೆ ಸ್ಥಗಿತ

‘ನಿಗಾದಲ್ಲಿದ್ದ 39 ಶಿಶುಗಳ ಜೀವಕ್ಕೆ ಅಪಾಯ’

ದುಬೈ (ಪಿಟಿಐ): ಇಸ್ರೇಲ್ ಸೇನೆಯ ದಾಳಿ ಬಳಿಕ ಗಾಜಾಪಟ್ಟಿಯ ಪ್ರಮುಖ ‘ಅಲ್ ಶಿಫಾ’ ಆಸ್ಪತ್ರೆಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಆಮ್ಲಜನಕ ಕೊರತೆಯೂ ಉಂಟಾಗಿದೆ. ‘ಪರಿಣಾಮ, ತೀವ್ರ ನಿಗಾ ಘಟಕದಲ್ಲಿದ್ದ 39 ಶಿಶುಗಳ ಜೀವಕ್ಕೆ ಅಪಾಯ ಎದುರಾಗಿದೆ’ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

‘ಆಸ್ಪತ್ರೆಯಲ್ಲಿದ್ದ 39 ಶಿಶುಗಳು ಅಸುನೀಗಿವೆ’ ಎಂದು ಆರೋಗ್ಯ ಸಚಿವ ಮೈ ಅಲ್ ಕೈಲಾ ಹೇಳಿದ್ದರು. ಅದರ ಹಿಂದೆಯೇ ಖಚಿತ ಮಾಹಿತಿ ನೀಡುವ ಕ್ರಮವಾಗಿ ಆರೋಗ್ಯ ಸಚಿವಾಲಯವು ಈ ಸಂಬಂಧ ಹೇಳಿಕೆ ನೀಡಿದೆ. ಒಂದು ಶಿಶು ಅಸುನೀಗಿದೆ ಎಂದೂ ಸ್ಪಷ್ಟಪಡಿಸಿದೆ.

ದಾಳಿ ಇನ್ನಷ್ಟು ಬಿರುಸು: ಇತ್ತ, ಇಸ್ರೇಲ್ ಸೇನೆ ಆಸ್ಪತ್ರೆಯನ್ನು ಸುತ್ತುವರಿದಿವೆ. ‘ವಿದ್ಯುತ್ ಪೂರೈಕೆ ಇಲ್ಲ. ವೈದ್ಯಕೀಯ ಪರಿಕರಗಳು ಸ್ಥಗಿತವಾಗಿವೆ. ನಿಗಾ ಘಟಕದಲ್ಲಿರುವ ರೋಗಿಗಳು ಸಾಯುತ್ತಿದ್ದಾರೆ. ಆಸ್ಪತ್ರೆ ಒಳಗೆ, ಹೊರಗೆ ಯಾರೇ ನಿಂತಿದ್ದರೂ ಸೇನೆಯು ಗುಂಡಿನ ದಾಳಿ ನಡೆಸುತ್ತಿದೆ’ ಎಂದು ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸೆಲ್ಮಿಯಾ ಹೇಳಿದರು.



ತಮ್ಮ ಕುಟುಂಬಸ್ಥರ ಅಂತ್ಯ ಸಂಸ್ಕಾರದ ವೇಳೆ ಮಕ್ಕಳು ರೋದಿಸಿದರು —ಎಎಫ್‌ಪಿ ಚಿತ್ರ

‘ಜನರೇಟರ್ ಸ್ಥಗಿತಗೊಂಡ ನಂತರದಲ್ಲಿ ಅವಧಿಪೂರ್ವದಲ್ಲಿ ಜನಿಸಿದ್ದ ಶಿಶು ಸೇರಿದಂತೆ ನಾಲ್ವರು ರೋಗಿಗಳು ಸತ್ತಿದ್ದಾರೆ’ ಎಂದು ಆರೋಗ್ಯ ಸಚಿವಾಲಯದ ವಕ್ತಾರ ಮೆದತ್ ಅಬ್ಬಾಸ್ ಹೇಳಿದರು. ಅವರ ಪ್ರಕಾರ, ಆಸ್ಪತ್ರೆಯಲ್ಲಿ ಅವಧಿಪೂರ್ವದಲ್ಲಿ ಜನಿಸಿದ್ದ ಒಟ್ಟು 38 ಶಿಶುಗಳಿವೆ.

ಜನರ ನಿರ್ಗಮನಕ್ಕೆ ಅವಕಾಶ: ಈ ಮಧ್ಯೆ, ಗಾಜಾ ಪಟ್ಟಿಯಿಂದ ನಾಗರಿಕರು ಸುರಕ್ಷಿತವಾಗಿ ನಗರದ ದಕ್ಷಿಣ ಭಾಗದತ್ತ ನಿರ್ಗಮಿಸಲು, ಆ ಭಾಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಸೇನೆಯು ನಿತ್ಯ ಕೆಲ ಗಂಟೆ ಕಾಲ ದಾಳಿಯಿಂದ ಮುಕ್ತವಾಗಿರಿಸುತ್ತಿದೆ. ‘ಗಾಜಾಪಟ್ಟಿಯಲ್ಲಿ ನಾಗರಿಕರಿಗೆ ಯಾವುದೇ ತೊಂದರೆ ಉಂಟಾದರೂ ಅದಕ್ಕೆ ಹಮಾಸ್ ನೇರ ಹೊಣೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಹೇಳಿದ್ದಾರೆ.

ಅಮೆರಿಕ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ನಾಗರಿಕರ ರಕ್ಷಣೆ ಕ್ರಮವಾಗಿ ಕದನವಿರಾಮ ಘೋಷಿಸಬೇಕು ಎಂದು ಒತ್ತಾಯಿಸಿದ್ದರೂ, ಅದಕ್ಕೆ ಇಸ್ರೇಲ್ ಸ್ಪಂದಿಸಿಲ್ಲ. ಹಮಾಸ್ ಒತ್ತೆ ಇರಿಸಿಕೊಂಡಿರುವ ಇಸ್ರೇಲಿಯನ್ನರ ಬಿಡುಗಡೆಯಾಗದೇ ಕದನವಿರಾಮ ಘೋಷಣೆ ಇಲ್ಲ ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ.


ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
Haier
Haier
Celebrate India's
Favourite Festivals
Smarter Easier Life OLED | QLED POWERED BY Google TV
Haier OLED TV
SOUND BY harman/kardon
4K HDR
Dolby Vision IQ-Atmos
65 OLED TV EMI ₹6,994/-
INSTANT CASH BACK ₹15,000/-
3 YEARS WARRANTY
Haier QLED
1 EMI FREE
65 QLED
3 YEARS WARRANTY
FESTIVAL PRICE ₹77,990/-
INSTANT CASH BACK ₹15,000/-
EFFECTIVE PRICE ₹62,990/-
MEMC 120HZ
Hands-free voice control
Local Dimming
UHD 4K Haier
55 UHD 4K TV EMI ₹1,994/-
INSTANT CASH BACK ₹7,000/-
3 YEARS WARRANTY
3 - DOOR CONVERTIBLE SIDE BY SIDE REFRIGERATOR
Haier DRESS UP YOUR REFRIGERATOR.
InstaSwitch JACKETS
Create your Refrigerator
Haier
HOTTEST Deal
SIDE BY SIDE REFRIGERATOR
INVERTER
FRENCH 4 DOOR
531 Ltr.
SPECIAL PRICE ₹62,990/-
INSTANT CASHBACK CC EMI ₹9,000/-
EFFECTIVE PRICE ₹53,990/-
JUKNA MAT! BOTTOM MOUNTED REFRIGERATOR
Haier
BIGGER CAPACITY
MAGIC CONVERTIBLE
INVERTER
REFRIGERATOR
445 Ltr.
• Magic Convertible
• Triple Inverter
• Dual Fan Technology
• 14-in-1 Convertible
EMI ₹3,990/-
INSTANT CASH BACK ₹10,500/-
FRONT LOAD WASHING MACHINES PERFORM BIG SILENTLY #SilentPerformers
Haier 9 KG
• DIRECT MOTION MOTOR
• 1400 RPM
• A+++ ENERGY CONSUMPTION
• DUAL SPRAY
• ANTI-BACTERIAL TECH
• 12 YEARS WARRANTY FOR MOTOR
FREE STEAM IRON BOX
EMI ₹1,994/-
INSTANT CASH BACK ₹9,000/- ON CC & DC EMI
Haier 8 KG
THINK BIG OWN BIGGER 20% LARGER DRUM
INVERTER MOTOR
• DIRECT MOTION MOTOR
• 1200 RPM
• A+++ ENERGY CONSUMPTION
• ANTI-BACTERIAL TECH
• LIFE TIME WARRANTY FOR MOTOR
FREE STEAM IRON BOX
EMI ₹2,990/-
INSTANT CASH BACK ₹7,000/- ON CC & DC EMI
Haier 9 KG
FREE STEAM IRON BOX
• INVERTER MOTOR
• A+++ ENERGY CONSUMPTION
• LASER SEAMLESS WELDING DRUM
• ANTI-BACTERIAL TECH
• NEAR ZERO PRESSURE
SPECIAL PRICE ₹36,990/-
INSTANT CASHBACK CC EMI ₹8,000/-
HOTTEST Deal
EFFECTIVE PRICE ₹28,990/-
Top Load with In-Built Heater
Haier 7.5 KG
• IN-BUILT HEATER
• REMOVES 106 STAINS
• STORM PULSATOR
• 99.9% GERM REMOVAL
• DOUBLE PROTECTION
INBUILT HEATER
FREE STEAM IRON BOX
EMI ₹1,494/-
INSTANT CASH BACK ₹3,000/- ON CC & DC EMI
EXCITING OFFERS
UP TO 20% INSTANT CASHBACK
LONG TENURE UPTO 24 MONTHS
EXTENDED WARRANTY
1 EMI OFF
FIXED EMI STARTING ₹994*
ಬೆಂಗಳೂರು
ಬಾಗಲೂರು
ಅಕ್ಷಯನಗರ
ನೆಲಮಂಗಲ
ಬಿಡದಿ
ಕೋಣನಕುಂಟೆ
ಬೇಗೂರು
ಆರ್.ಟಿ. ನಗರ
ಹೊಸಕೋಟೆ
ಹೆಣ್ಣೂರು ಮುಖ್ಯ ರಸ್ತೆ
ಮಹದೇವಪುರ
ಉತ್ತರಹಳ್ಳಿ
ವೈಟ್ ಫೀಲ್ಡ್
ಯಲಹಂಕ
ಹೆಬ್ಬಗೋಡಿ
ರಾಜಾಜಿನಗರ ಪ್ರೀಮಿಯಂ ಸ್ಟೋರ್
ತನಿಸಂದ್ರ
ವಿಜಯನಗರ
ಪೀಣ್ಯ ಟಿ-ದಾಸರಹಳ್ಳಿ
ಮತ್ತಿಕೆರೆ
ಹೆಚ್.ಎಸ್.ಆರ್. ಲೇಔಟ್
ಬನಶಂಕರಿ
ಜಯನಗರ
ಚಂದ್ರ ಲೇಔಟ್
ನಾಗರಭಾವಿ
ಮಾರತಹಳ್ಳಿ
ಕೆಂಗೇರಿ
ಚನ್ನಸಂದ್ರ
ಸುಂಕದಕಟ್ಟೆ
ರಾಜಾಜಿನಗರ
ವಿದ್ಯಾರಣ್ಯಪುರ
ಹೆಗ್ಗನಹಳ್ಳಿ
ಹೆಚ್.ಆರ್.ಬಿ.ಆರ್. ಲೇಔಟ್
ರಾಮಮೂರ್ತಿನಗರ
ಪುಟ್ಟೇನಹಳ್ಳಿ
ಹುಳಿಮಾವು
LG SHOPPE ಮಾರತಹಳ್ಳಿ
LG SHOPPE ರಾಜಾಜಿನಗರ
LG SHOPPE ರಾಜರಾಜೇಶ್ವರಿನಗರ
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
ಬೃಹತ್ ದೀಪಾವಳಿ ಸೇಲ್
BUMPER PRIZE
1 Kg GOLD Worth ₹ 51 Lakhs
1st PRIZE 10 CARS MARUTHI S-PRESSO CAR Worth ₹ 4.25 Lakhs 10 WINNERS
2nd PRIZE 100 BIKES HONDA BIKE Worth ₹ 75,000/- 100 WINNERS
3rd PRIZE 1000 LED TV'S 40" HD LED TV Worth ₹ 29,990/- 1000 WINNERS
4th PRIZE 10000 SURPRIZE Gifts Worth ₹ 999/- 10000 WINNERS
GET CASH VOUCHER UPTO ₹12,500/-* ON BAJAJ FINSERV FINANCE PURCHASE
1 EMI FREE* ON LG SONY SAMSUNG
EMI CARD EASY FINANCE
LOW DOWNPAYMENT LOW EMI UPTO 36 MONTHS LONG TENURE EMI
0% INTEREST FREE FINANCE
DEBIT & CREDIT CARD EMI
JUST SHOW AADHAAR CARD For easy finance offers & take home your favourite products
LG Life's Good 4K Smart OLED evo tv OLED 1 EMI FREE EMI ₹2,999/- ONWARDS
UPTO ₹ 15,000/- INSTANT CASH BACK ON YOUR CREDIT CARD EMI
AVAILABLE SIZES 48, 55, 65, 77 & 83
3 YEAR* WARRANTY
SONY BRAVIA XR LED X90L SERIES 1 EMI FREE EMI ₹6,500/- ONWARDS
UPTO ₹ 10,000/- INSTANT CASH BACK ON YOUR CREDIT CARD EMI
AVAILABLE SIZES 55, 65 & 75
3 YEAR* WARRANTY
Deepavali Festival INSTANT CASHBACK UPTO ₹20,000/- ON CREDIT & DEBIT CARD EMI
LED TV, REFRIGERATOR, WASHING MACHINE, & AIR-CONDITIONER
LG SIDE BY SIDE REFRIGERATORS 655 Ltr. FREE LG DOUBLE DOOR REFRIGERATOR WORTH ₹29,499/- GET INSTANT CASH BACK UPTO ₹12,000/- ON CC & DC EMI ₹4,990/-
SAMSUNG 655 Ltr. SIDE BY SIDE REFRIGERATORS FREE 10 Kg TOP LOAD WASHING MACHINE WORTH ₹29,990/- GET INSTANT CASH BACK UPTO ₹12,000/- ON CC & DC EMI ₹3,990/- ONWARDS
Whirlpool 340 Ltr. GET INSTANT CASH BACK ₹3,500/- ON CC & DC FESTIVAL PRICE ₹32,990/-
LG PREMIUM FROST FREE REFRIGERATORS 417 Ltr. GET INSTANT CASH BACK ₹8,000/- ON CC & DC EMI ₹2,790/-
SAMSUNG QLED 65 EMI ₹6,994/- ONWARDS UPTO ₹ 6,000/- INSTANT CASH BACK ON YOUR CREDIT CARD EMI 3 YEAR* WARRANTY
Panasonic OLED TV 55 EMI ₹4,095/- ONWARDS UPTO ₹ 15,000/- INSTANT CASH BACK ON YOUR CREDIT CARD EMI 3 YEAR* WARRANTY
ON EVERY PURCHASE OF ₹3,500/- GET LUCKY DRAW COUPON & CHANCE TO WIN 5.68 CRORE WORTH PRIZES
LG 8 Kg. FRONT LOAD WASHING MACHINE FREE ARIEL MATIC LIQUID GET INSTANT CASH BACK UPTO ₹4,500/- ON CC & DC SPECIAL PRICE ₹35,990/-
IFB 8 Kg. FRONT LOAD WASHING MACHINE FREE 3 PIECE NON-STICK SET WORTH ₹2,295/- GET INSTANT CASH BACK UPTO ₹3,000/- ON CC & DC EMI ₹2,990/-
MIXER GRINDER COMBO Mixer Grinder (Glory) MRP ₹3,325 Cooker (Favourite) 3Ltr MRP ₹1,395 50% DISCOUNT TOTAL MRP ₹4,720/- COMBO PRICE ₹2,395/-
GAS STOVE COMBO 62% DISCOUNT Pigeon Glass Cooktop two Burner MRP ₹4,399 Non Stick Favorite Duo Pack Tawa MRP ₹1,895 TOTAL MRP ₹6,294/- COMBO PRICE ₹2,395/-
THE WHISTLE COMBO Deluxe Aluminium Pressure Cooker 5L Deluxe Aluminium Pressure Cooker 3L Flat Tawa 280 4mm 46% DISCOUNT COMBO MRP ₹5,035/- Offer Price ₹2299/-
THE FIZZY COMBO Vibrant 5 in 1 IB Set - Hard Anodized Pressure Cooker 2.5L + Flat Tawa 250 + Fry Pan 240 + Kadai 240 with glass lid 54% DISCOUNT COMBO MRP ₹4,995/- Offer Price ₹2299/-
WET GRINDER COMBO Pigeon Wet Grinder (Dyna) MRP ₹5,755 Cooker (Favorite) 3Ltr MRP ₹1,395 36% DISCOUNT TOTAL MRP ₹7,150/- COMBO PRICE ₹4,590/-
CHIMNEY COMBO Chimney Nebula MRP ₹14,590 4 Burner Cooktop MRP ₹7,199 54% DISCOUNT TOTAL MRP ₹21,789/- COMBO PRICE ₹9,990/-
iPhone 15/15plus 10 GRAM Silver Coin* MAGSAFE POWER BANK Worth ₹2999/- At 1499/-
vivo V29E 5 GRAM Silver Coin* TWS AT ₹699/- With Smart Phone
oppo F23-5G 5 GRAM Silver Coin* Calling Smart Watch AT ₹999/- With Smart Phone
SAMSUNG A34 5 GRAM Silver Coin* Sound Bar Worth ₹4999/- At ₹999/- With Smart Phone
mi Redmi 12C 3 GRAM Silver Coin* Bluetooth AT ₹199/- With Smart Phone
ONEPLUS 11R 5 GRAM Silver Coin Bluetooth AT ₹199/- With Smart Phone
Buy TECNO Mobile SMART PHONE Get FREE Smart Watch Bluetooth
ಚನ್ನಪಟ್ಟಣ ಶಿರಸಿ ಕೋಲಾರ ಬೆಳಗಾವಿ ಬಳ್ಳಾರಿ ಚಿತ್ರದುರ್ಗ ದಾವಣಗೆರೆ ಶಿವಮೊಗ್ಗ ತಿಪಟೂರು ತುಮಕೂರು ಕುಣಿಗಲ್ ಯಾದಗಿರಿ ಮಂಡ್ಯ
ಗೋಣಿಕೊಪ್ಪ ಕೊಪ್ಪಳ ಬೀದರ್ ಕಲಬುರ್ಗಿ ಕೆ.ಆರ್. ನಗರ ಚನ್ನರಾಯಪಟ್ಟಣ ವಿರಾಜಪೇಟೆ ವಿಜಯಪುರ ಸಿಂಧನೂರ್ ಕುಶಾಲನಗರ
ಚಿಕ್ಕಮಗಳೂರು ಶಹಾಪೂರ ಗೋಕಾಕ್ ಮೈಸೂರು 5 ಸ್ಟೋರ್ಸ್ ಕುವೆಂಪುನಗರ ಹಿನಕಲ್ ಉದಯಗಿರಿ ಜೆ.ಪಿ ನಗರ ಡಾ. ರಾಜ್‌ಕುಮಾರ್ ರಸ್ತೆ
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com





ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಭಾರತ ತಂಡದವರ ಅಭ್ಯಾಸದ ಸಂದರ್ಭದಲ್ಲಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮಾ ಮಾತುಕತೆ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಭಾರತ–ನೆದರ್ಲೆಂಡ್ಸ್ ಹಣಾಹಣಿ ಇಂದು • ದೀಪಾವಳಿಗೆ ಕ್ರಿಕೆಟ್ ಸಂಭ್ರಮ

‘ಶತಕಗಳ ಅರ್ಧಶತಕ’ ಪೂರೈಸುವರೇ ಕೊಹ್ಲಿ?

• ಗಿರೀಶ ದೊಡ್ಡಮನಿ

ಬೆಂಗಳೂರು: ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 'ಶತಕಗಳ ಅರ್ಧಶತಕ' ಸಾಧಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆ ಗಳಿಸಲು ಭಾರತದ ವಿರಾಟ್ ಕೊಹ್ಲಿಗೆ ಇನ್ನೊಂದೇ ಹೆಜ್ಜೆ ಬಾಕಿ ಇದೆ.

ನರಕ ಚತುರ್ದಶಿಯ ದಿನವೂ ಆಗಿರುವ ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯ ಲೀಗ್ ಸುತ್ತಿನ ಕೊನೆಯ ಪಂದ್ಯದಲ್ಲಿ ಕೊಹ್ಲಿ ಈ ಸಾಧನೆ ಮಾಡುವ ನಿರೀಕ್ಷೆ ಗರಿಗೆದರಿದೆ. ಆದ್ದರಿಂದಾಗಿಯೇ ಈ ಪಂದ್ಯವು ಅಭಿಮಾನಿಗಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

ಶನಿವಾರ ರಾತ್ರಿಯವರೆಗೂ ಟಿಕೆಟ್, ಪಾಸ್‌ಗಳಿಗಾಗಿ ಹಲವರು ಮೈದಾನದ ಸುತ್ತ ಎಡತಾಕಿದರು. ಆದರೆ ಕ್ರೀಡಾಂಗಣದ ಸಿಬ್ಬಂದಿ ‘ಸೋಲ್ಡ್ ಔಟ್’ ಎಂದು ಹೇಳಿ ಜನರನ್ನು ಸಾಗಹಾಕುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ದಶಕಕ್ಕೂ ಹೆಚ್ಚು ಸಮಯದಿಂದ ಆಡುತ್ತಿರುವ ಕೊಹ್ಲಿಗೆ ಈ ನಗರವು ಎರಡನೇ ತವರೂರಿನಂತಿದೆ. ಆದ್ದರಿಂದಲೇ ಅವರಿಗೆ ಅತಿ ಹೆಚ್ಚು ಅಭಿಮಾನಿಗಳು ಇಲ್ಲಿದ್ದಾರೆ. ಹೋದವಾರ ದಕ್ಷಿಣ ಆಫ್ರಿಕಾ ವಿರುದ್ಧ ಅವರು ಏಕದಿನ ಕ್ರಿಕೆಟ್‌ನ 49ನೇ ಶತಕ ಗಳಿಸಿದ್ದರು.

ಅದಲ್ಲದೇ ಈ ಬಾರಿಯ ವಿಶ್ವಕಪ್‌ನಲ್ಲಿ ರೋಹಿತ್ ಶರ್ಮಾ ಬಳಗವು ಒಂದೂ ಪಂದ್ಯ ಸೋತಿಲ್ಲ. ಎಲ್ಲ ವಿಭಾಗಗಳಲ್ಲಿಯೂ ಪರಿಣಾಮಕಾರಿಯಾಗಿ ಆಡುವ ಮೂಲಕ ಆತಿಥೇಯರು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಸೆಮಿಫೈನಲ್‌ಗೂ ಪ್ರವೇಶಿಸಿದ್ದಾರೆ.

ಕನ್ನಡಿಗ ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಇದಲ್ಲದೇ ಟೂರ್ನಿಯುದ್ದಕೂ ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾಗಿರುವ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಕುಲದೀಪ್ ಯಾದವ್, ರವೀಂದ್ರ ಜಡೇಜ ಹಾಗೂ ಆರ್‌ಸಿಬಿ ಬೌಲರ್ ಕೂಡ ಆಗಿರುವ ಮೊಹಮ್ಮದ್ ಸಿರಾಜ್ ಕೂಡ ಆಕರ್ಷಣೆಯಾಗಿದ್ದಾರೆ.

ಎಲ್ಲ ರೀತಿಯಿಂದಲೂ ನೆದರ್ಲೆಂಡ್ಸ್ ತಂಡಕ್ಕಿಂತ ಭಾರತವೇ ಹೆಚ್ಚು ಬಲಶಾಲಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಲೀಗ್ ಹಂತದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶಗಳ ವಿರುದ್ಧ ಜಯಭೇರಿ ಬಾರಿಸಿದ್ದ ಸ್ಕಾಟ್ ಎಡ್ವರ್ಡ್ಸ್ ಬಳಗವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ನೆದರ್ಲೆಂಡ್ಸ್‌ಗೆ ಈ ಬಾರಿ ಸೆಮಿ ಕನಸು ಕೈಗೂಡಿಲ್ಲ.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನೆದರ್ಲೆಂಡ್ಸ್ ಆಟಗಾರರು ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ (ಏಕದಿನ)

ಪಂದ್ಯ	21
ಜಯ	14
ಸೋಲು	5
ಟೈ	1
ಫಲಿತಾಂಶವಿಲ್ಲ	1

ವಿಶ್ವಕಪ್: ಚಿನ್ನಸ್ವಾಮಿ ಅಂಗಳದಲ್ಲಿ ಭಾರತದ ಸಾಧನೆ

ವರ್ಷ	ಎದುರಾಳಿ	ಫಲಿತಾಂಶ
1987	ನ್ಯೂಜಿಲೆಂಡ್	16 ರನ್‌ಗಳಿಂದ ಜಯ
1996	ಪಾಕಿಸ್ತಾನ	39 ರನ್‌ಗಳಿಂದ ಗೆಲುವು
2011	ಇಂಗ್ಲೆಂಡ್	ಟೈ
2011	ಐರ್ಲೆಂಡ್	5 ವಿಕೆಟ್‌ನಿಂದ ಜಯ

ಪಿಚ್ ಹೇಗಿದೆ?


ಬೆಂಗಳೂರಿನ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದೆ. ಇಲ್ಲಿ ಈಚೆಗೆ ನಡೆದ ನಾಲ್ಕು ವಿಶ್ವಕಪ್ ಪಂದ್ಯಗಳಲ್ಲಿಯೂ ಬ್ಯಾಟರ್‌ಗಳು ಮಿಂಚಿದ್ದಾರೆ.

ಈ ಪಂದ್ಯದಲ್ಲಿಯೂ ಬ್ಯಾಟರ್‌ಗಳು ಮಿಂಚುವ ಎಲ್ಲ ಸಾಧ್ಯತೆಗಳೂ ಇವೆ. ಮಳೆ ಸುರಿಯುವ ಸಾಧ್ಯತೆ ಕಡಿಮೆ ಇದೆ. ಟಾಸ್ ಗೆದ್ದ ತಂಡವು ಬ್ಯಾಟಿಂಗ್ ಮಾಡುವ ಸಾಧ್ಯತೆಯೇ ಹೆಚ್ಚಿದೆ.

ಎರಡು ಬಾರಿ ಮುಖಾಮುಖಿ

ಭಾರತ ಮತ್ತು ನೆದರ್ಲೆಂಡ್ಸ್ ತಂಡಗಳು ಈ ಹಿಂದೆ ವಿಶ್ವಕಪ್ ಕ್ರಿಕೆಟ್‌ನಲ್ಲಿ ಎರಡು ಬಾರಿ ಮುಖಾಮುಖಿಯಾಗಿವೆ.

2003ರಲ್ಲಿ ಪಾರ್ಲ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಭಾರತವು ನೆದರ್ಲೆಂಡ್ ತಂಡವನ್ನು 68 ರನ್‌ಗಳಿಂದ ಸೋಲಿಸಿತ್ತು. 2011ರಲ್ಲಿ ದೆಹಲಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾದಾಗ ಭಾರತವು 5 ವಿಕೆಟ್‌ಗಳಿಂದ ಜಯಿಸಿತ್ತು.



ವಿರಾಟ್ ಕೊಹ್ಲಿ

‘ನೆದರ್ಲೆಂಡ್ಸ್ ತಂಡವು ಉತ್ತಮವಾಗಿ ಆಡಿದೆ. ಸಹಸದಸ್ಯತ್ವದ ತಂಡಗಳು ಈ ಹಂತಕ್ಕೆ ತಲುಪಲು ಎಷ್ಟು ಕಷ್ಟಗಳ ಹಾದಿಯನ್ನು ಸವೆಸಿ ಬಂದಿರುತ್ತವೆ ಎಂಬುದು ನಮಗೆ ಚೆನ್ನಾಗಿ ಅರಿವಿದೆ. 2000ನೇ ಇಸವಿಗೂ ಮುನ್ನ ನಾನು ಕೂಡ ಕೆಲಕಾಲ ಸ್ಕಾಟ್ಲೆಂಡ್‌ನಲ್ಲಿದ್ದೆ. ಅವರು ಮಾಡುತ್ತ ಬಂದಿರುವ ಪ್ರಯತ್ನಗಳು, ಬದ್ಧತೆಗಳು ಮೆಚ್ಚುವಂತವು. ಉತ್ತಮವಾಗಿ ಸಿದ್ಧತೆ ಮಾಡಿಕೊಂಡಿರುವ ಮತ್ತು ತರಬೇತುಗೊಂಡಿರುವ ತಂಡ ಅದಾಗಿದೆ’ ಎಂದು ಭಾರತದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಪತ್ರಿಕಾಗೋಷ್ಠಿಯಲ್ಲಿ ಶ್ಲಾಘಿಸಿದರು.

ಆ ಮೂಲಕ ಬೇರೆ ತಂಡಗಳಂತೆಯೇ ಡಚ್ ಬಳಗವನ್ನೂ ಗಂಭೀರವಾಗಿ ಪರಿಗಣಿಸುವುದಾಗಿ ಸೂಚ್ಯವಾಗಿ ಹೇಳಿದರು.

ಡಚ್ ಬಳಗದ ವೇಗಿ ಬೆಸ್ ಡಿ ಲೀಡ್ ಅವರು ಎಂಟು ಪಂದ್ಯಗಳಿಂದ 14 ವಿಕೆಟ್ ಗಳಿಸಿದ್ದಾರೆ. ಭಾರತದ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ಸ್ಕಾಟ್, ತೇಜಾ ನಿಡಮಾನೂರು ಕೂಡ ಭರವಸೆಯ ಆಟಗಾರರಾಗಿದ್ದಾರೆ. ಅದರೆ ಅತಿಥೇಯ ಬೌಲರ್‌ಗಳನ್ನು ಎದುರಿಸಿ ನಿಲ್ಲುವ ಕಠಿಣ ಸವಾಲು ಇವರ ಮುಂದಿದೆ.

‘ಬೆಂಗಳೂರಿನಲ್ಲಿ ಪಂದ್ಯ ಆಡುವುದು ನಮ್ಮ ಕನಸಾಗಿತ್ತು. ಟೂರ್ನಿಗೂ ಮುನ್ನ ಇಲ್ಲಿಯೇ ಅಭ್ಯಾಸ ಮಾಡಿದ್ದೆವು. ಇದೀಗ ದೀಪಾವಳಿ ಹಬ್ಬದ ದಿನ. ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿದ ಮೈದಾನದಲ್ಲಿ ಬಲಾಢ್ಯ ಭಾರತದ ಎದುರು ಆಡುವುದು ನಮಗೆ ಹೊಸ ಅನುಭವವಾಗಲಿದೆ. ನಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕೊಡ್ಡುತ್ತೇವೆ’ ಎಂದು ನೆದರ್ಲೆಂಡ್ಸ್ ಕೋಚ್ ರಾನ್ ಕುಕ್ ಹೇಳಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2, ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	9	7	2	0	14	1.261
ಆಸ್ಟ್ರೇಲಿಯಾ	9	7	2	0	14	0.841
ನ್ಯೂಜಿಲೆಂಡ್	9	5	4	0	10	0.743
ಪಾಕಿಸ್ತಾನ	9	4	5	0	8	-0.199
ಅಫ್ಗಾನಿಸ್ತಾನ	9	4	5	0	8	-0.336
ಇಂಗ್ಲೆಂಡ್	9	3	6	0	6	-0.572
ಬಾಂಗ್ಲಾದೇಶ	9	2	7	0	4	-1.087
ಶ್ರೀಲಂಕಾ	9	2	7	0	4	-1.419
ನೆದರ್ಲೆಂಡ್ಸ್	8	2	6	0	4	-1.635

ಅಗ್ರ ಐವರು

ಬ್ಯಾಟಿಂಗ್

ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	591
ರಚಿನ್ ರವೀಂದ್ರ (ನ್ಯೂಜಿಲೆಂಡ್)	565
ವಿರಾಟ್ ಕೊಹ್ಲಿ (ಭಾರತ)	543
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	499
ರೋಹಿತ್ ಶರ್ಮಾ (ಭಾರತ)	442

ಬೌಲಿಂಗ್

ಆ್ಯಡಮ್ ಜಂಪಾ (ಆಸ್ಟ್ರೇಲಿಯಾ)	22
ದಿಲ್ಷಾನ್ ಮಧುಶಂಕ (ಶ್ರೀಲಂಕಾ)	21
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	18
ಶಹೀನ್ ಆಫ್ರಿದಿ (ಪಾಕಿಸ್ತಾನ)	18
ಮಾರ್ಕೊ ಯಾನ್ಸೆನ್ (ದಕ್ಷಿಣ ಆಫ್ರಿಕಾ)	17

ನಿಯಮ ಪಾಲಿಸಿದವರ ಬಗ್ಗೆ ವಿರೋಧ ಸಲ್ಲ: ದ್ರಾವಿಡ್

ಬೆಂಗಳೂರು: ‘ನಾವೆಲ್ಲರೂ ವಿಭಿನ್ನ ಯೋಚನಾಲಹರಿ ಹೊಂದಿರುವವರು. ಅದೇ ರೀತಿ ಚಿಂತನೆಗಳೂ ವಿಭಿನ್ನ. ಯಾವುದೇ ವ್ಯಕ್ತಿ ನಿಯಮವನ್ನು ಅರಿತು ಬಳಸಿಕೊಂಡರೆ ವಿರೋಧಿಸುವುದು ಸರಿಯಲ್ಲ’ ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

ಶ್ರೀಲಂಕಾ ತಂಡದ ಆಟಗಾರ ಏಂಜೆಲೊ ಮ್ಯಾಥ್ಯೂಸ್ ಅವರ ಟೈಮ್ಡ್ ಔಟ್ ಪ್ರಕರಣದ ಕುರಿತು ಅವರು ಪ್ರತಿಕ್ರಿಯಿಸಿದರು.

ಈ ಪ್ರಕರಣದಲ್ಲಿ ಮ್ಯಾಥ್ಯೂಸ್ ಅವರನ್ನು ಔಟ್ ನೀಡಬೇಕು ಎಂದು ಅಪೀಲ್ ಮಾಡಿದ್ದ ಬಾಂಗ್ಲಾ ತಂಡದ ನಾಯಕ ಶಕೀಬ್ ಅಲ್ ಹಸನ್ ಅವರನ್ನು ಬಹಳಷ್ಟು ಜನ ಟೀಕಿಸಿದ್ದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತಪ್ಪು ಅಥವಾ ಸರಿ ಎಂಬುದು ಇಲ್ಲಿ ಇಲ್ಲ. ಪ್ರತಿಯೊಬ್ಬರ ಯೋಚನೆಗಳು ಭಿನ್ನವಾಗಿರುತ್ತವೆ. ಇಂತಹ ವೈರುಧ್ಯಗಳು ಇರುವುದು ಒಳ್ಳೆಯದು. ಅವರು ನಿಯಮದ ಚೌಕಟ್ಟಿನೊಳಗೆ ಇದ್ದು ಮನವಿ ಮಾಡಿದ್ದರು. ಇದನ್ನು ಇನ್ನೊಬ್ಬರು ಮತ್ತೊಂದು ಆಯಾಮದಿಂದ ನೋಡಬಹುದು’ಎಂದರು.

ಭಾರತ ತಂಡದ ಇದುವರೆಗಿನ ಸಾಧನೆಯ ಕುರಿತು ಮಾತನಾಡಿದ ಅವರು, ‘ರೋಹಿತ್ ನಿಜವಾದ ನಾಯಕನಾಗಿ ಹೊರಹೊಮ್ಮಿದ್ದಾರೆ. ಕ್ರೀಡಾಂಗಣದೊಳಗೆ ಮತ್ತು ಹೊರಗೆ ಅವರು ತಮ್ಮ ನಾಯಕತ್ವದ ಮಾದರಿ ತೋರಿಸಿದ್ದಾರೆ. ಜೊತೆಗೆ ಬ್ಯಾಟಿಂಗ್ ಮೂಲಕವೂ ತಂಡಕ್ಕೆ ಕಾಣಿಕೆ ನೀಡುತ್ತಿದ್ದಾರೆ. ಅವರು ಉತ್ತಮ ಆರಂಭ ನೀಡುತ್ತಿರುವುದರಿಂದ ಉಳಿದ ಬ್ಯಾಟರ್‌ಗಳಿಗೆ ಆಡುವುದು ಸುಲಭವಾಗುತ್ತಿದೆ’ ಎಂದು ಶ್ಲಾಘಿಸಿದರು.

ಈ ಟೂರ್ನಿಯಲ್ಲಿ ರೋಹಿತ್ 122ರ ಸ್ಟ್ರೈಕ್‌ರೇಟ್‌ನಲ್ಲಿ ಒಟ್ಟು 443 ರನ್‌ಗಳನ್ನು ಗಳಿಸಿದ್ದಾರೆ.

ಟೈಮ್ಡ್ ಔಟ್: ಅಂಪೈರ್ ಪರ ನಿಂತ ಎಂಸಿಸಿ

ಲಂಡನ್ (ಪಿಟಿಐ): ಶ್ರೀಲಂಕಾದ ಬ್ಯಾಟರ್ ಏಂಜೆಲೊ ಮ್ಯಾಥ್ಯೂಸ್ ಅವರ ವಿರುದ್ಧ ಟೈಮ್ಡ್ ಔಟ್ ನೀಡಿದ ಅಂಪೈರ್‌ಗಳ ತೀರ್ಮಾನವು ಸೂಕ್ತವಾಗಿದೆ ಎಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಶನಿವಾರ ಹೇಳಿದೆ.

ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾದೇಶ ವಿರುದ್ಧದ ಲೀಗ್ ಪಂದ್ಯದಲ್ಲಿ ಲಂಕಾದ ಬ್ಯಾಟರ್ ಮ್ಯಾಥ್ಯೂಸ್ ಟೈಮ್ಡ್ ಔಟ್ ಆಗಿದ್ದರು.

‘ತಮ್ಮ ಹೆಲ್ಮೆಟ್ ಪಟ್ಟಿಯು ಕಿತ್ತುಹೋಗಿರುವುದನ್ನು ಅರಿತ ಮ್ಯಾಥ್ಯೂಸ್ ಅಂಪೈರ್‌ಗಳಿಗೆ ತಿಳಿಸಬೇಕಿತ್ತು. ಆಟಗಾರರು ಕ್ರೀಸ್‌ನಲ್ಲಿದ್ದಾಗ ತಮ್ಮ ಆಟದ ಸಲಕರಣೆಗಳನ್ನು ಬದಲಿಸುವಾಗ ಅಂಪೈರ್‌ಗಳಿಂದ ಅನುಮತಿ ಪಡೆಯುವುದು ನಿಯಮ. ಆದರೆ ಮ್ಯಾಥ್ಯೂಸ್ ಆ ರೀತಿ ಮಾಡಲಿಲ್ಲ. ತಮ್ಮ ತಂಡದ ಡ್ರೆಸಿಂಗ್ ರೂಮ್‌ನಲ್ಲಿದ್ದ ಸಹ ಆಟಗಾರರಿಗೆ ಹೊಸ ಹೆಲ್ಮೆಟ್ ತರುವಂತೆ ಸೂಚಿಸಿದರು’ ಎಂದು ಎಂಸಿಸಿಯು ಪ್ರಕಟಣೆಯಲ್ಲಿ ವಿವರಿಸಿದೆ.

ಒಬ್ಬ ಬ್ಯಾಟರ್ ಔಟಾಗಿ ಅಥವಾ ಗಾಯಗೊಂಡು ನಿವೃತ್ತಿಯಾಗಿ ಹೊರನಡೆದಾಗ ಇನ್ನೊಬ್ಬ ಬ್ಯಾಟರ್ ಎರಡು ನಿಮಿಷಗಳೊಳಗೆ ಕ್ರೀಸ್‌ಗೆ ಬಂದು ಎಸೆತ ಎದುರಿಸಲು ಸಿದ್ಧವಾಗಿಬಿಡಬೇಕೆಂಬುದು ನಿಯಮವಾಗಿದೆ.

10 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ

ಅಹಮದಾಬಾದ್ (ಪಿಟಿಐ): ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಗಳನ್ನು ಕ್ರೀಡಾಂಗಣಗಳಲ್ಲಿ ವೀಕ್ಷಿಸಿದವರ ಸಂಖ್ಯೆ 10 ಲಕ್ಷ ದಾಟಿದೆ.

ಅಹಮದಾಬಾದ್‌ನಲ್ಲಿ ಶುಕ್ರವಾರ ನಡೆದ ಅಫ್ಗಾನಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ನಡುವಣ ಪಂದ್ಯದ ವೇಳೆ ಈ ಮೈಲಿಗಲ್ಲು ದಾಖಲಾಗಿದೆ ಎಂದು ಐಸಿಸಿ ತಿಳಿಸಿದೆ.

‘ಪಂದ್ಯಗಳನ್ನು ಕ್ರೀಡಾಂಗಣಕ್ಕೆ ಬಂದು ವೀಕ್ಷಿಸಿದವರ ಸಂಖ್ಯೆ 10 ಲಕ್ಷದ ಗಡಿ ದಾಟಿದೆ. ಟಿ.ವಿ ಮತ್ತು ಡಿಜಿಟಲ್ ವೇದಿಕೆಯಲ್ಲಿ ವೀಕ್ಷಣೆಯಲ್ಲೂ ಹೊಸ ದಾಖಲೆ ಬರೆದಿದೆ. ಏಕದಿನ ಕ್ರಿಕೆಟ್ ಬಗ್ಗೆ ಅಭಿಮಾನಿಗಳು ಹೊಂದಿರುವ ಆಸಕ್ತಿಯನ್ನು ಇದು ತೋರಿಸುತ್ತದೆ’ ಎಂದು ಐಸಿಸಿ ಈವೆಂಟ್ಸ್ ವಿಭಾಗದ ಮುಖ್ಯಸ್ಥ ಕ್ರಿಸ್ ಟೆಟ್ಲಿ ಹೇಳಿದ್ದಾರೆ.

‘ಸೆಮಿಫೈನಲ್ ಮತ್ತು ಫೈನಲ್ ಮುಗಿಯುವ ವೇಳೆ ವೀಕ್ಷಣೆಯಲ್ಲಿ ಇನ್ನಷ್ಟು ದಾಖಲೆಗಳು ಮೂಡಿಬರುವ ವಿಶ್ವಾಸವಿದೆ’ ಎಂದಿದ್ದಾರೆ.

ಕೊನೆಯ ಲೀಗ್ ಪಂದ್ಯವನ್ನು ಎಂಟು ವಿಕೆಟ್‌ಗಳಿಂದ ಗೆದ್ದ ಆಸ್ಟ್ರೇಲಿಯಾ

ಮಾರ್ಷ್ ಅಬ್ಬರದ ಆಟಕ್ಕೆ ಬಾಂಗ್ಲಾ ನಿರುತ್ತರ

ಪುಣೆ (ಪಿಟಿಐ): ಆಲ್‌ರೌಂಡರ್ ಮಿಚೆಲ್ ಮಾರ್ಷ್ ಅವರ ಭರ್ಜರಿ ಶತಕದ (ಅಜೇಯ 177) ನೆರವಿನಿಂದ ಆಸ್ಟ್ರೇಲಿಯಾ ತಂಡ ಶನಿವಾರ ನಡೆದ ವಿಶ್ವಕಪ್ ಲೀಗ್ ಪಂದ್ಯದಲ್ಲಿ ಎಂಟು ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಬಗ್ಗುಬಡಿಯಿತು. ಆಸ್ಟ್ರೇಲಿಯಾ ಆ ಮೂಲಕ ಸೆಮಿಫೈನಲ್‌ಗೆ ಸೂಕ್ತ ರೀತಿಯಲ್ಲೇ ಸಜ್ಜಾಯಿತು.

ಗೆಲುವಿಗೆ 307 ರನ್‌ಗಳ ಗುರಿಯನ್ನು ಎದುರಿಸಿದ್ದ ಆಸ್ಟ್ರೇಲಿಯಾ ಇನ್ನೂ 32 ಎಸೆತಗಳು ಇರುವಂತೆ ಎರಡು ವಿಕೆಟ್ ನಷ್ಟದಲ್ಲಿ ಅದನ್ನು ಸಾಧಿಸಿತು. ಮಾರ್ಷ್ ಕೇವಲ 132 ಎಸೆತಗಳ ಇನಿಂಗ್ಸ್‌ನಲ್ಲಿ 9 ಭರ್ಜರಿ ಸಿಕ್ಸರ್, 17 ಬೌಂಡರಿಗಳನ್ನು ಬಾರಿಸಿದರು. ಅನುಭವಿಗಳಾದ ಡೇವಿಡ್ ವಾರ್ನರ್ ಮತ್ತು ಸ್ಟೀವ್ ಸ್ಮಿತ್ ಅವರೂ ಅರ್ಧ ಶತಕಗಳನ್ನು ಗಳಿಸಿದ್ದರಿಂದ ತಂಡದ ಗೆಲುವು ನಿರೀಕ್ಷೆಗಿಂತ ಸುಲಭವಾಯಿತು.

ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ನವೆಂಬರ್ 16ರಂದು ಕೋಲ್ಕತ್ತದಲ್ಲಿ ನಡೆಯುವ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಬಾಂಗ್ಲಾದೇಶ ಮತ್ತೊಂದು ಸೋಲಿನೊಡನೆ ಎಂಟನೇ ಸ್ಥಾನದಲ್ಲೇ ಲೀಗ್ ವ್ಯವಹಾರ ಪೂರೈಸಿತು. ಭಾರತ ತಂಡ ಭಾನುವಾರ ನಡೆಯುವ ಕೊನೆಯ ಲೀಗ್ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಮಣಿಸಿದರೆ, ಬಾಂಗ್ಲಾದೇಶ ತಂಡ ಮುಂದಿನ ವರ್ಷದ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುವ ಅರ್ಹತೆ ಪಡೆಯಲಿದೆ.

ಅಮೋಘ ಲಯದಲ್ಲಿದ್ದ ಮಾರ್ಷ್ ಎದುರಾಳಿ ದಾಳಿಯನ್ನು ನಿರ್ದಯವಾಗಿ ದಂಡಿಸಿದರು. ಟ್ರಾವಿಸ್ ಹೆಡ್ (10) ಬೇಗನೇ ನಿರ್ಗಮಿಸಿದರೂ ವಾರ್ನರ್ (53, 61ಎ, 4x6) ಜೊತೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 120 ರನ್‌ಗಳು (116 ಎಸೆತ) ಹರಿದುಬಂದವು. ನಂತರ ಅನುಭವಿ ಸ್ಟೀವ್ ಸ್ಮಿತ್ (63, 64 ಎಸೆತ) ಜೊತೆ ಅವರು ಇನ್ನೂ ವೇಗವಾಗಿ ಆಡಿ 136 ಎಸೆತಗಳಲ್ಲಿ 175 ರನ್ ಸೇರಿಸಿದರು.

ಈ ವಿಶ್ವಕಪ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಗಳಿಸಿದ ಅಜೇಯ 201 ರನ್ ಬಿಟ್ಟರೆ, ಮಾರ್ಷ್ ಗಳಿಸಿದ ಅಜೇಯ 177 ಎರಡನೇ ಅತ್ಯಧಿಕ ಮೊತ್ತವೆನಿಸಿತು.

ಇದಕ್ಕೆ ಮೊದಲು, ತೌಹಿದ್ ಹೃದಯ್ ಅವರ 74 (79 ಎಸೆತ) ರನ್‌ಗಳ ನೆರವಿನಿಂದ ಬಾಂಗ್ಲಾದೇಶ ತಂಡ ಟೂರ್ನಿಯಲ್ಲೇ ಮೊದಲ ಬಾರಿ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿ 8 ವಿಕೆಟ್‌ಗೆ 306 ರನ್ ಗಳಿಸಿ ಎದುರಾಳಿಗೆ ಪ್ರಬಲ ಸ್ಪರ್ಧಾತ್ಮಕ ಗುರಿ ನೀಡಿತು.



ಮಿಚೆಲ್ ಮಾರ್ಷ್ ಚೆಂಡನ್ನು ಬೌಂಡರಿಗಟ್ಟಿದರು –ಎಎಫ್‌ಪಿ ಚಿತ್ರ

ಲಿಟ್ಟನ್ ದಾಸ್ (36) ಮತ್ತು ತಾಂಜಿದ್ ಹಸನ್ (36) ಅವರು ಆಕ್ರಮಣಕಾರಿಯಾಗಿದ್ದು 76 ರನ್ ಸೇರಿಸಿ ತಂಡಕ್ಕೆ ಉತ್ತಮ ಆರಂಭ ಒದಗಿಸಿದ್ದರು. ಆದರೆ ಇಬ್ಬರೂ ಅಲ್ಪಅಂತರದಲ್ಲಿ ನಿರ್ಗಮಿಸಿದರು. ಈ ವಿಶ್ವಕಪ್‌ನಲ್ಲಿ ಮೊದಲ ಪಂದ್ಯ ಆಡಿದ್ದ ವೇಗಿ ಸೀನ್ ಅಬೋಟ್ ಈ ಜೊತೆಯಾಟ ಮುರಿದಿದರು. ಆದರೆ ಇದರಿಂದ ಬಾಂಗ್ಲಾ ಆಟದ ಹುರುಪು ತಗ್ಗಲಿಲ್ಲ.

ನಜ್ಮುಲ್ ಹುಸೇನ್ ಶಾಂತೊ (45), ಮಹಮದುಲ್ಲಾ (32, 4x1, 6x3) ಕೂಡ ತಂಡ ಕುಸಿಯದಂತೆ ನೋಡಿಕೊಂಡರು. ತಂಡ 32ನೇ ಓವರಿನಲ್ಲೇ 200 ರನ್‌ಗಳ ಗಡಿದಾಟಿತ್ತು. ಎರಡು ವಿಕೆಟ್ ಪಡೆದ ಲೆಗ್‌ಸ್ಪಿನ್ನರ್ ಜಂಪಾ ಸ್ವಲ್ಪ ಕಡಿವಾಣ ಹಾಕಿದರು. ಆದರೆ ಕೊನೆಯ 10 ಓವರುಗಳಲ್ಲಿ 67 ರನ್‌ಗಳು ಬಂದವು. ಹೀಗಾಗಿ ನಿವ್ವಳ ರನ್ ದರ ಶ್ರೀಲಂಕಾ ತಂಡಕ್ಕಿಂತ ಕೆಳಗೆ ಹೋಗಲಿಲ್ಲ.

ಸೆಮಿ ಹಣಾಹಣಿ

ಭಾರತ– ನ್ಯೂಜಿಲೆಂಡ್
ನ.15 (ಮಧ್ಯಾಹ್ನ 2)
ವಾಂಖೆಡೆ ಕ್ರೀಡಾಂಗಣ, ಮುಂಬೈ

ಆಸ್ಟ್ರೇಲಿಯಾ– ದಕ್ಷಿಣ ಆಫ್ರಿಕಾ
ನ.16 (ಮಧ್ಯಾಹ್ನ 2)
ಈಡನ್ ಗಾರ್ಡನ್ಸ್, ಕೋಲ್ಕತ್ತ

ಸ್ಕೋರುಗಳು: ಬಾಂಗ್ಲಾದೇಶ: 50 ಓವರುಗಳಲ್ಲಿ 8 ವಿಕೆಟ್‌ಗೆ 306 (ತಾಂಜಿದ್ ಹಸನ್ 36, ಲಿಟ್ಟನ್ ದಾಸ್ 36, ನಜ್ಮುಲ್ ಹುಸೇನ್ ಶಾಂತೊ 45, ತೌಹಿದ್ ಹೃದಯ್ 74, ಮಹ್ಮದುಲ್ಲಾ 32, ಮೆಹದಿ ಹಸನ್ ಮಿರಾಜ್ 29; ಸೀನ್ ಅಬೋಟ್ 61ಕ್ಕೆ2, ಆ್ಯಡಂ ಜಂಪಾ 32ಕ್ಕೆ2); ಆಸ್ಟ್ರೇಲಿಯಾ: 44.4 ಓವರುಗಳಲ್ಲಿ 2 ವಿಕೆಟ್‌ಗೆ 307 (ಡೇವಿಡ್ ವಾರ್ನರ್ 53, ಮಿಚೆಲ್ ಮಾರ್ಷ್ ಔಟಾಗದೇ 177, ಸ್ಟೀವ್ ಸ್ಮಿತ್ ಔಟಾಗದೇ 63) ಪಂದ್ಯದ ಆಟಗಾರ: ಮಿಚೆಲ್ ಮಾರ್ಷ್

ಜಯದೊಂದಿಗೆ ಅಭಿಯಾನ ಮುಗಿಸಿದ ಇಂಗ್ಲೆಂಡ್

ಕೋಲ್ಕತ್ತ (ಪಿಟಿಐ): ಡೇವಿಡ್ ವಿಲಿ ಅವರ ಅಮೋಘ ಬೌಲಿಂಗ್ ಬಲದಿಂದ ಇಂಗ್ಲೆಂಡ್ ತಂಡವು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಜಯಿಸಿತು.

2019ರ ವಿಶ್ವಕಪ್ ಜಯಿಸಿದ್ದ ಇಂಗ್ಲೆಂಡ್ ತಂಡವು ಈ ಬಾರಿ ಸೆಮಿಫೈನಲ್ ಪ್ರವೇಶಿಸಲಿಲ್ಲ. ಲೀಗ್ ಸುತ್ತಿನಲ್ಲಿ ಆರು ಅಂಕ ಗಳಿಸಿ ಏಳನೇ ಸ್ಥಾನ ಪಡೆಯಿತು. ಅದರೊಂದಿಗೆ 2025ರ ಚಾಂಪಿಯನ್ಸ್ ಟ್ರೋಫಿಗೆ ನೇರ ಅರ್ಹತೆ ಗಳಿಸುವ ಅವಕಾಶ ಉಳಿಸಿಕೊಂಡಿತು.

ಈಡನ್ ಗಾರ್ಡನ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಮಾಡಿತು. ಬೆನ್ ಸ್ಟೋಕ್ಸ್ (84; 76ಎ, 4X11, 6X2), ಜಾನಿ ಬೆಸ್ಟೊ (59 ರನ್) ಮತ್ತು ಜೋ ರೂಟ್ (60 ರನ್) ಅವರ ಅರ್ಧಶತಕಗಳ ಬಲದಿಂದ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 337 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡವು 43.3 ಓವರ್‌ಗಳಲ್ಲಿ 244 ರನ್ ಗಳಿಸಿ ಆಲೌಟ್ ಆಯಿತು. ಡೇವಿಡ್ ವಿಲಿ (56ಕ್ಕೆ3) ಅವರ ಬೌಲಿಂಗ್ ಎದುರು ಮಣಿಯಿತು.

ಪಾಕ್ ತಂಡಕ್ಕೆ ಸೆಮಿಫೈನಲ್ ಪ್ರವೇಶಿಸಲು ‘ಅಸಾಧ್ಯ’ ಗುರಿ ಈ ಪಂದ್ಯದಲ್ಲಿತ್ತು. ಆರು ಓವರ್‌ಗಳಲ್ಲಿ 300 ರನ್ ಗಳಿಸಬೇಕಿತ್ತು.

ಆದರೆ ತಂಡವು 43.3 ಓವರ್‌ಗಳಲ್ಲಿ 244 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 337 (ಡೇವಿಡ್ ಮಲಾನ್ 31, ಜಾನಿ ಬೆಸ್ಟೊ 59, ಜೋ ರೂಟ್ 60, ಬೆನ್ ಸ್ಟೋಕ್ಸ್ 84, ಜೋಸ್ ಬಟ್ಲರ್ 27, ಹ್ಯಾರಿ ಬ್ರೂಕ್ 30, ಶಾಹೀನ್ ಶಾ ಆಫ್ರಿದಿ 72ಕ್ಕೆ2, ಹ್ಯಾರಿಸ್ ರವೂಫ್ 64ಕ್ಕೆ3, ಮೊಹಮ್ಮದ್ ವಾಸೀಂ ಜೂನಿಯರ್ 74ಕ್ಕೆ2)

ಪಾಕಿಸ್ತಾನ: 43.3 ಓವರ್‌ಗಳಲ್ಲಿ 244 (ಬಾಬರ್ ಆಜಂ 38, ಮೊಹಮ್ಮದ್ ರಿಜ್ವಾನ್ 36, ಸೌದ್ ಶಕೀಲ್ 29, ಆಘಾ ಸಲ್ಮಾನ್ 51, ಶಹೀನ್ ಅಫ್ರಿದಿ 25, ಹ್ಯಾರಿಸ್ ರವೂಫ್ 35, ಡೇವಿಡ್ ವಿಲಿ 56ಕ್ಕೆ3, ಆದಿಲ್ ರಶೀದ್ 55ಕ್ಕೆ2, ಗಸ್ ಅಟ್ಕಿನ್ಸನ್ 45ಕ್ಕೆ2, ಮೋಯಿನ್ ಅಲಿ 60ಕ್ಕೆ2)

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 93 ರನ್ ಜಯ. ಪಂದ್ಯಶ್ರೇಷ್ಠ: ಡೇವಿಡ್ ವಿಲಿ.



ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಮತ್ತು ಡೇವಿಡ್ ವಿಲಿ –ಎಎಫ್‌ಪಿ ಚಿತ್ರ


Haier
Celebrates India's
Favourite Festivals
Haier DIGITAL STREAMING ASSOCIATE SPONSOR OF WORLD CUP ON Disney+ hotstar
— ವಿಶ್ವದ ನಂ.1* —
ರೆಫ್ರಿಜರೇಟರ್ ಶ್ರೇಣಿ
Convertible Zone
Expert Inverter Techonology
Glass & Steel Door Finish
2 YEAR Complete Warranty#
165L ಇಂದ 712L ಶ್ರೇಣಿಯಲ್ಲಿ ಲಭ್ಯವಿದೆ
— ಯಾವುದೇ ದೊಡ್ಡ ಮಟ್ಟದ, —
ಶಬ್ಧವಿಲ್ಲದ ಡೈರೆಕ್ಟ್ ಮೋಶನ್ ವಾಷಿಂಗ್ ಮಷೀನ್
Enhanced Washing Quality
Vibration Free Performance
Removes Up To 72 Hour Old Stains
5 YEAR Comprehensive Warranty#
6KG ಇಂದ 12KG ಶ್ರೇಣಿಯಲ್ಲಿ ಲಭ್ಯವಿದೆ
FREE Assured# Gift
INBUILT HEATER
— OLED | QLED —
POWERED BY Google TV
Dolby Vision IQ
Dolby Atmos
MEMC 120 Hz
3 YEAR Warranty#
81CM ಇಂದ 1.9M ಶ್ರೇಣಿಯಲ್ಲಿ ಲಭ್ಯವಿದೆ
EXCITING OFFERS
UP TO 22.5% INSTANT CASHBACK#
LONG TENURE UPTO 24 MONTHS
EXTENDED WARRANTY
1 EMI OFF#
FIXED EMI STARTING ₹994#
SCAN TO KNOW MORE
BAJAJ FINANCE | AU SMALL FINANCE BANK CREDIT CARDS | Bank of Baroda Credit Card | DBS | HDFC BANK | ICICI Bank | IDFC FIRST Bank CREDIT CARDS | IndusInd Bank | kotak Kotak Mahindra Bank | one card | pine labs PAY LATER | RBL BANK apno ka bank | SBI card | Standard Chartered | YES BANK
*Source: Euromonitor International Limited; Consumer Appliances 2023ed, % unit share, 2022 volume sales data. | #T & C Apply: The offer is valid till 30th Nov'23. The minimum transaction amount for cashback eligibility is Rs 12,000 and the maximum cashback that can be availed is Rs 20,000. Cashback will be credited into customer's account post the completion of 3 successful EMI's. Instant cashback is also available on selected banks and can be availed as per the dealer's eligibility. The customer can only avail this offer once a month. It is a limited period offer and can be modified / withdrawn as per the sole discretion of Haier and Banks. For Detailed T&C's, Kindly visit https://www.haier.com/in/terms/?spm=in.28907_pc.footer_bottom_20190530.5
Haier Office: 24, 3rd Floor, 80ft Road, Kathriguppe, Banashankari 3rd Stage, Opp Big Bazar Bangalore-560085. For More Information Please Contact: Bangalore: Azhar - 8453845229, Arif - 6366644786, Chandrashekar - 9845917342, Dharmendra - 9986722022, Dileep - 7353297777, Ganesh - 9986925603, Gurudutt - 9980581133, Imtiaz - 9900217682, Jerald - 7019088331, Krishna - 9742958800, Keshav - 775223483, Manjuntah - 9986065982, Mayeem - 8197895028, Pradeep - 8197432636, Pradeepa - 984517700, Raghavendra - 8105908014, Santhosh - 6361556196, Srinivas - 9632315896, Syed - 9980671477, Shashi - 9538389341, Vijendra - 9008555678, Bangalore Rural: Akram - 7829676796, Gulzar - 984544786, Kolar: Naveen - 9945616544. Chikkaballapura: Tarun - 9108563273, Tumkur: Azhar - 8453845229, Dharmendra - 9986722022, Yathish - 9845227246,

ಯಂಗ್ ಓರಿಯನ್ಸ್, ಎಸ್‌ಡಬ್ಲ್ಯುಆರ್ ತಂಡಗಳಿಗೆ ಕಿರೀಟ

ಬೆಂಗಳೂರು: ಯಂಗ್ ಓರಿಯನ್ಸ್ ತಂಡದವರು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಯಂಗ್ ಓರಿಯನ್ಸ್ 85–78 ರಿಂದ ಬ್ಯಾಂಕ್ ಆಫ್ ಬರೋಡ ತಂಡವನ್ನು ಮಣಿಸಿತು.

ಮಹಿಳೆಯರ ವಿಭಾಗದ ಪ್ರಶಸ್ತಿಯನ್ನು ಎಸ್‌ಡಬ್ಲ್ಯುಆರ್ ಮೈಸೂರು ತಂಡ ತನ್ನದಾಗಿಸಿಕೊಂಡಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಡಿವೈಇಎಸ್ ಮೈಸೂರು 66–59 ರಿಂದ ಮೌಂಟ್ಸ್ ಬಿ.ಸಿ ತಂಡವನ್ನು ಮಣಿಸಿತು.

ಅಂತಿಮ ಸ್ಥಾನ: ಪುರುಷರ ವಿಭಾಗ: 1.ಯಂಗ್ ಓರಿಯನ್ಸ್, 2.ಎಂಇಜಿ ಮತ್ತು ಸೆಂಟರ್, 3.ಬ್ಯಾಂಕ್ ಆಫ್ ಬರೋಡ, 4.ಮಂಗಳೂರು ಬಿ.ಸಿ

ಮಹಿಳೆಯರ ವಿಭಾಗ: 1.ಎಸ್‌ಡಬ್ಲ್ಯುಆರ್ ಮೈಸೂರು, 2.ಬೀಗಲ್ಸ್ ಬಿ.ಸಿ., 3.ಡಿವೈಇಎಸ್ ಮೈಸೂರು, 4.ಮೌಂಟ್ಸ್ ಬಿ.ಸಿ

ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್: ರೋಹಿತ್, ಸಹನಾಗೆ ಪ್ರಶಸ್ತಿ

ಆಕಾಶ್, ದೇಶ್ನಾ ಚಾಂಪಿಯನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಜೆ.ಆಕಾಶ್ ಮತ್ತು ದೇಶ್ನಾ ಎಂ.ವಂಶಿಕಾ ಅವರು ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ಕೊನೆಗೊಂಡ ಎಂ.ಎಸ್.ರಾಮಯ್ಯ ಸ್ಮಾರಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಶನಿವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಆಕಾಶ್ 12–10 , 8–11 , 11–4, 11–3 , 11–8 ರಿಂದ ರಕ್ಷಿತ್ ಆರ್. ಬಾರಿಗಿಡದ್ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಆಕಾಶ್ 11–5 , 6–11 , 8–11 , 11–4 , 11–8 , 11–7 ರಿಂದ ಅನಿರ್ಬನ್ ರಾಯ್‌ಚೌಧರಿ ವಿರುದ್ಧವೂ; ರಕ್ಷಿತ್ 12–10 , 9–11 , 11–5 , 10 –12 , 11–8 , 15–13 ರಿಂದ ಪಿ.ಯಶ್ವಂತ್ ವಿರುದ್ಧವೂ ಗೆದ್ದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ದೇಶ್ನಾ 11–8 , 12–10 , 12–10 , 11–9 ರಿಂದ ಜಿ.ಕರುಣಾ ವಿರುದ್ಧ ಗೆದ್ದರು.

ನಾಲ್ಕರಘಟ್ಟದ ಹಣಾಹಣಿಯಲ್ಲಿ ದೇಶ್ನಾ 11–8 , 11–5 , 11–9 , 11–4 ರಿಂದ ಸಹನಾ ಎಚ್.ಮೂರ್ತಿ ಅವರು ಮಣಿಸಿದರೆ, ಕರುಣಾ 14–12 , 8–11 , 11–8 , 13 –11 , 12–14 , 11–5 ರಿಂದ ಅನಘ್ಯಾ ಮಂಜುನಾಥ್ ಅವರನ್ನು ಪರಾಭವಗೊಳಿಸಿದರು.

ರೋಹಿತ್ ಶಂಕರ್ ಮತ್ತು ಸಹನಾ ಎಚ್.ಮೂರ್ತಿ ಅವರು ಕ್ರಮವಾಗಿ 19 ವರ್ಷದೊಳಗಿನವರ ಯೂತ್ ಬಾಲಕ ಹಾಗೂ ಬಾಲಕಿಯರ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ರೋಹಿತ್ ಫೈನಲ್‌ನಲ್ಲಿ ಅಭಿನವ್ ಕೆ.ಮೂರ್ತಿ ಅವರ ಸವಾಲನ್ನು 6–11 , 6–11 , 11–3 , 11–9 , 11–8 , 13–11 ರಿಂದ ಬದಿಗೊತ್ತಿದರು.

ಸಹನಾ ಅವರು ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 12–10 , 11–5 , 10–12 , 11–8, 11–8 ರಿಂದ ಹಿಮಾನ್ವಿ ಚೌಧರಿ ವಿರುದ್ಧ ಜಯಿಸಿದರು.



ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ (ಎಡದಿಂದ) ರೋಹಿತ್ ಶಂಕರ್, ಕೆ.ಜೆ.ಆಕಾಶ್, ದೇಶ್ನಾ ಎಂ.ವಂಶಿಕಾ ಮತ್ತು ಸಹನಾ ಎಚ್.ಮೂರ್ತಿ

ಮುಖ್ಯಾಂಶಗಳು

- ಫೈನಲ್‌ನಲ್ಲಿ ಆಕಾಶ್‌ಗೆ ರಕ್ಷಿತ್ ವಿರುದ್ಧ ಗೆಲುವು
- ಮಹಿಳೆಯರ ವಿಭಾಗದಲ್ಲಿ ಕರುಣಾ ರನ್ನರ್ ಅಪ್


ಡೇವಿಸ್ ಕಪ್: ರಾಜ್‌ಪಾಲ್ ಮುಂದುವರಿಕೆ

ನವದೆಹಲಿ (ಪಿಟಿಐ): ರೋಹಿತ್ ರಾಜ್‌ಪಾಲ್ ಅವರನ್ನು ಭಾರತ ಡೇವಿಸ್ ಕಪ್ ಟೆನಿಸ್ ತಂಡದ ನಾಯಕರಾಗಿ (ನಾನ್ ಪ್ಲೇಯಿಂಗ್) 2024ರ ಡಿ.31ರ ವರೆಗೆ ಮುಂದುವರಿಸಲಾಗಿದೆ.

ಅವರ ನಾಯಕತ್ವದ ಅವಧಿಯಲ್ಲಿ ತಂಡ ತೋರಿರುವ ಸಾಧನೆಯ ಮೌಲ್ಯಮಾಪನ ಮಾಡಿದ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ತಿಳಿಸಿದೆ.

‘ರೋಹಿತ್ ರಾಜ್‌ಪಾಲ್ ನಾಯಕತ್ವದ ಅವಧಿಯನ್ನು ವಿಸ್ತರಿಸಲು ನಾವು ಸಂತೋಷಪಡುತ್ತೇವೆ. ಅವರಲ್ಲಿರುವ ನಾಯಕತ್ವದ ಗುಣಗಳು, ಆಟದ ಬಗ್ಗೆ ಹೊಂದಿರುವ ಅಪಾರ ಜ್ಞಾನ ಮತ್ತು ಆಟಗಾರರಿಂದ ಅತ್ಯುತ್ತಮ ಪ್ರದರ್ಶನ ಹೊರತರುವ ಸಾಮರ್ಥ್ಯದಿಂದ ಈ ತೀರ್ಮಾನ ತೆಗೆದುಕೊಳ್ಳಲಾಯಿತು’ ಎಂದು ಎಐಟಿಎ ಪ್ರಧಾನ ಕಾರ್ಯದರ್ಶಿ ಅನಿಲ್ ಧೂಪರ್ ಹೇಳಿದ್ದಾರೆ.

ರಾಜ್‌ಪಾಲ್ ಅವರನ್ನು 2019 ರಲ್ಲಿ ನಾಯಕರಾಗಿ ನೇಮಕ ಮಾಡಲಾಗಿತ್ತು.



ದೀಪಾವಳಿಯ ಶುಭಾಶಯಗಳು!

ಆರ್ಚರಿ: ಪ್ಯಾರಿಸ್ ಒಲಿಂಪಿಕ್ ಕೋಟಾ ಗಿಟ್ಟಿಸಿದ ಧೀರಜ್

ಬ್ಯಾಂಕಾಕ್ (ಪಿಟಿಐ): ಬಿಲ್ಗಾರ ಧೀರಜ್ ಬೊಮ್ಮದೇವರ ಅವರು ಏಷ್ಯನ್ ಆರ್ಚರಿ ಕ್ವಾಲಿಫಿಕೇಷನ್ ಟೂರ್ನಿಯ ರಿಕರ್ವ್ ವಿಭಾಗದಲ್ಲಿ ಶನಿವಾರ ಬೆಳ್ಳಿಯ ಪದಕ ಗೆದ್ದುಕೊಂಡರು. ಜೊತೆಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಗಿಟ್ಟಿಸಿದ ಭಾರತದ ಮೊದಲ ಆರ್ಚರಿ ಸ್ಪರ್ಧಿ ಎನಿಸಿದರು.

ಅನುಭವಿ ತರುಣ್‌ದೀಪ್ ರಾಯ್ ಅವರು ಅಂತಿಮ ಎಂಟರಿಂದ ಹೊರಬಿದ್ದ ಮೇಲೆ ಬೊಮ್ಮದೇವರ ಕಣದಲ್ಲಿ ಉಳಿದ ಭಾರತದ ಏಕೈಕ ಸ್ಪರ್ಧಿ ಎನಿಸಿದ್ದರು. 22 ವರ್ಷದ ಧೀರಜ್ ನಿರಾಶೆಗೊಳಿಸದೇ ಎರಡು ನೇರ ಸೆಟ್ ವಿಜಯದೊಂದಿಗೆ ಫೈನಲ್ ತಲುಪಿದರು. ಆದರೆ ತೀವ್ರ ಹಣಾಹಣಿಯ ಫೈನಲ್‌ನಲ್ಲಿ ಚೀನಾ ತೈಪೆಯ ಝಿ ಸಿಯಾಂಗ್ ಅವರಿಗೆ 5–6 ರಿಂದ (29–28, 27–29, 28–28, 30–28, 25–26) (9–10) ರಲ್ಲಿ ಮಣಿದರು.

ಧೀರಜ್ ಇದಕ್ಕೆ ಮೊದಲು ಇರಾನ್‌ನ ಸದೆಗ್ ಅಶ್ರಫ್ ಬವಿಲಿ ಅವರನ್ನು 6–0 ಯಿಂದ ಸೋಲಿಸಿದ್ದರು. ಸೆಮಿಫೈನಲ್‌ನಲ್ಲಿ ಇರಾನ್‌ನ ಮತ್ತೊಬ್ಬ ಸ್ಪರ್ಧಿ ಮೊಹಮದ್ ಹುಸೇನ್ ಗೊಲ್ಶಾನಿ ಅವರನ್ನೂ 6–0 ಯಿಂದ ಸೋಲಿಸಿದ್ದರು.


ಧೀರಜ್ ಬೊಮ್ಮದೇವರ

ಧೀರಜ್ ಅವರು ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದ ಭಾರತ ಪುರುಷರ ತಂಡದಲ್ಲಿದ್ದರು.

ಮಹಿಳೆಯರ ವಿಭಾಗದಲ್ಲಿ ಅಂಕಿತಾ ಭಕತ್ ಕ್ವಾರ್ಟರ್‌ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಝಿಯೊದಖೋನ್ ಅಬ್ದುಸತ್ತಾರೋವಾ ಅವರಿಗೆ ಮಣಿದರು. ಟಾಟಾ ಅಕಾಡೆಮಿಯ ಸ್ಪರ್ಧಿ ಅಂಕಿತಾ ಉತ್ತಮ ಆರಂಭ ಮಾಡಿದರೂ ಅಂತಿಮವಾಗಿ 4–6ರಲ್ಲಿ ಮಣಿದರು.

ರಾಜ್ಯಮಟ್ಟದ ಚೆಸ್ ಟೂರ್ನಿ ಧನುಷ್, ಪ್ರಸಿದ್ಧಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಧನುಷ್ ರಾಮ್


ಪ್ರಸಿದ್ಧಿ ಭಟ್

ಚಾಮರಾಜನಗರ: ದಕ್ಷಿಣ ಕನ್ನಡ ಜಿಲ್ಲೆಯ ಎಂ.ಧನುಷ್ ರಾಮ್ ಹಾಗೂ ಮೈಸೂರಿನ ಪ್ರಸಿದ್ಧಿ ಭಟ್ ಅವರು ನಗರದಲ್ಲಿ ಶನಿವಾರ ಮುಕ್ತಾಯಗೊಂಡ ಪದವಿಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದಲ್ಲಿ ಧನುಷ್ ಒಟ್ಟು 9 ಸುತ್ತುಗಳಲ್ಲಿ 8.5 ಅಂಕ ಕಲೆ ಹಾಕಿ ಅಜೇಯ ಸಾಧನೆಯೊಡನೆ ಅಗ್ರ ಸ್ಥಾನ ಪಡೆದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಕೋಮಲ್ ಶ್ರೀವಾತ್ಸವ್ ಸಜ್ಜಾ 8 ಅಂಕಗಳೊಂದಿಗೆ ಎರಡನೇ ಸ್ಥಾನ ಹಾಗೂ 7.5 ಅಂಕಗಳೊಂದಿಗೆ ದಕ್ಷಿಣ ಕನ್ನಡದ ಮನ್ವಿತ್ ಕಣಜಾಲು, ಚಿಕ್ಕಮಗಳೂರು ಜಿಲ್ಲೆಯ ಎನ್. ಲೀಲಾಜೈಕೃಷ್ಣ ಮತ್ತು ಉಡುಪಿ ಜಿಲ್ಲೆಯ ಆರ್.ಕಾರ್ತೀಕ್ ನಂತರದ ಮೂರು ಸ್ಥಾನಗಳನ್ನು ಪಡೆದರು.

ಬಾಲಕಿಯರ ವಿಭಾಗದಲ್ಲಿ 8 ಅಂಕಗಳೊಂದಿಗೆ ಪ್ರಸಿದ್ಧಿ ಮೊದಲ ಸ್ಥಾನ ಅಲಂಕರಿಸಿದರು. 7.5 ಅಂಕಗಳೊಂದಿಗೆ ಶಿವಮೊಗ್ಗ ಜಿಲ್ಲೆಯ ಮೂಲಾ ಗ್ರೀಷ್ಮ ಎರಡನೇ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ವೇದಾಂಶಿ ಪಾಂಡೆ ಮೂರನೇ ಸ್ಥಾನ ಪಡೆದರು. 7 ಅಂಕಗಳೊಂದಿಗೆ ಉಡುಪಿ ಜಿಲ್ಲೆಯ ಛಾಯಾ ಸಿ.ಪೂಜಾರಿ ನಾಲ್ಕನೇ ಹಾಗೂ ಅದೇ ಜಿಲ್ಲೆಯ ಶಾನ್ವಿ ಎಸ್.ಬಲ್ಲಾಳ್ ಐದನೇ ಸ್ಥಾನ ಗಳಿಸಿದರು.

ಉತ್ತರ ಕನ್ನಡಕ್ಕೆ ಪ್ರಶಸ್ತಿ: ಬಾಲಕರ ವಿಭಾಗದಲ್ಲಿ 31.5 ಅಂಕ ಕಲೆಹಾಕಿದ ಉತ್ತರ ಕನ್ನಡ ಮೊದಲನೇ ಸ್ಥಾನ, 31 ಅಂಕಗಳೊಂದಿಗೆ ಬೆಂಗಳೂರು ದಕ್ಷಿಣ ಜಿಲ್ಲೆ ದ್ವಿತೀಯ ಮತ್ತು ಅಷ್ಟೇ ಅಂಕಗಳೊಂದಿಗೆ ಉಡುಪಿ ಜಿಲ್ಲೆ ಮೂರನೇ ಸ್ಥಾನ ಗಳಿಸಿತು.

ಬಾಲಕಿಯರ ವಿಭಾಗದಲ್ಲಿ 34 ಅಂಕಗಳೊಂದಿಗೆ ಉಡುಪಿ ಜಿಲ್ಲೆ ಮೊದಲ ಸ್ಥಾನ, 30.5 ಅಂಕಗಳೊಂದಿಗೆ ಮೈಸೂರು ಜಿಲ್ಲೆ ಎರಡನೇ ಮತ್ತು ಅಷ್ಟೇ ಅಂಕಗಳೊಂದಿಗೆ ಬೆಂಗಳೂರು ದಕ್ಷಿಣ ಜಿಲ್ಲೆ ಮೂರನೇ ಸ್ಥಾನ ಗಳಿಸಿತು.

ರಾಜ್ಯದ ವಿವಿಧ ಜಿಲ್ಲೆಗಳ 315 ವಿದ್ಯಾರ್ಥಿಗಳು ಟೂರ್ನಿಯಲ್ಲಿ ಪಾಲ್ಗೊಂಡರು.

ಐಸಿಸಿ ಕ್ರಮ ಕಾನೂನುಬಾಹಿರ: ಲಂಕಾ ಸಚಿವ

ಕೊಲಂಬೊ (ಎಪಿ): ರಾಜಕೀಯ ಹಸ್ತಕ್ಷೇಪದ ಕಾರಣ ನೀಡಿ ಶ್ರೀಲಂಕಾ ಕ್ರಿಕೆಟ್ ಮಂಡಳಿಯನ್ನು ಅಮಾನತು ಮಾಡಿರುವ ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ ಕ್ರಮ ಕಾನೂನುಬಾಹಿರ ಎಂದು ಕ್ರೀಡಾ ಸಚಿವ ರೋಶನ್ ರಣಸಿಂಘೆ ಶನಿವಾರ ಇಲ್ಲಿ ಹೇಳಿದ್ದಾರೆ.

ಐಸಿಸಿ ಜೊತೆ ಈ ಬಿಕ್ಕಟ್ಟು ಬಗೆಹರಿಸಲು ತಮಗೆ ಆಗದಿದ್ದಲ್ಲಿ ಸ್ವಿಜರ್ಲೆಂಡ್‌ನಲ್ಲಿರುವ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಪಂಚಾಯಿತಿ ಮೊರೆ ಹೋಗುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಐಸಿಸಿ, ಶುಕ್ರವಾರ ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಸದಸ್ಯತ್ವವನ್ನು ಅಮಾನತುಗೊಳಿಸಿತ್ತು

ಮುಂದಿನ ವಾರ ತಾವು ದುಬೈಗೆ ತೆರಳಿ ಐಸಿಸಿ ಅಧಿಕಾರಿಗಳನ್ನು ಭೇಟಿ ಮಾಡುವುದಾಗಿ ಲಂಕಾ ಕ್ರಿಕೆಟ್ ಮುಖ್ಯಸ್ಥ ಶಮ್ಮಿ ಸಿಲ್ವ ಸುದ್ದಿಗಾರರಿಗೆ ತಿಳಿಸಿದರು. ಅದಕ್ಕೆ ಮೊದಲು, ಮಂಡಳಿಯ ವ್ಯವಹಾರಗಳಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುವುದಿಲ್ಲವೆಂದು ಸರ್ಕಾರದಿಂದ ತಮಗೆ ಆಶ್ವಾಸನೆ ಸಿಗಬೇಕು ಎಂದಿದ್ದಾರೆ.

ಶಾಮಿಲ್, ಶ್ರೀಜಾಗೆ ‘ಹ್ಯಾಟ್ರಿಕ್’ ಚಿನ್ನ

ರಾಜ್ಯ ರೋಲರ್ ಸ್ಕೇಟಿಂಗ್: ಮಿಂಚಿದ ಧನುಷ್, ಕಲ್ಪನಾ

ಪ್ರಜಾವಾಣಿ ವಾರ್ತೆ

ಮಂಗಳೂರು: ರಿಂಕ್ ಮತ್ತು ರೋಡ್ ರೇಸ್‌ನಲ್ಲಿ ಮಿಂಚು ಹರಿಸುತ್ತಿರುವ ದಕ್ಷಿಣ ಕನ್ನಡದ ಮುಹಮ್ಮದ್ ಶಾಮಿಲ್ ಅರ್ಷದ್ ಮತ್ತು ಮೈಸೂರಿನ ಶ್ರೀಜಾ ರಾವ್ ಇಲ್ಲಿ ನಡೆಯುತ್ತಿರುವ ರಾಜ್ಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಶನಿವಾರವೂ ಚಿನ್ನ ಗೆದ್ದು ಸಂಭ್ರಮಿಸಿದರು.

ರಾಜ್ಯ ರೋಲರ್ ಸ್ಕೇಟಿಂಗ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ರೋಲರ್ ಸ್ಪೋರ್ಟ್ಸ್ ಸಂಸ್ಥೆಗಳು ನಗರದ ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿಯಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ 14ರಿಂದ 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಶಾಮಿಲ್ ಮೊದಲ ದಿನ ಇನ್‌ಲೈನ್ ಡ್ಯುಲ್ ಟಿಟಿಯಲ್ಲಿ ಮೊದಲಿಗರಾಗಿದ್ದರು. ಎರಡನೇ ದಿನ ಇನ್‌ಲೈನ್ ರೋಡ್ ರೇಸ್ 1 ಲ್ಯಾಪ್‌ನಲ್ಲಿ ಚಿನ್ನಕ್ಕೆ ಮುತ್ತಿಕ್ಕಿದ್ದರು. ಶನಿವಾರ ಇನ್‌ಲೈನ್–3, 100 ಮೀಟರ್ಸ್ ರೋಡ್ ರೇಸ್‌ನಲ್ಲಿ ಮಿಂಚಿನ ಸಂಚಾರ ಮೂಡಿಸಿದರು.

ಇದೇ ರೇಸ್‌ನ 11ರಿಂದ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಶ್ರೀಜಾಗೆ ಬೆಂಗಳೂರಿನ ತೋರ್ಷಾ ಪ್ರಶಾಂತ್ (13.11ಸೆ) ಮತ್ತು ಮೈಸೂರಿನ ಪ್ರೇರಣಾ (13.79ಸೆ) ಅವರ ಸವಾಲು ಎದುರಾಗಿತ್ತು. 12.57 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಸಂಭ್ರಮಿಸಿದರು. ಮೊದಲೆರಡು ದಿನ ರಿಂಕ್‌ನ ಇನ್‌ಲೈನ್ ಡ್ಯುಯಲ್ ಟಿಟಿ ಮತ್ತು ಇನ್‌ಲೈನ್ ರೋಡ್ ರೇಸ್ 1ಲ್ಯಾಪ್‌ನಲ್ಲಿ ಅವರು ಚಿನ್ನ ಗೆದ್ದುಕೊಂಡಿದ್ದರು.


ರೋಡ್ ರೇಸ್‌ನಲ್ಲಿ ಮುನ್ನುಗ್ಗಿದ ಸ್ಕೇಟರ್‌ಗಳು

ಮೂರನೇ ದಿನದ ಫಲಿತಾಂಶಗಳು (ಚಿನ್ನ ಮಾತ್ರ): ಇನ್‌ಲೈನ್–3, 100 ಮೀಟರ್ಸ್ ರೋಡ್ ರೇಸ್: ಪುರುಷರು: ಧನುಷ್ ಬಾಬು (ಬೆಂಗಳೂರು) ಕಾಲ: 10.46 ಸೆ; ಮಹಿಳೆಯರು: ಕಲ್ಪನಾ ಕುಟ್ಟಪ್ಪ (ಬೆಂಗಳೂರು) ಕಾಲ: 12.33 ಸೆ; 14ರಿಂದ 17 ವರ್ಷದ ಬಾಲಕರು: ಮುಹಮ್ಮದ್ ಶಾಮಿಲ್ ಅರ್ಷದ್ (ದಕ್ಷಿಣ ಕನ್ನಡ) ಕಾಲ:11.06 ಸೆ; ಬಾಲಕಿಯರು: ಪ್ರತೀಕ್ಷಾ ಕೆ.ಎಸ್ (ಮೈಸೂರು) ಕಾಲ: 12.29 ಸೆ; 11ರಿಂದ 14 ವರ್ಷದ ಬಾಲಕರು: ಮಾರುತಿ ನಾಯಕ್ (ಬೆಂಗಳೂರು) ಕಾಲ: 11.7 ಸೆ; ಬಾಲಕಿಯರು: ಶ್ರೀಜಾ ರಾವ್ (ಮೈಸೂರು) ಕಾಲ: 12.57 ಸೆ; ಕ್ವಾಡ್: ರಿಂಕ್–2, 500 + ಡಿ: ಪುರುಷರು: ವಿವೇಕ್ (ದಕ್ಷಿಣ ಕನ್ನಡ) ಕಾಲ: 55.63 ಸೆ; ಮಹಿಳೆಯರು: ಡಿಂಪಲ್ ಗೌಡ (ಬೆಂಗಳೂರು) ಕಾಲ: 57.56 ಸೆ; 14ರಿಂದ 17 ವರ್ಷದ ಬಾಲಕರು: ಮೌರ್ಯ ರೆಡ್ಡಿ (ಬೆಂಗಳೂರು) ಕಾಲ: 52.9 ಸೆ; ಬಾಲಕಿಯರು: ಪೂರ್ವಿ ಛಡ್ಡ (ಬೆಂಗಳೂರು); ಕಾಲ: 57.18 ಸೆ; 11ರಿಂಧ 14 ವರ್ಷದ ಬಾಲಕರು: ಋತವ್ ಪ್ರದೀಪ್ (ಬೆಂಗಳೂರು) ಕಾಲ: 58.41 ಸೆ; ಬಾಲಕಿಯರು: ಪ್ರಣವಿ ಶೆಟ್ಟಿ (ಮೈಸೂರು) ಕಾಲ: 57.82 ಸೆ; 9ರಿಂದ 11 ವರ್ಷದ ಬಾಲಕರು: ಸೂರಜ್ ಸ್ವಾಯಿನ್ (ಬೆಂಗಳೂರು) ಕಾಲ: 58.19 ಸೆ; ಬಾಲಕಿಯರು: ನೀಲಾ ಸಂಪತ್ (ಶಿವಮೊಗ್ಗ) ಕಾಲ: 1 ತಾಸು 2ನಿ; 7ರಿಂದ 9 ವರ್ಷದ ಬಾಲಕರು: ಅವಧೂತ್ ಮೋರೆ (ಬೆಳಗಾವಿ) ಕಾಲ: 1 ತಾಸು 1.56 ಸೆ; ಲೇಖನಾ ಗೌಡ (ಬೆಂಗಳೂರು) ಕಾಲ: 1 ತಾಸು 6.31 ನಿ; ರಿಂಕ್–2, 2 ಲ್ಯಾಪ್: ಬಾಲಕರು: ಹರಶಿವ್ ಎಚ್ (ಬೆಂ.) ಕಾಲ: 1 ತಾಸು 1.69 ನಿ; ಬಾಲಕಿಯರು: ಜನ್ಯಶ್ರೀ (ಬೆಂ.) ಕಾಲ: 1 ತಾಸು 88 ಸೆ.

ಬೆಂಗಳೂರು ರೇಸ್

ಅಮ್ರೆಲಿ ಗೆಲ್ಲುವ ನಿರೀಕ್ಷೆ


ಕಬಿನಿ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಮ್ರೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:


1ನೇ ರೇಸ್: ಗೋಲ್ಡನ್ ಗ್ಯಾಲರಿ 2, ಕಾಂಟಡೋರ್ 3, ಸಿಂಕೊ ಡೆ ಮೆಯೊ 1
2ನೇ ರೇಸ್: ಸೇಕ್ರೆಡ್ ಕ್ರಿಯೇಟರ್ 11, ಅಲ್ಟಿಮೇಟ್ ಸ್ಟ್ರೈಕರ್ 2, ಸದರ್ನ್ ಪವರ್ 1
3ನೇ ರೇಸ್: ಸೂಪರ್ ಸಫೈರ್ 3, ಪ್ರೊಫೆಸಿ 6, ಕ್ರಾಸ್‌ವಾಟರ್ 4
4ನೇ ರೇಸ್: ಕ್ವೀನ್ ಆಫ್ ಕ್ವಿವ್ 3, ಫಾರಜಾನ್ 2, ಅರ್ಮರಿ 4
5ನೇ ರೇಸ್: ಪ್ರೈಮ್ ಅಬ್ಬೆಸ್ 1, ಆರ್ಮ್‌ಸ್ಟ್ರಾಂಗ್ 3, ಮಿಲ್‌ಬ್ರೂಕ್ 2
6ನೇ ರೇಸ್: ಅಮ್ರೆಲಿ 3, ಮಿಷಿಗನ್ ಮೆಲೋಡಿ 2, ಎಟರ್ನಲ್ ಪ್ರಿನ್ಸೆಸ್ 1
7ನೇ ರೇಸ್: ಸೂಪರ್ ಕೈಂಡ್ 1, ಮೆಮೋರಬಲ್ ಟೈಮ್ 3, ಅಗಸ್ಟೊ 2

ಉತ್ತಮ ಬೆಟ್: ಪ್ರೈಮ್ ಅಬ್ಬೆಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 12 ನವೆಂಬರ್ 2023







ಪ್ರಕೃತಿಯ ಬಳುವಳಿಗೆ ದವಾಳಿ ದೀವಿಗೆ

ಮಂಜುಶ್ರೀ ಎಂ.ಕಡಕೋಳ

ಅಭ್ಯಂಜನ, ಹೋಳಿಗೆ ಊಟ, ಪಟಾಕಿಗಳ ಚಿತ್ತಾರ... ದೀಪಾವಳಿ ಎಂದೊಡನೆ ಮನಸ್ಸಿನಲ್ಲಿ ಸುಳಿಯುವ ಚಿತ್ರಗಳಿವು. ಆದರೆ, ಇಂಥ ಆಚರಣೆಗಳಿಂದ ಹೊರತಾಗಿರುವ, ಬಂಜಾರರು ಆಚರಿಸುವ 'ದವಾಳಿ' ಹಬ್ಬವು ಪ್ರಕೃತಿಯ ಆರಾಧನೆ, ಹಿರಿಯರ ಸ್ಮರಣೆ, ಪರಸ್ಪರ ಹಂಚಿ ತಿನ್ನುವ ಗುಣ, ಸಕಲರಿಗೂ ಲೇಸು ಬಯಸುವ ಕಾರಣದಿಂದಾಗಿ ವಿಭಿನ್ನವಾಗಿ ಕಾಣುತ್ತದೆ.

ರಂಗು ರಂಗಿನ ಉಡುಪು ಮತ್ತು ವಿಶಿಷ್ಟ ಭಾಷೆಯ ಕಾರಣಕ್ಕಾಗಿ ಥಟ್ಟನೆ ಗಮನ ಸೆಳೆಯುವ ಬಂಜಾರರು (ಲಂಬಾಣಿ) ಮೂಲತಃ ಬುಡಕಟ್ಟು ಸಮುದಾಯದವರು. ಸಿಂಧು ಕಣಿವೆಯ ನಾಗರಿಕತೆಯೊಂದಿಗೆ ನಂಟು ಹೊಂದಿರುವಂಥ ಈ ಸಮುದಾಯ ವಿಶ್ವದ 114 ದೇಶಗಳಲ್ಲಿ ಲಂಬಾಣಿ, ಲಮಾಣಿ, ಲಬಾನ್, ಸುಗಾಲಿ ಹೀಗೆ ನಾನಾ ಹೆಸರುಗಳಲ್ಲಿ ಹರಿದು ಹಂಚಿಹೋಗಿದೆ. ಆಧುನಿಕ ಕಾಲಘಟ್ಟದಲ್ಲೂ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಜೋಪಾನವಾಗಿರಿಸಿಕೊಂಡಿರುವ ಈ ಸಮುದಾಯದವರ ವಿಭಿನ್ನ ಆಚರಣೆಗಳು ಇಂದಿಗೂ ಗಮನ ಸೆಳೆಯುತ್ತವೆ.

ಅಂಥ ಆಚರಣೆಗಳಲ್ಲಿ ವಿಶಿಷ್ಟವಾದದ್ದು ಬಂಜಾರರ 'ದವಾಳಿ' ಅರ್ಥಾತ್ ದೀಪಾವಳಿ.

ಪ್ರಕೃತಿ ಜತೆಗಿನ ಪ್ರೀತಿ, ಹಿರಿಯರ ಸ್ಮರಣೆ, ಪರಸ್ಪರ ಹಂಚಿ ತಿನ್ನುವ ಗುಣ, ಜಾನುವಾರುಗಳೆಡೆಗಿನ ಪ್ರೇಮ ಹಾಗೂ ಸಕಲರಿಗೂ ಲೇಸು ಬಯಸುವ ಗುಣ ಇವರು ಆಚರಿಸುವ ದವಾಳಿಯ ವಿಶೇಷ. ಕಾಳಿ ಆಮಾಸ್, ನಸಾಬ್, ಧಬುಕಾರ್, ಮೇರಾ, ಫೂಲ್ ತೋಡನ್, ಗೊದಣೋ, ಸಳೋಯಿ ಸೇವನೆ ಲಂಬಾಣಿಗರ ದವಾಳಿಯ ವಿಶಿಷ್ಟ ಆಚರಣೆಗಳು. ರಾಜ್ಯದ ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಸೇರಿದಂತೆ ಇತರ ಭಾಗಗಳಲ್ಲಿ ದವಾಳಿಯನ್ನು ಸಂಭ್ರಮದಿಂದ ಆಚರಿಸುತ್ತಾರೆ.



ಗೋಧಿಹುಲ್ಲಿನ ಬುಟ್ಟಿ ಹೊತ್ತ ಲಂಬಾಣಿ ಯುವತಿಯರು (ಸಂಗ್ರಹ ಚಿತ್ರ)

ಕಾಳಿ ಅಮಾಸ್

ಕಾಳಿ ಅಮಾಸ್ (ದೀಪಾವಳಿ ಅಮಾವಾಸ್ಯೆ) ದಿನದಂದು ಮನೆಯನ್ನು ಅಲಂಕರಿಸಿ ದನಕರುಗಳ ಮೈತೊಳೆಯುತ್ತಾರೆ, ಕೊಟ್ಟಿಗೆಯ ಬಾಗಿಲಿಗೆ ಬೇವಿನ ಸೊಪ್ಪನ್ನು ಕಟ್ಟುವುದು ವಾಡಿಕೆ. ಕೆಲ ತಾಂಡಾಗಳಲ್ಲಿ ಜಾನುವಾರುಗಳ ಮೈಮೇಲಿನ ಉಣ್ಣೆ ಮತ್ತಿತರ ಕೀಟಗಳ ನಿರ್ಮೂಲನೆಗಾಗಿ ಗುಬ್ಬಿಯ ಗೂಡುಗಳಿಗೆ ಬೆಂಕಿ ಹಾಕಿ ಅದನ್ನು ದನಕರುಗಳ ಮೈಮೇಲೆ ಸವರುವುದೂ ಇದೆ. ಗಂಡು ಮಕ್ಕಳು 'ಮೊರ'ವನ್ನು (ಛಾದಲ) ಹಿಡಿದುಕೊಂಡು ಅದನ್ನು ಕೋಲಿನಿಂದ ಬಾರಿಸುತ್ತಾ 'ಆಳಸ ನಿಕಳ್ ಪಾಳಸ್, ಊಟ್ ಲಂಡಿ ಭಾರ್ ಬೇಸ್', 'ಝಿಡ ಬಗಜಡ್ ಗಂಗೋಡ್ ಝಿಡ್' ಎಂದು ಕೂಗುತ್ತಾ ತಾಂಡಾದ ಸುತ್ತಲೂ ಸುತ್ತುತ್ತಾರೆ. 'ಬಗಜಡ್ ಗಂಗೋಡಾ' ಅರ್ಥಾತ್ ಉಣ್ಣೆಗಳು ಉದುರಿ ಹೋಗಿ, ದನಕರುಗಳು ಆರೋಗ್ಯವಾಗಿರಲಿ ಎಂದು ಪ್ರಾರ್ಥಿಸುತ್ತಾರೆ. ಈ ಆಚರಣೆ ಕೆಲ ತಾಂಡಾಗಳಲ್ಲಿ ಮಾತ್ರ ಇದ್ದು, ಹಲವೆಡೆ ಬಹುತೇಕ ನಿಂತಿದೆ.

ಹಿರಿಯರ ಆರಾಧನೆ 'ಧಬುಕಾರ್'

ಕುಟುಂಬದ ಹಿರಿಯರನ್ನು ಸ್ಮರಿಸುವ ಆಚರಣೆಗೆ 'ಧಬುಕಾರ್' ಅನ್ನಲಾಗುತ್ತದೆ. ಹಿರಿಯರಿಂದ ಪ್ರಾರಂಭವಾಗಿ ಇತ್ತೀಚೆಗೆ ಮೃತರಾದವರವರೆಗೆ ಎಲ್ಲರನ್ನೂ, ಕೆಲವೆಡೆ ತಮ್ಮ ಸಾಕುಪ್ರಾಣಿಗಳ ಹೆಸರುಗಳನ್ನೂ ಸ್ಮರಿಸುತ್ತಾ ಸಿಹಿ ಅಡುಗೆ ಎಡೆ ಹಾಕುತ್ತಾರೆ. ಮನೆಯ ಒಲೆಯನ್ನು ಸ್ವಚ್ಛಗೊಳಿಸಿ, ರಂಗೋಲಿ ಹಾಕಿ ಅಲಂಕರಿಸುತ್ತಾರೆ. ಅಕ್ಕಿ ಹಿಟ್ಟು ಬೆಲ್ಲ ಹಾಕಿದ ನೀರನ್ನು ಕಲಸಿ, ಬೇಯಿಸಿದ ಮುದ್ದೆ ಹಿಟ್ಟಿನಂಥ ಹದವಾದ ಸಿಹಿ ಖಾದ್ಯದ ಜತೆಗೆ ತುಪ್ಪ ಸೇರಿಸಿ ಈ ಒಲೆಯ ಕೆಂಡದಲ್ಲಿಯೇ ಹಿರಿಯರಿಗಾಗಿ ಎಡೆ ಹಾಕುತ್ತಾರೆ.

ಎಡೆ ಹಾಕುವಾಗ ಲಯಬದ್ಧವಾಗಿ...

ಬಾಂಡ್ಯಾ ಬೂಚ್ಯಾ/ಖೆವಡ್ಯಾ ಮೆವಡ್ಯಾ/ಘೋಡೆರಿ ಘೂಸಾಳೆ/ ಉಂಟೇರಿ ಕೂಂಟಾಳೆ/ಛದ್ಲಾಸ್ ಕಾನೇರಿ/ಡುಂಗರೇ ಖೋಳಾತಿ/ ತಡ್ಕಿ ಭಡ್ಕಿ/ಜೆನ್ನಿರೊ ಝುರ್ಕೊ/ಲೂಣಿರೊ ಲಚ್ಕೊ/ಕೆಳಕೆಲ್ದಾರಿ ಹಾರೆ/ಪಿಲ್ಪಿಲಾರಿ ಹಾರೆ.../ದವಾಳಿ, ಯಾಡಿ ನ, ಬಾಪು ನ, ಸೇನ ಘಣೋ ಘಣೋ ವೇಸ್... ಎಂದು ಹಾಡುತ್ತಾ ಹಿರಿಯರ ಹೆಸರನ್ನು ಸ್ಮರಿಸುತ್ತಾರೆ. ಇದು ತಾಂಡಾದ ಪ್ರತಿ ಮನೆಯಲ್ಲೂ ನಡೆಯುವ ಆಚರಣೆ. ಗುಂಪುಗುಂಪಾಗಿ ಸಂಬಂಧಿಗಳು ಈ ಕಾರ್ಯದಲ್ಲಿ ಭಾಗವಹಿಸುತ್ತಾರೆ.



ಸಾಂಪ್ರದಾಯಿಕ ದಿರಿಸಿನಲ್ಲಿ ಲಂಬಾಣಿ ಯುವತಿಯರ ಸಂಭ್ರಮ

ಚಿತ್ರ: ಭರತ್ ಕಂದಕೂರ

ಯುವತಿಯರ 'ಮೇರಾ'

ಲಂಬಾಣಿಗರ ದವಾಳಿಯ ಕೇಂದ್ರ ಬಿಂದು ತಾಂಡಾದ ಯುವತಿಯರ 'ಮೇರಾ' (ಶುಭ ಕೋರುವುದು) ಆಚರಣೆ. ಮದುವೆಯಾಗದ ಯುವತಿಯರಷ್ಟೇ ಇದನ್ನು ಆಚರಿಸುತ್ತಾರೆ. 'ಮೇರಾ'ಕ್ಕಾಗಿ ಹಬ್ಬಕ್ಕೂ ತಿಂಗಳ ಮುನ್ನವೇ ತಾಂಡಾದ ಸೇವಾಲಾಲ್ ಮಟ್ಟು (ದೇಗುಲ) ಎದುರು ಯುವತಿಯರ ಹಾಡು, ಕುಣಿತದ ತಯಾರಿ ನಡೆದಿರುತ್ತದೆ. ಇದಕ್ಕೆ ತಾಂಡಾದ ಹಿರಿಯ ಮಹಿಳೆಯರ ಮಾರ್ಗದರ್ಶನವಿರುತ್ತದೆ. ಮುಖ್ಯವಾಗಿ ಇಂಥ ಹಾಡು, ನೃತ್ಯಗಳ ಸಂದರ್ಭಗಳಲ್ಲಿ ಯುವತಿಯರಲ್ಲಿ ತಮ್ಮ ಮನದನ್ನೆಯನ್ನು ಯುವಕರು ಆರಿಸಿಕೊಳ್ಳುವುದು ವಿಶೇಷ. ಇಂಥ ಯುವತಿ ಇಷ್ಟವಾಗಿದ್ದಾಳೆ ಎಂದು ಯುವಕ ಮನೆಯ ಹಿರಿಯರಿಗೆ ಹೇಳಿದರೆ, ಪರಸ್ಪರರ ಮನೆಗಳಲ್ಲಿ ಮಾತುಕತೆ ನಡೆಯುತ್ತದೆ. ಹೀಗೆ ವಿವಾಹಕ್ಕೆ 'ಮೇರಾ' ಮುನ್ನುಡಿ ಆಗುತ್ತದೆ.



ಕಲ್ಲಿನ ರೂಪದಲ್ಲಿ ದೇವರ ಪೂಜೆ

ಕಾಳಿ ಅಮಾಸ್‌ನ ಸಂಜೆ ಲಂಬಾಣಿಗರು ತಮ್ಮಲ್ಲಿನ ಆತ್ಮರಕ್ಷಕ ಶಸ್ತ್ರಾಸ್ತ್ರ, ಕೃಷಿ ಉಪಕರಣಗಳನ್ನು ಪೂಜಿಸುತ್ತಾರೆ. ಈಗ ಇದು ಲಕ್ಷ್ಮೀ ಪೂಜೆಯಾಗಿ ಬದಲಾಗಿದೆ. ಪೂಜೆ ಬಳಿಕ ಯುವತಿಯರು ಔಡಲ ಎಣ್ಣೆ ಬಳಸಿದ ದೀಪಗಳನ್ನು ಹಚ್ಚಿಕೊಂಡು ಹಾಡುಗಳ ಮೂಲಕ ತಾಂಡಾದ ನಾಯೇಕ್ (ನಾಯಕ) ಮನೆಗೆ ಹೋಗಿ ಮನೆ ಮಂದಿಯನ್ನೆಲ್ಲಾ ಹೆಸರಿಸಿ ಮೇರಾ ಕೋರುತ್ತಾರೆ. ಉದಾ: ನಾಯಕ ತೊನ ಮೇರಾ, ಕಾಕಾ ತೊನ ಮೇರಾ, ದಾದಿ ತೋನ ಮೇರಾ, ಛೋಟು ತೊನ ಮೇರಾ. ಇದರರ್ಥ: 'ನಾಯಕ ನಿಮಗೆ ಒಳಿತಾಗಲಿ'. ನಂತರ ಅವನ ಹೆಂಡತಿ ನಾಯಕಣ್ ತೋನ ಮೇರಾ ಎಂದೂ ಹೇಳುತ್ತಾರೆ. ಹೀಗೆ ಕುಟುಂಬದ ಸದಸ್ಯರೆಲ್ಲರ ಹೆಸರು ಹೇಳಿ 'ಮೇರಾ' (ಶುಭ) ಕೋರುತ್ತಾರೆ. ರಾತ್ರಿಯಿಡೀ ತಾಂಡಾದ ಪ್ರತಿ ಮನೆಗೂ ಹೋಗಿ ಈ ರೀತಿ ಶುಭ ಕೋರುತ್ತಾರೆ. ಯುವತಿಯರ ಖುಷಿಗಾಗಿ ಕೆಲವರು ಒಂದಷ್ಟು ಹಣ ಇಲ್ಲವೆ ಕಾಣಿಕೆ ನೀಡುತ್ತಾರೆ.

ಫೂಲ್ ತೋಡನ್

ಕಾಳಿ ಅಮಾಸ್‌ನ ಮರುದಿನ ಬೆಳಿಗ್ಗೆ ಯುವತಿಯರು ತಮ್ಮ ಸಾಂಪ್ರದಾಯಿಕ ಲಂಬಾಣಿ ಉಡುಪು ತೊಟ್ಟು ಬುಟ್ಟಿ ಹಿಡಿದುಕೊಂಡು ಕಾಡು ಇಲ್ಲವೇ ಸುತ್ತಮುತ್ತಲಿನ ಬೆಟ್ಟಗುಡ್ಡಗಳಲ್ಲಿ ಸಿಗುವ ಕೆಲವು ಹೂಗಳನ್ನು ತರಲು ಹೋಗುತ್ತಾರೆ. ಬರುವಾಗ ರಾಗಿ, ಜೋಳದ ತೆನೆ ಅಥವಾ ಬೆಳೆದ ಬೆಳೆಗಳನ್ನು ತರುವರು. ದಾರಿಯುದ್ದಕ್ಕೂ ಹಾಡು–ಕುಣಿತದ ಸಾಥ್ ಇರುತ್ತದೆ. ಕಾಡಿನಲ್ಲಿರುವ ವಿಶೇಷ ಹೂಗಳನ್ನು ಸಂಗ್ರಹಿಸುತ್ತಾರೆ. ಅದರಲ್ಲೂ ಹಳದಿ ಬಣ್ಣದ ಹೊನ್ನಂಬರಿ (ಆವರಿಕೆ) ಹೂಗಳನ್ನೂ ತರುತ್ತಾರೆ. 'ಮೇರಾ'ದಲ್ಲಿ ಸಂಗ್ರಹವಾಗಿದ್ದ ಹಣದಲ್ಲಿ ಖರೀದಿಸಿದ ತಿಂಡಿ–ತಿನಿಸನ್ನು ಕಾಡಿನಲ್ಲಿಯೇ ಒಂದೆಡೆ ಕುಳಿತು ಯುವತಿಯರು ಹಂಚಿಕೊಂಡು ತಿಂದು ತಾಂಡಾಕ್ಕೆ ಮರಳುವರು. ಬಳಿಕ ತಾಂಡಾದ ಪ್ರತಿ ಮನೆಗೆ ಭೇಟಿ ನೀಡಿ ಅಲ್ಲಿ ಐದೈದು ಗೊದಣೋ (ಸಗಣಿಯ ಉಂಡೆ) ಮಾಡುತ್ತಾರೆ. ಇವುಗಳನ್ನು ಹೂಗಳಿಂದ ಅಲಂಕರಿಸಿ ಒಳಿತಾಗಲಿ ಎಂದು ಕೋರಿ ಐದು ಕಡೆ ಅಂದರೆ ದನದ ಕೊಟ್ಟಿಗೆ, ಅಡುಗೆ ಮನೆ, ದೇವರ ಹತ್ತಿರ, ಮುಖ್ಯ ಬಾಗಿಲು, ಮನೆ ಮಾಳಿಗೆ ಮೇಲೆ ಇಡುತ್ತಾರೆ.

2ನೇ ಪುಟಕ್ಕೆ...

ಚಿಣ್ಣರ ಪ್ರಯೋಗ ಪ್ರಜ್ಞೆಗೆ 'ಕಿಟ್'

ಸುಧೀರ ಎಚ್.ಎಸ್.

ವಿಜ್ಞಾನ ಕಲಿಕೆಯ ಆಸಕ್ತಿಗೆ ಇಂಧನರೂಪದಲ್ಲಿ ಇಂಡಿಯಾ ಲಿಟರಸಿ ಪ್ರಾಜೆಕ್ಟ್ (ಐಎಲ್‌ಪಿ) ಸಂಸ್ಥೆ ಕಿಟ್‌ಗಳನ್ನು ರೂಪಿಸಿದೆ. ಕಲ್ಯಾಣ ಕರ್ನಾಟಕದ ಮಕ್ಕಳ ಜ್ಞಾನ ವಿಸ್ತರಣೆಯಲ್ಲಿ ಇದರ ಕಾಣಿಕೆ ದೊಡ್ಡದು. ನವೆಂಬರ್ 14ರಂದು ಮಕ್ಕಳ ದಿನಾಚರಣೆ. ಈ ಸಂದರ್ಭದಲ್ಲಿ ಇಂತಹ ಅರ್ಥಪೂರ್ಣ ಕೆಲಸಗಳು ಸ್ಫೂರ್ತಿ ತುಂಬುವಂತಿವೆ.

ಎಂದಿನಂತೆ ಕ್ಲಾಸಿನಲ್ಲಿ ಮಕ್ಕಳ ಗಲಾಟೆ. ಒಂದು ಪೀರಿಯಡ್ ಮುಗಿದು, ಮುಂದಿನ ಪೀರಿಯಡ್‌ನ ಮೇಷ್ಟ್ರು ಇನ್ನೇನು ಬರಬೇಕು. ಹೇಳಿಕೇಳಿ ಅದು ವಿಜ್ಞಾನದ ಪೀರಿಯಡ್. ವಿಜ್ಞಾನ ಪಾಠ ಮಾಡುವ ಮೇಷ್ಟ್ರು ಬರುವಷ್ಟರಲ್ಲಿ ಒಂದಿಷ್ಟು ಗಲಾಟೆ ಸಹಜವೇ. ಮೇಷ್ಟ್ರು ಕ್ಲಾಸಿನೊಳಗೆ ಕಾಲಿಟ್ಟದ್ದೇ ಎಲ್ಲರೂ ಗಪ್‌ಚುಪ್.

ಮೇಷ್ಟ್ರು ಕೈಯಲ್ಲಿ ಎರಡು ಬಲೂನ್, ಒಂದು ಕ್ಯಾಂಡಲ್ ಮತ್ತು ಬೆಂಕಿಪೊಟ್ಟಣ. ಅವನ್ನು ಮೇಜಿನ ಮೇಲೆ ಇಟ್ಟರು. ಮುಂದಿನ ಬೆಂಚಿನಲ್ಲಿ ಇದ್ದ ಒಬ್ಬ ವಿದ್ಯಾರ್ಥಿಗೆ ಒಂದು ಬಲೂನ್ ಊದಲು ಹೇಳಿ, ಇನ್ನೊಬ್ಬ ವಿದ್ಯಾರ್ಥಿಗೆ ಇನ್ನೊಂದು ಬಲೂನಿನಲ್ಲಿ ಒಂದೆರಡು ಲೋಟ ನೀರು ತುಂಬಲು ತಿಳಿಸಿದರು. ನಂತರ ಬೆಂಕಿಕಡ್ಡಿ ಗೀರಿ ಕ್ಯಾಂಡಲ್ ಹೊತ್ತಿಸಿದರು. ಅದರ ಜ್ವಾಲೆ ಗಾಳಿಗೆ ಆಚೀಚೆ ಆಡುತ್ತ ಕ್ಯಾಂಡಲ್‌ನ ಮೇಣವನ್ನು ಕರಗಿಸುತ್ತ ಬೆಳಗುತ್ತಿತ್ತು. ಮಕ್ಕಳು ಏನಾಗುತ್ತಿದೆ ಎಂದು ಅರಿಯುವಷ್ಟರಲ್ಲಿ ಮೇಷ್ಟ್ರು ಸವಾಲೊಡ್ಡಿದರು: 'ಮಕ್ಕಳೇ, ನನ್ನ ಬಳಿ ಎರಡು ಬಲೂನಿದೆ. ಒಂದು ಬಲೂನಿನಲ್ಲಿ ಗಾಳಿ, ಇನ್ನೊಂದರಲ್ಲಿ ನೀರು. ಉರಿಯುತ್ತಿರುವ ಕ್ಯಾಂಡಲ್ ಬಳಿಗೆ ಅವನ್ನು ತಂದಾಗ ಏನಾಗುತ್ತದೆ?"

ಒಂದೆಡೆ, ಕ್ಲಾಸಿನಲ್ಲಿ ಇದಾನಾಗುತ್ತಿದೆ ಎಂಬ ಗೊಂದಲ ಮಕ್ಕಳಲ್ಲಿ. ಇನ್ನೊಂದೆಡೆ, ಮೇಷ್ಟ್ರು ಸವಾಲಿಗೆ ಉತ್ತರವೇನು ಎಂದು ತಲೆ ಕೆಡಿಸಿಕೊಳ್ಳಬೇಕಾದ ಸ್ಥಿತಿ. ಪ್ರಶ್ನೆಗಳನ್ನು ತುಂಬಿಕೊಂತೆ ಮಕ್ಕಳು ನೋಡುತ್ತಿರುವಾಗಲೇ ಮೇಷ್ಟ್ರು ಒಬ್ಬ ವಿದ್ಯಾರ್ಥಿಗೆ ಗಾಳಿ ಊದಿದ ಬಲೂನನ್ನು ಕ್ಯಾಂಡಲ್‌ನ ಜ್ವಾಲೆ ಬಳಿ ತರಲು ಸೂಚಿಸಿದರು. ಇನ್ನೊಬ್ಬ ವಿದ್ಯಾರ್ಥಿಗೆ ನೀರು ತುಂಬಿದ ಬಲೂನನ್ನೂ ಕ್ಯಾಂಡಲ್ ಜ್ವಾಲೆಯ ಬಳಿ ತರಲು ಸನ್ನೆ ಮಾಡಿದರು.

ಗಾಳಿ ಊದಿದ ಬಲೂನ್ 'ಭಡ್' ಎಂದು ಒಡೆಯಿತು. ಆದರೆ ನೀರು ತುಂಬಿದ ಬಲೂನು ಇನ್ನೂ ಹಾಗೆಯೇ ಇತ್ತು. ಬಲೂನ್ ಹಿಡಿದುಕೊಂಡಿದ್ದ ವಿದ್ಯಾರ್ಥಿಗಳಿಗೆ ತಮ್ಮ ಜಾಗಕ್ಕೆ ವಾಪಸ್ ಹೋಗಿ ಕುಳಿತುಕೊಳ್ಳುವಂತೆ ಮೇಷ್ಟ್ರು ಸಂಜ್ಞೆಯಲ್ಲೇ ಸೂಚಿಸಿದರು.

ಮಕ್ಕಳೆಲ್ಲರ ಗಮನ ಈಗ ಮೇಷ್ಟ್ರು ಮೇಲೆ. 'ನೀರು ತುಂಬಿದ ಬಲೂನು ಒಡೆಯದೇ ಇರಲು ಕಾರಣವೇನು ಇದ್ದೀತು?' ಎಂಬಂತೆ ಮಕ್ಕಳಿಂದ ಉತ್ತರಕ್ಕೆ ಮೇಷ್ಟ್ರು ಎದುರು ನೋಡಿದರು. ಒಂದಿಬ್ಬರು ತಮಗೆ ತೋಚಿದಂತೆ ಕಾರಣ ಕೊಟ್ಟರು. ಅಂದಿನ 'ಗಾಳಿ ಮತ್ತು ನೀರಿನ ಮೇಲೆ ಶಾಖದ ಪರಿಣಾಮ' ಎಂಬ ಪಾಠದ ಸಾರವನ್ನು ಅರ್ಥ ಮಾಡಿಕೊಳ್ಳುವುದೇ ಬಲೂನು ಪ್ರಯೋಗದ ಉದ್ದೇಶ ಎಂದು ಮೇಷ್ಟ್ರು ತಿಳಿಸಿದರು.

'ಗಾಳಿಯಲ್ಲಿನ ಅಣುಗಳು ನೀರಿನ ಅಣುಗಳಿಗಿಂತ ಬೇಗ ಬಿಸಿಯಾಗುತ್ತವೆ. ಹಾಗಾಗಿ ಶಾಖ ಹೆಚ್ಚಾದಂತೆ ಗಾಳಿಯ ಅಣುಗಳು ವಿಸ್ತರಿಸುತ್ತವೆ. ಅದಕ್ಕೇ ಬಲೂನ್ ಒಡೆದದ್ದು. ನೀರಿನ ಅಣುಗಳು ಗಾಳಿಯಲ್ಲಿನ ಅಣುಗಳಷ್ಟು ಬೇಗ ಕಾಯದ ಕಾರಣ ಅವುಗಳು ವಿಸ್ತರಿಸಲು ಇನ್ನೂ ಹೆಚ್ಚು ಕಾಲಾವಕಾಶ ಬೇಕು' ಎಂದೆನ್ನುತ್ತಾ ಅಂದಿನ ಪಾಠವನ್ನು ಮುಂದುವರಿಸಿದರು.

ಪಾಠವನ್ನು ಚಟುವಟಿಕೆಯ ರೂಪದಲ್ಲಿ ನೋಡಿದ ಮಕ್ಕಳಿಗೆ ರೋಮಾಂಚನ. ಕಲಿತದ್ದು ಜೀವನಪರ್ಯಂತ ಮನಸ್ಸಿನಲ್ಲಿಯೇ ಉಳಿಯುತ್ತದೆ ಎಂಬ ಸಾರ್ಥಕ್ಯಭಾವ ಮೇಷ್ಟ್ರದ್ದು.

ಇಂಡಿಯಾ ಲಿಟರಸಿ ಪ್ರಾಜೆಕ್ಟ್ (ಐಎಲ್‌ಪಿ) ಎಂಬ ಸ್ವಯಂ ಸೇವಾ ಸಂಸ್ಥೆ ಅಭಿವೃದ್ಧಿಪಡಿಸಿದ ವಿಜ್ಞಾನ ಪ್ರಯೋಗದ ಕಿಟ್ (ಸೈನ್ಸ್ ಕಿಟ್) ಹೇಗೆ ಉಪಯೋಗಕ್ಕೆ ಬರುತ್ತಿದೆ ಎನ್ನುವುದಕ್ಕೆ ಈ ಪ್ರಸಂಗವೊಂದು ಉದಾಹರಣೆಯಷ್ಟೆ.

3ನೇ ಪುಟಕ್ಕೆ...



ಫೋಲ್ಡ್‌ಸ್ಕೋಪ್ ಅಭಿವೃದ್ಧಿಪಡಿಸಿದವರಲ್ಲಿ ಒಬ್ಬರಾದ ಡಾ. ಜಿಮ್ ಸೈಬುಲ್‌ಸ್ಕಿ 2018ರಲ್ಲಿ ಗುಬ್ಬಿಯ ಸರ್ಕಾರಿ ಶಾಲೆಗೆ ಭೇಟಿ ನೀಡಿ ಕಮ್ಮಟಕ್ಕೆ ಸಾಕ್ಷಿಯಾಗಿದ್ದ ಸಂದರ್ಭ.

ಕ್ರಿಕೆಟಿಗರ ನೋವು ಅಸಲಿ ಕಾರಣಗಳಿವು...

ಕ್ರಿಕೆಟಿಗರು ಅದರಲ್ಲೂ ಬೌಲರ್‌ಗಳು ಯಾತನೆ ಅನುಭವಿಸುವುದು ಇತ್ತೀಚೆಗೆ ಯಾಕೆ ಹೆಚ್ಚಾಗುತ್ತಿದೆ? ಕ್ರಿಕೆಟ್ ತಂಡದ ವೈದ್ಯರೇ ಅದಕ್ಕೆ ಕಾರಣಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ಡಾ. ಶ್ರೀನಂದ್ ಶ್ರೀನಿವಾಸ್

ವಿಶ್ವಕಪ್ ಕ್ರಿಕೆಟ್‌ನ ಕೊನೆಯ ಘಟ್ಟದಲ್ಲಿ ನಾವಿದ್ದೇವೆ. ಸೆಮಿಫೈನಲ್‌ಗೆ ಲಗ್ಗೆಇಟ್ಟಿರುವ ತಂಡಗಳ ಮೇಲೆ ಕಣ್ಣಿಟ್ಟಿರುವಂತೆಯೇ, ಗಾಯ ಅಥವಾ ನೋವಿನಿಂದ ಟೂರ್ನಿಯಿಂದಲೇ ಹೊರಗುಳಿದವರನ್ನೂ ಗಮನಿಸಿದವರಿದ್ದಾರೆ. ಹೊಸ ತಲೆಮಾರಿನ ಕ್ರಿಕೆಟರ್‌ಗಳಲ್ಲಿ ಗಾಯಗೊಳ್ಳುವ ಅಥವಾ ನೋವಿನಿಂದ ಬಳಲುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಅನೇಕರಿಗೆ ಅನಿಸುತ್ತಿದೆ. ಹೀಗೆ ಯಾಕೆ ಆಗುತ್ತಿದೆ ಎಂದು ಆಳಕ್ಕಿಳಿದು, ತಿಳಿದುಕೊಳ್ಳುವ ಯತ್ನ ಮಾಡೋಣ.

ಗಾಯಗೊಳ್ಳುವುದು ಏಕೆ ಎಂದಾಗಲೆಲ್ಲ, 'ರಿಸ್ಕ್ ಫ್ಯಾಕ್ಟರ್' ಎಂಬ ಪದಪುಂಜಗಳು ಕಣ್ಣಿಗೆ ರಾಚುತ್ತವೆ. ಹೆಚ್ಚು ರಿಸ್ಕ್ ತೆಗೆದುಕೊಂಡಷ್ಟೂ ಗಾಯ ಅಥವಾ ನೋವು ಸಂಭವಿಸುವ ಸಾಧ್ಯತೆ ಹೆಚ್ಚಾಗುತ್ತದೆ. ಹಾಗಂತ ಗಾಯಗೊಳ್ಳಲು ಇದೊಂದೇ ಕಾರಣ ಎಂದೇನೂ ಅಲ್ಲ. ಕ್ರಿಕೆಟಿಗರು ನೋವಿನಿಂದ ಬಳಲುತ್ತಿದ್ದರೆ, ಅದಕ್ಕೆ ಪೂರಕವಾದ ಹಲವು ಅಂಶಗಳಿವೆ ಎಂದೇ ಅರ್ಥ. 'ರಿಸ್ಕ್ ಫ್ಯಾಕ್ಟರ್'ಗಳಲ್ಲಿ ಮಾರ್ಪಡಿಸಿಕೊಳ್ಳಬಹುದಾದ ಹಾಗೂ ಮಾರ್ಪಡಿಸಲಾಗದ ಎಂಬ ಎರಡು ಬಗೆಗಳಿವೆ. ಉದಾಹರಣೆಗೆ, ವಯಸ್ಸು, ಲಿಂಗ, ಜನಾಂಗ ಇವುಗಳಿಂದ ತಾನೇತಾನಾಗಿ ಬರುವಂತಹ 'ರಿಸ್ಕ್ ಫ್ಯಾಕ್ಟರ್'ಗಳನ್ನು ಸುಧಾರಿಸಲು ಅಥವಾ ಮಾರ್ಪಡಿಸಲು ಸಾಧ್ಯವಿಲ್ಲ. ತರಬೇತಿಯ ಒತ್ತಡ, ಆಡುವ ತಂತ್ರ, ಪೂರಕ ತರಬೇತಿ, ವಿಶ್ರಾಂತಿ, ಚೇತರಿಕೆ, ಪೌಷ್ಟಿಕಾಂಶ, ಆಟಗಾರರ ದೇಹ ಪ್ರಕೃತಿ ಇವೆಲ್ಲವೂ ಮಾರ್ಪಾಟು ಮಾಡಿಕೊಳ್ಳಬಹುದಾದ 'ರಿಸ್ಕ್ ಫ್ಯಾಕ್ಟರ್'ಗಳ ಸಾಲಿಗೆ ಸೇರುತ್ತವೆ. ಗಾಯಗೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಮಾತನಾಡುವಾಗ, ಮಾರ್ಪಾಟು ಮಾಡಬಹುದಾದ ಈ 'ರಿಸ್ಕ್ ಫ್ಯಾಕ್ಟರ್'ಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು.

ಗಾಯ ಅಥವಾ ನೋವಿಗೆ ಏನೆಲ್ಲ ಕಾರಣಗಳಿರಬಹುದು ಎಂಬುದೀಗ ನಮಗೆ ಗೊತ್ತು. ಈ ಕಾಲಮಾನದಲ್ಲಿಯೇ ಯಾಕೆ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ನೋವು ಅನುಭವಿಸುತ್ತಿದ್ದಾರೆ ಎನ್ನುವ ವಿಷಯದ ಆಳಕ್ಕೆ ಇಳಿಯೋಣ. ವಿಪರೀತ ಕ್ರಿಕೆಟ್ ಆಡುತ್ತಿರುವುದರಿಂದ ಹೀಗಾಗುತ್ತಿದೆ ಎಂದು ಅನೇಕರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಹೊತ್ತಿದು. ಬೇರೆಲ್ಲ ಆಟಗಳಲ್ಲಿ ಮೈದಾನಕ್ಕೆ ಇಳಿಯದ ಋತುಮಾನಗಳು ಆಟಗಾರರಿಗೆ ಇರುತ್ತವೆ. ಅವಕ್ಕೆ ಹೋಲಿಸಿದರೆ, ಭಾರತದಲ್ಲಿ ಕ್ರಿಕೆಟ್‌ನಲ್ಲಿ ಆಟಗಾರರಿಗೆ ಬಿಡುವು ತುಂಬಾ ಕಡಿಮೆ. ದೇಹಕ್ಕೆ ವಿಶ್ರಾಂತಿ ಅತಿ ಕಡಿಮೆಯಾದಾಗ ಸ್ನಾಯುಗಳು ದಣಿಯುತ್ತವೆ. ಗಾಯ ಅಥವಾ ನೋವಿಗೆ ಇದೂ ಕಾರಣ. ಆಟುವುದರ ಜೊತೆಗೆ ಆಟಗಾರರು ವಿವಿಧೆಡೆ ಪ್ರಯಾಣಿಸುತ್ತಲೇ ಇರುತ್ತಾರೆ. ಇದು ಕೂಡ ಆಯಾಸವನ್ನು ಹೆಚ್ಚು ಮಾಡಿ, ದೈಹಿಕ ಕ್ಷಮತೆಗೆ ಸವಾಲೊಡ್ಡುತ್ತದೆ.

'ನಾವು ಕ್ರಿಕೆಟ್ ಆಡುತ್ತಿದ್ದಾಗ ಭಾರ ಎತ್ತುವ ತರಬೇತಿ ಇರಲಿಲ್ಲ. ಹಾಗಿದ್ದೂ ಇಡೀ ದಿನ ನಾವು ಕ್ರಿಕೆಟ್ ಆಡುತ್ತಲೇ ಇದ್ದೆವು. ಭಾರ ಎತ್ತುವುದು ವಿರಾಟ್ ಕೊಹ್ಲಿ ಅವರಿಗೆ ಸಲೀಸು ಇರಬಹುದು. ಎಲ್ಲರೂ ವಿರಾಟ್ ಕೊಹ್ಲಿ ಅಲ್ಲ. ನಿಮ್ಮ ದೇಹಕ್ಕೆ ತಕ್ಕಂತಹ ತರಬೇತಿ ಕಾರ್ಯಕ್ರಮವನ್ನು ಸಿದ್ಧಪಡಿಸಿಕೊಳ್ಳಬೇಕು' ಎಂದು ವೀರೇಂದ್ರ ಸೆಹ್ವಾಗ್ ಇತ್ತೀಚೆಗೆ ಹೇಳಿದ್ದರು. ಅವರ ಮಾತು ಸತ್ಯವಾದರೂ, ಯಾರೂ ಭಾರ ಎತ್ತುವ ವ್ಯಾಯಾಮವನ್ನು ಮಾಡಲೇಬಾರದು ಎಂದು ಹೇಳುವುದು ತಪ್ಪಾಗುತ್ತದೆ. ಪ್ರತಿದಿನ ಜಿಮ್‌ಗೆ ಹೋಗಿ ವ್ಯಾಯಾಮ ಮಾಡುವುದು, ಭಾರ ಎತ್ತುವುದು ಈಗ ಅನಿವಾರ್ಯ. ಹೊಸಕಾಲದ ಕ್ರಿಕೆಟರ್‌ಗಳು ದೇಹಾಕಾರ ಕಾಪಾಡಿಕೊಂಡು, ಕ್ಷಮತೆಯಿಂದ ಆಟದ ಹೊಸ ಸವಾಲುಗಳಿಗೆ ತೆರೆದುಕೊಂಡೂ ಗುಣಮಟ್ಟ ಕಾಯ್ದುಕೊಳ್ಳಲು ಇದರಿಂದ ಸಾಧ್ಯವಾಗುತ್ತಿದೆ. ತುಂಬಾ ಒಳ್ಳೆಯದು ಅಂದುಕೊಂಡದ್ದು ಕೆಟ್ಟದ್ದೂ ಆಗಬಹುದು. ಜಿಮ್‌ನಲ್ಲಿ ಭಾರ ಎತ್ತುವುದನ್ನೂ ಕ್ರಿಕೆಟ್ ಆಡುವ ತರಬೇತಿಯ ಒತ್ತಡವನ್ನೂ ತೂಗಿಸಿಕೊಂಡು ಹೋಗಬೇಕು. ಜಿಮ್‌ನಲ್ಲಿ ಕಸರತ್ತು ಮಾಡಿದ ತಕ್ಷಣವೇ ನೆಟ್ಸ್‌ನಲ್ಲಿ ಸುದೀರ್ಘಾವಧಿ ಅಭ್ಯಾಸ ಮಾಡುವುದು ಅಪಾಯವನ್ನು ಆಹ್ವಾನಿಸಿದಂತೆಯೇ ಸರಿ.



ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಗಾಯಗೊಂಡ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ವಿಶ್ವಕಪ್ 2023ರ ಟೂರ್ನಿಯಿಂದಲೇ ಹೊರಬಿದ್ದರು...

ಕ್ರಿಕೆಟ್‌ನಲ್ಲಿ ಬೇರೆ ಆಟಗಾರರಿಗೆ ಹೋಲಿಸಿದರೆ, ವೇಗ ಹಾಗೂ ಮಧ್ಯಮ ವೇಗದ ಬೌಲರ್‌ಗಳು ಹೆಚ್ಚು ನೋವನ್ನು ಅನುಭವಿಸುತ್ತಾರೆ. ವೇಗದ ಬೌಲಿಂಗ್ ಬೇಡುವಷ್ಟು ದೈಹಿಕ ಸಾಮರ್ಥ್ಯವನ್ನು ಕ್ರಿಕೆಟ್‌ನ ಬೇರೆ ಯಾವ ವಿಭಾಗವೂ ಕೇಳುವುದಿಲ್ಲ. ಬೌಲಿಂಗ್ ಶೈಲಿ ಕೂಡ ನೋವಿಗೆ ಎಡೆಮಾಡಿಕೊಟ್ಟಿರುವುದಕ್ಕೆ ಉದಾಹರಣೆಗಳಿವೆ. ಮುಖ್ಯವಾಗಿ ವೇಗದ ಬೌಲಿಂಗ್ ಶೈಲಿಯಲ್ಲಿ ಎರಡು ಬಗೆಗಳಿವೆ. ಒಂದು, 'ಸೈಡ್ ಆನ್ ಬೌಲಿಂಗ್'. ಇದರಲ್ಲಿ ಬೌಲರ್‌ಗಳು ಎಸೆತ ಹಾಕುವ ಕ್ಷಣದಲ್ಲಿ ಹಿಂದಿನ ಪಾದವು ಬೌಲಿಂಗ್ ಕ್ರೀಸ್‌ಗೆ ಪರ್ಯಾಯವಾಗಿ ಇರುತ್ತದೆ. ಬ್ಯಾಟ್ಸ್‌ಮನ್ ನಿಂತ ದಿಕ್ಕಿನಿಂದ ಗಮನಿಸಿದರೆ, ಬೌಲರ್ ಸಮಭುಜದ ಸ್ಥಿತಿಯಲ್ಲಿ ಇರುತ್ತಾರೆ. ದಿಗ್ಗಜ ಬೌಲರ್, ಆಸ್ಟ್ರೇಲಿಯಾದ ಡೆನ್ನಿಸ್ ಲಿಲ್ಲಿ ಮಾಡುತ್ತಿದ್ದ ಬೌಲಿಂಗ್ ಈ ಶೈಲಿಗೆ ಒಳ್ಳೆಯ ಉದಾಹರಣೆ. ಇನ್ನೊಂದು, 'ಫ್ರಂಟ್ ಆನ್ ಬೌಲಿಂಗ್'. ಈ ಬೌಲಿಂಗ್ ಶೈಲಿಯಲ್ಲಿ ಎಸೆತ ಹಾಕುವ ಸಂದರ್ಭದಲ್ಲಿ ಹಿಂದಿನ ಕಾಲಿನ ಪಾದವು ಹಿಮ್ಮಡಿಯನ್ನು ಎತ್ತಿದ ಸ್ಥಿತಿಯಲ್ಲಿ ಇರುತ್ತದೆ, 'ಪಾಯಿಂಟೆಡ್ ಫಾರ್ವರ್ಡ್' ಎಂದು ಇದನ್ನು ಕರೆಯುತ್ತೇವೆ. ಬ್ಯಾಟ್ಸ್‌ಮನ್ ಇರುವ ದಿಕ್ಕಿಗೆ ವಕ್ಷಭಾಗವು ತೆರೆದ ಅಥವಾ ಅರೆತೆರೆದ ಸ್ಥಿತಿಯ ಶೈಲಿಯೂ ಇದಾಗಿದೆ. ವೆಸ್ಟ್ ಇಂಡೀಸ್‌ನ ವೇಗದ ಬೌಲರ್ ಮಾಲ್ಕಂ ಮಾರ್ಷಲ್ ಈ ಶೈಲಿಯಲ್ಲಿ ಬೌಲಿಂಗ್ ಮಾಡುತ್ತಿದ್ದರು. ಈ ಎರಡೂ ಬೌಲಿಂಗ್ ಶೈಲಿಗಳಿಗೆ ಅನುಕೂಲ, ಅನನುಕೂಲ ಎರಡೂ ಇವೆ. ಅವುಗಳ ತಾಂತ್ರಿಕ ಅಂಶಗಳ ವಿವರಣೆ ಇಲ್ಲಿ ಅನಗತ್ಯ. ಆದರೆ, ಈ ಕಾಲಮಾನದಲ್ಲಿ ಅನೇಕ ಬೌಲರ್‌ಗಳು ಮಿಶ್ರ ಶೈಲಿಯಲ್ಲಿ ಬೌಲಿಂಗ್ ಮಾಡುತ್ತಿದ್ದಾರೆ. ಅದು ಸೈಡ್ ಆನ್ ಅಲ್ಲ; ಫ್ರಂಟ್ ಆನ್ ಕೂಡ ಅಲ್ಲ. ದೇಹದ ಸಹಜ ರಚನೆ–ಚಲನೆಗೆ ಪೂರಕವಲ್ಲದ ಶೈಲಿ ಇದು. ಹೀಗಾಗಿ ಇಂತಹ ಶೈಲಿಯಲ್ಲಿ ಬೌಲಿಂಗ್ ಮಾಡುವವರಿಗೆ ನೋವು ಹೆಚ್ಚು ಕಾಡುತ್ತದೆ. ಹೀಗಾದ ಮೇಲೆ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸರಿಯಾದ ಕ್ರಮ ಅನುಸರಿಸದೇ ಇದ್ದರೆ ಕಷ್ಟ. ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ಅಥವಾ ಪೌಷ್ಟಿಕ ಆಹಾರ ಸೇವನೆಯ ಪ್ರಮಾಣ ಕಡಿಮೆಯಾದರೆ ನೋವು ಉಲ್ಬಣವಾಗುತ್ತದೆ. ನಿದ್ರಾಹೀನತೆಯೂ ಕಾಡಬಹುದು. ಇಂತಹ ಸ್ಥಿತಿ ಮನೋಯಾತನೆಗೆ ದೂಡುತ್ತದೆ. ಕ್ರಿಕೆಟರ್‌ಗಳು ಈಗ ಪ್ರಯಾಣಿಸುವ ದಿನಗಳು, ದೂರ, ಆಡುವ ಕ್ರಿಕೆಟ್‌ನ ಪ್ರಮಾಣ ನೋಡಿದರೆ ಇವೆಲ್ಲವನ್ನೂ ನಿಭಾಯಿಸುವುದು ಸವಾಲೇ ಹೌದು.

ಈಗಿನ ಕ್ರಿಕೆಟಿಗರು ಆಡುವ ಮೊದಲು ಕಠಿಣ ಪರೀಕ್ಷೆಗಳನ್ನು ಎದುರಿಸಬೇಕಿದೆ. ಫಿಟ್‌ನೆಸ್ ಟೆಸ್ಟ್, ಸ್ಕ್ರೀನಿಂಗ್ ಇವೆಲ್ಲವೂ ಹಿಂದೆಂದಿಗಿಂತಲೂ ಸವಾಲನ್ನು ಒಡ್ಡುವಂತಿವೆ. ಅವನ್ನೆಲ್ಲ ಎದುರಿಸಿ ಕ್ಷಮತೆ ಇದೆ ಎಂದು ಸಾಬೀತುಪಡಿಸಿದರಷ್ಟೆ ಆಡಲು ಯೋಗ್ಯರೆಂದು ನಿರ್ಧರಿಸುತ್ತಾರೆ. ಇಂತಹ ಪರೀಕ್ಷೆಗಳಿಗೆ ಒಳಗಾಗುವಾಗ ಸಣ್ಣಪುಟ್ಟ ನೋವು, ಗಾಯ ಇದ್ದರೂ ಸೂಕ್ಷ್ಮವಾಗಿ ಗಮನಿಸುತ್ತಾರೆ. ಮುಂದೆ ಸಮಸ್ಯೆ ಗಂಭೀರ ಸ್ವರೂಪ ತಾಳದಂತೆ ತಡೆಗಟ್ಟಲು ಇದು ಸಹಕಾರಿ. ಆಟಗಾರರಿಗೆ, ಯಾವುದೇ ಬಾಧೆ, ದೈಹಿಕ ಸಂಕಟ ಇದ್ದರೆ ಅದನ್ನು ತಂಡದ ವೈದ್ಯರಿಗೆ ಮುಕ್ತವಾಗಿ ತಿಳಿಸುವ ಕಾಲವಿದು. ಮುಂಜಾಗ್ರತೆ ವಹಿಸಲು ಇದು ಅನಿವಾರ್ಯ. ಹಿಂದೆ ಇಷ್ಟು ಸೂಕ್ಷ್ಮವಾದ ಪರೀಕ್ಷೆಗಳು ಇರಲಿಲ್ಲ. ಕ್ರೀಡಾವೈದ್ಯರ ತಂಡ ಕೂಡ ಇರುತ್ತಿರಲಿಲ್ಲ. ಇದರಿಂದಾಗಿ ಎಷ್ಟೋ ನೋವು, ಗಾಯಗಳನ್ನು ಉಪೇಕ್ಷಿಸಿಯೇ ಎಷ್ಟೋ ಕ್ರಿಕೆಟಿಗರು ಆಡುತ್ತಿದ್ದರು. ಆ ದಿನಗಳಿಗೆ ಹೋಲಿಸಿ, ಈಗ ನೋವು ಹೆಚ್ಚಾಗಿದೆ ಎಂದು ನಾವು ತೀರ್ಮಾನಕ್ಕೆ ಬರುತ್ತೇವೆ. ಇದು ಕೂಡ ವಾಸ್ತವವಲ್ಲ.

ಭಾರತದ ಜಸ್‌ಪ್ರೀತ್ ಬೂಮ್ರಾ, ಹಾರ್ದಿಕ್ ಪಾಂಡ್ಯ, ಇಂಗ್ಲೆಂಡ್‌ನ ಜೋಫ್ರಾ ಆರ್ಚರ್ ಇವರೆಲ್ಲ ಯಾವ ಸ್ವರೂಪದ ನೋವನ್ನು ಅನುಭವಿಸಿದ್ದಾರೆ ಎನ್ನುವುದು ನಮಗೆಲ್ಲರಿಗೆ ಸ್ಪಷ್ಟವಿದೆ. ಮತ್ತೆ ಅವರು ಹಳೆಯ ಲಯದಲ್ಲಿ ಆಡಲು ಸಾಧ್ಯವಾಗುತ್ತಿರುವುದು ಸಮರ್ಪಕ ಚೇತರಿಕೆಯ ಕ್ರಮಗಳನ್ನು ಅನುಸರಿಸುತ್ತಿರುವುದರಿಂದ ಎನ್ನುವುದನ್ನೂ ನಾವೆಲ್ಲ ಅರಿಯಬೇಕು.

(ಲೇಖಕರು 2023ರ ವಿಶ್ವಕಪ್‌ನಲ್ಲಿ ಆಡುತ್ತಿರುವ ನೆದರ್‌ಲ್ಯಾಂಡ್ಸ್ ಕ್ರಿಕೆಟ್ ತಂಡದ ವೈದ್ಯರು. 2020–22ರ ಅವಧಿಯಲ್ಲಿ ಐಪಿಎಲ್ ಆಡಿದ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡಕ್ಕೂ ವೈದ್ಯರಾಗಿದ್ದರು. 'ಎಲಿವೇಟ್ ಪರ್ಫಾರ್ಮೆನ್ಸ್'ನ ಸಹ ಸ್ಥಾಪಕರೂ ಹೌದು.)

ಕನ್ನಡಕ್ಕೆ: ವಿಶಾಖ ಎನ್.

ರೂಪಕಗಳ ಕಥೆಗಾರ ಸ್ನೇಹಜೀವಿ ಶ್ರೀಕಾಂತ

ಎಸ್. ದಿವಾಕರ್


ನುಡಿ ನಮನ

ಸಣ್ಣಕತೆಯ ಕ್ಷೇತ್ರದಲ್ಲಿ ಕೆಲವರು ತಮ್ಮ ಮೊದಲ ಕೃತಿಗಳಿಂದಲೇ ಓದುಗರ ಗಮನ ಸೆಳೆದಿರುವುದುಂಟು; ಆಮೇಲೆ ಅಷ್ಟಾಗಿ ಬರೆಯದೆ, ನಂತರದ ಪೀಳಿಗೆಯ ಓದುಗರ ಗಮನ ಸೆಳೆಯದೆ ಮರೆಗೆ ಸರಿದಿರುವುದೂ ಉಂಟು. ವೆಂಕಟರಾಜ ಪಾನಸೆಯವರ 'ಮನ್ಮಥನ ಹೆಂಡತಿ', ಕೆ. ಸದಾಶಿವರ 'ನಲ್ಲಿಯಲ್ಲಿ ನೀರು ಬಂದಿತು', ರಾಜಲಕ್ಷ್ಮಿ ಎನ್. ರಾವ್ ಅವರ 'ಸಂಗಮ', ರಾಘವೇಂದ್ರ ಖಾಸನೀಸರ 'ಖಾಸನೀಸರ ಕತೆಗಳು', ಕಾಮರೂಪಿಯವರ 'ಒಂದು ತೊಲ ಪುನುಗು'. ಟಿ.ಎನ್. ಕೃಷ್ಣರಾಜು ಅವರ 'ಭೇತಾಳರಾಯ', ಇವು ನನಗೆ ತಕ್ಷಣಕ್ಕೆ ನೆನಪಾಗುವ ಮೊದಲ ಕಥಾ ಸಂಕಲನಗಳು. ಇವುಗಳ ಜೊತೆಗೆ ಮೊನ್ನೆಯಷ್ಟೇ ತೀರಿಕೊಂಡ ಶ್ರೀಕಾಂತ ಅವರ 'ಭೂಮಿ ಕಂಪಿಸಲಿಲ್ಲ' ಸಂಕಲನವನ್ನೂ ಸೇರಿಸಿಕೊಳ್ಳಬೇಕು.


1960ರ ದಶಕದಲ್ಲಿ ಶ್ರೀಕಾಂತ ನಾಮಾಂಕಿತ ಎನ್. ವೆಂಕೋಬರಾವ್ 'ಭೂಮಿ ಕಂಪಿಸಲಿಲ್ಲ'ವಲ್ಲದೆ 'ಪಾಪು-ಪುಟ್ಟು' ಎಂಬ ಇನ್ನೊಂದು ಸಂಕಲನವನ್ನೂ ಪ್ರಕಟಿಸಿ ಸಾಕಷ್ಟು ಪ್ರಸಿದ್ಧರಾಗಿದ್ದರು. ಗೋಪಾಲಕೃಷ್ಣ ಅಡಿಗರ 'ಸಾಕ್ಷಿ' ಪತ್ರಿಕೆಯ ಮೊದಲ ಸಂಚಿಕೆಯಲ್ಲೇ ಅವರ 'ಪಾಪು ಪುಟ್ಟು' ಕತೆ ಪ್ರಕಟವಾಗಿತ್ತು. ಇನ್ನೊಂದು ಕತೆ 'ಪ್ರತಿಮೆಗಳು' 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನ ಪಡೆದಿತ್ತು. ತೀರ್ಪುಗಾರರಲ್ಲಿ ಒಬ್ಬರಾಗಿದ್ದ ಜಿ.ಎಸ್.ಶಿವರುದ್ರಪ್ಪನವರು 'ತುಂಬಾ ತೃಪ್ತಿಯನ್ನು ತಂದ ಅಂಶವೆಂದರೆ ಭಾಷಾಪ್ರಯೋಗ ಪರಿಣತಿ, ವಿಶೇಷ ಎಚ್ಚರಿಕೆಯಿಂದ ಕಡೆದು ನಿರ್ಮಿಸಿದಂಥ ಶಿಲ್ಪ, ಅರ್ಥಪೂರ್ಣ ಧ್ವನಿಪ್ರಚುರ ಭಾಷ್ಯ, ವಿಚಾರದ ಪ್ರಖರತೆ, ದೃಷ್ಟಿಯ ನಾವೀನ್ಯ, ಭಾಷಾ ನಿರ್ಮಾಣದ ಕುಶಲತೆ, ಪರಿಣಾಮದ ತೀವ್ರತೆ ಇವುಗಳಿಂದ (ಈ ಕತೆ) ಜೀವಂತವಾಗಿದೆ ಮತ್ತು ಜ್ವಲಂತವಾಗಿದೆ' ಎಂದು ಬರೆದಿದ್ದರು.

ನವೋದಯದಿಂದ ನವ್ಯಕ್ಕೆ ಹೊರಳಿಕೊಂಡ ಸಂದರ್ಭದಲ್ಲಿ ಕಾಣಿಸಿಕೊಂಡ ಕತೆಗಾರರಲ್ಲಿ ಆತ್ಮಪ್ರಜ್ಞೆ ಮತ್ತು ಅಂತರ್ಮುಖತೆಗಳು ಪ್ರಮುಖ ಲಕ್ಷಣಗಳಾಗಿದ್ದವಷ್ಟೆ. ಹಳೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರಶ್ನಿಸಿದ ಆ ಕತೆಗಾರರು ವೈಯಕ್ತಿಕ ನೆಲೆಯಲ್ಲೇ ಅನುಭವದ ಅಧಿಕೃತತೆಯನ್ನು ಹುಡುಕಿದರು; ಅಭಿವ್ಯಕ್ತಿಗಾಗಿ ಕಾವ್ಯಭಾಷೆಯ ರೂಪಕ, ಪ್ರತಿಮೆ, ಪ್ರತೀಕಗಳಂಥ ವಿಧಾನಗಳನ್ನು ಅನುಸರಿಸಿದರು. ಶ್ರೀಕಾಂತರ ಕತೆಗಳಲ್ಲಿ ಕೂಡ ಈ ಎಲ್ಲ ಅಂಶಗಳೂ ಇವೆ. ಕತೆಯ ವಿಶಿಷ್ಟ ಸನ್ನಿವೇಶಗಳ ಧ್ವನಿಯನ್ನು ಮನಗಾಣಿಸುವುದಕ್ಕಾಗಿ ಅವರು, ಆ ಕಾಲದ ನವ್ಯಕತೆಗಾರರಂತೆಯೇ, ವ್ಯಂಗ್ಯವನ್ನು ತುಂಬ ಪರಿಣಾಮಕಾರಿಯಾಗಿ ಬಳಸಿದರು.

ಪಾತ್ರಸೃಷ್ಟಿಯಲ್ಲಿ ಕಂಡುಬರುವ ನಾಟಕೀಯತೆ, ರೂಪಕಗಳ ಮೂಲಕ ಅನಾವರಣಗೊಳ್ಳುವ ಹೆಣ್ಣಿನ ಮನಸ್ಸು, ಭಾವಗೀತಾತ್ಮಕ ನಿರೂಪಣೆ, ಇವು ಅವರಲ್ಲಿ ಎದ್ದುಕಾಣುವ ಅಂಶಗಳು. ಎಲ್ಲ ಕತೆಗಳಲ್ಲೂ ಹೆಣ್ಣಿನ ಬಗ್ಗೆ ಅನುಕಂಪಭರಿತ ತಿಳಿವಳಿಕೆಯಿದೆ, ಮನುಷ್ಯನ ಅಪ್ರಜ್ಞಾಪೂರ್ವಕ ವರ್ತನೆಗಳನ್ನು ಕುರಿತ ಸೂಕ್ಷ್ಮಗ್ರಹಿಕೆಯಿದೆ, ಜೀವಂತವಲ್ಲದ ಮನುಷ್ಯಪ್ರಕೃತಿಯ ಬಗ್ಗೆ ಅನಾದರವಿದೆ. ಒಳಿತು ಮತ್ತು ಕೆಡುಕಿನ ನಡುವಣ ಸಂಬಂಧದ ಬಗ್ಗೆ ಕುತೂಹಲವಿದೆ. ಇವೆಲ್ಲವೂ ಶರತ್ಕಾಲದ ಬದಲಾಗುವ ಬಣ್ಣಗಳಂತೆ ಭಾವನೆಗಳ ರೂಪಾಂತರಕ್ಕೆ ಕಾರಣವಾಗುತ್ತವೆ. ಅವರ ಪಾತ್ರಗಳೆಲ್ಲವೂ ಸಾಮಾನ್ಯರನ್ನು ಪ್ರತಿನಿಧಿಸುವ ಪಾತ್ರಗಳೇ. ಆದರೆ ಅವರಲ್ಲೂ ಅಂತರ್ಗತವಾಗಿರುವ, ಕೆಲವು ಸಂದರ್ಭಗಳಲ್ಲಿ ಮಾತ್ರ ಮೇಲೆ ಕಾಣಿಸಿಕೊಳ್ಳುವ ಹಿಂಸಾತ್ಮಕ ಪ್ರವೃತ್ತಿಯನ್ನೂ ಅವರು ವಿಶ್ಲೇಷಿಸುತ್ತಾರೆ.



ಶ್ರೀಕಾಂತರ ಸಮಗ್ರ ಕತೆಗಳು–ಮುಖಪುಟ


ಎನ್.ವೆಂಕೋಬರಾವ್ (ಶ್ರೀಕಾಂತ)

ನಾನು ಮೊದಲು ಶ್ರೀಕಾಂತರನ್ನು ನೋಡಿದ್ದು 1961ರಷ್ಟು ಹಿಂದೆ. ಆಗವರು ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದ 'ವಿಕ್ರಮ' ವಾರಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಇನ್ನೂ ಪಿ.ಯು.ಸಿ.ಯಲ್ಲಿದ್ದ, ಸಾಹಿತ್ಯದಲ್ಲಿ ಆಸಕ್ತಿಯಷ್ಟೇ ಇದ್ದ, ಆರ್‌ಎಸ್‌ಎಸ್ ಎಂದರೇನೆಂದು ಗೊತ್ತೇ ಇರದಿದ್ದ ನನಗೆ ಅವರು ಮೊದಲ ಭೇಟಿಯಲ್ಲೇ ತಮ್ಮ 'ಭೂಮಿ ಕಂಪಿಸಲಿಲ್ಲ' ಎಂಬ ಕಥಾ ಸಂಕಲನವನ್ನು ಕೊಟ್ಟಿದ್ದರು. ಅದಕ್ಕೆ ಡಾಡಾಯಿಸ್ಟರ ಅಮೂರ್ತ ಕಪ್ಪು ಬಿಳುಪು ಚಿತ್ರಗಳನ್ನು ಹೋಲುವಂತಿದ್ದ ಮುಖಪುಟವಿತ್ತು. ಅದನ್ನು ರಚಿಸಿದ್ದವರು ರೇಣು ಆನಂದರಾವ್ (ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ನಿರ್ದೇಶಕರಾಗಿದ್ದ ಅವರು ಟಿ.ಜಿ. ರಾಘವರ 'ಜ್ವಾಲೆ ಆರಿತು', ನಿಸಾರ್ ಅಹಮದರ 'ಮನಸು ಗಾಂಧಿಬಜಾರು' ಮೊದಲಾದ ಇನ್ನೂ ಕೆಲವು ಪುಸ್ತಕಗಳಿಗೂ ಮುಖಪುಟ ವಿನ್ಯಾಸಗೊಳಿಸಿದ್ದರು). ಆ ಕಾಲದಲ್ಲಿ ಒಂದೆರಡು ತಿಂಗಳು ನಾನು ಆಗಾಗ ಶ್ರೀಕಾಂತರನ್ನು ಭೇಟಿಯಾಗುತ್ತಿದ್ದ ನೆನಪು. ಆಮೇಲೆ 2008ರ ವರೆಗೂ ನನಗೆ ಅವರ ಸಂಪರ್ಕವಿರಲಿಲ್ಲ. ಆ ಹೊತ್ತಿಗೆ ಹೊಸ ಪೀಳಿಗೆಯ ಓದುಗರಿಗೆ ಅವರ ಪರಿಚಯವೇ ಇಲ್ಲಲಿಲ್ಲವೆನ್ನಬೇಕು. 2011ರಲ್ಲಿ ನಾನೇ ಅವರ ಎಲ್ಲ ಕತೆಗಳನ್ನೂ ಒಟ್ಟುಗೂಡಿಸಿ ಅದಕ್ಕೊಂದು ಮುನ್ನುಡಿ ಬರೆದೆ. ಅದು 'ಸಮಗ್ರ ಕತೆಗಳು' ಎಂಬ ಹೆಸರಿನಲ್ಲಿ ಸಾಗರ್ ಪ್ರಕಾಶನದಿಂದ ಪ್ರಕಟವಾಯಿತು.

ಆ ಪುಸ್ತಕಕ್ಕಾಗಿ ಅವರು ನನ್ನ ಒತ್ತಾಯದಿಂದ, ಅದೂ ಮನಸ್ಸಿಲ್ಲದ ಮನಸ್ಸಿನಿಂದ, 'ಕತೆಗಳನ್ನು ಓದುವ ಮುನ್ನ' ಎಂಬ ಶೀರ್ಷಿಕೆಯಲ್ಲಿ ಒಂದು ಲೇಖನ ಬರೆದರು. ಅದರಲ್ಲಿರುವ 1974ರಲ್ಲಿ ನಡೆದ ಒಂದು ಪ್ರಸಂಗ: "ಆಹ್ವಾನಿತ ಕತೆಯಾಗಿ 'ಪ್ರಜಾವಾಣಿ'ಯಲ್ಲಿ ನನ್ನ ಕತೆ ಪ್ರಕಟವಾಯಿತು. ಹೆಸರು 'ವಿವೇಕಾನಂದ ಭೂತ'. ಗದ್ದಲವೆಬ್ಬಿಸಿತು. ನೂರಾರು ಕಾಗದಗಳು; ಎಲ್ಲವೂ ಬೆದರಿಕೆಗಳೇ. ಕತೆಯ ಗಟ್ಟಿತನ ಯಾರ ಗಮನಕ್ಕೂ ಬರಲೇ ಇಲ್ಲ. ಪರಂಪರಾಗತ ಶೈಲಿಗೆ ಒಗ್ಗಿಕೊಂಡ ನಮ್ಮ ಜನ ಸಿಡಿದೆದ್ದರು. ಬಯ್ದರು. ಕಾರಣ ಇಷ್ಟೆ! ವಿವೇಕಾನಂದರ ಪ್ರತಿಮೆಯನ್ನು ಮಗುವಿನ ನುಣ್ಣನೆಯ ಪಿರ್ರೆಗೆ ಹೋಲಿಸಿದ್ದೆ. ಜೊತೆಗೆ ಪ್ರಬುದ್ಧಾನಂದ ಎಂಬ ಸನ್ಯಾಸಿಯನ್ನು ಅಪ್ರಬುದ್ಧನೆಂದು ಕರೆದಿದ್ದೆ. ಇದು ಎಲ್ಲರನ್ನೂ ಕೆರಳಿಸಿತು. ಸಂಘದ ನಾಯಕರಂತೂ ಕುಪಿತರಾದರು. ನನ್ನ ವಿಚಾರಣೆಯೂ ಆಯಿತು. ಸಾಹಿತ್ಯದ ಗಂಧ ಗೊತ್ತಿರದ ಜನ ಲೇವಡಿ ಮಾಡಿದರು. ಅವ್ಯಕ್ತವಾಗಿ 'ಶ್ರೀಕಾಂತ' ಮರೆಯತೊಡಗಿದ... ಈ ಘಟನೆ ನನ್ನನ್ನು ಸಾಹಿತ್ಯ ವಲಯದಿಂದ ದೂರ ಮಾಡಿತು. ಭಾಷಣ, ಸಂಘಟನೆ, ದೇಶಭಕ್ತಿ, ಉನ್ಮಾದ ಹೆಚ್ಚಾಯಿತು... ಹೃದಯದ ಅಂತಃಸ್ಥಲದಲ್ಲಿ ಸಾಹಿತ್ಯ ವಿರಾಜಮಾನವಾಗಿದ್ದರೂ ಹೊರ ಜಗತ್ತಿಗೆ ಪ್ರಕಟವಾಗಲಿಲ್ಲ."

ಐಡಿಯಾಲಜಿಯ ಮೇಲೆ ಭದ್ರವಾಗಿ ನಿಂತ ಯಾವ ಪ್ರಭುತ್ವವೂ ತನ್ನ ಕಥನಗಳನ್ನು ಒಪ್ಪಿಕೊಳ್ಳದ ಲೇಖಕರನ್ನು ಪುರಸ್ಕರಿಸುವುದಿಲ್ಲ. ಇದಕ್ಕೆ ಆರ್‌ಎಸ್‌ಎಸ್ ಕೂಡ ಹೊರತಲ್ಲ ಎಂದು ದೃಢಪಡುತ್ತದೆ ಶ್ರೀಕಾಂತರ ಮೇಲಿನ ಮಾತುಗಳಿಂದ. ಸೋವಿಯೆಟ್ ಯೂನಿಯನ್ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ರಷ್ಯದ ಹಾಗೂ ಪೂರ್ವ ಯೂರೋಪಿಯನ್ ದೇಶಗಳ ಅದೆಷ್ಟು ಮಂದಿ ಲೇಖಕರು ಒಂದೋ, ಪ್ರಭುತ್ವದ ದಬ್ಬಾಳಿಕೆಗೆ ಗುರಿಯಾಗಿ ಜೈಲು ಸೇರಬೇಕಾಯಿತು ಅಥವಾ ದೇಶ ಬಿಟ್ಟು ಹೋಗಬೇಕಾಯಿತು. ವಿಪರ್ಯಾಸವೆಂದರೆ ಅವರಲ್ಲಿ ಬಹುಮಂದಿ ಅತ್ಯುತ್ತಮ ಲೇಖಕರಾಗಿದ್ದದ್ದು.


ಶ್ರೀಕಾಂತರಿಗೆ ಯಾವುದೇ ಸಿದ್ಧಾಂತದ ವ್ಯಕ್ತಿಯೊಡನೆಯೂ ಗೆಳೆತನ ಸಾಧ್ಯವಿತ್ತು. ಕುವೆಂಪು ಅವರ ಗುರುಸಮಾನರು. ಅಡಿಗ, ತರಾಸು, ಕೆ. ನರಸಿಂಹಮೂರ್ತಿ, ಅನಂತಮೂರ್ತಿ, ಜಿ. ಎಚ್. ನಾಯಕ, ಗಿರಿ, ಕೃಷ್ಣ ಆಲನಹಳ್ಳಿ, ಕೆ. ನ. ಶಿವತೀರ್ಥನ್, ಹೀಗೆ ಅನೇಕ ಲೇಖಕರ ಜೊತೆ ಆತ್ಮೀಯತೆಯಿತ್ತು, ಸ್ನೇಹವಿತ್ತು. ಸ್ನೇಹಕ್ಕೆ ವಯಸ್ಸಿನ ತಾರತಮ್ಯವೇನೂ ಇಲ್ಲ. ಇಬ್ಬರ ನಡುವೆ ನಿಜವಾದ ಸ್ನೇಹ ಮೊಳೆಯಬೇಕಾದರೆ ಇಬ್ಬರಿಗೂ ಸಮಾನ ಆಸಕ್ತಿ ಇರಬೇಕು. ಹಾಗಿಲ್ಲದೆ ಆಸಕ್ತಿಗಳು ಬೇರೆ ಬೇರೆಯಾಗಿದ್ದರೆ ಒಟ್ಟಿಗೆ ಸಂತೋಷಪಡಬಹುದಾದ್ದು ಏನೂ ಇರುವುದಿಲ್ಲ. ಆಗ ಒಟ್ಟಿಗೆ ಕಳೆದ ಕಾಲ ಕೂಡ ಬಹುಬೇಗ ಮರೆವಿಗೆ ಜಾರುತ್ತದೆ. ಇಬ್ಬರ ನಡುವೆ ಸ್ನೇಹ ಮೊಳೆಯಬೇಕಾದರೆ ಬಹುಶಃ ಇಬ್ಬರೂ ಒಂದಲ್ಲ ಒಂದು ಕಾಲದಲ್ಲಿ ಸುಖವನ್ನೋ ಸಂಕಷ್ಟವನ್ನೋ ಯಾತನೆಯನ್ನೋ ಅನುಭವಿಸಿರಬೇಕು. ಅಂಥ ಗುಣವಿದ್ದವರು ಕೆಲವರಾದರೂ ನಮ್ಮ ಸಂಪರ್ಕಕ್ಕೆ ಬರುವಂತಾದರೆ ಅದು ನಮ್ಮ ಅದೃಷ್ಟ. ಮೈಸೂರಿನ ಬನುಮಯ್ಯ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದ, ಅನೇಕ ದಶಕಗಳಿಂದ ಬುದ್ಧಿಮಾಂದ್ಯ ಮಕ್ಕಳಿಗಾಗಿ ಮೈತ್ರಿ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದ ಶ್ರೀಕಾಂತ ನನ್ನ ಮಟ್ಟಿಗೆ ಅತ್ಯುತ್ತಮ ಕತೆಗಾರರಷ್ಟೇ ಆಗಿರಲಿಲ್ಲ, ಸ್ನೇಹಕ್ಕಾಗಿ ಸ್ನೇಹವೇ ಆಗಿದ್ದವರು ಕೂಡ. ❖

ಮೊದಲ ಓದು

ಕಾನನದ ಕಥೆಗಳ ಹೇಳುವ 'ಕಾನುಘಟ್ಟ'

ಉತ್ತರ ಕನ್ನಡ ಜಿಲ್ಲೆ ಕಾಳಿನದಿಯ ಸುತ್ತಲಿನ ಕಾನನದೊಳಗಿನ ಜನ-ಜೀವನ, ಅವರಲ್ಲಿನ ಕಾಡಿನ ಜ್ಞಾನವನ್ನು ತೆರೆದಿಡುವ ಕೃತಿ ಲೇಖಕ ಶಿವಾನಂದ ಕಳವೆಯವರ 'ಕಾನುಘಟ್ಟ' ಕಾದಂಬರಿ. ವನದೇವತೆಯ ಮಡಿಲಲ್ಲಿರುವ ಹಲವಾರು ಮಂದಿ ತಮ್ಮ ಜ್ಞಾನದ ಬಗ್ಗೆ ಮಾತಾಡುತ್ತಾ ಹೋಗುತ್ತಾರೆ. ನಿಸರ್ಗ ಚರಿತೆಯ ಬಹು ಮುಖ್ಯ ಸಂಗತಿಗಳು ಈ ಕಾದಂಬರಿಯಲ್ಲಿವೆ.

ಅರಣ್ಯ ಇತಿಹಾಸ ಎಂದರೆ ಬ್ರಿಟಿಷರ ತೇಗದ ನೆಡುತೋಪು ದಾಖಲೆಗಳು ಯಾವುವು, ಅವರು ಕಾನುಗಳ ನೋಡಿದ ಬಗೆ ಯಾವುದು, ಕೈಗಾರಿಕೆಗಳು ನಮ್ಮ ಕಾಡಿನ ಮೇಲೆ ಮಾಡಿದ ಪ್ರಹಾರ ಎಂಥದು?– ಇಂಥ ಮಾಹಿತಿಗಳನ್ನು ಸಾಕಷ್ಟು ಸಂಶೋಧನಾ ವರದಿಗಳು ಒದಗಿಸುತ್ತವೆ. ಆದರೆ ನಮ್ಮ ನಡುವೆ ಬದುಕಿದ ವನವಾಸಿಗರು, ಕೃಷಿಕರ ಕಣ್ಣಲ್ಲಿ ಕಾನು ಕಂಡಿದ್ದು ಹೇಗೆ? ಎಂಬುದನ್ನು ಕಾಳಿ ನದಿ ಕಣಿವೆಯಿಂದ ಶರಾವತಿ ಕಣಿವೆವರೆಗೆ ಸುತ್ತಾಡಿ ಹಳೆಯ ದಾಖಲೆಗಳನ್ನು ಸಂಗ್ರಹಿಸಿ ಕಾದಂಬರಿ ಸ್ವರೂಪ ನೀಡಿದ್ದಾರೆ ಕಳವೆ.




ಪು: 280 ₹300

ಕಾನುಘಟ್ಟ
ಲೇ: ಶಿವಾನಂದ ಕಳವೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ: 9448110034

ಕಾದಂಬರಿಯಲ್ಲಿ ಹಲವು ಪಾತ್ರಗಳ ಜೊತೆಗೆ ಘಟನೆಗಳೂ ಸಾಗುತ್ತವೆ. ರಾಜಸ್ಥಾನದ ಸೂರ್ಯನಾರಾಯಣ ಶರ್ಮಾಜಿ, ಊರಿಗೆ ರಸ್ತೆ ಬೇಕೆಂದು ಹೋರಾಟದ ಹಾದಿ ಹಿಡಿದ ಶಿವಪುರದ ಗೋಪಾಲ ಭಟ್ಟರು, ಕಾಡಿನೂರಿನ ಮನೆ ಮನೆ ತಿರುಗಿ ಕಥೆ ಹೇಳುವ ಕಾಳು ಕುಂಬ್ರಿ ಮನೆತನ, ಊರ ತುಂಬಾ ನಾರಾಯಣರು, ಅವರಿಗಿಟ್ಟ ಅಡ್ಡ ಹೆಸರುಗಳ ಹಿಂದಿನ ಸ್ವಾರಸ್ಯಕರ ಅಂಶಗಳು ಕಾದಂಬರಿಯ ಹೂರಣವಾಗಿವೆ. ಕಾದಂಬರಿಯ ಪರಿವಿಡಿಯಲ್ಲಿ ಅಧ್ಯಾಯಗಳು ಬಿಡಿಬಿಡಿಯಾಗಿ ಕಂಡರೂ, ಅವುಗಳನ್ನು ಒಂದಕ್ಕೊಂದು ಜೋಡಿಸಿ, ಹೆಣೆದಿರುವ ಶೈಲಿ ಬಹಳ ಚೆನ್ನಾಗಿದೆ. ಪಾತ್ರಗಳನ್ನು ಸೇರಿಸುವ ಕ್ರಮ ಓದಿನ ಆಸಕ್ತಿಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ❖

ಟ್ರಾನ್ಸ್‌ಜೆಂಡರ್‌ಗಳತ್ತ ಬೆಳಕು ಚೆಲ್ಲುವ ಕೃತಿ



ಪು: 256 ₹295

ಬಿಂಬದೊಳಗೊಂದು ಬಿಂಬ
ಲೇ: ರೇಷ್ಮಾ ಉಳ್ಳಾಲ್
ಪ್ರ:ನವಕರ್ನಾಟಕ
ಸಂ: 08022161900

ಟ್ರಾನ್ಸ್‌ಜೆಂಡರ್‌ಗಳ ಅಸ್ತಿತ್ವ ಮತ್ತು ಸಾಮಾಜಿಕ ಸಂಘರ್ಷದ ಕಥನವನ್ನು ಹೇಳುವ ಕೃತಿ 'ಬಿಂಬದೊಳಗೊಂದು ಬಿಂಬ'. ಮೂಲತಃ ಪತ್ರಕರ್ತೆಯಾಗಿರುವ ಕೃತಿಯ ಲೇಖಕಿ ರೇಷ್ಮಾ ಉಳ್ಳಾಲ್, ಲಿಂಗತ್ವ ಅಲ್ಪಸಂಖ್ಯಾತರ ಬದುಕಿನ ಕುರಿತು ಸಂಶೋಧನೆ ಹಾಗೂ ಅಧ್ಯಯನದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದವರು. ಆ ಅಧ್ಯಯನದಲ್ಲಿ ಕಂಡ ವಿಷಯಗಳನ್ನೇ ಕೃತಿಯಾಗಿಸಿದ್ದಾರೆ.

'ತೃತೀಯ ಲಿಂಗಿಗಳ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ, ಸಾಮಾಜಿಕ ಮತ್ತು ಮಾನಸಿಕ ಸಂಘರ್ಷವನ್ನು ಜಾಗತಿಕ ಮಟ್ಟದಲ್ಲಿ ನಿಂತು ಅವಲೋಕನ ಮಾಡಿರುವುದು ಸ್ತುತ್ಯರ್ಹ. ಇದು ಕನ್ನಡದ ಸಂದರ್ಭದಲ್ಲಿ ತೃತೀಯ ಲಿಂಗಿಗಳ ಬದುಕಿನ ಬಗ್ಗೆ ಮಾಡಿರುವ ಮೊದಲ ಸಂಶೋಧನೆಯಾಗಿದ್ದು, ನಮಗೆ ಸಮಗ್ರವಾದ ಮಾಹಿತಿಯನ್ನು ನೀಡುತ್ತದೆ' ಎಂದು ಬಿ.ಎಸ್.ಲಿಂಗದೇವರು ಕೃತಿಯ ಮುನ್ನುಡಿಯಲ್ಲಿ ಬರೆದಿದ್ದಾರೆ.

ಕೃತಿಯಲ್ಲಿ ಒಟ್ಟು 14 ಲೇಖನಗಳಿವೆ. ಮೊದಲ ಲೇಖನವೇ ಟ್ರಾನ್ಸ್‌ಜೆಂಡರ್ ಸಮುದಾಯದ ಕುರಿತು ಸಮಗ್ರ ಮಾಹಿತಿ ಒದಗಿಸುತ್ತದೆ. 'ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಯಲ್ಲಿ ತೃತೀಯ ಲಿಂಗಿಗಳು' ಎಂಬ ಲೇಖನ ಅರ್ಧನಾರೀಶ್ವರನ ಕಲ್ಪನೆಯಿಂದ ಹಿಡಿದು ಪುರಾಣದಲ್ಲಿ ಬರುವ ಅನೇಕ ಟ್ರಾನ್ಸ್‌ಜೆಂಡರ್ ಕಲ್ಪನೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಅವರ ದೈವ ಸವದತ್ತಿ ಎಲ್ಲಮ್ಮನ ಕಥೆಯೂ ಇಲ್ಲಿ ಸಿಗುತ್ತದೆ. ❖

ಎಳೆಯರಿಗೆ ಪ್ರಿಯವೆನಿಸುವ 'ಓದು–ನೋಡು' ಕಥೆಗಳು

ರಘುನಾಥ ಚ.ಹ.

ಮಕ್ಕಳ ದಿನಾಚರಣೆ ಇನ್ನೇನು ಎದುರಲ್ಲಿದೆ. ಚಿಣ್ಣರಿಗಾಗಿ ಪುಸ್ತಕಲೋಕದಲ್ಲಿ ನಡೆದಿರುವ ಚೆಂದದ ಕೆಲಸಕ್ಕೆ ಇದು ಸಶಕ್ತ ಉದಾಹರಣೆ.

ಒಳನೋಟ



ಬೆಳಗಾವಿ ಜಿಲ್ಲೆಯ ಬೆಣಿವಾಡ ಗ್ರಾಮದ ಅನುಪಮಾ ಕೆ. ಬೆಣಚಿನಮರ್ಡಿ ವೃತ್ತಿಯಿಂದ ಎಂಜಿನಿಯರ್, ಪ್ರವೃತ್ತಿಯಿಂದ ಬರಹಗಾರ್ತಿ. ಪ್ರಬಂಧ, ವೈಜ್ಞಾನಿಕ ಲೇಖನಗಳ ಬರವಣಿಗೆಯಲ್ಲಿ ಆಸಕ್ತಿಯುಳ್ಳ ಅನುಪಮಾ ಕನ್ನಡದ ಮಕ್ಕಳಿಗೆ ಓದುವ ರುಚಿಯನ್ನು ಮೂಡಿಸುವ ಉತ್ಸಾಹದಲ್ಲಿದ್ದಾರೆ. 'ರಿಕ್ಕು ರಿಕ್ಷಣ್ಣಾ' ಎನ್ನುವ ಪುಸ್ತಕ ರಚಿಸಿದ್ದ ಅವರು, ಈಗ ಒಮ್ಮೆಗೇ ಐದು ಪುಸ್ತಕಗಳ ಮೂಲಕ ಕನ್ನಡದ ಮಕ್ಕಳಿಗೆ ಮುಖಾಮುಖಿಯಾಗಿದ್ದಾರೆ.

'ಕನ್ನಡ ವರ್ಣಮಾಲೆ', 'ಪತ್ತೇದಾರ ಪ್ರಣವ', 'ಕೊಂಚಿಗೆಯ ಸಾಹಸ' ಕನ್ನಡ ಕೃತಿಗಳಾದರೆ, 'Adventures of Konchige' ಮತ್ತು 'Detective Pranav' ಇಂಗ್ಲಿಷ್ ರೂಪಾಂತರದ ಕೃತಿಗಳು. ಈ ಐದೂ ಪುಸ್ತಕಗಳು ಕನ್ನಡದ ಮಕ್ಕಳು ಪ್ರೀತಿ ಹಾಗೂ ಕುತೂಹಲದಿಂದ ಕೈಗೆತ್ತಿಕೊಳ್ಳುವಂತಿವೆ.

ಬರಹಗಾರ್ತಿಯ ಪಾತ್ರಕ್ಕಷ್ಟೇ ಅನುಪಮಾ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ತಮ್ಮ ಕಥೆಗಳನ್ನು ತಾವೇ ಪ್ರಕಟಿಸಿದ್ದಾರೆ. ಆಕರ್ಷಕ ಬಣ್ಣದ ಚಿತ್ರಗಳೊಂದಿಗೆ ಹೊಳಪು ಕಾಗದದಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಈ ಪುಸ್ತಕಗಳು ಓದಿ ವಿಶ್ಲೇಷಿಸಬೇಕಾದ ಕೃತಿಗಳಲ್ಲ. ಓದುವುದರೊಂದಿಗೆ ನೋಡಿಯೂ ಅನುಭವಿಸಬೇಕಾದ ಕಥನಕೃತಿಗಳು. ಇಲ್ಲಿನ ಓದು ಅಕ್ಷರರೂಪದ ಪಠ್ಯಕ್ಕಷ್ಟೇ ಸೀಮಿತವಾಗಿಲ್ಲ. ಚಿತ್ರರೂಪಿ ಪಠ್ಯವನ್ನು ಓದುವ ಆನಂದ ಇಲ್ಲಿಯದು. ಅಕ್ಷರ ಮತ್ತು ಚಿತ್ರ– ಎರಡೂ ಮಾಧ್ಯಮಗಳ ಮೂಲಕ ಮಕ್ಕಳಿಗೆ ಕಥೆಯನ್ನು ದಾಟಿಸುವ ಪ್ರಯತ್ನದ ರೂಪದಲ್ಲಿ ಅನುಪಮಾ ಅವರ ಕೃತಿಗಳನ್ನು ನೋಡಬಹುದು.

ಕೃತಿ	ಪುಟ	ಬೆಲೆ
ಪತ್ತೇದಾರ ಪ್ರಣವ	34	₹175
ಕೊಂಚಿಗೆಯ ಸಾಹಸ	32	₹175
ಕನ್ನಡ ವರ್ಣಮಾಲೆ	52	₹225

ಲೇ: ಅನುಪಮಾ ಕೆ. ಬೆಣಚಿನಮರ್ಡಿ
ಪ್ರ: ಅವ್ವ ಬುಕ್ಸ್, ಬೆಂಗಳೂರು.
ಸಂ: 9739266465
awwabooks.com

ಕನ್ನಡ ಅಕ್ಷರಗಳನ್ನು ಮಕ್ಕಳಿಗೆ ಪರಿಚಯಿಸುವ ಪ್ರಯತ್ನ 'ಕನ್ನಡ ವರ್ಣಮಾಲೆ' ಕೃತಿಯಲ್ಲಿದೆ. ಇಂಗ್ಲಿಷ್ ಬಲ್ಲ ಮಕ್ಕಳಿಗೆ ಕನ್ನಡವನ್ನು ಪರಿಚಯಿಸಲು ಉಪಯುಕ್ತವಾಗುವಂತಿರುವ ಈ ಪುಸ್ತಕದಲ್ಲಿ, ಪ್ರತಿ ಅಕ್ಷರವನ್ನೂ ಒಂದು ಸೊಗಸಾದ ಚಿತ್ರದ ಮೂಲಕ ಪರಿಚಯಿಸುವ ಪ್ರಯತ್ನವಿದೆ. ಸಂಬಂಧಿಸಿದ ಅಕ್ಷರದ ಇಂಗ್ಲಿಷ್ ಉಚ್ಚಾರಣೆ ಹಾಗೂ ಆ ಅಕ್ಷರವನ್ನೊಳಗೊಂಡ ಇಂಗ್ಲಿಷ್‌ನಲ್ಲಿನ ಒಂದು ಪದವನ್ನೂ ನೀಡಲಾಗಿದೆ.

'ಪತ್ತೇದಾರ ಪ್ರಣವ' ಹಾಗೂ 'ಕೊಂಚಿಗೆಯ ಸಾಹಸ' ಎರಡೂ ಕಥೆಗಳು ಕೌಟುಂಬಿಕ ಪರಿಸರದಲ್ಲಿ ನಡೆಯುವಂತಹವು. ಪ್ರಣವನಿಗೆ ಒಂದು ಕುಟುಂಬವಿರುವಂತೆ, ಕೊಂಚಿಗೆ (ಮಗುವಿನ ತಲೆಗೆ ಕಟ್ಟುವ ಕುಲಾವಿ ರೂಪದ ಬಟ್ಟೆ) ಕೂಡ ಒಂದು ಕುಟುಂಬವನ್ನು ಹೊಂದಿದೆ. ತನ್ನ ಮನೆಯ ಸ್ಟೋರ್ ರೂಮ್‌ನಲ್ಲಿನ ರಹಸ್ಯವನ್ನು ಪತ್ತೆಹಚ್ಚುವ ಜಾಣ್ಮೆಯನ್ನು ಪ್ರಣವ ಪ್ರದರ್ಶಿಸಿದರೆ, ಗಾಳಿಗೆ ತೆಕ್ಕೆಗೆ ಸಿಲುಕಿ ಲೋಕಸಂಚಾರ ಮಾಡುವ ಸಾಹಸಯಾತ್ರೆ ಕೊಂಚಿಗೆಯದಾಗಿದೆ. ಈ ಎರಡೂ ಕಥನಗಳು ಪುಟಾಣಿಗಳಿಗೆ ರಂಜನೆಯನ್ನು ನೀಡುವುದರ ಜೊತೆಗೆ, ಅವರ ಮನೋವಿಕಾಸಕ್ಕೆ ಪೂರಕವಾಗಿಯೂ ಇವೆ.

ಪ್ರಣವ ಹಾಗೂ ಕೊಂಚಿಗೆಯ ಕಥೆಗಳು ಎಳೆಯರೊಂದಿಗೆ ದೊಡ್ಡವರಿಗೂ ಪ್ರಿಯವಾಗುವಂತಿವೆ. ಒಂದು ಕಥೆಯಲ್ಲಿ ಹುಡುಗ ನಾಯಕನಾಗಿದ್ದರೆ, ಸಾಹಸಯಾತ್ರೆ ಕೈಗೊಳ್ಳುವ ಕೊಂಚಿಗೆ ಹೆಣ್ಣು. ಲಿಂಗ ಸಮಾನತೆಯ ಸೂಕ್ಷ್ಮಗಳು ಬಹು ಸಹಜವಾಗಿ ಕಥನದ ಭಾಗವಾಗಿವೆ. ಅನುಪಮಾ ಅವರ ಕಥನಗಳಿಗೆ ಬಳಕೆಯಾಗಿರುವ ಚಿತ್ರಗಳು, ಕಥನಕ್ಕೆ ಹಾಗೂ ಅಕ್ಷರಪಠ್ಯಕ್ಕೆ ಪೂರಕವಾಗಿವೆ. ಊರು ಸುತ್ತುವ ಕೊಂಚಿಗೆ ಹೆಣ್ಣೆಂದು ಕಥೆಗಾರ್ತಿ ಸ್ಪಷ್ಟವಾಗಿ ಹೇಳದಿರುವುದನ್ನು ಚಿತ್ರ ಸೂಚಿಸುತ್ತದೆ. ಈ ಚಿತ್ರಗಳು ಪುಸ್ತಕದ ಸೌಂದರ್ಯವರ್ಧನೆಗಷ್ಟೇ ಬಳಕೆಯಾಗದೆ, ಕಥೆ ಘಟಿಸುತ್ತಿರುವ ಪರಿಸರವನ್ನೂ ಸೂಚಿಸುವಂತಿವೆ. ಮನೆಯ ಪರಿಸರದ ತಿಳಿ ಬಣ್ಣಗಳು, ಹಿನ್ನೆಲೆಯಲ್ಲಿನ 'ಪ್ರಜಾವಾಣಿ' ಪತ್ರಿಕೆ, ಬೆಂಗಳೂರು ಪ್ರೆಸ್ ಕ್ಯಾಲೆಂಡರ್, ಉಪ್ಪಿನಕಾಯಿ ಜಾಡಿ – ಇವೆಲ್ಲವೂ ಕಥೆ ಘಟಿಸುತ್ತಿರುವ ಪರಿಸರವನ್ನು ಬಿಂಬಗಳ ಮೂಲಕ ಮಕ್ಕಳಿಗೆ ದಾಟಿಸುವ ಸುಂದರ ಪ್ರಯತ್ನಗಳಾಗಿವೆ.

ಕನ್ನಡದಲ್ಲಿನ ಮಕ್ಕಳ ಸಾಹಿತ್ಯದಲ್ಲೀಗ ಹೊಸ ನೀರಿನ ಕಾಲ. ಕಳೆದ ಎರಡು ಮೂರು ವರ್ಷಗಳಿಂದ, ಬಹು ವರ್ಣಗಳ ಚಿತ್ರಗಳನ್ನೂ ಹೊಳಪು ಕಾಗದವನ್ನೂ ಕಾಣುವ ಭಾಗ್ಯ ಕನ್ನಡದ ಮಕ್ಕಳ ಕಥೆಗಳಿಗೆ ದೊರೆತಿದೆ. ಈ ಹೊಸ ಹರಿವಿನ ಭಾಗವಾಗಿ ನೋಡಬಹುದಾದ ಅನುಪಮಾ ಅವರ ಕೃತಿಗಳು, ಮಕ್ಕಳ ಸಾಹಿತ್ಯದ ಬಗೆಗೆ ಕಥೆಗಾರ್ತಿಗೆ ಇರುವ ಸ್ಪಷ್ಟತೆಯ ಕಾರಣದಿಂದಲೂ ಗಮನಸೆಳೆಯುತ್ತವೆ. ಶೈಕ್ಷಣಿಕ ಉದ್ದೇಶಗಳ ಜೊತೆಗೆ, ಸಾಮುದಾಯಿಕ ಚಟುವಟಿಕೆಗಳನ್ನು ಎಳೆಯರಿಗೆ ಪರಿಚಯಿಸುವ ನಿಟ್ಟಿನಲ್ಲೂ ಈ ಕೃತಿಗಳಿಗೆ ಮಹತ್ವವಿದೆ. ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕವಿಶೈಲ

'ವನದೇವಿಯ್ಯೆಸಿರಿಯ
ಪೀಠ ಚೂಡಾಮಣಿಯೆ, ಓ ಕವಿಶೈಲ, ನಿನ್ನ
ಸಂಪದವನೆನಿತು ಬಣ್ಣಿಸಲಳವು ಕವನದಲಿ?
ಬೆಳಗಿನಲಿ ಬೈಗಿನಲಿ ಮಾಗಿಯಲಿ ಚೈತ್ರದಲಿ
ಮಳೆಯಲ್ಲಿ ಮಂಜಿನಲಿ ಹಗಲಿನಲಿ ರಾತ್ರಿಯಲಿ
ದೃಶ್ಯ ವೈವಿಧ್ಯಮಂ ರಚಿಸಿ ನೀಂ ಭುವನದಲಿ
ಸ್ವರ್ಗವಾಗಿ ನನಗೆ! (ಕವಿಶೈಲ 1 – ಕೃತ್ತಿಕೆ)

ಎಂದು ಕುವೆಂಪು 'ಕವಿಶೈಲ'ವನ್ನು ಸ್ತುತಿಸುತ್ತ 6 ಸಾನೆಟ್‌ಗಳನ್ನು ರಚಿಸಿದ್ದಾರೆ. ಆ ಪ್ರದೇಶವು ಅವರು 'ಕವಿಶೈಲ' ಎಂದು ಕರೆಯುವ ಮೊದಲು ಅಲ್ಲಿಯ ಅತಿ ಸಹಜ ಪ್ರಾಕೃತಿಕ ಉತ್ಸವದಂತಹ ಉಲ್ಲಾಸಕ್ಕೆ ಅವರ ಪೂರ್ವಿಕರು 'ದಿಬ್ಬಣಗಲ್ಲು' ಎಂದು ಕರೆಯುತ್ತಿದ್ದರಂತೆ.

ಕುವೆಂಪು ಅವರು 'ಮಲೆನಾಡಿನ ಚಿತ್ರಗಳು' ಗದ್ಯ ಚಿತ್ರಗಳ ಸಂಕಲನದ ಮುನ್ನುಡಿಯಲ್ಲಿ ಆ ಸ್ಥಳವನ್ನು ಕುರಿತು ಹೀಗೆ ವಿವರಣೆ ನೀಡಿದ್ದಾರೆ: 'ಮನೆಯ ತೆಂಕಣ ದಿಕ್ಕಿಗೆ ಮನೆಗೆ ಮುಟ್ಟಿಕೊಂಡೇ ಏರಿ ಏರಿ ಹೋಗುವ ಬೆಟ್ಟದೋರೆಯಿದೆ. ಐದು ಹತ್ತು ನಿಮಿಷಗಳಲ್ಲಿಯೆ ಅದರ ನೆತ್ತಿಗೆ ಹೋಗಬಹುದು. ನೆತ್ತಿಯಲ್ಲಿ ವಿಶಾಲವಾದ ಬಂಡೆಗಳಿದ್ದು ಸುತ್ತಲೂ ಸ್ವಲ್ಪ ಬಯಲಾಗಿ ದೂರದ ದೃಶ್ಯಗಳನ್ನು ನೋಡಲು ಅನುಕೂಲವಾಗಿದೆ. ಮಲೆನಾಡಿನ ಪರ್ವತಗಳಲ್ಲಿ ಅಂತಹ ಸ್ಥಾನಗಳು ಅಪೂರ್ವ. ಎಲ್ಲಿ ನೋಡಿದರೂ ಮಹಾರಣ್ಯಗಳೆ ತುಂಬಿರುವುದರಿಂದ ಶಿಖರಗಳಲ್ಲಿ ಬಂಡೆಗಳಿದ್ದು ಬಯಲಾಗಿರುವುದೇ ಕಷ್ಟ! ಅದರಲ್ಲಿಯೂ ನಮ್ಮ ಮನೆಯಲ್ಲಿರುವಂತೆ ಐದು ಹತ್ತು ನಿಮಿಷಗಳಲ್ಲಿಯೆ ಶಿಖರವನ್ನು ಸೇರುವಷ್ಟು ಸಮೀಪದಲ್ಲಿ ಅಂತಹ ಶೈಲಸ್ಥಾನಗಳು ಮತ್ತೆಲ್ಲಿಯೂ ಇಲ್ಲವೆಂದೇ ಹೇಳಬೇಕು. ನಾನಂತೂ ನೋಡಿಲ್ಲ. ಆ ಸ್ಥಳಕ್ಕೆ 'ಕವಿಶೈಲ' ಎಂದು ನಾಮಕರಣವಾದುದು ಇತ್ತೀಚಿನ ಸಂಗತಿ!'

ಕುವೆಂಪು ಅವರು 'ಕಾಡು ಮುತ್ತು ಕೊಡುತಲಿರುವ ಸೊಬಗು ವೀಡು ನನ್ನ ಮನೆಯನ್ನು ನೋಡಲು ಬನ್ನಿ' ಎಂದು ತಮ್ಮ ಗುರು ಟಿ.ಎಸ್. ವೆಂಕಣ್ಣಯ್ಯ, ಸ್ನೇಹಿತ ತೀ.ನಂ.ಶ್ರೀಕಂಠಯ್ಯ, ಹಿರಿಯರಾದ ನಾ.ಕಸ್ತೂರಿಯವರನ್ನು 1935 ರ ಬೇಸಿಗೆಯಲ್ಲಿ ಕುಪ್ಪಳಿಗೆ ಕವಿಶೈಲಕ್ಕೆ ಕರೆದುಕೊಂಡು ಹೋಗಿದ್ದರು. 25-5-1935 ರಂದು ಪೂಜ್ಯ ಸ್ವಾಮಿ ಸಿದ್ದೇಶ್ವರಾನಂದರನ್ನು ಕನ್ನಡ ನವೋದಯ ಆಚಾರ್ಯ ಬಿ.ಎಂ. ಶ್ರೀಕಂಠಯ್ಯ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಆ ಎರಡು ಸಂದರ್ಭಗಳಲ್ಲಿ ಅವರೆಲ್ಲರೂ ಕವಿಶೈಲದ ಅರೆ ಬಂಡೆಯ ಮೇಲೆ ತಂತಮ್ಮ ಹೆಸರಿನ ಪ್ರಥಮಾಕ್ಷರಗಳನ್ನು ಕಲ್ಲುಗಳಿಂದ ಹೊಡೆದು ಕೆತ್ತಿದ್ದಾರೆ. ಅದು ಕರ್ನಾಟಕದ ಸಾಹಿತ್ಯ ಸಾಂಸ್ಕೃತಿಕ ಇತಿಹಾಸ. ಆ ಬಂಡೆಯ ಪಕ್ಕದಲ್ಲಿಯೇ ಕುವೆಂಪು ಸಮಾಧಿ ಇದೆ.


ಲಂಬಾಣಿಗರ ವಿಶಿಷ್ಟ ಖಾದ್ಯ ಸಲೋಯಿ (ಚಿತ್ರ: ವಿಜಯ್ ಜಾಧವ್)


ದೀಪಾವಳಿ ನಿಮಿತ್ತ ಮಣ್ಣಿನ ಒಲೆಯಲ್ಲಿ ಹಿರಿಯರಿಗೆ ಧಾಬುಕಾರ್ ಅರ್ಪಿಸುವುದು


ದೀಪಾವಳಿ ನಿಮಿತ್ತ ಹಳದಿ ಹೂವು ಸಂಗ್ರಹಿಸುತ್ತಿರುವ ಲಂಬಾಣಿ ಯುವತಿಯರು (ಸಂಗ್ರಹ ಚಿತ್ರ)

ಪ್ರಕೃತಿಯ ಬಳುವಳಿಗೆ...

1ನೇ ಪುಟದಿಂದ...

ತೀಜ್ ಹಬ್ಬವನ್ನು (ಬುಟ್ಟಿಗಳಲ್ಲಿ ಗೋಧಿಹುಲ್ಲು ಬೆಳೆಸುವುದು) ತಾಂಡಾದಲ್ಲಿ ಸಂತೋಷದ ವಾತಾವರಣವಿದ್ದಾಗ ಆಚರಿಸಲಾಗುತ್ತದೆ. ಚೈತ್ರ, ವೈಶಾಖ, ಶ್ರಾವಣ ಮತ್ತು ಭಾದ್ರಪದ ಮಾಸಗಳಲ್ಲಿ ತೀಜ್ ಆಚರಿಸಲಾಗುತ್ತದೆ. ಕೆಲವೆಡೆ ದೀಪಾವಳಿಯಲ್ಲೂ ಇದನ್ನು ಯುವತಿಯರು ಆಚರಿಸುತ್ತಾರೆ.

ಪ್ರಕೃತಿಯ ಆರಾಧನೆ: ಬಂಜಾರರು ಮೂಲತಃ ಪ್ರಕೃತಿಯ ಆರಾಧಕರು. ಗಾಳಿ, ನೀರು, ಬೆಂಕಿ, ಭೂಮಿ, ಆಕಾಶ, ಚಂದ್ರ, ಸೂರ್ಯನನ್ನು ಪೂಜ್ಯನೀಯ ಎಂದು ಪರಿಗಣಿಸುತ್ತಾರೆ.ಇವು ಸಮಚಿತ್ತದಂತೆ ಇರುವಂತೆ ಸಾಮೂಹಿಕವಾಗಿ ಪ್ರಾರ್ಥಿಸುತ್ತಾರೆ. ಅದರ ಭಾಗವಾಗಿಯೇ ಏಳು ಚಿಕ್ಕಚಿಕ್ಕ ಉದ್ದನೆಯ ಕಲ್ಲುಗಳಿಗೆ ಕೆಂಪು ಮಣ್ಣಿನ ಬಣ್ಣ ಬಳಿದು ಪ್ರಾತಿನಿಧಿಕವಾಗಿ ಅವುಗಳನ್ನು ಸಪ್ತ ಮಾತೃಕೆಯರ ಕಲ್ಪನೆಯಂತೆ ಪೂಜಿಸುತ್ತಾರೆ. 'ಕಿಡಿ ಮುಂಗಿನ ಸಾಯಿವೇಸ್' ಅಂದರೆ 'ಸಕಲ ಜೀವರಾಶಿಗಳಿಗೆ ಲೇಸಾಗಲಿ' ಎಂದು ಪ್ರಾರ್ಥಿಸುತ್ತಾರೆ.

ಬಂಜಾರರ ಯಾವುದೇ ಆಚರಣೆ, ಉತ್ಸವಗಳು ನೃತ್ಯ ಮತ್ತು ಹಾಡುಗಳಿಲ್ಲದೇ ಪೂರ್ಣಗೊಳ್ಳುವುದಿಲ್ಲ. ಮನುಷ್ಯನ ಹುಟ್ಟಿನಿಂದ ಸಾವಿನ ತನಕ ಆಚರಣೆಯ ಹಾಡುಗಳು ಈ ಸಮುದಾಯದವರಲ್ಲಿ ಮೌಖಿಕವಾಗಿ ಹರಿದುಬಂದಿವೆ. ದವಾಳಿಯಂದು ಸಮುದಾಯವು ಸಾಮೂಹಿಕ ನೃತ್ಯ ಮತ್ತು ಹಾಡುಗಳಲ್ಲಿ ಪಾಲ್ಗೊಳ್ಳುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ತಾಂಡಾಗಳಲ್ಲಿ ಅಬ್ಬರದ ಡಿ.ಜೆ. ಹಾಡುಗಳೇ ಮೇಲುಗೈ ಸಾಧಿಸಿ, ದೇಸಿಯ ಸೊಗಡಿನ ಗಾಯನ ಕ್ಷೀಣಿಸುತ್ತಿದೆ.

ಕಾಳಿ ಅಮಾಸ್ ನಸಾಬ್: ನಾಯಕ್, ಡಾವೊ, ಕಾರಬಾರಿ, ನಸಾಬಿ, ಹಸಾಬಿಗಳ ಪ್ರಾತಿನಿಧಿಕ ನಸಾಬ್ (ಪಂಚಾಯತ್) ವ್ಯವಸ್ಥೆ ಇವರಲ್ಲಿ ಆದಿಕಾಲದಿಂದಲೂ ಇದೆ. ಹಬ್ಬದಂದು ತಾಂಡಾಗಳಲ್ಲಿ ಒಗ್ಗೂಡುವುದರಿಂದ ಈ ಹಿಂದೆ ಜಗಳ ಮಾಡಿಕೊಂಡವರು ನಾಯಕನ ಬಳಿ ನ್ಯಾಯ ಕೇಳಲು ಬರುತ್ತಾರೆ. ಪಂಚಾಯತ್‌ನವರು ನ್ಯಾಯ ತೀರ್ಮಾನಿಸಿ ಎರಡೂ ಕಡೆಯವರನ್ನು ರಾಜಿ ಮಾಡಿಸುತ್ತಾರೆ. ಪರಸ್ಪರ ಹೊಂದಿಕೊಂಡು ಬಾಳುವಂತೆ ಸಲಹೆ ನೀಡುತ್ತಾರೆ.

ಸಲೋಯಿ, ಕಾನಾಬಾಜ್: ಕಾಳಿ ಅಮಾಸ್ ದಿನ ಬಂಜಾರರು ಸಾಮೂಹಿಕವಾಗಿ ಬೇಟೆಯಾಡುವುದು ವಾಡಿಕೆ. ಆದರೆ, ಈಗ ಬೇಟೆ ನಿಷಿದ್ಧವಿರುವುದರಿಂದ ಕುರಿ, ಮೇಕೆ ಕೊಯ್ದು ಅದನ್ನೇ ತಾಂಡಾದ ಪ್ರತಿ ಮನೆಗೂ ಸಮಪಾಲು ಹಾಕುತ್ತಾರೆ. ಕುರಿಯ ಪ್ರತಿ ಅಂಗದ ತುಂಡೂ ಪ್ರತಿ ಮನೆಗೂ ತಲುಪುವಂತೆ ಪಾಲು ಹಾಕುತ್ತಾರೆ. ಈ ಮೂಲಕ ಎಲ್ಲರೂ ಸಮಾನರು ಎನ್ನುವ ಸಮಾನತೆಯ ಗುಣವನ್ನು ಪ್ರತಿಪಾದಿಸುತ್ತಾರೆ.

ಕುರಿಯ ಕರಳು ಇತ್ಯಾದಿ ಹಾಗೂ ರಕ್ತದಿಂದ ಮಾಡಿದ ಸಲೋಯಿ ಎನ್ನುವ ವಿಶಿಷ್ಟ ಮಾಂಸದಡುಗೆ ಮತ್ತು ಕಾನಾಬಾಜ್ (ಸುಟ್ಟ ಕುರಿಯ ತಲೆಯ ಕಿವಿಯ ಸಮೇತ ತೆಗೆದ ಚರ್ಮ) ಖಾದ್ಯವನ್ನು ಪರಸ್ಪರ ಹಂಚಿಕೊಂಡು ತಿನ್ನುತ್ತಾರೆ.

ದುಡಿಮೆಗೆಂದು ದೂರದ ಊರುಗಳಿಗೆ ವಲಸೆ ಹೋಗಿರುವವರು ತಪ್ಪದೇ ದವಾಳಿಯಂದು ತಾಂಡಾಕ್ಕೆ ಬರುತ್ತಾರೆ. ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗಿಯಾಗಿ, ಹಿರಿಯರನ್ನು ನೆನೆದು, ಒಟ್ಟಾಗಿ ಊಟ ಮಾಡಿ ಕಷ್ಟ-ಸುಖ ಹಂಚಿಕೊಳ್ಳುತ್ತಾರೆ. ❖

ಅಕ್ಕರ ಸಿಂಗಾರದ ಅಪರೂಪದ ಮೇಳ

ಅಭಿಲಾಷ್ ಪಿ.ಎಸ್.

ಅಕ್ಕಿಯೊಳನ್ನವನು ಮೊದಲಾರು ಕಂಡವನು? ಅಕ್ಕರದ ಬರಹಕ್ಕೆ ಮೊದಲಿಗನದಾರು?...

ಹೌದು, ಇಲ್ಲಿನ ಅಕ್ಕರೆಯ ಅಕ್ಷರಗಳ ಬರಹಕ್ಕೆ ಮೊದಲಿಗನದಾರು? ಇಲ್ಲಿನ ಅಕ್ಷರ ನಾಟ್ಯೋತ್ಸವವನ್ನು ಅಥವಾ ಆಯೋಜಕರ ಮಾತಿನಂತೆ 'ಅಕ್ಷರ ಸಿಂಗಾರೋತ್ಸವ'ವನ್ನು ಕಂಡೊಡನೆ ಮನಸ್ಸಿನೊಳಗೇಳುವ ಕಗ್ಗದ ಪ್ರಶ್ನೆಯಿದು. ಚಿತ್ರಕಲೆಗಳು, ಕಲಾಕೃತಿಗಳ ಪ್ರದರ್ಶನಗಳ ಸಾಲಿನಲ್ಲಿ ವಿಭಿನ್ನವಾಗಿ ನಿಲ್ಲುವ ಈ ಅಕ್ಷರ ಸಿಂಗಾರೋತ್ಸವದ ವೇದಿಕೆ ಏರಿದರೆ ಅಲ್ಲಿ ಹಲವು ಚಿಂತನೆಗಳು, ಆಲೋಚನೆಗಳು. ಎಲ್ಲಕ್ಕೂ ಕನ್ನಡಕ್ಕೆ ಕನ್ನಡಿ ಹಿಡಿಯುವ ಕಾತರ! ಅವುಗಳನ್ನು ನೋಡುತ್ತಿದ್ದರೆ ಒಂಥರಾ ಅಕ್ಷರಗಳು ಖುಷಿಯಿಂದ ಕುಣಿವಂತೆ ಭಾಸ. ಅವುಗಳ ನಾಚಿಕೆ, ವೈಯಾರಕ್ಕೆ ಕೊನೆಯುಂಟೇ? ಈ ಕ್ಯಾಲಿಗ್ರಫಿ ಕಲಾಪ್ರದರ್ಶನದಲ್ಲಿ ಮುತ್ತುಗಳು ಪೋಣಿಸಿದಂತೆ ಭಾಸವಾಗುವ ಅಕ್ಷರಗಳಿಗೆ ಚೌಕಟ್ಟು ನೀಡಿ, ಜೀವ ತುಂಬಿ ಕನ್ನಡ ಪ್ರೇಮವನ್ನು ಮೆರೆದಿದ್ದಾರೆ ಐವರು ಲಿಪಿಕಾರರು.



ವಚನಗಳಿಗೆ ಹೀಗೊಂದು ರೂಪ
ಕಲೆ: ಟಿ.ಬಿ.ಕೋಡಿಹಳ್ಳಿ



ಈ ಅಕ್ಷರಗಳಲ್ಲೇನು ಅಡಗಿದೆ?
ಕಲೆ: ಮೋಹನ್ ಕುಮಾರ್ ಈರಪ್ಪ



ಚೌಕಟ್ಟಿನೊಳಗೆ ಅಕ್ಷರಗಳ ಸಿಂಗಾರ ಕಲೆ: ಸುರೇಶ್ ಎಸ್. ವಾಘ್ಮೋರೆ

ಇಲ್ಲಿ ಕನ್ನಡ ಅಕ್ಷರ ಮಾಲೆಯೇ ಕಲಾಕೃತಿಯ ರೂಪ ತಾಳಿದೆ. ವಚನಗಳು, ಕಗ್ಗಗಳು ಹೊಸ ರೂಪದಲ್ಲಿ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಅವುಗಳಿಗಿಲ್ಲಿ ಹಲವು ಬಣ್ಣ, ಹಲವು ವರ್ಣ. ಕವಿ ಸಿದ್ಧಲಿಂಗಯ್ಯ ಅವರ 'ಹಸಿವಿನಿಂದ ಸತ್ತೋರು...' ಇಲ್ಲಿ ಅಕ್ಷರ ರೂಪದಲ್ಲಿ ಕಪ್ಪು, ಕೆಂಪಿನ ಹೊದಿಕೆ ಹೊತ್ತು ನಿಂತಾಗ ಅದರ ವೇಗ ಹಿರಿದು. ಕುವೆಂಪು ಅವರ 'ಉಳುವ ಯೋಗಿ..'ಗೂ ಅಕ್ಷರ ಚೌಕಟ್ಟಿನೊಳಗೆ ಜಾಗವಿದೆ. ಧುಮುಕಿ ಮರೆಯಾಗುವ ವರ್ಣಮಾಲೆಯೂ ರಹಸ್ಯ ಹೊತ್ತು ಸಾಗಿದೆ. ನೀಲಿ ತಂತುಗಳಲ್ಲೂ ಕನ್ನಡದ ಘಮ.

ಈ ವಿಭಿನ್ನ ಪ್ರದರ್ಶನದ ಕಲ್ಪನೆ ಎರಡು ವರ್ಷಗಳ ಹಿಂದೆಯೇ ಈ ಲಿಪಿಕಾರರಲ್ಲೊಬ್ಬರಾದ ಸುರೇಶ್ ಎಸ್. ವಾಘ್ಮೋರೆ ಅವರ ಮನಸ್ಸಿನಲ್ಲಿ ಮೊಳಕೆಯೊಡೆದಿತ್ತು. ಅದನ್ನು ಕಾಪಿಟ್ಟುಕೊಂಡು ಗಿಡವಾಗಿ ನೆಟ್ಟು ಮೂವತ್ತು ದಿನ ನೀರೆರೆದು ಹೆಮ್ಮರವಾಗಿ ಬೆಳೆಸುವ ಕನಸು ಅವರದ್ದು. 'ನಾವೆಲ್ಲರೂ ವೃತ್ತಿನಿರತರು. ಎರಡು ವರ್ಷಗಳ ಹಿಂದೆಯೇ ಈ ಪ್ರದರ್ಶನ ನಡೆಯಬೇಕಿತ್ತು. ಕಾರಣಾಂತರಗಳಿಂದ ಮುಂದೂಡುತ್ತಾ ಬಂದೆವು. ಈ ಬಾರಿ ಐವರು ಸೇರಿ ಇದನ್ನು ಆಯೋಜಿಸಿದ್ದೇವೆ. 2019ರಲ್ಲಿ ಸಿಂಗಪುರಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿ ಭಾರತೀಯ ಭಾಷೆಗಳ ಪ್ರದರ್ಶನ ನಡೆದಿತ್ತು. ನಾನು ಕನ್ನಡ ಭಾಷೆಯ ಕ್ಯಾಲಿಗ್ರಫಿ ಪ್ರದರ್ಶನವನ್ನು ಅಲ್ಲಿ ನೀಡಿದ್ದೆ. ಕಗ್ಗವನ್ನು ನಾನು ಅಲ್ಲಿ ಪ್ರದರ್ಶಿಸಿದ್ದೆ. ಅಲ್ಲಿ ಹಲವು ಅಂತರರಾಷ್ಟ್ರೀಯ ಲಿಪಿಕಾರರ ಸಂಪರ್ಕ ದೊರೆತಿತ್ತು. ಕ್ಯಾಲಿಗ್ರಫಿ ಎನ್ನುವುದು ಬರವಣಿಗೆಗಷ್ಟೇ ಸೀಮಿತವಾಗಿರದೆ, ಅದರಲ್ಲಿ ಕಲೆಗಳನ್ನು ಅವರು ಸೃಷ್ಟಿಸಿದ್ದರು. ಇದರ ಸ್ಫೂರ್ತಿಯೇ ಈ ಪ್ರದರ್ಶನ ಆಯೋಜನೆಗೆ ಕಾರಣ' ಎನ್ನುತ್ತಾರೆ ಸುರೇಶ್.

ಸಿಂಗಾರೋತ್ಸವದ ಸ್ಥಳ

ಬೆಂಗಳೂರಿನ ಜಯನಗರ 4ನೇ ಬ್ಲಾಕ್‌ನ ಯುವಪಥ ರಸ್ತೆಯಲ್ಲಿರುವ 'ಬೆಂಗಳೂರು ಆರ್ಟ್ ಗ್ಯಾಲರಿ'ಯಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಈ 'ಅಕ್ಷರ ಸಿಂಗಾರೋತ್ಸವ-23' ನಡೆಯುತ್ತಿದೆ. ಮಾಸಾಂತ್ಯದವರೆಗೆ(ನ.30) ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ವೀಕ್ಷಕರಿಗೆ ಇದು ತೆರೆದಿರಲಿದೆ. ಲಿಪಿಕಾರರಾದ ಅನಿಮಿಷ ನಾಗನೂರು, ಜಿ.ಹರಿಕುಮಾರ್, ಮೋಹನ್‌ಕುಮಾರ್ ಈರಪ್ಪ, ಸುರೇಶ್ ಎಸ್. ವಾಘ್ಮೋರೆ, ಟಿ.ಬಿ.ಕೋಡಿಹಳ್ಳಿ ಕೈಗಳಿಂದ ಮೂಡಿದ ಅಕ್ಷರ ಸಿಂಗಾರವನ್ನು ಇಲ್ಲಿ ಕಾಣಬಹುದು.

'ಅಕ್ಷರಗಳಿಗೆ ಚಿತ್ರಕಲೆಯ ರೂಪ ನೀಡಿ, ಬಣ್ಣ ತುಂಬಿ ಪ್ರಸ್ತುತಪಡಿಸಿದರೆ ಅದಕ್ಕೊಂದು ಬೇರೆಯದೇ ಶಕ್ತಿ ಬರುತ್ತದೆ. ಅವುಗಳ ಶಕ್ತಿ, ಭಾವನೆಗಳು ಭಿನ್ನವಾಗಿಯೇ ಇರುತ್ತವೆ. ಖಾಲಿ ಹಾಳೆಯ ಮೇಲಿನ ಅಕ್ಷರಗಳಿಗಿಂತ ಚಿತ್ರಕಲೆಯಲ್ಲಿ ಮೂಡಿಬಂದ ಕಗ್ಗಗಳನ್ನು, ಇತರೆ ನುಡಿಮುತ್ತುಗಳನ್ನು ಓದುವುದೇ ಚೆಂದ. ನಮ್ಮ ಪ್ರಯತ್ನವೂ ಇದೇ. ದಕ್ಷಿಣ ಭಾರತದಲ್ಲಿ ಇಂತಹ ಪ್ರಯತ್ನ ವಿರಳ. ಜನರಿಗೆ ಇದು ಇಷ್ಟವಾಗಿದೆ. ಮಂಕುತಿಮ್ಮನ ಕಗ್ಗಗಳು ನನ್ನ ಹಲವು ಕಲೆಗಳಲ್ಲಿ ಇವೆ. ಅವುಗಳು ಹೇಳುವ ನೀತಿ ಪಾಠ ಹಲವು. 'ಹುಲ್ಲಾಗು ಬೆಟ್ಟದಡಿ..' ಎಂಬ ಕಗ್ಗವನ್ನು ಗಮನಿಸಿದರೆ ಅದರೊಳಗಿರುವ ಅರ್ಥಗಳು ಹಲವು. ಇವುಗಳು ನಮ್ಮನ್ನು ಹೆಚ್ಚು ಸೆಳೆದವು. ಇವುಗಳು ಖಾಲಿ ಹಾಳೆಗಳಿಗಿಂತ ಬಣ್ಣದೋಕುಳಿಯೊಳಗೆ ಮತ್ತಷ್ಟು ಶಕ್ತಿ ಪಡೆಯುತ್ತವೆ. ಕ್ಯಾಲಿಗ್ರಫಿಯಲ್ಲಿ ಲಿಪಿಕಾರರಿಗೆ ಅವರದ್ದೇ ಆದ ಶೈಲಿಗಳಿವೆ. ಯಾವ ಅಕ್ಷರಗಳಲ್ಲಿ ಒಂದು ಚಾಲಕಶಕ್ತಿ ಇರುತ್ತದೋ ಅವುಗಳು ಅಷ್ಟೇ ಅಂದವಾಗಿ, ಪ್ರಭಾವ ಬೀರುವ ವಸ್ತುವಾಗುತ್ತದೆ. ನಮ್ಮ ಉದ್ದೇಶ ಒಂದು ವಾರ ಪ್ರದರ್ಶನ ಇಡುವುದಾಗಿತ್ತು. ಕನ್ನಡಕ್ಕಾಗಿ ಈ ಪ್ರದರ್ಶನ ಎಂಬ ಕಾರಣಕ್ಕಾಗಿ ಒಂದು ತಿಂಗಳು ಉಚಿತವಾಗಿ ಈ ಸ್ಥಳವನ್ನು ನೀಡಿದ್ದಾರೆ' ಎಂದು ಅವರು ವಿವರ ಬಿಚ್ಚಿಟ್ಟರು.

'ಭಾವಸಾಕ್ಷಾತ್ಕಾರವೇ ಸಂಗೀತ ಸಾರ್ಥಕ್ಯ'

ಸಂದರ್ಶನ: ಉಮಾ ಅನಂತ್

ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿರುವ ಸತ್ಯಸಾಯಿ ಗ್ರಾಮದ ಶ್ರೀ ಸತ್ಯಸಾಯಿ ಪ್ರೇಮಾಮೃತಂ ಸಭಾಂಗಣದಲ್ಲಿ ನ.15ರಿಂದ 19ರವರೆಗೆ ಐದು ದಿನಗಳ ಕಾಲ ಕರ್ನಾಟಕ ಗಾನಕಲಾ ಪರಿಷತ್‌ನ ರಾಜ್ಯ ಸಮ್ಮೇಳನ ಆಯೋಜನೆಗೊಂಡಿದೆ.

ಸಂಗೀತ ಕಲಾವಿದರೇ ಸೇರಿ ಕಟ್ಟಿ ಬೆಳೆಸಿದ ರಾಜ್ಯದ ದೊಡ್ಡ ಸಂಗೀತ ಸಂಸ್ಥೆ ಕರ್ನಾಟಕ ಗಾನಕಲಾ ಪರಿಷತ್ತಿನ ಈ ಬಾರಿಯ ಸಮ್ಮೇಳನದ ಅಧ್ಯಕ್ಷೆಯಾಗಿ ಹಿರಿಯ ಸಂಗೀತಗಾರ್ತಿ ನಾಗವಲ್ಲಿ ನಾಗರಾಜ್ ಆಯ್ಕೆಯಾಗಿದ್ದಾರೆ. ಇವರಿಗೆ 'ಗಾನಕಲಾಭೂಷಣ' ಬಿರುದು ಲಭಿಸಲಿದೆ. ಯುವ ಸಂಗೀತಗಾರರ ಸಮ್ಮೇಳನಕ್ಕೆ ಹಾಡುಗಾರ ಸಂಪಗೋಡು ವಿಘ್ನರಾಜ್ ಅಧ್ಯಕ್ಷರು ಹಾಗೂ ಇವರಿಗೆ 'ಗಾನ ಕಲಾಶ್ರೀ' ಬಿರುದು ನೀಡಿ ಗೌರವಿಸಲಾಗುತ್ತಿದೆ.

ಬೆಂಗಳೂರಿನವರಾದ ವಿದುಷಿ ನಾಗವಲ್ಲಿ ನಾಗರಾಜ್ ಅವರು ಕರ್ನಾಟಕ ಸಂಗೀತದ ಮೇರು ಗಾಯಕಿ. ತ್ರಿಸ್ಥಾಯಿಗಳಲ್ಲಿಯೂ ಲೀಲಾಜಾಲವಾಗಿ, ಮಧುರಾತಿಮಧುರವಾಗಿ ಹಾಡುವ ಇವರು, ಲಯ ಪರಿಜ್ಞಾನ ಇರುವ, ರಾಗವನ್ನು ರಸವತ್ತಾಗಿ ಪ್ರಸ್ತುತಪಡಿಸುವ ಸಾಮರ್ಥ್ಯ ಇರುವ ಕಲಾವಿದೆ. 'ಗಾನಕಲಾಭೂಷಣ' ಪ್ರಶಸ್ತಿಗೆ ಭಾಜನರಾಗುತ್ತಿರುವ ವಿದುಷಿ ನಾಗವಲ್ಲಿ ನಾಗರಾಜ್ ಅವರು 'ಪ್ರಜಾವಾಣಿ'ಯೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು.

- **ನಿಮ್ಮ ಕರ್ನಾಟಕ ಸಂಗೀತ ಜೀವನದ ಹಾದಿಯನ್ನೊಮ್ಮೆ ಅವಲೋಕನ ಮಾಡುವಿರಾ?**

ನನ್ನದು ಸಂಗೀತದಲ್ಲಿ ಬೇರೂರಿದ ಮನೆತನ. ಕೀರ್ತಿಶೇಷ ಕೊಳತ್ತೂರು ರಾಮಕೃಷ್ಣ ಶಾಸ್ತ್ರಿಗಳು ನನ್ನ ತಾತ. ಅವರು ವಾಗ್ಗೇಯಕಾರರಾಗಿದ್ದರು. ನನ್ನ ತಂದೆ ದಿ. ಸತ್ಯನಾಥ್ ಅವರಿಂದಲೇ ಸಮಸ್ತ ಸಂಗೀತವನ್ನು ಪಡೆದುಕೊಂಡೆ. ಹನ್ನೆರಡನೆ ವಯಸ್ಸಿನಿಂದಲೇ ಪೂರ್ಣ ಪ್ರಮಾಣದ ಕಛೇರಿಗಳನ್ನು ನೀಡುತ್ತಾ ಬಂದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡುತ್ತಿದ್ದಾಗ ಗಾನಕಲಾಭೂಷಣ ಆನೂರು ರಾಮಕೃಷ್ಣರ ಸಂಪರ್ಕವಾಗಿ ಅವರಿಂದ ಸಂಗೀತದಲ್ಲೇ ನೆಲೆಯೂರುವಂತಾಯಿತು. ಬಾಲಮುರಳಿಕೃಷ್ಣ ಅವರ ಕೃತಿಗಳನ್ನು ಪ್ರಸ್ತುತಪಡಿಸಿದುದರ ಸಲುವಾಗಿ ಚೆನ್ನೈನ ಮುರಳೀ ರವಲಿ ಟ್ರಸ್ಟ್ ವತಿಯಿಂದ ಚಿನ್ನದ ಪದಕ ಬಂತು. ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನೀಡಿದ್ದು, ಅನೇಕ ಧ್ವನಿಮುದ್ರಣಗಳನ್ನೂ ತಂದಿದ್ದೇನೆ.

- **ಕಾಲೇಜು ದಿನಗಳಲ್ಲೇ ನಿಮ್ಮ ಸಂಗೀತ ಬದುಕು ರೋಚಕ ತಿರುವು ಪಡೆದುಕೊಂಡಿತು ಎಂದಿರಿ. ಅದು ಹೇಗೆ?**

ನಾನು ಮಹಾರಾಣಿ ಕಾಲೇಜಿನಲ್ಲಿ ಮೊದಲನೇ ಬಿ.ಎ. ಮಾಡುತ್ತಿದ್ದಾಗ ಅದಾಗಲೇ ಸೆಂಟ್ರಲ್ ಕಾಲೇಜಿನಲ್ಲಿ ಆರಂಭವಾಗಿದ್ದ ಸಂಗೀತ, ನೃತ್ಯ ಹಾಗೂ ನಾಟಕ ವಿಭಾಗದ ಮುಖ್ಯಸ್ಥರು ಬಲವಂತವಾಗಿ ಸೆಂಟ್ರಲ್ ಕಾಲೇಜಿಗೆ ಸೇರುವಂತೆ ಹೇಳಿ, ಅಡ್ಮಿಷನ್ ಕೊಡಿಸಿದರು. ಅದಾಗಿ ಕೆಲದಿನಗಳ ನಂತರ 'ನೀನು ಸಭೆಗಳಲ್ಲಿ ಕಛೇರಿಗಳನ್ನು ನೀಡಬಾರದು' ಎಂದು ಆದೇಶಿಸಿದರು. ಈ ಆಘಾತದ ವಿಷಯವನ್ನು ನನ್ನ ತಂದೆಯವರಲ್ಲಿ ತಿಳಿಸಿದಾಗ, ಅವರು 'ನೀನು ಕಾಲೇಜನ್ನೇ ಬಿಟ್ಟುಬಿಡು, ಸಂಗೀತದ ಅನುಸಂಧಾನವನ್ನು ಬಿಡಬೇಡ' ಎಂದು ದೃಢವಾಗಿ ಹೇಳಿದರು. ಇದು ಅವರು ನನ್ನ ಸಂಗೀತಕ್ಕೆ ಹಾಕಿದ ಭದ್ರಪಾಯ.

- **ನಿಮ್ಮ ದೃಷ್ಟಿಯಲ್ಲಿ ಸಂಗೀತ ಕಛೇರಿ ಸಾರ್ಥಕತೆ ಪಡೆಯುವುದು ಯಾವಾಗ?**


ಸಂಗೀತ ಕಛೇರಿಗಳೆಂದರೆ ಭಾವನೆಗಳ ಸಾಕ್ಷಾತ್ಕಾರ. ಇದಷ್ಟೇ ಏಕಮಾತ್ರ ಉದ್ದೇಶವಾದಲ್ಲಿ ಕಛೇರಿಗಳು ಸಾರ್ಥಕತೆಯನ್ನು ಪಡೆಯುತ್ತವೆ. ಲಯದ ಅಬ್ಬರವನ್ನು ಮಿತಿಗೊಳಿಸಿ, ವಿನಿಕೆಯನ್ನು ಹೃದ್ಯಗೊಳಿಸುವುದು ಕಛೇರಿಯ ಪರಮ ಉದ್ದೇಶವೆಂಬುದು ನನ್ನ ಅನಿಸಿಕೆ. ಇದನ್ನು ನಾನು ಮನೋಧರ್ಮ ಸಂಗೀತದಲ್ಲಿ ಅಭಿವ್ಯಕ್ತಿಸುತ್ತೇನೆ. ಜೊತೆಗೆ ಲಕ್ಷ್ಯ-ಲಕ್ಷಣಗಳು ಸರಸ್ವತಿಯ ಎರಡು ಕಣ್ಣುಗಳು. ಲಕ್ಷಣ ಗೊತ್ತಿದ್ದು ಪ್ರದರ್ಶನದಲ್ಲಿ ಎಡವಿದರೂ ಕಛೇರಿ ಕೆಡುತ್ತದೆ. ಲಕ್ಷ್ಯ ಗೊತ್ತಿದ್ದು ಲಕ್ಷಣವನ್ನು ಅಳವಡಿಸಿಕೊಳ್ಳದಿದ್ದರೆ ಕಛೇರಿಯ ರಸಮಯ ಮನೋಧರ್ಮಕ್ಕೆ ಧಕ್ಕೆಯಾಗುತ್ತದೆ.

- **ಗಾನಕಲಾಭೂಷಣ ಪ್ರಶಸ್ತಿ ನಿಮಗೆ ಈ ಬಾರಿ ಒಲಿದಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?**

ವಿದ್ವಾನ್ ಆರ್.ಕೆ. ಪದ್ಮನಾಭ ಅವರ ಅಧ್ಯಕ್ಷತೆಯ ಪರಿಷತ್ ಪ್ರತಿವರ್ಷ ಕಲಾವಿದರಿಗೆ ಪುರಸ್ಕಾರ ನೀಡಿ ಸತ್ಕರಿಸುವುದು ಹೆಮ್ಮೆಯ ಸಂಗತಿ. ಈ ಬಾರಿ ನನಗೊಲಿದ ಪ್ರಶಸ್ತಿ ಜವಾಬ್ದಾರಿ ಹೆಚ್ಚಿಸಿದೆ. ನನ್ನ ಗುರುಗಳು ಹಾಗೂ ಇನ್ನಿತರ ಸ್ಥಳೀಯ ವಿದ್ವಾಂಸರಿಂದ ಪೋಷಿಸಲಾದ ಸಂಸ್ಥೆಯಿಂದಲೇ ಪ್ರಶಸ್ತಿ ಪಡೆಯುತ್ತಿರುವುದು ನನ್ನ ಅದೃಷ್ಟ.



ನಾಗವಲ್ಲಿ ನಾಗರಾಜ್



ಗಾನ ಕಲಾಶ್ರೀ ಸಂಪಗೋಡು

ಇದೇ ಕಾರ್ಯಕ್ರಮದ ಯುವ ಸಂಗೀತ ಸಮ್ಮೇಳನದ ಅಧ್ಯಕ್ಷತೆ ಹಾಗೂ ಗಾನಕಲಾಶ್ರೀ ಬಿರುದು ವಿದ್ವಾನ್ ಸಂಪಗೋಡು ವಿಘ್ನರಾಜ್ ಅವರಿಗೆ ಈ ಬಾರಿ ಒಲಿದಿದೆ.

ಶೃಂಗೇರಿ ಸಮೀಪದ ಸಂಪಗೋಡು ಎಂಬ ಹಳ್ಳಿಯಲ್ಲಿ ಜನಿಸಿದ ವಿಘ್ನರಾಜ್ ಅವರದು ಕರ್ನಾಟಕ ಸಂಗೀತದಲ್ಲಿ ಛಾಪು ಮೂಡಿಸಿರುವ ಹೆಸರು. ಐದನೇ ವಯಸ್ಸಿನಿಂದಲೇ ತಂದೆ ಸಂಗೀತವಾರಿಧಿ ಡಿ.ಎಸ್. ಸೂರ್ಯನಾರಾಯಣ ಭಟ್ ಅವರ ಬಳಿ ಹಾಗೂ ಮುಂದೆ ವಿದ್ವಾನ್ ಡಿ.ಎನ್. ಸುಬ್ರಹ್ಮಣ್ಯ ಭಟ್ ಇವರಲ್ಲಿಯೂ ಸಂಗೀತ ಅಭ್ಯಾಸ ಮಾಡಿದವರು. ತಮ್ಮ 15ನೇ ವಯಸ್ಸಿನಿಂದಲೇ ಕಛೇರಿ ನೀಡಲಾರಂಭಿಸಿದ್ದಲ್ಲದೆ ಕೊಳಲು ವಾದನವನ್ನು ಸ್ವತಂತ್ರವಾಗಿ ಕಲಿತವರು. ಸಂಗೀತ ವಾದ್ಯಗಳ ಮೇಲಿನ ತುಡಿತ, ಆಸಕ್ತಿ ಮೇಲಾಗಿ ಪ್ರೀತಿ ಇವರನ್ನು ಸ್ಲೈಡ್ ಗಿಟಾರ್ ಕಲಿಯುವಂತೆ ಪ್ರೇರೇಪಿಸಿತ್ತು. ಬೆಂಗಳೂರಿನಲ್ಲಿ ತಮ್ಮದೇ ಆದ ಸಂಗೀತ ಸಂಸ್ಥೆ ಸೂರ್ಯ ಗ್ಲೋಬಲ್ ಮ್ಯೂಸಿಕ್ ಅಕಾಡೆಮಿ ಆರಂಭಿಸಿ ಮಕ್ಕಳಿಗೆ ಗಾಯನ, ಕೊಳಲು, ಗಿಟಾರ್, ವೀಣೆ ಕಲಿಸತೊಡಗಿದರು. ಹಲವು ಪ್ರಶಸ್ತಿಗಳಿಗೂ ಭಾಜನರಾದ ಸಂಪಗೋಡು ಅವರ ಸಂಗೀತ ಪಯಣದಲ್ಲಿ ತಾಯಿ ನಾಗಲಕ್ಷ್ಮಿ ಎಸ್. ಭಟ್ ಅವರ ಮಾರ್ಗದರ್ಶನ ಹಾಗೂ ಪತ್ನಿ ಮಧುವಂತಿ ಅವರ ಸಹಕಾರವಿದೆ.

ಶೃಂಗೇರಿ ಶಾರದಾಪೀಠದ ಆಸ್ಥಾನ ವಿದ್ವಾನ್ ಬಿರುದು, ಅನನ್ಯ ಯುವ ಪುರಸ್ಕಾರಗಳಿಗೆ ಭಾಜನರಾದ ಸಂಪಗೋಡು ಅವರಿಗೆ ಸದ್ಯ ಗಾನಕಲಾಶ್ರೀ ಕಿರೀಟ ಮುಡಿಗೇರಿಸಿದ ಅಗ್ಗಳಿಕೆ!

ಚಿಣ್ಣರ ಪ್ರಯೋಗ...

1ನೇ ಪುಟದಿಂದ...

ಐಎಲ್‌ಪಿ ಸಂಸ್ಥೆಯು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆ (NGO). ಬಹು ಆಯಾಮ ಕಲಿಕಾ ನೆಲೆ (ಮಲ್ಟಿ ಡೈಮೆನ್ಷನಲ್ ಲರ್ನಿಂಗ್ ಸ್ಪೇಸ್, MDLS) ಎಂಬ ಕಾರ್ಯಕ್ರಮದ ಅಡಿಯಲ್ಲಿ ಇಂತಹ ಕಿಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಇದರ ಮೊದಲ ಆವೃತ್ತಿ 2015-16ರಲ್ಲಿ ಪ್ರಮೋದ್ ಶ್ರೀಧರಮೂರ್ತಿ, ಹರೀಶ್ ಕೆ. ಮತ್ತು ಕೀರ್ತನಾ ಸತ್ಯಮೂರ್ತಿ ನೇತೃತ್ವದ ಸ್ವಯಂಸೇವಕರ ತಂಡದಿಂದ ರೂಪುಗೊಂಡಿತು.

ಹೊಸ ಉಪಕರಣಗಳು (ಫೋಲ್ಡ್ ಸ್ಕೋಪ್‌ನಂತಹವು) ಮತ್ತು ಶಿಕ್ಷಕರಿಗೆ ತಮ್ಮ ತರಗತಿಗಳಲ್ಲಿ ಬಳಸಲು ಅನುವು ಮಾಡಿಕೊಡುವ ಪರಿಕರಗಳನ್ನು ಒಳಗೊಂಡಂತೆ ಅನೇಕ ಬದಲಾವಣೆಗಳನ್ನು ಸೇರಿಸಿ, ಇದರ ನವೀಕರಿಸಿದ ಆವೃತ್ತಿಯನ್ನು ಇಂದು ಹಲವೆಡೆ ಬಳಸಲಾಗುತ್ತಿದೆ. ಶಿಕ್ಷಕರು ಮೊದಲ ಹಂತದಲ್ಲಿ ಬಳಸಿದ ಮೇಲೆ, ಅವರಿಂದ ಪಡೆದ ಪ್ರತಿಕ್ರಿಯೆ ಮತ್ತು ಸಲಹೆಗಳಿಗೆ ಸ್ಪಂದಿಸಿ ಈ ಹೊಸ ಆವೃತ್ತಿಯನ್ನು ಅಭಿವೃದ್ಧಿಪಡಿಸಲಾಗಿದೆ.

ಐಎಲ್‌ಪಿಯ ಸೈನ್ಸ್ ಕಿಟ್‌ನಿಂದ ಸುಮಾರು 150 ಪ್ರಯೋಗಗಳನ್ನು ಮಾಡಬಹುದು. ಸುಲಭವಾಗಿ ಲಭ್ಯವಿರುವ, ಕೈಗೆಟುಕುವ ವಸ್ತುಗಳನ್ನು ಬಳಸಿಕೊಂಡು 5ರಿಂದ 10ನೇ ತರಗತಿಯವರೆಗೆ 200ಕ್ಕೂ ಹೆಚ್ಚು ಪರಿಕಲ್ಪನೆಗಳನ್ನು ತಿಳಿಯಲು ಇದು ಸಹಾಯಕ. ವಿದ್ಯಾರ್ಥಿಗಳು ತಾವೇ ಪ್ರಯೋಗ ಮಾಡಿ ಕಲಿಯುವ ಅವಕಾಶವನ್ನು ಇದು ಸೃಷ್ಟಿಸುತ್ತದೆ.

ನಾಲ್ಕರಿಂದ ಹತ್ತನೇ ತರಗತಿಗಳಿಗೆ NCERT ಪಠ್ಯಕ್ರಮದ ಆಧಾರದ ಮೇಲೆ ಐಎಲ್‌ಪಿ ಕಿಟ್‌ನೊಂದಿಗೆ ಪ್ರಯೋಗಗಳನ್ನು ಮಾಡಲು ಅನುವಾಗುವಂತೆ ಇದನ್ನು ರೂಪಿಸಲಾಗಿದೆ. ಈ ತರಗತಿಗಳ ವಿಜ್ಞಾನದ ಎಲ್ಲಾ ಅಧ್ಯಾಯಗಳಿಗೆ ಡಿಜಿಟಲ್ ಕಂಟೆಂಟ್ (ಡಿಜಿಟಲ್ ಪಾಠಗಳು, ಚಟುವಟಿಕೆಗಳು ಮತ್ತು ರಸಪ್ರಶ್ನೆಗಳು) ರಚಿಸಿರುವುದು ವಿಶೇಷ. ಪ್ರಯೋಗಗಳ ಜೊತೆಗೆ ಅದರ ಹಿಂದಿನ ಅಂಶಗಳನ್ನು ತಿಳಿಯಲು ಪೂರಕವಾಗಿ ವಿಡಿಯೊಗಳನ್ನು ರಚಿಸಿ ಯೂಟ್ಯೂಬ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಇವೆಲ್ಲವನ್ನೂ ಇಲ್ಲಿ ಉಚಿತವಾಗಿ ಪಡೆಯಬಹುದು: https://www.ilpnet.org/ resources/



ನಂಜನಗೂಡು ತಾಲ್ಲೂಕಿನ ತಗಡೂರಿನ ಶಾಲೆಯಲ್ಲಿ ಬಲೂನುಗಳ ಪ್ರಯೋಗ ನಡೆದಾಗ...

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಒಂದು ದಶಕದ ಹಿಂದೆ ಈ ಕಲಿಕಾ ಕಿಟ್ ಬಳಕೆಯನ್ನು ಪ್ರಾರಂಭಿಸಲಾಗಿತ್ತು. ನಂತರ ಈ ಕಾರ್ಯಕ್ರಮದ ಅಂಶಗಳನ್ನು ನೋಡಿ- ವಿಶ್ಲೇಷಿಸಿ, ಶಿಕ್ಷಣ ಇಲಾಖೆಯು ತನ್ನ ವ್ಯವಸ್ಥೆಯೊಳಗೆ ಹಲವಾರು ಅಂಶಗಳನ್ನು ಅಳವಡಿಸಿಕೊಂಡಿದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣ ಇಲಾಖೆಯ ನಿರ್ದೇಶನ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಬೆಂಬಲದೊಂದಿಗೆ, ಏಳೂ ಜಿಲ್ಲೆಗಳ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 5,500 ಕಿಟ್‌ಗಳನ್ನು ವಿತರಿಸಲಾಗಿದೆ. ಈ ಕಿಟ್ ಅನ್ನು ಪರಿಣಾಮಕಾರಿಯಾಗಿ ಬಳಸಲು ಶಿಕ್ಷಕರಿಗೆ ತರಬೇತಿಯನ್ನೂ ನೀಡಲಾಗಿದೆ. ಇಲ್ಲಿಯವರೆಗೆ, ಐಎಲ್‌ಪಿ ಸುಮಾರು 12,000ಕ್ಕೂ ಹೆಚ್ಚು ಶಿಕ್ಷಕರಿಗೆ ತರಬೇತಿ ನೀಡಿದೆ.

ಪ್ರತಿವರ್ಷವೂ ಶಾಲೆಗಳು ವಿಜ್ಞಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಐಎಲ್‌ಪಿ ಪ್ರೋತ್ಸಾಹಿಸುತ್ತದೆ. ವಿಶೇಷವಾಗಿ ಫೆಬ್ರುವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿಜ್ಞಾನ ಮಾದರಿ ಪ್ರದರ್ಶನದಂತಹ ಕಾರ್ಯಕ್ರಮ ನಡೆಸಲು ಪ್ರೋತ್ಸಾಹಿಸುತ್ತದೆ. ಅಂದಹಾಗೆ, ತುಮಕೂರು ಜಿಲ್ಲೆಯೊಂದರಲ್ಲೇ 1000ಕ್ಕೂ ಹೆಚ್ಚು ಶಾಲೆಗಳು ಕಿಟ್‌ಗಳನ್ನು ಬಳಸಿ ಕಳೆದ ವರ್ಷ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ಭಾಗವಹಿಸಿದ್ದವು.

2016ರಿಂದ ಇಲ್ಲಿಯವರೆಗೆ ಐಎಲ್‌ಪಿ ಎಂಟು ರಾಜ್ಯಗಳಲ್ಲಿ 11,634 ಶಾಲೆಗಳಿಗೆ 16,645 ವಿಜ್ಞಾನ ಕಿಟ್‌ಗಳನ್ನು ವಿತರಿಸಿದೆ. ಕಲ್ಯಾಣ ಕರ್ನಾಟಕದಲ್ಲಿ ಡೆಲ್ ಸಂಸ್ಥೆಯ ಬೆಂಬಲದೊಂದಿಗೆ ಇದನ್ನು ಅನುಷ್ಠಾನಗೊಳಿಸುತ್ತಿದೆ.

ರಾಜ್ಯ ಸರ್ಕಾರದ ತಂತ್ರಜ್ಞಾನ ಸಹಾಯಕ ಕಲಿಕೆ ಕಾರ್ಯಕ್ರಮದ (TALP) ಅಡಿಯಲ್ಲಿ ಶಿಕ್ಷಣ ಇಲಾಖೆಯು ಈ ಹಿಂದೆ ಅಭಿವೃದ್ಧಿಗೊಳಿಸಿದ ಸುಮಾರು 2500 ಶಾಲೆಗಳಲ್ಲಿನ ಕಂಪ್ಯೂಟರ್ ಲ್ಯಾಬ್‌ಗಳನ್ನು ಇದಕ್ಕಾಗಿ ಬಳಸಲಾಗಿದೆ. ಈ ಕಂಪ್ಯೂಟರ್‌ಗಳನ್ನು ನಿರ್ದಿಷ್ಟ 'ಉಬುಂಟು' ಓಎಸ್‌ನೊಂದಿಗೆ ಸಜ್ಜುಗೊಳಿಸಲಾಗಿದೆ. ಜಿಮ್ಪ್ (GIMP), ಅಡಾಸಿಟಿ (Audacity), ಲಿಬ್ರೆ (Libre)ಯಂತಹ ಸಾಫ್ಟ್‌ವೇರ್‌ಗಳೊಂದಿಗೆ ಹೇಗೆ ಬಳಸುವುದು ಮತ್ತು ಕೆಲಸ ಮಾಡುವುದು ಎಂಬುದನ್ನು ವಿವರಿಸುವ 30ಕ್ಕೂ ಹೆಚ್ಚು ಸ್ವಯಂ-ಕಲಿಕಾ ವಿಡಿಯೊಗಳನ್ನು ಇವುಗಳಲ್ಲಿ ಲೋಡ್ ಮಾಡಲಾಗಿದೆ. ಹೀಗಾಗಿ ಇಂಟರ್‌ನೆಟ್ ಅನ್ನು ಅವಲಂಬಿಸುವ ಅಗತ್ಯವಿಲ್ಲ.

ಇದರ ಜೊತೆಗೆ ವಿದ್ಯಾರ್ಥಿಗಳಿಗೆ ವೃತ್ತಿಗಳ ಅರಿವು ಮತ್ತು ವೃತ್ತಿ ಮಾರ್ಗದರ್ಶನಕ್ಕೆ ಪೂರಕವಾಗಿ ವಿಶೇಷ ಕಾರ್ಯಕ್ರಮವನ್ನು ಕೂಡ ಐಎಲ್‌ಪಿ ರೂಪಿಸಿದೆ. 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸುಮಾರು 16 ಸೆಷನ್‌ಗಳನ್ನು ಪರಿಣತರು ಮಾಡುತ್ತಾರೆ. ತಮ್ಮನ್ನು ತಾವು ಅರಿತುಕೊಳ್ಳಲು, ಗುರಿ ರೂಪಿಸಿಕೊಳ್ಳಲು, ರೋಲ್ ಮಾಡೆಲ್‌ಗಳನ್ನು ಗುರುತಿಸಿ ಶ್ಲಾಘಿಸಲು ಇದು ಒಂದು ರೀತಿಯಲ್ಲಿ ದಾರಿದೀಪ.

ಕರ್ನಾಟಕವೊಂದರಲ್ಲೇ ಈ ಎಲ್ಲ ಕಾರ್ಯಕ್ರಮಗಳಿಂದ 10 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು.

(ಲೇಖಕರು ಐಎಲ್‌ಪಿಯ ಒಬ್ಬ ಸ್ವಯಂಸೇವಕ)

ಮುನ್ನೋಟ 12-11-2023 ರಿಂದ -18-11-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಒಂದು ರೀತಿ ಆತ್ಮಾಭಿಮಾನ ಇರುತ್ತದೆ. ನಿಮ್ಮ ಚಟುವಟಿಕೆ ನಿಗೂಢವಾಗಿರುತ್ತದೆ. ಸ್ಥಿರಾಸ್ತಿ ಕೊಳ್ಳುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಅವರ ಅಧ್ಯಯನಕ್ಕೆ ಬೇಕಾದ ಎಲ್ಲ ರೀತಿಯ ಸವಲತ್ತುಗಳು ದೊರೆಯುತ್ತವೆ. ಸೈನ್ಯದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೊಸ ರೀತಿಯ ಅನುಕೂಲತೆಗಳು ಒದಗುವ ಸಾಧ್ಯತೆ ಇದೆ. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡದಿದ್ದಲ್ಲಿ ಸಾಲಕ್ಕೆ ಬೀಳಬಹುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ನಿಮ್ಮ ಆಲೋಚನೆಗಳಲ್ಲಿ ಸ್ಥಿರತೆ ಇರುವುದಿಲ್ಲ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಆದಾಯ ಹೆಚ್ಚುತ್ತದೆ. ನಿಮ್ಮ ನಡವಳಿಕೆಗಳಿಂದ ತಾಯಿಯು ಕೋಪಗೊಳ್ಳಬಹುದು. ಸರ್ಕಾರಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಮಂದಗತಿ ಇರುತ್ತದೆ. ಬೆಂಕಿಯ ಜೊತೆಯ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದ ಕೆಲಸ ಮಾಡಬೇಕು. ಕಣ್ಣಿನ ಬಗ್ಗೆ ಎಚ್ಚರ ವಹಿಸಿ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಒಮ್ಮೊಮ್ಮೆ ನಿಮ್ಮ ಬುದ್ಧಿವಂತಿಕೆ ಕೈ ಕೊಡಬಹುದು. ಉಪನ್ಯಾಸಕರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಆಸ್ತಿ ಕೊಳ್ಳುವಿಕೆಯ ವಿಚಾರದಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಬೇಕಾದ ಸೂಕ್ತ ಸೌಲಭ್ಯಗಳು ಒದಗುತ್ತವೆ. ಮಕ್ಕಳ ಆಟಪಾಠಗಳ ಬಗ್ಗೆ ಉತ್ತಮ ವಾರ್ತೆಗಳನ್ನು ಕೇಳುವಿರಿ. ಹಿರಿಯ ಆಡಳಿತಗಾರರಿಗೆ ಉತ್ತಮ ಸ್ಥಾನ ಅಥವಾ ಹೆಚ್ಚಿನ ಆದ್ಯತೆ ದೊರೆಯುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಮನಸ್ಸಿನ ಆಲೋಚನೆಯಲ್ಲಿ ಬಹಳ ದ್ವಂದ್ವವಿರುತ್ತದೆ. ಆದಾಯವು ನಿಮ್ಮ ಖರ್ಚನ್ನು ತೂಗಿಸುವಷ್ಟಿರುತ್ತದೆ. ಗಣಿತತಜ್ಞರಿಗೆ ಹಾಗೂ ಲೆಕ್ಕಪರಿಶೋಧಕರಿಗೆ ಹೆಚ್ಚಿನ ಕೆಲಸ ದೊರೆತು ಹೆಚ್ಚು ಸಂಪಾದನೆ ಆಗುತ್ತದೆ. ಉದ್ಯೋಗದಲ್ಲಿ ಪ್ರಗತಿ ಸ್ವಲ್ಪಮಟ್ಟಿಗೆ ನಿಧಾನವಾಗಬಹುದು. ಸಂಸಾರದಲ್ಲಿ ಕಾವೇರಿದ ವಾತಾವರಣಗಳಿದ್ದರೂ ನಂತರದ ದಿನಗಳಲ್ಲಿ ಸರಿಯಾಗುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಹಿರಿಯರಿಂದ ಮತ್ತು ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಅಧ್ಯಯನದ ಜೊತೆ ದುಡಿಯುವ ಅವಕಾಶ ದೊರೆಯುತ್ತದೆ. ಮೂಳೆ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ರಾಜಕೀಯ ನಾಯಕರುಗಳಿಗೆ ನಿರೀಕ್ಷಿಸಿದ್ದ ಸ್ಥಾನಮಾನಗಳು ದೊರೆಯುವ ಸಾಧ್ಯತೆಗಳಿವೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಅಲಂಕಾರಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವಿರಿ. ಅತಿಯಾದ ಹರಿತದ ಮಾತು ನಿಮಗೆ ಮುಜುಗರ ತರಬಹುದು. ಹಣದ ಒಳಹರಿವು ಸ್ವಲ್ಪ ಏರಿಕೆಯಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಜಾಣತನದಿಂದ ನಿಮ್ಮ ಪಾಲನ್ನು ಪಡೆಯುವಿರಿ. ಶಾಲಾ ಕಾಲೇಜುಗಳನ್ನು ನಡೆಸುತ್ತಿರುವವರಿಗೆ ಸ್ವಲ್ಪ ಕಾನೂನಿನ ಸಮಸ್ಯೆಗಳು ಎದುರಾಗುವ ಸಾಧ್ಯತೆಗಳಿವೆ. ಹಿರಿಯರ ಕಡೆಯಿಂದ ಧನ ಸಹಾಯ ಬರುವ ಸಾಧ್ಯತೆ ಇದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಅತಿಯಾದ ಗೌರವವನ್ನು ಸಮಾಜದಿಂದ ಬಯಸುವಿರಿ. ನಿಮ್ಮ ವ್ಯಂಗ್ಯ ಮಾತುಗಳು ನಿಮಗೆ ವಾಪಸ್ ಬರಬಹುದು. ತಂದೆಯ ವ್ಯವಹಾರಗಳಲ್ಲಿ ನಿಮಗೆ ಪಾಲು ದೊರೆಯುತ್ತದೆ. ಹಿರಿಯ ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಸ್ಥಾನಮಾನ ಸಿಗುವ ಸಾಧ್ಯತೆಗಳಿವೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಮಹಿಳೆಯರು ಮಾಡುವ ವ್ಯವಹಾರಗಳಲ್ಲಿ ಲಾಭ ಕಡಿಮೆಯಾಗುವ ಸಾಧ್ಯತೆಗಳಿವೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಬುದ್ದಿವಂತಿಕೆಯಿಂದ ಕೆಲಸಗಳನ್ನು ಸಾಧಿಸುವಿರಿ. ಗುರು ಹಿರಿಯರಿಂದ ಸಿಗುತ್ತಿದ್ದ ಸಹಕಾರಗಳು ಕಡಿಮೆಯಾಗುತ್ತವೆ. ಶತ್ರುಗಳನ್ನು ಮಟ್ಟಹಾಕಲು ಚಾಣಾಕ್ಷ ನಡೆಯನ್ನು ಪ್ರದರ್ಶಿಸುವಿರಿ. ಸಂಗಾತಿಯ ಆದಾಯದಲ್ಲಿ ಸ್ವಲ್ಪಧಾರ್ಮಿಕ ಕಾರ್ಯಗಳಿಗೆ ಖರ್ಚಾಗುವುದು. ಸರ್ಕಾರಿ ಕಂಪನಿಗಳ ಜೊತೆ ವ್ಯವಹಾರ ಮಾಡುವವರಿಗೆ ಈಗ ಲಾಭ ಕಡಿಮೆಯಾಗು ವಸಾಧ್ಯತೆಗಳಿವೆ.


ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಮಾತನಾಡುವಾಗ ಹೆಚ್ಚಿನ ತಾಳ್ಮೆ ಇರಲಿ. ಕೃಷಿಯಿಂದ ಆದಾಯ ಹೆಚ್ಚಾಗುತ್ತದೆ. ವಿದೇಶದಲ್ಲಿ ಇರುವವರಿಗೆ ಸ್ಥಿರಾಸ್ತಿ ಮಾಡುವ ಯೋಗವಿದೆ. ಮೂಳೆ ತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಆಟೋಮೊಬೈಲ್ ಕ್ಷೇತ್ರದಲ್ಲಿ ವ್ಯವಹಾರ ಮಾಡುತ್ತಿರುವವರಿಗೆ ವ್ಯವಹಾರ ಸಲೀಸಾಗುತ್ತದೆ. ಶತ್ರುಗಳನ್ನು ಪತ್ತೆಹಚ್ಚಿ ಅವರು ನಿಮ್ಮ ಬಗ್ಗೆ ಮಾತನಾಡದಂತೆ ಎಚ್ಚರಿಕೆ ರವಾನೆ ಮಾಡುವಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಬಹಳ ಶ್ರಮ ಪಟ್ಟ ಕೆಲಸ ಮಾಡಿ ಹೆಸರು ಪಡೆಯುವಿರಿ. ನಿಮ್ಮ ನಡವಳಿಕೆಯಲ್ಲಿ ಉದಾಸೀನತೆಯನ್ನು ಕಾಣಬಹುದು. ಸಿರಾಸ್ತಿಯನ್ನು ಕೊಳ್ಳಲು ಹಣ ಕ್ರೋಢಿಕರಣಕ್ಕೆ ಚಾಲನೆ ದೊರೆಯುತ್ತದೆ. ಕ್ರೀಡಾಪಟುಗಳಿಗೆ ಸರಕಾರದಿಂದ ಸೂಕ್ತ ಸೌಲಭ್ಯಗಳು ಒದಗಿಬರುತ್ತವೆ. ವಂಶ ಪಾರಂಪರಿಕ ಧರ್ಮವಿದ್ಯೆಯನ್ನು ಮುಂದುವರಿಸಬಹುದು. ರಕ್ತ ಪರಿಚಲನೆಯಲ್ಲಿ ವ್ಯತ್ಯಾಸ ಕಂಡರೂ ನಂತರ ಸರಿಯಾಗುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಹಠ ಹಿಡಿದು ಕೆಲಸ ಮಾಡುವ ಛಲ ನಿಮ್ಮಲ್ಲಿ ಇರುತ್ತದೆ. ಮಾತನಾಡುವಾಗ ಉಪಯೋಗಿಸುವ ಶಬ್ಧಗಳ ಬಗ್ಗೆ ಎಚ್ಚರವಿರಲಿ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ಸಿಗುತ್ತದೆ. ಕೃಷಿಯಿಂದ ಹೆಚ್ಚು ಅಭಿವೃದ್ಧಿ ಇರುತ್ತದೆ. ಕೃಷಿ ಉತ್ಪನ್ನಗಳಿಂದ ಈಗ ಆದಾಯ ಸಿಗುತ್ತದೆ. ಆಸ್ತಿ ವಿವಾದಗಳಲ್ಲಿ ಹೊಂದಾಣಿಕೆಯನ್ನು ಕಾಣಬಹುದು. ಇಲಾಖೆ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಯಶಸ್ಸು ಇರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಸ್ವಲ್ಪ ಒರಟುತನ ಮನೆ ಮಾಡುತ್ತದೆ. ಮಾತಿನಲ್ಲಿ ಎಲ್ಲರನ್ನೂ ಗೆಲ್ಲುವ ಶಕ್ತಿಇರುತ್ತದೆ. ನಿಮ್ಮ ನಡವಳಿಕೆಯ ಮೇಲೆ ಸಂಗಾತಿಯ ಪ್ರಭಾವ ಇರುತ್ತದೆ ಹಾಗೂ ನಿಮ್ಮ ಎಲ್ಲಾ ಕೆಲಸಕಾರ್ಯಗಳಿಗೆ ಅವರ ಸಹಕಾರ ಸಿಗುತ್ತದೆ. ಹಿರಿಯರ ಸಹಾಯದಿಂದ ಆಸ್ತಿ ಅಭಿವೃದ್ಧಿಯನ್ನು ಮಾಡಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಯಶಸ್ಸು ಇರುವುದಿಲ್ಲ. ಸತತವಾಗಿ ತಲೆನೋವಿನಿಂದ ಬಳಲುತ್ತಿರುವವರು ವೈದ್ಯರನ್ನು ಕಾಣುವುದು ಉತ್ತಮ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕೆ ಬರುತ್ತದೆ.

ಪದಬಂಧ 2815



ಮೇಲಿನಿಂದ ಕೆಳಕ್ಕೆ

1. ವಾಮನನಿಗೆ ದೈತ್ಯರಾಜ ನೀಡಿದ ಮಹಾನ್ ಕೊಡುಗೆ 4
2. ಹಿಡಿತದ ಖರ್ಚು ಉಳಿತಾಯದ ಸೂತ್ರ 4
3. ಆಟೋಟಗಳಲ್ಲಿ ಕತ್ತಿಗೆ ಹಾಕಿಸಿಕೊಳ್ಳುವ ಮೆಡಲ್ಲು 3
4. ಚಿಕ್ಕದಾದ ರಂಗಪ್ರದರ್ಶನ 5
6. ನಮ್ಮ ಆಚರಣೆಗಳು ಹಿಂದಿನಿಂದ ನಡೆದುಬಂದದ್ದು 6
8. ಕೃಷ್ಣ ಹುಟ್ಟಿದ ವಂಶ 4
9. ಮಾನವರಲ್ಲಿ ಶ್ರೇಷ್ಠ ರಾಜರಾಜರ ಒಡೆಯ 6
11. ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ಸಣ್ಣ ಪ್ರದೇಶವನ್ನು ಆಳುತ್ತಿದ್ದವ 4
13. ಓಡುತ್ತಿರುವ ಸಮಯವನ್ನು ಹಿಡಿತದಲ್ಲಿಡುವ ಯತ್ನ ಸಾಧ್ಯವೇ? 5
14. ಪದ ಬಳಕೆಯಲ್ಲಿ ಅಕ್ಷರ ಪುನರುಕ್ತಿಗೆ ಹೆಸಾರಾದ ಕಾವ್ಯ ಕರ್ತೃ 4
15. ಮದುಮಕ್ಕಳು ಏರುವ ಮಂಗಳ ಪೀಠ ಕೆಳಗಿನಿಂದ ಮೇಲಿಡಲಾಗಿದೆ 4
16. ಬಯಕೆಯ ಹಣ್ಣು 3

ಎಡದಿಂದ ಬಲಕ್ಕೆ

1. ಮೂರಡಿ ಜಾಗ ನೀಡಿದ ಚಕ್ರವರ್ತಿಯನ್ನು ನೆನೆಯುವ ಮಾಸದ ಮೊದಲ ದಿನ 5
3. ಬತ್ತಿಗೆ ಬೆಂಕಿ ಹಚ್ಚಿದ ಕೂಡಲೆ 'ಢಂ ಢಮಾರ್' 3
5. ಸಂಸ್ಥೆಯನ್ನು ಸ್ಥಾಪಿಸಿ ಅದರ ವ್ಯವಹಾರ ನೋಡಿಕೊಳ್ಳುವವ 5
7. ನಡೆ ನುಡಿಗಳಲ್ಲಿ ಇರಬೇಕಾದ ನವಿರು ನಾಜೂಕುತನ 5
10. ಒಂದು ರೀತಿಯ ಅಡುಗೆ ಕರ್ಮಕ್ಕೆ ಸಂಬಂಧಿಸಿದ್ದು 4
12. ದೀರ್ಘಪಡೆದ ಇತಿಹಾಸ ಸೃಷ್ಟಿಕರ್ತ 5
13. ಉರುಳುತ್ತಿರುವ ಸಮಯದ ಗಾಲಿ 4
14. ಬೆಳಗ್ಗೆ ಎದ್ದ ಕೂಡಲೆ ತಂದುಕೊಳ್ಳುವ ನೆನಪು 5
16. ಆಶ್ವಯುಜದ ನಂತರ ದೀಪ ಬೆಳಗುವ ತಿಂಗಳು 5
17. ಮಂದ ಬೆಳಕನ್ನು ಕೊಡುವ ಸಣ್ಣ ಪ್ರಣತಿ 3
18. ಗೆದ್ದ ಸಂಭ್ರಮದಲ್ಲಿ ಉಕ್ಕಿದ ಹುರುಪು, ಉಲ್ಲಾಸ 5

ಪದಬಂಧ ಉತ್ತರ -2814

ಮೇಲಿಂದ ಕೆಳಕ್ಕೆ

1.ಕವಿಪುಂಗವ 2.ಕಲ್ಪನ್ನ 3.ನಿವಾರಿಸು 4.ವಸುಖಣ 5.ಕನಸು 6. ಕನ್ನಡರಾಜ್ಯೋತ್ಸವ 8.ಬಾಲರಾಮ 10.ನಗೆವಾರ 11.ಮತಿ 13.ರವಿ 15.ನಿಧಾನ 16.ಯಕ್ಷಕಿನ್ನರ 17.ಕಲಾವತಿ 18.ಜನಮನ 20.ಯಮುನ

ಎಡದಿಂದ ಬಲಕ್ಕೆ


1. ಕರ್ನಾಟಕ 3.ನಿತ್ಯೋತ್ಸವ 5.ಕನ್ನಡಕಸ್ತೂರಿ 7.ಸುಮಬಾಣ 9.ವನಸುಮ 12.ತಿಮಿರಾಸುರ 14.ವಿನಿಮಯ 17.ಕರಬೂಜ 19.ನಗುವನಯನ 21.ತಿಲದಾನ 22.ನದೀತೀರ

ಮೇಘಾನೆ ವಿಸ್ಮಯ ಲೋಕದಲ್ಲಿ ವಿಹಾರ

ಶಿವಮೊಗ್ಗ ಜಿಲ್ಲೆಯ ಕಾನುಭಾಗದಲ್ಲಿರುವ ಮೇಘಾನೆ ಮುಗ್ಧಹಳ್ಳಿ. ಇಲ್ಲಿ ನಿಸರ್ಗ ಸೌಂದರ್ಯ ಸವಿಯುವ ಜೊತೆಗೆ ಜನರ ಬದುಕಿನ ನೆನಪು ಕಟ್ಟಿಕೊಡುವ ಅನನ್ಯ ಅನುಭವ ಬುತ್ತಿಯನ್ನೂ ಕಟ್ಟಿಕೊಂಡು ಬರಬಹುದು.



ಗುಡ್ಡಗಳ ಮೇಲೆ ಮೇಘಾನೆ



ಮೇಘಾನೆಯಲ್ಲಿ ಅಡಿಕೆ ಒಣಗಿಸಲು ಮಾಡಿಕೊಂಡಿರುವ ವ್ಯವಸ್ಥೆ

ಪಾಲಾಕ್ಷಪ್ಪ ಎಸ್.ಎನ್.

ಮೇಘಗಳ(ಮೋಡ) ಊರು ಮೇಘಾನೆ. ಎತ್ತರವಾದ ಗಿರಿ ಶಿಖರಗಳನಡುವೆ ಮೋಡಗಳನ್ನೇ ಹೊದ್ದು ಮಲಗಿದಂತಿರುವ, ಸಾಮಾನ್ಯವಾಗಿ ಹೊರ ಜಗತ್ತಿಗೆ ಗೋಚರಿಸದೆ ಇರುವ ಪುಟ್ಟ ಊರು. ಇದು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಮಲೆನಾಡಿನ ಮಡಿಲಲ್ಲಿ ಮಲಗಿದ ಮುಗ್ಧಹಳ್ಳಿ. ಸುಮಾರು 5 ಕಿ.ಮೀ. ಕಡಿದಾದ ಬೆಟ್ಟವನ್ನು ಏರಿ, ಏದುಸಿರು ಬಿಡುತ್ತ ಗುಡ್ಡಗಳ ತುದಿಗಳು ಸೇರಿದ ಜಾಗದಲ್ಲಿ ಚದುರಿದ ಮನೆಗಳಿರುವ ಈ ಊರನ್ನು ನೋಡಿದರೆ ಬೇರೊಂದು ಲೋಕಕ್ಕೆ ಬಂದ ಅನುಭವ. 60 ವರ್ಷಗಳ ಹಿಂದೆ, ದಟ್ಟ ಕಾಡಿನ ನಡುವೆ ಕಡಿದಾದ ಬೆಟ್ಟವನ್ನು ಏರಿ ಜನ ಇಲ್ಲಿಗೆ ಬಂದಿದ್ದಾದರೂ ಹೇಗೆ, ಏಕೆ ಎಂಬ ಪ್ರಶ್ನೆಗಳು ನಮ್ಮನ್ನು ಕಾಡದೇ ಇರವು. ಬೆಟ್ಟದ ಮೇಲಿನ ಈ ಪುಟ್ಟ ಹಳ್ಳಿ, ಕಲ್ಪನೆಯ ಕೈಲಾಸದಂತಿದ್ದರೂ ಇದು ನಿರ್ಮಾಣವಾದ ಬಗ್ಗೆ ಕಣ್ಣೀರ ಕಥೆಗಳಿವೆ. ನಾಡಿನ ಬೆಳಕಿಗಾಗಿ ಹಲವರ ಬದುಕನ್ನು ಕತ್ತಲೆಗೆ ದೂಡುವಂಥಾದ ನೈಜ ಬದುಕಿನ ಚಿತ್ರಣಗಳು ನಮ್ಮ ಕಣ್ಣ ಮುಂದೆ ಬರುತ್ತವೆ.

ಸೃಷ್ಟಿಯಾದ ಬಗೆ

1964ರಲ್ಲಿ ಲಿಂಗನಮಕ್ಕಿ ಅಣೆಕಟ್ಟೆ ನಿರ್ಮಾಣವಾಗಿ, 1991.71 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ನೀರು ಆವರಿಸಿತು. ಪ್ರಾಣಿ ಪಕ್ಷಿಗಳಿಗೆ, ಜನರ ಬದುಕಿಗೆ ಆಶ್ರಯದಾಗಿದ್ದ ಭೂಮಿ ಮುಳುಗಡೆಯಾಯಿತು. ಇಲ್ಲಿ ಭೂಮಿಯ ಒಡೆತನ ಇಲ್ಲದ ಮತ್ತು ಶಿಕ್ಷಣವೂ ಇಲ್ಲದ ಕುಣಬಿ ಬುಡಕಟ್ಟು ಜನಾಂಗದ ಕೆಲವು ಕುಟುಂಬಗಳು, ಬದುಕನ್ನು ಕಟ್ಟಿಕೊಳ್ಳಲು ಸರಕು ಸಾಮಾನುಗಳನ್ನು ಕಟ್ಟಿಕೊಂಡು, ದಟ್ಟ ಅಡವಿಯ ಮೇಘಾನೆ ಬೆಟ್ಟದ ಬುಡಕ್ಕೆ ಬಂದು, ಗಟ್ಟಿ ಮನಸ್ಸು ಮಾಡಿ, ಕಡಿದಾದ ಬೆಟ್ಟವನ್ನು ದಾರಿಯಿಲ್ಲದಿದ್ದರೂ ಧೈರ್ಯದ ದಾರಿಯಲ್ಲಿ ಏರಿಬಿಟ್ಟರು. 'ಇನ್ನಾವ ಅಣೆಕಟ್ಟುಗಳೂ ನಮ್ಮನ್ನು ಮುಳುಗಿಸಲಾರವು' ಎಂಬ ಸಂತಸದಿಂದ ಬೀಗಿದರು. ಆದರೆ ಬದುಕಿಗೆ ಮತ್ತೆ ಬಾಗಲೇಬೇಕಾದ ಅನಿವಾರ್ಯ.

ಇಲ್ಲಿ ಹೊಸ ಬದುಕು ಪ್ರಾರಂಭವಾಯಿತು. ಕಾಡು ಹುಲ್ಲಿನ ಚಾವಣಿ ಮಾಡಿ, ಸೊಪ್ಪು ಸೆದೆ ಮರ ಮುಟ್ಟುಗಳ ನೆರಿಕೆ ನೆಟ್ಟು, ಮಣ್ಣಿನ ಗೋಡೆಯ ಮನೆಗಳ ನಿರ್ಮಿಸಿದರು. ಅಲ್ಲಿ ಮೋಡಗಳು ಕೈಗೆಟುಕಿದಂತೆ ಯಾವ ಆಧುನಿಕ ಸೌಲಭ್ಯಗಳೂ ಕೈಗೆಟುಕುತ್ತಿರಲಿಲ್ಲ. ಆದರೆ ಶುದ್ಧ ನೀರಿಗೆ ಕೊರತೆ ಇರಲಿಲ್ಲ. ಅರಣ್ಯದ ಉತ್ಪನ್ನಗಳಾದ ಉಪ್ಪಂಗ(ಹುಣಸೆ ಹಣ್ಣಿನ ರೀತಿ), ಸೀಗೆಕಾಯಿ, ಅಂಟವಾಳ ಕಾಯಿ, ಲಾವಂಚದ ಬೇರುಗಳಿಂದ ಎಣ್ಣೆ ತಯಾರಿಸುವುದು, ಬುಟ್ಟಿ ಹೆಣೆಯುವುದು, ಒಂದಿಷ್ಟು ಭತ್ತ ಬೆಳೆಯುವುದು, ಮುಂತಾದವು ಬದುಕಿಗೆ ಆಧಾರ. ನಾಯಿ, ಬೆಕ್ಕು, ಹಸುಗಳು ನಿತ್ಯದ ಒಡನಾಡಿಗಳು. ಹಾಡು, ಕುಣಿತ, ಮರವನ್ನು ದೈವವೆಂದು ಪೂಜಿಸುವುದು ಬದುಕಿನ ಭಾಗವಾಗಿದ್ದವು.

ಗಿಡಮೂಲಿಕೆಗಳ ಬಗ್ಗೆ ಗೊತ್ತಿದ್ದ ಗಣೇಶಜ್ಜ ಇವರ ಪಾಲಿನ ವೈದ್ಯರಾಗಿದ್ದರು. ತುರ್ತು ಪರಿಸ್ಥಿತಿಯಲ್ಲಿ ಬೆತ್ತದ ಚಟ್ಟದಲ್ಲಿ ರೋಗಿಯನ್ನು ಹೊತ್ತುಕೊಂಡು 5 ಕಿ.ಮೀ. ಬೆಟ್ಟ ಇಳಿದು, ಮತ್ತೆ 30 ಕಿ.ಮೀ. ದೂರದ ಭಟ್ಕಳಕ್ಕೆ ಬರಬೇಕಾದ ಅನಿವಾರ್ಯ. ತಾಲ್ಲೂಕು ಕೇಂದ್ರವಾದ ಸಾಗರಕ್ಕೆ ಬರಬೇಕಾದರೆ ಬೆಟ್ಟ ಇಳಿದು ಸುಮಾರು 90 ಕಿ.ಮೀ.ಗಳ ಪ್ರಯಾಣ ಮಾಡಬೇಕಾಗಿತ್ತು. ಶಿಕ್ಷಣ, ವಿದ್ಯುತ್ ಇತರೆ ಸರ್ಕಾರಿ ಸೌಲಭ್ಯಗಳು ಅವರ ಪಾಲಿಗೆ ಗಗನ ಕುಸುಮ. ಮರಾಠಿ ಮನೆಮಾತು. ಯಾರಾದರೂ ಹೊರಗಿನವರು ಬಂದರೆ ಭಯಪಡುತ್ತಿದ್ದರು. ಇಲ್ಲಿಂದ ಬೇರೆ ಊರುಗಳಿಗೆ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುವುದಕ್ಕೆ, ಹೆಣ್ಣು ಕೇಳಲು ಬರುವವರಿಲ್ಲ. ಮದುವೆ ಮಾಡಿಕೊಳ್ಳಲು ಹೆಣ್ಣು ಕೊಡುವವರಿಲ್ಲ. ಮನೆಯ ಚಾವಣಿಗೆ ತಲೆಯ ಮೇಲೆ ಹಂಚುಗಳನ್ನು ಹೊತ್ತು ಗುಡ್ಡವೇರಿದ ಸಾಹಸದ ಕಥೆಗಳಿವೆ.

ಕಾಡು ಪ್ರಾಣಿಗಳ ಭಯ

ಬೆಟ್ಟದ ಮೇಲೆ ಊರು ಕಟ್ಟಿಕೊಂಡ ಜನರಿಗೆ ಪ್ರಾಣಿಗಳ ಭಯವಿತ್ತು. ಒಮ್ಮೆ ಬೆಟ್ಟವೇರುವಾಗ ಕರಡಿಯೊಂದು ದಾಳಿ ಮಾಡಿ ಕಣ್ಣನ್ನು ಕಳೆದುಕೊಂಡ ಬಗ್ಗೆ ಹಿರಿಯರೊಬ್ಬರು ವಿವರಿಸಿದ್ದನ್ನು ಕೇಳಿ ಮೈ ಝುಂ ಎಂದಿತು. ಚಾವಣಿಯಿಂದ ಹೆಬ್ಬಾವು ನಡುರಾತ್ರಿ ಮನೆಯೊಳಗೆ ಬಿದ್ದದ್ದು, ರಾತ್ರಿ ಪ್ರಾಣಿಗಳ ಕೂಗು... ಇಂತಹ ನೈಜ ಘಟನೆಗಳ ಬಗ್ಗೆ ಕೇಳುತ್ತಿದ್ದರೆ ಅವರ ಬದುಕಿನ ಬಗೆಯನ್ನು ಊಹಿಸಬಹುದಾಗಿದೆ.

ಸುಮಾರು 20 ವರ್ಷಗಳ ನಂತರ 1982ರಲ್ಲಿ ಮಣ್ಣಿನ ಗೋಡೆಗಳ ಕುಟೀರದಲ್ಲಿ ಶಾಲೆಯೊಂದು ಪ್ರಾರಂಭವಾಯಿತು. ಈ ಶಾಲೆಯಲ್ಲಿ ಹಿಂದೆ ಕೆಲಸ ನಿರ್ವಹಿಸಿದ ಇಬ್ಬರು ಶಿಕ್ಷಕರನ್ನು ದೂರವಾಣಿಯಲ್ಲಿ ಸಂಪರ್ಕಿಸಿದಾಗ, ಶಾಲೆ ಮತ್ತು ಊರಿನ ಅನುಭವಗಳನ್ನು, ತಮ್ಮ ಬದುಕು ಬವಣೆಗಳ ಬಗ್ಗೆ ಎಳೆ ಎಳೆಯಾಗಿ ತೆರೆದಿಟ್ಟರು. ಬೇರಾವ ಊರಿನಿಂದಲೂ ನಿತ್ಯ ಓಡಾಡಲು ಸಾಧ್ಯವಾಗದೇ ಅಲ್ಲೇ ಗುಡಿಸಲಲ್ಲಿ ವಾಸಮಾಡಬೇಕಾದ ಸ್ಥಿತಿ, ಮಕ್ಕಳ ತಲೆಗೂದಲು ಕಟಿಂಗ್ ಮಾಡಿದ್ದು, ಯಾವುದೇ ಇಂಗ್ಲಿಷ್ ಮೆಡಿಸಿನ್ ತೆಗೆದುಕೊಳ್ಳಲು ಒಪ್ಪದ ಜನರನ್ನು ಒಪ್ಪಿಸಿ ಮಕ್ಕಳಿಗೆ ಪಲ್ಸ್ ಪೋಲಿಯೊ ಹನಿ ಹಾಕಿಸಿದ್ದು, ಅಡುಗೆ ಮಾಡಿಕೊಂಡಿದ್ದು, ಮಕ್ಕಳಿಗೆ ಕನ್ನಡ ಕಲಿಸಿದ್ದು... ಹೀಗೆ ಹರಳುಗಟ್ಟಿದ ಅನುಭವಗಳನ್ನು ಹಂಚಿಕೊಂಡರು. ಜನಪ್ರತಿನಿಧಿಗಳನ್ನು, ಅಧಿಕಾರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಈ ವಿಸ್ಮಯ ಪ್ರಪಂಚವನ್ನು ತೆರೆದಿಟ್ಟರು. ಹಲವು ಕೊರತೆಗಳ ನಡುವೆಯೂ ಮಕ್ಕಳು ಮತ್ತು ಜನರೊಂದಿಗೆ ಬೆರೆತು ಕರ್ತವ್ಯ ನಿರ್ವಹಿದ ಶಿಕ್ಷಕರೆಲ್ಲರೂ ಅಭಿನಂದನಾರ್ಹರು. ಇತ್ತೀಚಿನ ವರ್ಷಗಳಲ್ಲಿ ಅಲ್ಲೊಂದು ಅಂಗನವಾಡಿ ಕೇಂದ್ರವೂ ಶುರುವಾಗಿದೆ.

ಮೇಘಾನೆ ಇಂದು

ಜಾಗರೂಕತೆಯಿಂದ ಜೀಪುಗಳು ಚಲಿಸಬಹುದಾದ ದಾರಿ. ಒಂದು ಕಡೆ ಪ್ರಪಾತ. ಇತ್ತೀಚಿಗೆ ಎಮ್ಮೆಯೊಂದು ಪ್ರಪಾತಕ್ಕೆ ಬಿದ್ದು, ಅಲ್ಲಿ ಮರಕ್ಕೆ ಸಿಕ್ಕಿಕೊಂಡು ಹೊರಬರಲಾರದೆ ಅಲ್ಲೇ ಸತ್ತಿದ್ದನ್ನು ಕೇಳಿ ಕರುಳು ಚುರಕ್ ಅಂದಿತು. ಒಂದರಿಂದ ಐದನೇ ತರಗತಿವರೆಗೆ ಶಿಕ್ಷಣ ಸಿಗುವಂತಾಗಿದೆ. ಆನಂತರ ಮಕ್ಕಳು ಅಲ್ಲಿಂದ ಪ್ರತಿದಿನ ಯಾವ ಶಾಲೆಗೂ ಓಡಾಡುವ ಸ್ಥಿತಿ ಇಲ್ಲ. ಅರಬ್ಬೀ ಸಮುದ್ರದ ಮೇಲಿಂದ ಬೀಸುವ ನೈರುತ್ಯ ಮಾರುತಗಳು ಕರಾವಳಿಯಿಂದ ಮೊದಲು ದುತ್ತೆಂದು ಅಪ್ಪಳಿಸುವುದೇ ಈ ಗುಡ್ಡಗಳಿಗೆ. ಸದಾ ಸುರಿವ ಮಳೆ. ಬಟ್ಟೆ ಒಣಗುವುದೂ ಕಷ್ಟ. ಮೇಘಾನೆ ಹಳ್ಳಿಗೆ ಈಗ 60ರ ಹರೆಯ. 1963-64ರಲ್ಲಿ ನೆಲೆ ಅರಸಿ ಬಂದದ್ದು ಏಳು ಕುಟುಂಬಗಳ ಮೂವತ್ತು ಜನ. ಈಗ ಅಲ್ಲಿರುವುದು ಸುಮಾರು 67 ಮನೆಗಳಿಂದ ಒಟ್ಟು 320 ಜನ. ಅಲ್ಲಲ್ಲಿ ಚದುರಿದ ಮನೆಗಳ ಸಂಪರ್ಕಕ್ಕೆ ಕಾಲು ದಾರಿಗಳೇ ಆಧಾರ.

ಇಲ್ಲೊಂದು ಗಣಪತಿ ದೇವಸ್ಥಾನ ಕಟ್ಟಿಕೊಂಡಿದ್ದಾರೆ. ಕೆಲ ಮಕ್ಕಳು ಬೇರೆ ಊರುಗಳಲ್ಲಿದ್ದು ಓದುತ್ತಿದ್ದಾರೆ. ಈಗ ಇಲ್ಲಿ ಅಡಿಕೆ ತೋಟಗಳನ್ನು ಮಾಡಿದ್ದಾರೆ. ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ. ಊರಿಗೆ ಸೋಲಾರ್ ಬಂತು. ಈಗ ವಿದ್ಯುತ್ ಕೂಡ ಬಂದಿದೆ. ಅಲ್ಲಲ್ಲಿ ನೆಟ್ವರ್ಕ್ ಸಿಗುವುದರಿಂದ ಮೊಬೈಲ್ ಕೂಡ ಬಂದಿವೆ. ಆಧುನಿಕತೆಯ ಗಾಳಿ ಬೀಸಲು ಪ್ರಾರಂಭವಾಗಿದ್ದರೂ, ಸುಗಮ ಸಾರಿಗೆ ಸದ್ಯಕ್ಕಂತೂ ಮರಿಚೀಕೆ! ಕಾಡು ದಾರಿ ಈಗ ಅಲ್ಪ ಸ್ವಲ್ಪ ರಸ್ತೆಯ ರೂಪ ಪಡೆದುಕೊಂಡಿದೆ.

ಬಹುದಿನಗಳ ಆಸೆಯೊಂದು ನೆರವೇರಿ, ಮೇಘಾನೆ ಎಂಬ ಕೈಲಾಸದಿಂದ ಒಂದೊಂದೆ ಹೆಜ್ಜೆ ಇಟ್ಟು ಭೂಮಿಗಿಳಿದೆವು. ರಾತ್ರಿ ಊರು ಸೇರಿ, ಕಣ್ಮುಚ್ಚಿದರೂ ಮೇಘಾನೆಯ ದೃಶ್ಯಗಳೇ ಕಣ್ಮುಂದೆ ಸುಳಿಯುತ್ತಿದ್ದವು.



ಡಣ್ಣ ಚಿಕ್ಕ ಕೀರ್ರಾಸ್ನ ಕಥೆಯ

● ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ರಾಕೆಟ್ ದಾಳಿ!

ಗುಂಡ ದೀಪಾವಳಿಯನ್ನು ಅದ್ದೂರಿಯಾಗಿ ಆಚರಿಸಲು ಸಜ್ಜಾಗಿದ್ದ. ಅದಕ್ಕಾಗಿ ಪೇಟೆಗೆ ಹೋಗಿ ಪಟಾಕಿಗಳನ್ನು ತಂದಿದ್ದ. ಅದರಲ್ಲಿದ್ದ ಒಂದು ರಾಕೆಟ್ ತೆಗೆದು, ಬಾಟಲಿಯೊಳಗಿಟ್ಟು ಬೆಂಕಿ ಹಚ್ಚಿದ. ರಾಕೆಟ್ ಶಬ್ದ ಮಾಡುತ್ತಾ ಆಕಾಶಕ್ಕೇರಿತು. ಕೆಲ ಕ್ಷಣದಲ್ಲೇ ದಿಕ್ಕು ಬದಲಿಸಿದ ರಾಕೆಟ್, ಪಕ್ಕದ ಮರದಲ್ಲಿದ್ದ ಜೇನು ಗೂಡಿಗೆ ಬಡಿಯಿತು. ಇದರಿಂದ ಬೆಚ್ಚಿ ಬಿದ್ದ ಜೇನು ನೊಣಗಳು ಏಕಾಏಕಿ ಗುಂಡನ ಮೇಲೆ ದಾಳಿಯಿಟ್ಟವು. ಗುಂಡ ಗಾಬರಿಯಲ್ಲಿ ಅಲ್ಲಿಂದ ಓಡಿದ...

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂರು ಅಕ್ಷರಗಳ ಪದಕ್ಕೆ ಇನ್ನೊಂದು ಅಕ್ಷರ ಸೇರಿಸಿ ನಾಲ್ಕು ಅಕ್ಷರಗಳ ಪದ ಮಾಡಿ.

1	ಮೂ		ಲಿ	ಕೆ
2	ಕ		ಲಿ	ಕೆ
3	ಸ		ರ	ಸ
4	ಸ		ವ	ತಿ
5	ಪ		ವಾ	ರ
6	ಸ		ಕಾ	ರ
7	ಅ		ಪಾ	ಯ
8	ಉ		ದಾ	ರ
9	ಆ		ರ	ಣೆ
10	ಆ		ರಿ	ಸು

ಕೊಂಚತಂತ್ರ

KGS(ಕನ್ನಡ ಗರ್ಲ್ಸ್ ಸ್ಕೂಲ್) ನೆನಪಿಡುವ ಮೂಲಕ ರಾಷ್ಟ್ರಕವಿ ಎಂಬ ಗೌರವಕ್ಕೆ ಪಾತ್ರರಾದ ಮೂವರು ಕವಿಗಳ ಹೆಸರುಗಳನ್ನು ನೆನಪಿಡಬಹುದು.

K = ಕುವೆಂಪು G = ಗೋವಿಂದ ಪೈ S = ಶಿವರುದ್ರಪ್ಪ


ಕನ್ನಡ 'ಸ್ವರ' ಹಾಡು

ಅದೋ ನೋಡು ಕನ್ನಡ ನಾಡು
ಆಕಾಶದೆತ್ತರಕೆ ಬೆಳೆದಿದೆ ನೋಡು
ಇದೇ ನೋಡು ಸ್ವರ್ಗದ ತುಣುಕು
ಈಶ್ವರನಿಗೂ ಇದು ಪ್ರಿಯವಂತೆ
ಉತ್ತಮೋತ್ತಮ ಜನ ಇಲ್ಲಿಹರಂತೆ
ಊಹಿಸಲೂ ಅಸಾಧ್ಯ ಇವರ ಸಡಗರ–ಸಂಭ್ರಮ
ಋಷಿಗಳ ಆದರ್ಶ ಇಲ್ಲಿರುವುದಂತೆ
ಎಲ್ಲರೊಂದಿಗೆ ಇವರು ಬೆರೆಯುವರಂತೆ
ಏಳ್ಗೆಯೇ ಇವರ ದಿವ್ಯ ಮಂತ್ರವಂತೆ
ಐಕ್ಯತೆಯೇ ಇವರ ಸಾಧನೆಯ ಸೂತ್ರವಂತೆ
ಒಗ್ಗಟ್ಟಿನಿಂದ ಎಲ್ಲರೂ ದುಡಿಯುವರಂತೆ
ಓದಿಕೊಂಡ ಪ್ರಜ್ಞಾವಂತ ಜನರಿವರಂತೆ
ಔದಾರ್ಯ ಇವರ ದೊಡ್ಡ ಗುಣವಂತೆ
ಅಂದ–ಚೆಂದದ ಗಂಧದ ಸುವಾಸನೆಯಂತೆ
ಅಃ ವರ್ಣಿಸಲಸಾಧ್ಯ ಕನ್ನಡ ನಾಡಿನ ಸೊಬಗು


ಗಣಿತದಲ್ಲಿ ಗರ್ದಿ ಗಮ್ಮತ್ತು

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಆಕೃತಿಯಲ್ಲಿ 1ರಿಂದ 12ರವರೆಗಿನ ಸಂಖ್ಯೆಗಳನ್ನು ಹೊಂದಿಸಿ. ಯಾವುದೇ ಸರಳ ರೇಖೆಯ ಮೇಲಿನ ನಾಲ್ಕು ವೃತ್ತಗಳ ಮೊತ್ತ 26 ಆಗುವಂತೆ ಮಾಡಿ.



ಪಕ್ಷಿ – ನೋಟ: ಈ ಪಕ್ಷಿಗಳ ಹೆಸರು ಹೇಳಿ

1


2


3


ಟು ಇನ್ ಒನ್

ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಕೋಲ | ಕಣಿ | ಗರಿ
ವರ | ತುಕ | ತಮ

ಅಕ್ಷರ ಪಟ್ಟಿ:
ಕೌ ವಿ ಅಂ ಸೆ ಟ ಡಿ
ಗೌ ತೊ ಚಿ ಮೆ ವೆ ಟೆ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:


majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಅಸಲಿಗೆ 2.ಕುಸುಮತಿ 3.ಅಮರಳು 4.ಶಂಕರಿಕೆ 5.ಸಮಾನಸ 6.ಶೇಕಡಲು


ಪದ ಹುಡುಕಾಟ: ಸಾಲುಮರದ ತಿಮ್ಮಕ್ಕ

ಮೋಜಿನ ಇಂಗ್ಲಿಷ್: 1.BITTER 2.BETTER 3.BUTTER 4.LITTLE 5.LETTER 6.LATTER 7.BUTTON 8.BOTTOM 9.BATTLE 10.MATTER



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಶ್ರಾವ್ಯ ಡಿ.ಪಿ.
ಬೆಳಕವಾಡಿ



ಅನ್ನಪೂರ್ಣ ಎ.ಸಿ.
ಚಿಕ್ಕಮಗಳೂರು



ಲಿಖಿತ ಆರ್.ಎಚ್.
ರಾಣೆಬೆನ್ನೂರು



ಋತ್ವಿಕ್ ಎಸ್.ಎನ್.
ಉಡುಪಿ



ನಿತ್ಯತ ಎಸ್.ಎಂ.
ಮೈಸೂರು



ಪ್ರಿಯಾಂಶು ಕೃಷ್ಣ
ಮೈಸೂರು